ವೇಲ್ಸ್ ಮತ್ತು ಇಂಗ್ಲೆಂಡ್‌ಗಳ ಒಕ್ಕೂಟದ ಇತಿಹಾಸ 1301ರಲ್ಲಿ ಆರಂಭವಾಗುತ್ತದೆ. ಆ ವರ್ಷ ಇಂಗ್ಲೆಂಡಿನ ದೊರೆ 1ನೆಯ ಎಡ್ವರ್ಡನ ಮಗನನ್ನು ವೇಲ್ಸ್ ರಾಜಕುಮಾರನೆಂದು ಕರೆಯಲಾಯಿತು. ವೇಲ್ಸಿಗೆ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯವನ್ನು ನೀಡಿದ್ದು ಎಂಟನೆಯ ಹೆನ್ರಿಯ ಕಾಲದಲ್ಲಿ.

ಸಂಯುಕ್ತ ರಾಜ್ಯ ಎಂಬ ಹೆಸರನ್ನು ಮೊದಲ ಬಾರಿಗೆ ಬಳಸಿದ್ದು 1604 ರಲ್ಲಿ – ಸ್ಕಾಟ್ಲೆಂಡಿನ 6ನೆಯ ಜೇಮ್ಸ್ ದೊರೆ ಇಂಗ್ಲೆಂಡಿನ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದ ಮೇಲೆ. ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡುಗಳ ಪಾರ್ಲಿಮೆಂಟುಗಳು ಒಂದಾದಾಗ, 1707ರಲ್ಲಿ, ಸಂಯುಕ್ತ ರಾಜ್ಯ ಎಂಬ ಹೆಸರನ್ನು ಅಧಿಕೃತವಾಗಿ ಬಳಸಲಾಯಿತು.

ಐರ್ಲೆಂಡನ್ನು ಗ್ರೇಟ್ ಬ್ರಿಟನಿಗೆ ಸೇರಿಸಿದ್ದು 1801ರಲ್ಲಿ. ಆಗ ಈ ಒಕ್ಕೂಟದ ಅಧಿಕೃತ ಹೆಸರು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ಸಂಯುಕ್ತ ರಾಜ್ಯ ಎಂದಾಯಿತು. 1922ರಲ್ಲಿ ಐರ್ಲೆಂಡಿನ 26 ಕೌಂಟಿಗಳು ಸಂಯುಕ್ತ ರಾಜ್ಯದಿಂದ ಬೇರ್ಪಟ್ಟು ಆ ಭಾಗ ಸ್ವತಂತ್ರ ರಾಜ್ಯವಾಯಿತು, ಮುಂದೆ ಗಣರಾಜ್ಯವಾಯಿತು. ಆ ಭಾಗ ಪ್ರತ್ಯೇಕವಾದಂದಿನಿಂದ ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯ ಎಂದಾಯಿತು. ಪಾರ್ಲಿಮೆಂಟು ಈ ಹೆಸರನ್ನು ಅಧಿಕೃತವಾಗಿ ಬಳಸಲಾರಂಭಿಸಿದ್ದು 1927ರಲ್ಲಿ, ಆ ಬಗ್ಗೆ ಅಧಿನಿಯಮವೊಂದರ ಮೂಲಕ. ರಾಜಮನೆತನಕ್ಕೆ ಸಂಬಂಧಿಸಿದಂತೆ ಈ ಹೆಸರನ್ನು ಬಳಸಲಾರಂಭಿಸಿದ್ದು 1953ರಲ್ಲಿ. ಎರಡನೆಯ ಎಲಿಜಬೆತಳನ್ನು ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯದ, ಆಕೆಯ ಇತರ ರಾಜ್ಯಗಳ ಮತ್ತು ಪ್ರದೇಶಗಳ ರಾಣಿಯೆಂದು ಆಗ ಘೋಷಿಸಲಾಯಿತು. ಇಡೀ ಸಂಯುಕ್ತ ರಾಜ್ಯಕ್ಕೆ ಒಂದೇ ಪಾರ್ಲಿಮೆಂಟ್ ಇದೆ. ಆದರೆ ಅದರ ಅಂಗಭೂತ ರಾಜ್ಯಗಳಲ್ಲಿ ಹೆಚ್ಚು ಕಡಿಮೆ ಸ್ವಯಮಾಧಿಕಾರವುಂಟು. ಸ್ಕಾಟ್ಲೆಂಡಿಗೆ ಅದರದೇ ಆದ ನ್ಯಾಯ ವ್ಯವಸ್ಥೆಯುಂಟು. ಸ್ಕಾಟ್ಲೆಂಡಿಗೂ ವೇಲ್ಸಿಗೂ ಪ್ರತ್ಯೇಕ ಸ್ಟೇಟ್ ಸೆಕ್ರೆಟರಿಗಳಿದ್ದಾರೆ. ಪಾರ್ಲಿಮೆಂಟಿನಲ್ಲಿ ಉತ್ತರ ಐರ್ಲೆಂಡಿಗೂ ಪ್ರಾತಿನಿಧ್ಯವಿರುವುದಾದರೂ ಗೃಹ ವ್ಯವಹಾರಗಳನ್ನು ನಿರ್ವಹಿಸಲು ಅದರದೇ ವಿಧಾನಮಂಡಲವೂ ಕಾರ್ಯಾಂಗವೂ ಉಂಟು.

ಸಂಯುಕ್ತ ರಾಜ್ಯದ ವಿವಿಧ ಭಾಗಗಳ ವಿಸ್ತೀರ್ಣ ಮತ್ತು ಜನಸಂಖ್ಯೆಗಳನ್ನು ಕೆಳಗೆ ಕೊಟ್ಟಿದೆ :

| | ವಿಸ್ತೀರ್ಣ (ಚ.ಕಿಮೀ) | ಜನಸಂಖ್ಯೆ (2012) |
|---|---|---|
| ಇಂಗ್ಲೆಂಡ್ | 130,395 | 53,013,000 |
| ವೇಲ್ಸ್ | 20,779 | 30,64,000 |
| ಸ್ಕಾಟ್ಲೆಂಡ್ | 78,387 | 52,54,800 |
| ಉತ್ತರ ಐರ್ಲೆಂಡ್ | 13,843 | 18,10,900 |
| ಐಲ್ ಆಫ್ ಮ್ಯಾನ್ | 572 | 84,665 |
| ಚ್ಯಾನಲ್ ದ್ವೀಪಗಳು | 194 | 1,68,000 |

ಸಂಯುಕ್ತ ರಾಜ್ಯದ ದ್ವೀಪಗಳಲ್ಲಿ ಅತ್ಯಂತ ದೊಡ್ಡದು ಗ್ರೇಟ್ ಬ್ರಿಟನ್. ಇಂಗ್ಲೆಂಡ್, ಉತ್ತರದಲ್ಲಿರುವ ಸ್ಕಾಟ್ಲೆಂಡ್, ಪಶ್ಚಿಮಕ್ಕಿರುವ ವೇಲ್ಸ್ ಇವು ಇದರಲ್ಲಿ ಸೇರಿವೆ. ಪಶ್ಚಿಮ ಯುರೋಪಿನಿಂದ ಇದನ್ನು ದಕ್ಷಿಣದಲ್ಲಿ ಇಂಗ್ಲಿಷ್ ಕಡಲ್ಗಾಲುವೆಯೂ ಪೂರ್ವದಲ್ಲಿ ಉತ್ತರ ಸಾಗರವೂ ಪ್ರತ್ಯೇಕಿಸುತ್ತವೆ. ಇದರ ಉತ್ತರ ಪಶ್ಚಿಮಗಳಲ್ಲಿ ಅಟ್ಲಾಂಟಿಕ್ ಸಾಗರವಿದೆ. ಐರ್ಲೆಂಡ್ ಇರುವುದು ಪಶ್ಚಿಮಕ್ಕೆ. ಗ್ರೇಟ್ ಬ್ರಿಟನಿಗೂ ಐರ್ಲೆಂಡಿಗೂ ನಡುವೆ ಐರಿಷ್ ಸಮುದ್ರವಿದೆ.

ಗ್ರೇಟ್ ಬ್ರಿಟನಿನ ವಾಯುಗುಣ ಸಮಶೀತೋಷ್ಣದ್ದು. ಇಲ್ಲಿಯ ಭಾಷೆ ಇಂಗ್ಲಿಷ್. ವೇಲ್ಸಿನಲ್ಲಿ ವೆಲ್ಷ್ ಭಾಷೆ ಹೆಚ್ಚಾಗಿ ಬಳಕೆಯಲ್ಲಿದೆ. ಇಲ್ಲಿಯ ಜನ ವಿಶೇಷವಾಗಿ ಚರ್ಚ್ ಆಫ್ ಇಂಗ್ಲೆಂಡಿಗೆ ನಡೆದುಕೊಳ್ಳುತ್ತಾರೆ. ರೋಮನ್ ಕೆಥೊಲಿಕ್, ಮೆಥಾಡಿಸ್ಟ್, ಪ್ರೆಸ್ಬಟೀರಿಯನ್, ಕಾಂಗ್ರೇಗೇಷನಲ್ ಮತ್ತು ಬ್ಯಾಪ್ಟಿಸ್ಟ್ ಧರ್ಮಗಳನ್ನು ಅನುಸರಿಸುವವರೂ ತಕ್ಕಮಟ್ಟಿನ ಸಂಖ್ಯೆಗಳಲ್ಲಿದ್ದಾರೆ. ಇಲ್ಲಿ 3 ಲಕ್ಷ ಯೆಹೂದ್ಯರುಂಟು (2010). ಮುಖ್ಯ ಪಟ್ಟಣ ಲಂಡನ್.

ಐರ್ಲೆಂಡಿನ ಈಶಾನ್ಯದಲ್ಲಿರುವ ಪ್ರದೇಶ ಉತ್ತರ ಐರ್ಲೆಂಡ್. ಇದು ಸಂಯುಕ್ತ ರಾಜ್ಯದ ಭಾಗ. ಅಲ್ಸ್ಟರಿನ ಆರು ಕೌಂಟಿಗಳಾದ ಆಂಟ್ರಿಂ, ಆರ್ಮಾ, ಡೌನ್, ಫರ್ಮ್ಯಾನ, ಲಂಡನ್‌ಡೆರಿ, ಟಿರೋನ್ – ಇವು ಉತ್ತರ ಐರ್ಲೆಂಡಿಗೆ ಸೇರಿವೆ.

ಉತ್ತರ ಐರ್ಲೆಂಡಿನದು ಸಮಶೀತೋಷ್ಣ ವಾಯುಗುಣ. ಭಾಷೆ ಇಂಗ್ಲಿಷ್. ಜನಸಂಖ್ಯೆಯ ಮೂರನೆಯ ಎರಡು ಭಾಗ ಪ್ರಾಟೆಸ್ಟಂಟರು. ಉಳಿದವರು ಬಹುತೇಕ ರೋಮನ್ ಕೆಥೊಲಿಕರು. ಮುಖ್ಯ ಪಟ್ಟಣ ಬೆಲ್‌ಫಾಸ್ಟ್.

ಐರ್ಲೆಂಡಿನ ಶಾಸನಾಧಿಕಾರವನ್ನು ಪಾರ್ಲಿಮೆಂಟು ಚಲಾಯಿಸುತ್ತದೆ. ಇದು ಸೆನೇಟ್ ಮತ್ತು ಕಾಮನ್ಸ್ ಸಭೆಗಳನ್ನೊಳಗೊಂಡಿದೆ. ಐರ್ಲೆಂಡಿನ ಪ್ರದೇಶಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಶಾಸನ ರಚಿಸಲು ಪಾರ್ಲಿಮೆಂಟಿಗೆ ಅಧಿಕಾರವಿದೆ. ವಿದೇಶ ನೀತಿ, ರಕ್ಷಣೆ ಮುಂತಾದ ಇತರ ವಿಚಾರಗಳನ್ನು ಸಂಯುಕ್ತ ರಾಜ್ಯ ಪಾರ್ಲಿಮೆಂಟು ಕಾದಿರಿಸಿಕೊಂಡಿದೆ. ಸೆನೇಟ್ ಸದಸ್ಯರನ್ನು ಕಾಮನ್ಸ್ ಸಭಾ ಸದಸ್ಯರು ಆಯ್ಕೆ ಮಾಡುತ್ತಾರೆ. ಕಾಮನ್ಸ್ ಸಭೆಯ ಸದಸ್ಯರ ಚುನಾವಣೆ ಐದು ವರ್ಷಗಳಿಗೊಮ್ಮೆ. 21 ವರ್ಷಗಳಿಗೆ ಮೇಲ್ಪಟ್ಟ ಎಲ್ಲರಿಗೂ ಮತಾಧಿಕಾರವುಂಟು. ಉತ್ತರ ಐರ್ಲೆಂಡಿನಿಂದ 12 ಮಂದಿ ಸದಸ್ಯರು ಸಂಯುಕ್ತ ರಾಜ್ಯದ ಪಾರ್ಲಿಮೆಂಟಿಗೆ ಚುನಾಯಿತರಾಗುತ್ತಾರೆ. ಐರ್ಲೆಂಡಿನ ಆಡಳಿತಾಧಿಕಾರವನ್ನು ಗವರ್ನರ್ ಚಲಾಯಿಸುತ್ತಾನೆ. ಇಂಗ್ಲೆಂಡಿನ ಕಂಬರ್ಲ್ಯಾಂಡ್ ತೀರಕ್ಕೂ ಉತ್ತರ ಐರ್ಲೆಂಡಿಗೂ ಮಧ್ಯೆ, ಐರಿಷ್ ಸಮುದ್ರದಲ್ಲಿ, ಐಲ್ ಆಫ್ ಮ್ಯಾನ್ ಇದೆ. ಅದರ ಆಡಳಿತಕ್ಕೆ ಪ್ರತ್ಯೇಕ



ಕಾನೂನುಗಳಿವೆ. ಅದರ ವಿಧಾನಮಂಡಲದಲ್ಲಿ (ಟಿನ್ವಾಲ್ಡ್) ಲೆಜಿಸ್ಲೇಟಿವ್ ಕೌನ್ಸಿಲ್ (ವಿಧಾನ ಪರಿಷತ್ತು) ಮತ್ತು ಹೌಸ್ ಆಫ್ ಕೀಸ್ ಎಂಬ ಎರಡು ಸದನಗಳಿವೆ. ಇವು ಸಂಯುಕ್ತವಾಗಿ ಅಧಿವೇಶನ ನಡೆಸುವುದಾದರೂ ಕೆಲವು ವಿನಾ ಉಳಿದೆಲ್ಲ ವಿಷಯಗಳನ್ನು ಕುರಿತು ಪ್ರತ್ಯೇಕವಾಗಿ ಮತ ನೀಡುತ್ತವೆ. ಹೌಸ್ ಆಫ್ ಕೀಸ್‌ನಲ್ಲಿ ವಯಸ್ಕ ಮತದಾನದ ಮೇಲೆ ಐದು ವರ್ಷಗಳ ಅವಧಿಗೆ ಆಯ್ಕೆಯಾದ 24 ಸದಸ್ಯರು ಇರುತ್ತಾರೆ. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಗವರ್ನರ್, ಲಾರ್ಡ್ ಬಿಷಪ್, ಪ್ರಥಮ ಡೀಮ್ಸ್ಟರ್ (ನ್ಯಾಯಾಧೀಶ), ಅಟಾರ್ನಿ ಜನರಲ್, ಗವರ್ನರನಿಂದ ಆಯ್ಕೆಯಾದ ಇಬ್ಬರು, ಹೌಸ್ ಆಫ್ ಕೀಸ್‌ನಿಂದ ಆಯ್ಕೆಯಾದ ಐವರು – ಇವರು ಸದಸ್ಯರು. ಸುಂಕ, ವರಮಾನ ತೆರಿಗೆ ಇವು ಟಿನ್ವಾಲ್ಡ್ ಅಧಿಕಾರವ್ಯಾಪ್ತಿಗೆ ಒಳಪಟ್ಟಿವೆ. ಕೀಸ್ ಸಭೆಗೆ ಗವರ್ನರ್ ಆಯವ್ಯಯವನ್ನೊಪ್ಪಿಸುತ್ತಾನೆ. 1958ರ ಅಧಿನಿಯಮದ ಪ್ರಕಾರ ವಿತ್ತೀಯ ವ್ಯವಹಾರಗಳಲ್ಲಿ ಟಿನ್ವಾಲ್ಡ್‌ಗೆ ಹೆಚ್ಚಿನ ಅಧಿಕಾರಗಳು ದತ್ತವಾಗಿವೆ. ಕೀಸ್ ಸಭೆಯ ಐವರು ಮತ್ತು ಲೆಜಿಸ್ಲೇಟಿವ್ ಕೌನ್ಸಿಲಿನ ಇಬ್ಬರು ಸದಸ್ಯರನ್ನೊಳಗೊಂಡ ಆಡಳಿತ ಮಂಡಳಿಯೊಂದು ಗವರ್ನರನೊಂದಿಗೆ ಕಾರ್ಯ ನಿರ್ವಹಿಸಲು ರಚಿತವಾಗಿದೆ. ಐಲ್ ಆಫ್ ಮ್ಯಾನ್‌ಗೆ ಅದರದೇ ಆದ ನ್ಯಾಯ ವ್ಯವಸ್ಥೆಯಿದೆ.

ಚ್ಯಾನಲ್ ದ್ವೀಪಗಳು ಫ್ರಾನ್ಸಿನ ವಾಯವ್ಯತೀರದಾಚೆಗೆ ಇವೆ. ನಾರ್ಮಂಡಿಯ ಡಚಿಯ ಭಾಗ ಮಾತ್ರ ಈಗ ಇಂಗ್ಲೆಂಡ್ ಪ್ರಭುತ್ವಕ್ಕೆ ಸೇರಿದೆ. ನಾರ್ಮನ್ ವಿಜಯದ ಕಾಲದಿಂದಲೂ ಇವು ಈ ಪ್ರಭುತ್ವದ ಅಡಿಯಲ್ಲಿವೆ. ಈ ದ್ವೀಪಸ್ತೋಮದಲ್ಲಿರುವ ಜರ್ಸಿ, ಗರ್ನ್‌ಸಿ, ಆಲ್ಡರ್ನಿ ಮತ್ತು ಸಾರ್ಕ್ ದ್ವೀಪಗಳಲ್ಲಿ ಜರ್ಸಿ ಅತ್ಯಂತ ದೊಡ್ಡ ದ್ವೀಪ. ಆಲ್ಡರ್ನಿ ಅತ್ಯಂತ ಉತ್ತರದಲ್ಲೂ ಜರ್ಸಿ ಅತ್ಯಂತ ದಕ್ಷಿಣದಲ್ಲೂ ಇವೆ. ಜರ್ಸಿಯ ಲೆಫ್ಟಿನೆಂಟ್ ಗವರ್ನರ್ ಹಾಗೂ ಮಹಾ ದಂಡಾಧಿಕಾರಿಯೇ ಅಲ್ಲಿಯ ಆಡಳಿತಮುಖ್ಯಸ್ಥ. ಈತ ಇಂಗ್ಲೆಂಡಿನ ದೊರೆ ಅಥವಾ ರಾಣಿಯಿಂದ ನೇಮಕವಾಗುತ್ತಾನೆ. ಸ್ಟೇಟ್ಸ್ ಸಭೆಯಲ್ಲಿ ಪೀಠಸ್ಥನಾಗಲೂ ಮಾತಾಡಲೂ ಇವನಿಗೆ ಅಧಿಕಾರವುಂಟು. ಆದರೆ ಮತಾಧಿಕಾರವಿಲ್ಲ. ಸ್ಟೇಟ್ಸ್ ಸಭೆಯ ಹಾಗೂ ಜರ್ಸಿಯ ರಾಯಲ್ ಕೋರ್ಟಿನ ಅಧ್ಯಕ್ಷನಾದ ಬೆಯ್ಲಿಫನೂ ದೊರೆ ಅಥವಾ ರಾಣಿಯಿಂದ ನೇಮಕವಾಗುತ್ತಾನೆ. ರಾಜ್ಯಗಳಿಂದ ನೇಮಕವಾದ ಸಮಿತಿಗಳು ಇಲ್ಲಿಯ ಆಡಳಿತ ನಡೆಸುತ್ತವೆ. ಇಲ್ಲಿಯ ಅಧಿಕೃತ ಭಾಷೆ ಫ್ರೆಂಚ್. ಆದರೆ ಇಂಗ್ಲಿಷ್ ದಿನಬಳಕೆಯ ಭಾಷೆ. (ಎಸ್.ಎನ್‌ಎಆರ್‌ಇ.)

**ಸಂವಿಧಾನ :** ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯದ ಸಂವಿಧಾನ ವಿಶ್ವದ ಪ್ರಜಾಪ್ರಭುತ್ವ ಸಂವಿಧಾನಗಳಲ್ಲಿ ಅದ್ವಿತೀಯವಾದ್ದು. ಪುರಾತನತೆ, ಪ್ರೌಢಿಮೆ, ಸಮಯೋಚಿತವಾಗಿ ಹೊಂದಿಕೊಳ್ಳುವ ಸಾಮರ್ಥ್ಯ ಮತ್ತು ಬಾಳಿಕೆಗೆ ಇದು ಹೆಸರಾಗಿ ಸರಳವೂ ಅಲಿಖಿತವೂ ಆಗಿರುವುದು ಇದರ ವೈಶಿಷ್ಟ್ಯ. ಬ್ರಿಟನಿನ ಸಂವಿಧಾನ ಯಾವ ಒಂದು ಸಂಸ್ಥೆಯಿಂದಲೂ ಯಾವ ಒಂದು ನಿರ್ದಿಷ್ಟ ಕಾಲದಲ್ಲೂ ಪೂರ್ಣವಾಗಿ ತಯಾರಿಸಲ್ಪಟ್ಟದ್ದಲ್ಲ. ಅನೇಕ ಶತಮಾನಗಳ ಅವಧಿಯಲ್ಲಿ ದೈನಂದಿನ ರಾಜಕೀಯ ವ್ಯವಹಾರ ಸಂದರ್ಭಗಳಲ್ಲಿ ಉತ್ತಮ ಮಾರ್ಗದರ್ಶನ ನೀಡಲು ಬೆಳೆದು ಬಂದ ಮೂಲಭೂತ ನಿಯಮ ಸಂಯಮಗಳ ರಾಶಿಯಿದು. ಬ್ರಿಟನಿನ ಸಂವಿಧಾನದ ಮುಖ್ಯ ಮೂಲಗಳು ಇವು : 1 ಪಾರ್ಲಿಮೆಂಟಿನ ಶಾಸನಗಳು, 2 ನ್ಯಾಯಾಲಯಗಳ ತೀರ್ಪುಗಳು, 3 ರಾಜ್ಯಾಂಗದ ಸಂಪ್ರದಾಯಗಳು ಮತ್ತು 4 ರಾಜ್ಯಶಾಸ್ತ್ರ ಮತ್ತು ನ್ಯಾಯಶಾಸ್ತ್ರಜ್ಞರ ಬರೆವಣಿಗೆಗಳು.

ಸಂಸದೀಯ ಪ್ರಜಾಪ್ರಭುತ್ವ, ಕಾನೂನುಬದ್ಧವಾದ ಆಡಳಿತ ಮತ್ತು ವ್ಯಕ್ತಿ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನೇ ಮುಖ್ಯ ಗುರಿಯಾಗಿ ಉಳ್ಳ ಈ ಸಂವಿಧಾನ ಪ್ರಧಾನಮಂತ್ರಿಯಿಂದ ಸಾಮಾನ್ಯ ನಾಗರಿಕನ ವರೆಗಿನ ಎಲ್ಲ ಅಧಿಕಾರಿಗಳು ಮತ್ತು ಪ್ರಜೆಗಳನ್ನೂ ಏಕರೂಪವಾದ ಕಾನೂನು ಮತ್ತು ನ್ಯಾಯಾಲಯಗಳಿಗೆ ಬದ್ಧರನ್ನಾಗಿ ಮಾಡುತ್ತದೆ. ಆದ್ದರಿಂದಲೇ ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯದಲ್ಲಿ ಸ್ವೇಚ್ಛಾವರ್ತಿಯಲ್ಲದ, ಕಾನೂನುಬದ್ಧವಾದ, ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವ ಪ್ರಜಾಪ್ರಭುತ್ವ ಆಡಳಿತ ಶೋಭಿಸುತ್ತದೆ.



ರಾಣಿಯ ಮಗ ಚಾರ್ಲ್ಸ್‌ನಿಗೆ ವೇಲ್ಸ್ ರಾಜಕುಮಾರ ಪದವಿ ಪ್ರದಾನ–ವಾಯವ್ಯ ವೇಲ್ಸಿನ ಕಾರ್ನಾರ್ವನ್ ಕೋಟೆಯಲ್ಲಿ

ಏಕಾತ್ಮಕವಾದ ಮತ್ತು ವಿಭಿನ್ನಾಧಿಕಾರತತ್ತ್ವರಹಿತವಾದ ಬ್ರಿಟನಿನ ಸಂವಿಧಾನದಲ್ಲಿ ಕಂಡುಬರುವ ಮುಖ್ಯ ಸಂಸ್ಥೆಗಳು ನಾಲ್ಕು : ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಪುರಾತನವಾದ ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್ ಚರ್ಚುಗಳು. ಈ ಸಂಸ್ಥೆಗಳು ಪರಸ್ಪರಾವಲಂಬಿಗಳೂ ಸಹಕಾರದಿಂದ ಕೆಲಸ ಮಾಡುವವೂ ಆದ ಸಂಸ್ಥೆಗಳಾಗಿವೆ.

ರಾಜಪ್ರಭುತ್ವ : ಬ್ರಿಟನಿನ ಪ್ರಜಾಪ್ರಭುತ್ವ ಚರಿತ್ರಾರ್ಹವಾದ್ದು. ಆದರೂ ಅಲ್ಲಿ ರಾಜಪ್ರಭುತ್ವ ಪ್ರಾಚೀನ ಕಾಲದಿಂದಲೂ ಇದೆ. ಇಂದು ಈ ರಾಜಪ್ರಭುತ್ವ ನಾಮಮಾತ್ರವಾದ್ದು ಮತ್ತು ಬಹುಪಾಲು ಸಾಂಕೇತಿಕವಾದ್ದು. ಬ್ರಿಟನಿನ ರಾಜಪೀಠ ರಾಜ್ಯದ ಎಲ್ಲ ಅಂಗಗಳಿಗೂ ಮುಖ್ಯವಾದ್ದು. ರಾಜ್ಯದ ಎಲ್ಲ ಅಧಿಕಾರಗಳೂ ಈ ಪೀಠದಲ್ಲಿ ಉದ್ಭವಿಸಿ ಮುಂದೆ ಹರಿಯುತ್ತವೆ. ಇವುಗಳ ನಿರ್ವಹಣೆಯಲ್ಲಿ ಈ ಪೀಠ ಸಾಂಕೇತಿಕವಾದ ಪಾತ್ರ ವಹಿಸುತ್ತದೆ. ಇದರ ಅಧಿಕಾರ ಸಾಂಕೇತಿಕವಾದರೂ ಆಡಳಿತದ ಮೇಲೆ ಇದರ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ. ಬ್ರಿಟನಿನ ರಾಜ ಅಥವಾ ರಾಣಿಗೆ ಆಡಳಿತದ ಸಕಲ ಆಗುಹೋಗುಗಳ ಮತ್ತು ನೀತಿಗಳ ಬಗ್ಗೆ ವಿಚಾರ ತಿಳಿಯುವ ಹಕ್ಕಿದೆ ಮತ್ತು ನಿರಂತರವಾದ, ತನ್ನ ಅನುಭವಾಧಾರಿತವಾದ ಸಲಹೆ ನೀಡುವ ಹಕ್ಕೂ ಇದೆ. ರಾಜನ ಸಲಹೆಗೆ ಬ್ರಿಟನಿನ ಸರ್ಕಾರ ಪದ್ಧತಿಯಲ್ಲಿ ಸೂಕ್ತ ಪುರಸ್ಕಾರ ನೀಡಲಾಗುತ್ತದೆ. 1701 ರ, 1936ರ ಅಧಿನಿಯಮಗಳಲ್ಲಿ ವಿವರಿಸಿ ನಿಯಂತ್ರಿಸಿರುವ ರೀತಿಯಲ್ಲಿ ರಾಜಪ್ರಭುತ್ವ ವಂಶಾನುಗತವಾದ ಒಂದು ಸ್ಥಾನವಾಗಿದೆ.



ಎಯ್‌ಸ್ಟೆಡ್‌ವೊಡ್ : ವೆಲ್ಶರ ಹಬ್ಬಗಳಲ್ಲೊಂದು. ಈ ಹಬ್ಬದಲ್ಲಿ ಜನರು ಪ್ರಾಚೀನ ಧಾರ್ಮಿಕ ಉಡುಪು ಧರಿಸಿ ತಮ್ಮ ರಾಷ್ಟ್ರದ ಹಿರಿಮೆಯನ್ನು ಕುರಿತು ಹಾಡುತ್ತಾರೆ

ನ್ಯಾಯಾಂಗ : ಬ್ರಿಟನಿನ ನ್ಯಾಯಾಂಗ ಭಾರತ ಅಥವಾ ಅಮೆರಿಕ ಸಂಯುಕ್ತ ಸಂಸ್ಥಾನಗಳ ನ್ಯಾಯಾಂಗಗಳಷ್ಟು ಅಧಿಕಾರಯುತವಲ್ಲ. ಸಂವಿಧಾನ ಅಲಿಖಿತವಾಗಿರುವುದರಿಂದಲೂ ಪಾರ್ಲಿಮೆಂಟು ಸಾರ್ವಭೌಮವಾದ್ದರಿಂದಲೂ ವಿಧಿಯುಕ್ತವಾಗಿ ತಯಾರಿಸಲಾದ ಸಂಸದೀಯ ಅಧಿನಿಯಮಗಳನ್ನು ತಿರಸ್ಕರಿಸುವ ಅಧಿಕಾರ ಬ್ರಿಟನಿನ ನ್ಯಾಯಾಂಗಕ್ಕಿಲ್ಲ. ಆದರೂ ಪಾರ್ಲಿಮೆಂಟಿನ ಹತೋಟಿ ಒಂದನ್ನು ಬಿಟ್ಟರೆ ಬ್ರಿಟನಿನ ನ್ಯಾಯಾಂಗ ಸ್ವತಂತ್ರವಾಗಿಯೂ ಸಮರ್ಥವಾಗಿಯೂ ಕಾನೂನುಬದ್ಧ ಆಡಳಿತವನ್ನು ರಕ್ಷಿಸುವುದರಲ್ಲಿ ಬಹು ಉಪಯುಕ್ತವಾಗಿದೆ.

ಇಂಗ್ಲೆಂಡ್, ವೇಲ್ಸ್, ಸ್ಕಾಟ್ಲೆಂಡ್ ಮತ್ತು ಉತ್ತರ ಐರ್ಲೆಂಡಿನ ನ್ಯಾಯಾಲಯಗಳಿಗೆ ಏಕಸ್ವರೂಪವಿಲ್ಲದ್ದೇ ಬ್ರಿಟನಿನ ನ್ಯಾಯಾಂಗ ವ್ಯವಸ್ಥೆಯ ಒಂದು ವಿಶೇಷಗುಣ. ಮೂರು ಪ್ರತ್ಯೇಕ ನ್ಯಾಯಾಂಗ ವ್ಯವಸ್ಥೆಯಿದೆ. (1) ಇಂಗ್ಲೆಂಡ್ ಮತ್ತು ವೇಲ್ಸ್, (2) ಸ್ಕಾಟ್ಲೆಂಡ್, (3) ಉತ್ತರ ಐರ್ಲೆಂಡ್. ಇಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳಿಗೆ ಸಾಮಾನ್ಯವಾಗಿ ಬೇರೆ ಬೇರೆ ಪ್ರಾಥಮಿಕ ಮತ್ತು ಅಪೀಲು ಕೋರ್ಟುಗಳಿವೆ. ಉಚ್ಚ ನ್ಯಾಯಾಲಯದಲ್ಲಿ ಮೂರು ಮುಖ್ಯ ವಿಭಾಗಗಳಿವೆ : 1. ಚಾನ್ಸರಿ ವಿಭಾಗ, 2. ರಾಣಿಯ ಬೆಂಚಿನ ವಿಭಾಗ ಮತ್ತು 3. ಅಡ್ಮಿರಾಲ್ಟಿ ವಿಭಾಗಗಳು. ಇವುಗಳ ತೀರ್ಮಾನದ ವಿರುದ್ಧ ಕೋರ್ಟ್ ಆಫ್ ಅಪೀಲಿಗೆ ಮೇಲರ್ಜಿ ಹಾಕಲು ಅವಕಾಶವುಂಟು. ಸ್ಕಾಟ್ಲೆಂಡ್‌ನಲ್ಲಿ ಅಪರಾಧಿಗೆ ದಂಡನೆ ವಿಧಿಸಿದಾಗ ಮೊಕದ್ದಮೆಯಿಂದು ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಬಹುದು. ಅದಕ್ಕೆ ಮುಂದೆ ಹೌಸ್ ಆಫ್ ಲಾರ್ಡ್ಸ್‌ಕ್ಕೆ ಮೇಲ್ಮನವಿ ಮಾಡುವ ಹಾಗಿಲ್ಲ. ಬ್ರಿಟನಿನ ಪರಮೋನ್ನತ ನ್ಯಾಯಾಲಯವೆಂದರೆ ಹೌಸ್ ಆಫ್ ಲಾರ್ಡ್ಸ್. ಹೌಸ್ ಆಫ್ ಲಾರ್ಡ್ಸ್ ನ್ಯಾಯಾಲಯವಾಗಿ ಕುಳಿತಾಗ ಸಾಮಾನ್ಯವಾಗಿ ಲಾರ್ಡ್ ಚಾನ್ಸಲರನ ಅಧ್ಯಕ್ಷತೆಯಲ್ಲಿ ಆ ಸದನದ ಲಾ ಲಾರ್ಡ್‌ಗಳು ಮತ್ತು ನ್ಯಾಯಶಾಸ್ತ್ರ ಪರಿಣತರಾದ ಇತರ ಲಾರ್ಡ್‌ಗಳು ಮಾತ್ರ ಭಾಗವಹಿಸುತ್ತಾರೆ.

ಕಾರ್ಯಾಂಗ : ಬ್ರಿಟನಿನ ಸರ್ಕಾರವನ್ನು ಸಂಪುಟ ಸರ್ಕಾರ ಎಂದು ಕರೆಯುವುದೂ ಉಂಟು. ಇದಕ್ಕೆ ಕಾರಣವೆಂದರೆ ಬ್ರಿಟನಿನ ಸರ್ಕಾರ ವ್ಯವಸ್ಥೆಯಲ್ಲಿ ಸಂಪುಟಕ್ಕಿರುವ ಪ್ರಧಾನ ಪಾತ್ರ. ಮಧ್ಯಯುಗದ ಕ್ಯೂರಿಯ ರೆಜಿಸ್, ಟ್ಯೂಡರ್ ಕಾಲದ ರಾಜ ಸಮಿತಿ ಮತ್ತು 17ನೆಯ ಶತಮಾನದ ಪ್ರಿವಿ ಕೌನ್ಸಿಲಿನ ಸಮಿತಿ – ಇವುಗಳಿಂದ ಉದ್ಭವಿಸಿದ ಸಚಿವ ಸಂಪುಟ ಇಂದಿನ ವಾಸ್ತವಿಕ ಕಾರ್ಯಾಂಗ. ರಾಜರ ಆಹ್ವಾನದ ಮೇಲೆ ಸಂಸತ್ತಿನ ಬಹುಮತ ಪಕ್ಷದ ನಾಯಕ ಪ್ರಧಾನ ಮಂತ್ರಿಯಾಗಿ ತನ್ನ ಇಚ್ಛೆಗನುಸಾರ ಇತರ ಸಚಿವರ ನೇಮಕವನ್ನು ಕುರಿತು ಸಲಹೆ ನೀಡಿ ರಾಜನಿಂದ ನೇಮಕ ಮಾಡಿಸಿಕೊಂಡು 100 ಜನರನ್ನು ಆರಿಸಿಕೊಂಡು ಸಂಪುಟವನ್ನು ರಚಿಸುತ್ತಾನೆ; ಸಾಮಾನ್ಯವಾಗಿ ಬ್ರಿಟಿಷ್ ಸರ್ಕಾರದಲ್ಲಿ 20 ಮಂದಿ ಸಂಪುಟ ಸಚಿವರಲ್ಲದೆ 20 ಸಂಪುಟೇತರ ಮಂತ್ರಿಗಳೂ 50 ಮಂದಿ ಕಿರಿಯ ಮಂತ್ರಿಗಳೂ ಇರುತ್ತಾರೆ. ಸಾಮಾನ್ಯವಾಗಿ ಸಂಪುಟದ ಸಚಿವರು ಮತ್ತು

ವಿಶೇಷವಾಗಿ ಇತರ ಸಚಿವರು ಇಲಾಖೆಗಳ ಮುಖ್ಯಸ್ಥರಾಗಿ ಕಿರಿಯ ಮಂತ್ರಿಗಳ ಸಹಾಯದಿಂದ ಆಡಳಿತ ನಡೆಸುತ್ತಾರೆ. ಸಚಿವ ಸಂಪುಟ ಇಡೀ ಆಡಳಿತಕ್ಕೆ ನಾಯಕತ್ವ ನೀಡುತ್ತದೆ. ರಾಜನ ಹೆಸರಿನಲ್ಲಿ ಎಲ್ಲ ಆಡಳಿತ ನಡೆದರೂ ಸರ್ಕಾರದ ಕೀಲಿಕೈ ಸಚಿವ ಸಂಪುಟದ ಕೈಯಲ್ಲಿದೆ. ಸಚಿವರು ವೈಯಕ್ತಿಕವಾಗಿಯೂ ಒಟ್ಟಾಗಿಯೂ ತಮ್ಮ ಆಡಳಿತದ ಬಗ್ಗೆ ಸಂಸತ್ತಿಗೆ ಉತ್ತರವಾದಿಗಳಾಗಿದ್ದು ಅದರ ಹತೋಟಿಗೆ ಒಳಗಾಗಬೇಕಾಗುತ್ತದೆ. ಸಚಿವ ಸಂಪುಟ ಮುಖ್ಯವಾದ್ದಾದರೂ ಅದರ ಅಳಿವು ಉಳಿವು ಸಂಸತ್ತಿನ ವಿಶ್ವಾಸವನ್ನು ಆಧರಿಸಿರುವುದರಿಂದಲೇ ಬ್ರಿಟಿಷ್ ಸರ್ಕಾರವನ್ನು ಸಂಸದೀಯ (ಪಾರ್ಲಿಮೆಂಟರಿ) ಪ್ರಭುತ್ವವೆಂದು ಕರೆಯಲಾಗುತ್ತದೆ.

ಸಂಸತ್ತು : ಬ್ರಿಟನಿನ ಶಾಸಕಾಂಗವಾದ ಪಾರ್ಲಿಮೆಂಟ್ (ಸಂಸತ್ತು) ಮಧ್ಯಯುಗದ ಕ್ಯೂರಿಯ ರೆಜಿಸ್‌ನಿಂದ ಉದ್ಭವಿಸಿದ್ದು. 1688ರ ಕ್ರಾಂತಿಕಾರಿ ಒಪ್ಪಂದದ ಪ್ರಕಾರ ರಾಜನಿಂದ ಸಾರ್ವಭೌಮತ್ವವನ್ನು ಸಂಸತ್ತು ಪಡೆದುಕೊಂಡ ಮೇಲೆ ಬ್ರಿಟನಿನ ಸರ್ಕಾರದಲ್ಲಿ ಅದರ ಪ್ರಭುತ್ವ ಮತ್ತು ಪ್ರಭಾವಗಳು ವೃದ್ಧಿಯಾದವು. ಬ್ರಿಟನಿನ ಸಂಸತ್ತಿ ನಲ್ಲಿ ಎರಡು ಶಾಸನ ಸಭೆಗಳಿವೆ : 1 ಹೌಸ್ ಆಫ್ ಲಾರ್ಡ್ಸ್ ಮತ್ತು 1 ಹೌಸ್ ಆಫ್ ಕಾಮನ್ಸ್. ಉತ್ತರ ಐರ್ಲೆಂಡಿಗೆ ಪ್ರತ್ಯೇಕವಾದ ಒಂದು ಸಂಸತ್ತು ಇದೆ. ಬ್ರಿಟನಿನ ಪಾರ್ಲಿಮೆಂಟು ರಾಜ್ಯದ ಎಲ್ಲ ಭಾಗಗಳನ್ನೂ ಪ್ರತಿನಿಧಿಸುವುದಲ್ಲದೆ ಇಡೀ ರಾಜ್ಯಕ್ಕೆ ಶಾಸನ ಮಾಡುವ ಹಕ್ಕು ಪಡೆದಿದೆ. ಉತ್ತರ ಐರ್ಲೆಂಡಿನ ಪಾರ್ಲಿಮೆಂಟು ಉತ್ತರ ಐರ್ಲೆಂಡಿಗೆ ಸಂಬಂಧಿಸಿದ ಆಂತರಿಕ ವಿಚಾರಗಳ ಮೇಲೆ ಶಾಸನ ಮಾಡುವ ಹಕ್ಕು ಹೊಂದಿದೆ.



ಪಾರ್ಲಿಮೆಂಟ್ ಸದನಗಳು, ಲಂಡನ್

ಹೌಸ್ ಆಫ್ ಲಾರ್ಡ್ಸ್ : ಸಮತಾವಾದವನ್ನು ಆಧರಿಸಿದ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಅಸಮತೆಯ ಹೆಗ್ಗುರುತಾದ ಲಾರ್ಡ್‌ಗಳಿಗೆ ಪ್ರತ್ಯೇಕವಾದ ಒಂದು ಸಭೆ ಇರುವುದರ ಔಚಿತ್ಯದ ಬಗ್ಗೆ ಎಷ್ಟೇ ವಾದಗಳಿದ್ದರೂ ಬ್ರಿಟನಿನ ಸಂವಿಧಾನದಲ್ಲಿ ಹೌಸ್ ಆಫ್ ಲಾರ್ಡ್ಸನ್ನು ರದ್ದುಗೊಳಿಸುವ ಕಾರ್ಯಕ್ಕೆ ಯಾವಾಗಲೂ ಬ್ರಿಟನಿನಲ್ಲಿ ಬಹುಮತ ದೊರೆತಿಲ್ಲ. ಆದ್ದರಿಂದಲೇ ಸುಮಾರು 700 ಮಂದಿಯಷ್ಟು ಸದಸ್ಯರಿರುವ ಹೌಸ್ ಆಫ್ ಲಾರ್ಡ್ಸ್ ಸಭೆ ಇಂದಿಗೂ ಇದೆ. ಈ ಸಭೆಯಲ್ಲಿ 92 ವಂಶಾನುಗತ ಪೀರ್‌ಗಳು, ರಾಜರಿಂದ ನೇಮಿಸಲ್ಪಟ್ಟ ಪೀರ್‌ಗಳು ಮತ್ತು ಲಾ ಲಾರ್ಡ್‌ಗಳು, ಜೀವಾವಧಿ ಪೀರ್‌ಗಳು, ಪಾರಮಾರ್ಥಿಕ ಪೀರ್‌ಗಳು, ಸ್ಕಾಟ್ಲೆಂಡಿನ ಪ್ರತಿನಿಧಿ ಪೀರ್‌ಗಳು – ಇಂಗ್ಲೆಂಡಿನ ಚರ್ಚಿನ 2 ಮುಖ್ಯ ಧರ್ಮಾಧ್ಯಕ್ಷರು (ಆರ್ಚ್ ಬಿಶಪ್), 24 ಧರ್ಮಾಧಿಪತಿಗಳು (ಬಿಶಪ್) ಎಂಬ ಆರು ಬಗೆಯ ಲಾರ್ಡ್ ಸದಸ್ಯರಿದ್ದಾರೆ. ಪ್ರಜಾಪ್ರತಿನಿಧಿಗಳನ್ನು ಹೊಂದಿರದ ಈ ಸಭೆಗೆ ಪ್ರತಿನಿಧಿ ಸಭೆಗಿಂತ ಹೆಚ್ಚಿನ ಅಥವಾ ಸಮನಾದ ಹಕ್ಕೂ ಇರಬಾರದೆಂಬ ಕಾರಣದಿಂದ ಕ್ರಮೇಣ ಲಾರ್ಡ್ಸ್ ಸಭೆಯ ಅಧಿಕಾರಗಳು ಕಡಿಮೆಯಾಗುತ್ತ ಬಂದಿವೆ. ಹಣಕಾಸು ವಿಧೇಯಕಗಳ ಮೇಲೆ ಹೌಸ್ ಆಫ್ ಲಾರ್ಡ್ಸ್‌ಗೆ ಇದ್ದ ಅಧಿಕಾರವನ್ನು ಪಾರ್ಲಿಮೆಂಟ್ ಆಕ್ಟ್ ಎಂಬ ಅಧಿನಿಯಮ ಮೊಟಕು ಮಾಡಿತು. ಲಾರ್ಡ್ ಚಾನ್ಸಲರ್ ಈ ಸಭೆಯ ಅಧ್ಯಕ್ಷತೆ ವಹಿಸುತ್ತಾನೆ. ಅವನ ಗೈರುಹಾಜರಿಯಲ್ಲಿ ರಾಜರಿಂದ ನೇಮಿಸಲ್ಪಟ್ಟ ಉಪಾಧ್ಯಕ್ಷ ಅಧ್ಯಕ್ಷತೆ ವಹಿಸುತ್ತಾನೆ. ಸದಸ್ಯರಾದವರೆಲ್ಲರೂ ಸಾಮಾನ್ಯವಾಗಿ ಸಭೆಯಲ್ಲಿ ಭಾಗವಹಿಸದೆ, ರಾಜಕಾರಣದಲ್ಲಿ ವಿಶೇಷ ಆಸಕ್ತಿ ಮತ್ತು ಅನುಭವಗಳನ್ನುಳ್ಳ ಲಾರ್ಡ್‌ಗಳು ಮಾತ್ರ ಭಾಗವಹಿಸುವುದರಿಂದ ಇದರ ಕಾರ್ಯಾಚರಣೆ ಹೌಸ್ ಆಫ್ ಕಾಮನ್ಸಿನ ಕಾರ್ಯಕ್ಕೆ ಪೂರಕವಾಗಿದ್ದು ಫಲದಾಯಕವಾಗಿರುತ್ತದೆ. ತಜ್ಞರಲ್ಲದ, ವಂಶಗತ ಅಥವಾ ಸ್ಥಾನಗಳ ಲಾರ್ಡ್‌ಗಳು ಭಾಗವಹಿಸುವುದರಿಂದ ಉಂಟಾಗಬಹುದಾದ ಅಸಮಂಜಸತೆಯನ್ನು ಹೋಗಲಾಡಿಸಿ, ಲಾರ್ಡ್ಸ್ ಸಭೆಯ ಪ್ರತಿಭೆ ಮತ್ತು ಪ್ರಭಾವವನ್ನು ಹೆಚ್ಚಿಸುವ ಉದ್ದೇಶದಿಂದ ತಜ್ಞ ಅನುಭವಿಗಳನ್ನು ಜೀವಾವಧಿ ಲಾರ್ಡ್‌ಗಳಾಗಿ ನೇಮಿಸಲು 1958ರ ಲೈಫ್ ಪೀರೇಜಸ್ ಅಧಿನಿಯಮ ಅವಕಾಶ ಮಾಡಿಕೊಟ್ಟಿದೆ.

ಹೌಸ್ ಆಫ್ ಕಾಮನ್ಸ್ : ಬ್ರಿಟನಿನ ಸರ್ಕಾರದ ವ್ಯವಸ್ಥೆಯಲ್ಲಿ ಅತ್ಯಂತ ಮುಖ್ಯವಾದ ಮತ್ತು ಶಕ್ತವಾದ ಸಂಸ್ಥೆ ಎಂದರೆ ಹೌಸ್ ಆಫ್ ಕಾಮನ್ಸ್ (ಕಾಮನ್ಸ್ ಸಭೆ). ಏಕಸದಸ್ಯ ಪ್ರಾದೇಶಿಕ ಕ್ಷೇತ್ರಗಳಿಂದ ಚುನಾಯಿತರಾಗುವ 659 ಸದಸ್ಯರಿಂದ ಕೂಡಿದ ಈ ಸಭೆ ರಾಷ್ಟ್ರದ ಎಲ್ಲ ಪ್ರಜೆಗಳನ್ನೂ ಪ್ರತಿನಿಧಿಸುತ್ತದೆ. 1949ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಪ್ರಕಾರ ನಡೆಯುವ ಈ ಸಭೆಗೆ ಸಂಬಂಧಪಟ್ಟ ಸಾರ್ವತ್ರಿಕ ಅಥವಾ ಉಪ – ಚುನಾವಣೆಗಳಲ್ಲಿ ಬ್ರಿಟನಿನ 18 ಮತ್ತು ಅದಕ್ಕೂ ಹೆಚ್ಚಿನ ವಯಸ್ಕರಾದ, ಎಲ್ಲ ಪ್ರಜೆಗಳೂ ಗುಪ್ತವಾಗಿ ಮತ ನೀಡುವ 21 ಮತ್ತು ಅದಕ್ಕೂ ಹೆಚ್ಚಿನ ವಯಸ್ಕರಾದ ಯಾವ ಅರ್ಹ ಪ್ರಜೆಯಾಗಲಿ ಅಭ್ಯರ್ಥಿಯಾಗುವ ಹಕ್ಕು ಪಡೆದಿರುತ್ತಾರೆ. ಪೀರರು ಮತ್ತು ಮನೋರೋಗಿಗಳು ಮತ ನೀಡುವ ಹಾಗಿಲ್ಲ. ಇದರ ಸದಸ್ಯತ್ವ ಬಹಳ ಗೌರವಪ್ರಾಯವಾದ್ದು.



ಪಾರ್ಲಿಮೆಂಟ್ ಅಧಿವೇಶನಾರಂಭಕ್ಕಾಗಿ ಎರಡನೆಯ ಎಲಿಜಬೆತ್ ರಾಣಿಯ ಪ್ರಥಮಾಗಮನ, 4 ನವೆಂಬರ್ 1952

ವರ್ಷದಲ್ಲಿ ಸುಮಾರು 165 ದಿವಸಗಳ ಕಾಲ ಅಧಿವೇಶನ ನಡೆಸುವ ಈ ಸಭೆ ನಿಷ್ಪಕ್ಷಪಾತವಾದ ಸ್ಪೀಕರನ (ಸಭಾಪತಿ) ಅಧ್ಯಕ್ಷತೆಯಲ್ಲಿ, ಅನೇಕ ಸಮಿತಿಗಳ ಸಹಾಯದಿಂದ ದಕ್ಷತೆಯಿಂದ ಕೆಲಸ ನಿರ್ವಹಿಸುವುದು ಸಾಧ್ಯವಾಗಿದೆ. ಸರ್ಕಾರದ ಅಳಿವು ಉಳಿವು, ನೀತಿ ನಿಯಮಗಳು ಮತ್ತು ಹಣಕಾಸಿನ ಆಯವ್ಯಯಗಳನ್ನು ನಿಯಂತ್ರಿಸುವ ಹಕ್ಕು ಈ ಸಭೆಗೆ ಇದೆ. ಈ ಸಭೆ ದಕ್ಷತೆಯಿಂದ ಕಾರ್ಯನಿರ್ವಹಿಸಲು ಒಂದು ಮುಖ್ಯ ಕಾರಣವೆಂದರೆ ಮಾನ್ಯತೆ ಮತ್ತು ಕಾರ್ಯಾನುಕೂಲಗಳನ್ನು ಪಡೆದ ದಕ್ಷ, ಸಂಘಟಿತ ಮತ್ತು ಸೂಕ್ತಸಂಖ್ಯಾಬಲ ಇರುವಂಥ ವಿರೋಧ ಪಕ್ಷ. ವಿರೋಧವನ್ನು ಪ್ರಭಾವಯುತವೂ ಜವಾಬ್ದಾರಿಯುತವೂ ಪರಿಣತವೂ ಆದ್ದನ್ನಾಗಿ ಮಾಡಲು ವಿರೋಧ ಪಕ್ಷ ತನ್ನದೇ ಆದ ಸಂಪುಟವನ್ನು ರಚಿಸಿ ಸರ್ಕಾರವನ್ನು ನೆರಳಿನಂತೆ ಹಿಂಬಾಲಿಸುತ್ತದೆ. ಈ ವಿರೋಧಿ ಸಂಪುಟಕ್ಕೆ ಛಾಯಾ ಸಂಪುಟ (ಷ್ಯಾಡೋ ಕ್ಯಾಬಿನೆಟ್) ಎಂದು ಹೆಸರು. ಇಂಥ ಪ್ರಬಲ ವಿರೋಧ ಪಕ್ಷವೂ ಕೂಡಿದ ದ್ವಿಪಕ್ಷ ಪದ್ಧತಿ ಇರುವುದರಿಂದಲೇ ಬ್ರಿಟನಿನ ಸರ್ಕಾರ ಜವಾಬ್ದಾರಿಯುತವೂ ಜನಾಭಿಪ್ರಾಯಕ್ಕೆ ಮನ್ನಣೆ ನೀಡುವಂಥದೂ ಆಗಿರುತ್ತದೆ. ಸಂಸತ್ತಿನ ಒಳಗೂ ಹೊರಗೂ ಸಂವಿಧಾನವನ್ನು ನಡೆಸಲು ದ್ವಿಪಕ್ಷಪದ್ಧತಿ ಬಹಳ ಸಹಾಯಕವಾಗಿದೆ.

ಪೌರಸ್ವಾತಂತ್ರ್ಯ : ಪೌರಸ್ವಾತಂತ್ರ್ಯಕ್ಕೆ ಅನೇಕ ಶತಮಾನಗಳಿಂದಲೂ ಬ್ರಿಟನ್ ವಿಶೇಷ ಮಾನ್ಯತೆ ನೀಡಿದೆ. ಆದರೂ ಬ್ರಿಟಿಷ್ ಪೌರನ ಹಕ್ಕು ಸ್ವಾತಂತ್ರ್ಯಗಳಿಗೆ ಯಾವುದೇ ಒಂದು ಮೂಲವಿಲ್ಲ. 1679ರ ಆಸಾಮಿ ಹಾಜರಿ (ಹೇಬಿಯಸ್ ಕಾರ್ಪಸ್) ಅಧಿನಿಯಮ, 1689ರ ಬಿಲ್ ಆಫ್ ರೈಟ್ಸ್, ಸಂಪ್ರದಾಯ ನ್ಯಾಯ (ಕಾಮನ್ ಲಾ) – ಇವು ಬ್ರಿಟನಿನ ಪೌರಸ್ವಾತಂತ್ರ್ಯದ ಮೂಲಗಳು. ಇವುಗಳ ಆಧಾರದ ಮೇಲೆ ವಾಕ್‌ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ಸ್ವತ್ತಿನ ಸ್ವಾತಂತ್ರ್ಯ, ಮತೀಯ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ ಮುಂತಾದ, ಪ್ರಜಾಪ್ರಭುತ್ವದಲ್ಲಿ ದೊರೆಯುವ ಎಲ್ಲ ಸ್ವಾತಂತ್ರ್ಯಗಳೂ ಉದ್ಭವಿಸಿವೆ. ಕಾನೂನುಬದ್ಧ ಆಡಳಿತ ಪದ್ಧತಿಯನ್ನು ಅನುಸರಿಸಲು ಕಾರ್ಯಾಂಗಕ್ಕೆ, ಶಾಸಕಾಂಗಕ್ಕೆ ಮತ್ತು

ನ್ಯಾಯಾಲಯಕ್ಕಿರುವ ವಿಶೇಷ ಅಧಿಕಾರ, ಎಲ್ಲಕ್ಕಿಂತ ಹೆಚ್ಚಾಗಿ ಪೌರರಿಗೆ ತಮ್ಮ ಹಕ್ಕಿನ ಬಗ್ಗೆ ಇರುವ ಪ್ರೇಮ, ಏನೇ ಆದರೂ ಅದನ್ನು ರಕ್ಷಿಸಿಕೊಳ್ಳಲು ಅವರಿಗಿರುವ ಆಸೆ – ಇವು ಪ್ರಜಾಸ್ವಾತಂತ್ರ್ಯದ ಮುಖ್ಯ ರಕ್ಷಣೆಗಳು. ಆದರೂ ಯುದ್ಧವೇ ಮುಂತಾದ ತುರ್ತುಪರಿಸ್ಥಿತಿಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಪೌರ ಸ್ವಾತಂತ್ರ್ಯವನ್ನು ಪರಿಮಿತಗೊಳಿಸುವ ಅಧಿಕಾರ ಸರ್ಕಾರಕ್ಕೆ ಹಲವು ಅಧಿನಿಯಮಗಳಿಂದ ದತ್ತವಾಗಿದೆ.

ರಕ್ಷಣೆ : ರಕ್ಷಣಾ ನೀತಿಯನ್ನು ರೂಪಿಸಿ ನಿರ್ದೇಶಿಸುವ ಪರಮ ಜವಾಬ್ದಾರಿ ಪ್ರಧಾನ ಮಂತ್ರಿ ಮತ್ತು ಸಂಪುಟದ್ದು. ಸಹಾಯಕ್ಕೆ ರಕ್ಷಣಾ ಮತ್ತು ವಿದೇಶ ನೀತಿ ಕುರಿತ ಸಚಿವ ಸಂಪುಟ ಸಮಿತಿ ಉಂಟು. ಆದರೆ ರಕ್ಷಣಾ ನೀತಿಯ ವಾಸ್ತವಿಕ ನಿರೂಪಣೆ ರಕ್ಷಣಾ ಸಚಿವನದು (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಡಿಫೆನ್ಸ್). ಈತನಿಗೆ ನೆರವು ನೀಡಲು ಒಂದು ರಕ್ಷಣಾ ಸಮಿತಿ ಇದೆ. ರಕ್ಷಣಾ ಸಚಿವನನ್ನೇ ಅಧ್ಯಕ್ಷನನ್ನಾಗಿ ಉಳ್ಳ ಈ ಉನ್ನತ ಸಮಿತಿಯಲ್ಲಿ ರಕ್ಷಣಾ ಇಲಾಖೆಯ ರಾಜ್ಯ ಸಚಿವ, ನೌಕಾಬಲ, ಸೈನ್ಯಬಲ ಮತ್ತು ವಾಯುಬಲ ಇಲಾಖೆಗಳ ಉಪಸಚಿವರುಗಳು ಮತ್ತು ಈ ಬಲಗಳ ಮುಖ್ಯ ದಂಡನಾಯಕರು, ರಕ್ಷಣಾ ಬಲಗಳ ಶ್ರೇಷ್ಠ ದಂಡನಾಯಕ, ಸಂಶೋಧನೆ ಮತ್ತು ಯೋಜನೆಗಳ ಮುಖ್ಯ ಸಲಹೆಗಾರರು, ಸಿಬ್ಬಂದಿ ಮತ್ತು ಸಾಧನಗಳ ಮುಖ್ಯಾಧಿಕಾರಿ ಇವರು ಇರುತ್ತಾರೆ. ಈ ಸಮಿತಿಗೆ ತಾಂತ್ರಿಕ ಸಲಹೆ ನೀಡಲು ಮೂರು ಮುಖ್ಯ ದಂಡನಾಯಕರಿಂದ ಕೂಡಿದ, ರಕ್ಷಣಾ ಬಲಗಳ ಶ್ರೇಷ್ಠ ದಂಡನಾಯಕರ ಅಧ್ಯಕ್ಷತೆಯಲ್ಲಿ ಸೇರುವ ದಂಡನಾಯಕರ ಸಮಿತಿ ಇದೆ. ಈ ವ್ಯವಸ್ಥೆ ರಕ್ಷಣೆ ಕುರಿತ ನಿಯಮ ಮತ್ತು ಯೋಜನೆಗಳನ್ನು ರೂಪಿಸುತ್ತದೆ. ಈ ಸಂಬಂಧವಾದ ದೈನಂದಿನ ಆಡಳಿತವನ್ನು ನೌಕಾ, ಸೇನಾ ಮತ್ತು ವಾಯುಬಲ ಮಂಡಳಿಗಳು ನಡೆಸುತ್ತವೆ.

ಸೇನೆ : ಬ್ರಿಟನಿನ ಅಂತರ್ಯುದ್ಧದ ಕಾಲದಲ್ಲಿ ಆಲಿವರ್ ಕ್ರಾಮ್‌ವೆಲ್ ಆಧುನಿಕ ಸೇನೆಯ ತಳಹದಿಯನ್ನು ಹಾಕಿದಂದಿನಿಂದ ಬ್ರಿಟಿಷ್ ಸೇನೆ ಆಧುನಿಕ ತರಬೇತು ಮತ್ತು ಶಸ್ತ್ರಾಸ್ತ್ರಗಳನ್ನು ಪಡೆದ ಮಹಾಬಲವಾಗಿ ಬೆಳೆದುಬಂದಿದೆ. ಸುಮಾರು 30 ವಿವಿಧ ಅಂಗಗಳಾಗಿ ವ್ಯವಸ್ಥೆಗೊಂಡಿರುವ ಬ್ರಿಟಿಷ್ ಸೇನೆ ಬ್ರಿಟನಿನ ಒಳಗೂ ಹೊರಗೂ ಅನೇಕ ಕಮ್ಯಾಂಡ್‌ಗಳಾಗಿ ವ್ಯವಸ್ಥೆಗೊಂಡಿದೆ. ಇದರ ದೈನಂದಿನ ಆಡಳಿತವನ್ನು ಸೇನಾ ಮಂಡಳಿಯ ಸಹಾಯದಿಂದ ಸೇನಾಮುಖ್ಯ ದಂಡನಾಯಕ ನಡೆಸುತ್ತಾನೆ.

ನೌಕಾಬಲ : ಕ್ರಾಮ್‌ವೆಲ್‌ನಿಂದಲೇ ಆಧುನಿಕಗೊಂಡ ಬ್ರಿಟಿಷ್ ನೌಕಾಪಡೆ 18 ಮತ್ತು 19ನೆಯ ಶತಮಾನಗಳಲ್ಲಿ ಸಾಗರಗಳ ರಾಣಿಯಾಗಿ ಶೋಭಿಸಿ ಬ್ರಿಟಿಷ್ ಚಕ್ರಾಧಿಪತ್ಯವನ್ನು ರಚಿಸಿ ರಕ್ಷಿಸಿತು. ಆದರೆ ಬ್ರಿಟನಿನ ಇಂದಿನ ನೌಕಾಬಲ ಅಮೆರಿಕ, ರಷ್ಯ ಮತ್ತು ಸೋವಿಯೆತ್ ಒಕ್ಕೂಟದ ನೌಕಾ ಬಲಗಳಷ್ಟು ಬಲಿಷ್ಠವಾಗಿಲ್ಲ. ನಾಲ್ಕು ಮುಖ್ಯ ಅಂಗಗಳಿರುವ ನೌಕಾಬಲವನ್ನು ಹಲವು ತೀರ ಕಮ್ಯಾಂಡ್‌ಗಳು ಮತ್ತು ಸಮುದ್ರದ ಕಮ್ಯಾಂಡ್‌ಗಳಾಗಿ ವ್ಯವಸ್ಥಿಸಲಾಗಿದೆ. ಇದರ ದೈನಂದಿನ ಆಡಳಿತವನ್ನು ಅಡ್ಮಿರಾಲ್ಟಿ ಬೋರ್ಡು ಅಥವಾ ನೌಕಾಬಲದ ಮಂಡಳಿಯ ಸಹಾಯದಿಂದ ನೌಕಾಧಿಪತಿ ನಿರ್ವಹಿಸುತ್ತಾನೆ.

ವಾಯುಬಲ : ವಾಯುಪಡೆಯ ನಿರ್ಮಾಣದಲ್ಲಿ ಬ್ರಿಟನ್ ಇತರ ರಾಷ್ಟ್ರಗಳಿಗಿಂತ ಸ್ವಲ್ಪ ಹಿಂದಾಗಿತ್ತೆಂದು ಹೇಳಬೇಕು. 1880ರಲ್ಲಿ ಅದು ಒಂದು ಬಲೂನ್ ವಿಭಾಗವನ್ನು ಪಡೆದಿತ್ತು. ಒಂದನೆಯ ಮಹಾಯುದ್ಧದ ಅಂತ್ಯದಲ್ಲಿ, ಎಂದರೆ 1918ರ ಏಪ್ರಿಲ್ ಒಂದರಂದು, ರಾಯಲ್ ಏರ್ ಫೋರ್ಸ್ ಎಂಬ ಪೂರ್ಣರೂಪದ ವಾಯುಬಲವನ್ನು ಸ್ಥಾಪಿಸಿತು. ಎರಡನೆಯ ಮಹಾಯುದ್ಧದ ಪೂರ್ವದ ಕಾಲದಲ್ಲಿ ಮತ್ತು ಅನಂತರ ತ್ವರೆಯಾಗಿ ಅಭಿವೃದ್ಧಿಗೊಂಡ ಬ್ರಿಟಿಷ್ ವಾಯುಪಡೆ ನೂತನ ಯುದ್ಧ ವಿಮಾನಗಳೇ ಅಲ್ಲದೆ ಪರಮಾಣು ಬಾಂಬುಗಳು, ಕ್ಷಿಪಣಿಗಳು, ರೇಡಾರ್‌ಗಳು ಮುಂತಾದ ಎಲ್ಲ ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಿತವಾದ ಒಂದು ಶ್ರೇಷ್ಠ ಬಲವಾಗಿದೆ. ವಾಯುಬಲದ ದಂಡನಾಯಕ ವಾಯುಮಂಡಲಿಯ ಸಹಾಯದಿಂದ ಇದರ ಆಡಳಿತ ನಡೆಸುತ್ತಾನೆ. ಈ ಬಲವನ್ನು ಆಂತರಿಕವಾಗಿ ಕಾರ್ಯಾಧಾರದ ಮೇಲೂ ವಿದೇಶಗಳಲ್ಲಿ ಭೌಗೋಳಿಕ ಆಧಾರದ ಮೇಲೂ ಅನೇಕ ಕಮ್ಯಾಂಡ್‌ಗಳಾಗಿ ವ್ಯವಸ್ಥೆಗೊಳಿಸಲಾಗಿದೆ.

ನಾಗರಿಕ ರಕ್ಷಣೆ : ಯುದ್ಧಪ್ರಯತ್ನಗಳಿಗೆ ಆಂತರಿಕವಾಗಿ ಪೂರಕವಾಗಿ ನಾಗರಿಕ ರಕ್ಷಣಾ ವ್ಯವಸ್ಥೆಯೊಂದು ಎರಡನೆಯ ಮಹಾಯುದ್ಧದ ಕಾಲದಲ್ಲಿ ಆರಂಭಗೊಂಡು, ಯುದ್ಧಾನಂತರ 1948ರ ನಾಗರಿಕ ರಕ್ಷಣಾ ಕಾನೂನಿನ ಆಧಾರದ ಮೇಲೆ ಪುನರ್ರಚಿತವಾದ ಮತ್ತು ಶಾಶ್ವತವಾದ ವ್ಯವಸ್ಥೆಯಾಯಿತು. ಈ ವ್ಯವಸ್ಥೆಯಲ್ಲಿ 1) ದಿ ಸಿವಿಲ್ ಡಿಫೆನ್ಸ್ ಕೋರ್, 2) ದಿ ಇಂಡಸ್ಟ್ರಿಯಲ್ ಸಿವಿಲ್ ಡಿಫೆನ್ಸ್ ಕೋರ್, 3) ದಿ ಆಕ್ಸಿಲಿಯರಿ ಫೈರ್ ಸರ್ವಿಸ್ ಮತ್ತು 4) ದಿ ನ್ಯಾಷನಲ್ ಹಾಸ್ಪಿಟಲ್ ಸರ್ವಿಸ್ ಎಂಬ ನಾಲ್ಕು ಸ್ವಯಂಸೇವಕ ದಳಗಳಲ್ಲದೆ, ತುರ್ತು ಪರಿಸ್ಥಿತಿಯ ಸಂಪರ್ಕ ನಿರ್ವಹಣ ವ್ಯವಸ್ಥೆ ಮತ್ತು ಸಂಯುಕ್ತರಾಜ್ಯ ವಾರ್ನಿಂಗ್ ಮತ್ತು ಮಾನಿಟಿಯರಿಂಗ್ ಸಂಸ್ಥೆಯೂ ಸೇರಿವೆ. 1968ರಿಂದ ಈಚೆಗೆ ಈ ಕ್ಷೇತ್ರದಲ್ಲಿಯ ವ್ಯವಸ್ಥೆಯನ್ನು ಆವಶ್ಯಕವೆನಿಸುವಷ್ಟಕ್ಕೆ ಮಾತ್ರ ಮಿತಿಗೊಳಿಸಲಾಗಿದೆ. ಆದರೂ ಹೊಸವಿಧಾನಗಳ ಜ್ಞಾನ ಮತ್ತು ತರಬೇತು ಪಡೆಯಲು ಪ್ರಯತ್ನಗಳು ಮುಂದುವರಿಯುತ್ತಿವೆ. (ಎಂ.ಯು.ಎಂ.)

**ಶಿಕ್ಷಣ ಪದ್ಧತಿ :** ಜ್ಞಾನ ಲಾಭ ಪಡೆದು ಬಲ್ಲ ಎಲ್ಲ ಪೌರರಿಗೂ ವ್ಯಾಪಕವಾದ ಶಿಕ್ಷಣ ಸೇವಾ ಸೌಲಭ್ಯವನ್ನೊದಗಿಸುವುದು ಸಂಯುಕ್ತ ರಾಜ್ಯದ ಶಿಕ್ಷಣ ನೀತಿಯಾಗಿದೆ. ಸರ್ಕಾರದಿಂದ ಹಾಗೂ ಸರ್ಕಾರದ ಧನಸಹಾಯದಿಂದ ನಡೆಯುವ ಶಾಲೆಗಳ ಸ್ಥಾಪನೆ ಅಧ್ಯಾಪಕರಿಗೆ ತಕ್ಕಷ್ಟು ಸ್ವಾತಂತ್ರ್ಯ, ಆಡಳಿತದ ವಿಕೇಂದ್ರೀಕರಣ, ಸ್ವಯಂ ಸೇವಾಕರ್ತರ ಪ್ರಮುಖ ಪಾತ್ರ, ವಿಶ್ವವಿದ್ಯಾಲಯಗಳ ವಿದ್ಯಾಸ್ವಾತಂತ್ರ್ಯ, ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ– ಇವು ಇಲ್ಲಿಯ ಶಿಕ್ಷಣವ್ಯವಸ್ಥೆಯ ಮುಖ್ಯ ಲಕ್ಷಣಗಳು. ವರ್ಷವರ್ಷಕ್ಕೂ ಇಲ್ಲಿಯ ಶಿಕ್ಷಣ ಸೌಲಭ್ಯ ಹೆಚ್ಚುತ್ತಿದೆ. ವಿದ್ಯಾರ್ಥಿಗಳು ಕಡ್ಡಾಯ ಶಿಕ್ಷಣದ ವಯೋಮಿತಿಯ ಅನಂತರವೂ ಎಂದರೆ 16 ವರ್ಷಗಳ ಅನಂತರವೂ ಶಿಕ್ಷಣ ಪಡೆಯಲಾಶಿಸುವುದೇ ಇದಕ್ಕೆ ಕಾರಣ.

ಸಂಯುಕ್ತ ರಾಜ್ಯದ ಎಲ್ಲ ರಾಜ್ಯಗಳಲ್ಲೂ ಮೇಲಿನ ಸಾಮಾನ್ಯ ಶಿಕ್ಷಣ ನೀತಿಯನ್ನು ಕಾಣಬಹುದಾದರೂ ಇಂಗ್ಲೆಂಡ್ ಮತ್ತು ವೇಲ್ಸ್, ಸ್ಕಾಟ್ಲೆಂಡ್, ಉತ್ತರ ಐರ್ಲೆಂಡ್–ಈ ಮೂರು ರಾಜ್ಯಗಳಲ್ಲಿ ಒಂದೊಂದೂ ತನ್ನದೇ ಆದ ರೀತಿಯಲ್ಲಿ ತನ್ನ ಶಿಕ್ಷಣ ಪದ್ಧತಿಯನ್ನು ರೂಪಿಸಿಕೊಂಡು ತನ್ನದೇ ಆದ ವೈಶಿಷ್ಟ್ಯಗಳನ್ನು ರೂಢಿಸಿಕೊಂಡಿದೆ; ಕೆಲಕೆಲವು ವೈಲಕ್ಷಣಗಳನ್ನೂ ಹೊಂದಿದೆ. ಆದ್ದರಿಂದ ಸ್ಪಷ್ಟತೆಯ ಉದ್ದೇಶಕ್ಕಾಗಿ ಈ ಮೂರು ರಾಜ್ಯಗಳ ಪದ್ಧತಿಗಳನ್ನು ಪ್ರತ್ಯೇಕವಾಗಿ ವಿವರಿಸಿದೆ.

ಇಂಗ್ಲೆಂಡ್ ಮತ್ತು ವೇಲ್ಸಿನಲ್ಲಿ ಶಿಕ್ಷಣ : ಇಂಗ್ಲೆಂಡ್ ಮತ್ತು ವೇಲ್ಸಿನಲ್ಲಿ ಬಹು ಹಿಂದಿನಿಂದಲೂ ವಿಶ್ವವಿದ್ಯಾಲಯದ ವರೆಗಿನ ಶಿಕ್ಷಣ ಸೌಲಭ್ಯದ ವ್ಯವಸ್ಥೆ ನಡೆದುಕೊಂಡೇ ಬಂದಿದೆ. ಆದರೆ ಎಲ್ಲರಿಗೂ ಆ ಸೌಲಭ್ಯವೊದಗಿಸುವ ಕಾರ್ಯ 19ನೆಯ ಶತಮಾನದಲ್ಲಿ ಆರಂಭವಾಯಿತೆನ್ನಬಹುದು. ಸರ್ಕಾರ 1833ರಲ್ಲಿ ಶಿಕ್ಷಣಕ್ಕಾಗಿ ಮೊಟ್ಟಮೊದಲು ಹಣ ಒದಗಿಸಿತು. 1870ರ ಶಿಕ್ಷಣ ಶಾಸನದ ಅನಂತರ ಸರ್ಕಾರದ ಹಣದಿಂದ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಆರಂಭವಾಗಿ ಕಡ್ಡಾಯ ಶಿಕ್ಷಣದ ತತ್ತ್ವ ಆಚರಣೆಗೆ ಬಂತು. ಪ್ರೌಢ ಶಿಕ್ಷಣಕ್ಕೆ ಸರ್ಕಾರದ ಹಣವನ್ನು ವಿನಿಯೋಗಿಸುವುದು ಇಂಗ್ಲೆಂಡಿನಲ್ಲಿ 1889 ರಿಂದಲೂ ವೇಲ್ಸಿನಲ್ಲಿ 1902 ರಿಂದಲೂ ಆರಂಭವಾಯಿತು. ಸದ್ಯದಲ್ಲಿ ಈ ಎರಡು ದೇಶಗಳಲ್ಲೂ ಇರತಕ್ಕ ಶಿಕ್ಷಣ ಪದ್ಧತಿ 1944ರ ಶಿಕ್ಷಣ ಶಾಸನದ ಆಧಾರದ ಮೇಲೆ ವ್ಯವಸ್ಥೆಗೊಂಡಿದೆ. ಈ ಎರಡು ದೇಶಗಳಲ್ಲೂ ಏಕರೀತಿಯ ಶಿಕ್ಷಣ ಸಂಸ್ಥೆಗಳನ್ನೂ ಕಾರ್ಯಕ್ರಮಗಳನ್ನೂ ಕಾಣಬಹುದು. ವಿಶ್ವವಿದ್ಯಾಲಯದ ಶಿಕ್ಷಣ 12ನೆಯ ಶತಮಾನದ ಅಂತ್ಯದಿಂದ ಆರಂಭವಾಯಿತು. ಇತ್ತೀಚಿನವರೆಗೂ ಇಂಗ್ಲೆಂಡ್ ಮತ್ತು ವೇಲ್ಸಿಗೆ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ಇವೆರಡೇ ವಿಶ್ವವಿದ್ಯಾಲಯಗಳಿದ್ದು ಅನಂತರ 19ನೆಯ ಶತಮಾನದಲ್ಲಿ 13 ಹೊಸ ವಿಶ್ವವಿದ್ಯಾಲಯಗಳು ಸ್ಥಾಪನೆಯಾದುವು. ಸದ್ಯದಲ್ಲಿ ಒಟ್ಟು 34 ವಿಶ್ವವಿದ್ಯಾಲಯಗಳಿವೆ. ಒಂದು ಬಹಿರಂಗ ವಿಶ್ವವಿದ್ಯಾಲಯವೂ 1970ರಿಂದ ಕಾರ್ಯಾರಂಭ ಮಾಡಿದೆ. ಉನ್ನತ ಶಿಕ್ಷಣ ವಿಶ್ವವಿದ್ಯಾಲಯಗಳಲ್ಲೂ ಸ್ಥಳೀಯ ಸರ್ಕಾರದ ಕಾಲೇಜುಗಳಲ್ಲೂ ಪಾಲಿಟೆಕ್ನಿಕ್ ಮತ್ತು ಮುಂದುವರಿದ (ಮುನ್ನಡೆ) ಶಿಕ್ಷಣದ ಕಾಲೇಜುಗಳಲ್ಲೂ ತಾಂತ್ರಿಕ ಮತ್ತು ಇತರ ಕಾಲೇಜುಗಳಲ್ಲೂ ವ್ಯವಸ್ಥೆಗೊಂಡಿದೆ. ಹೆಚ್ಚಿನ ವಿವರಗಳಿಗೆ **ನೋಡಿ – ಇಂಗ್ಲೆಂಡಿನ ಶಿಕ್ಷಣ ವ್ಯವಸ್ಥೆ**.

**ಸ್ಕಾಟ್ಲೆಂಡಿನಲ್ಲಿ ಶಿಕ್ಷಣ :** ಸಂಯುಕ್ತ ರಾಜ್ಯದ ಇತರ ಭಾಗಗಳಿಗಿಂತ ಹಿಂದೆಯೇ ಸ್ಕಾಟ್ಲೆಂಡಿನಲ್ಲಿ ಎಲ್ಲರಿಗೂ ಶಿಕ್ಷಣ ಸೌಲಭ್ಯವೊದಗಿಸುವ ಅಗತ್ಯವನ್ನು ಒಪ್ಪಲಾಗಿತ್ತು. 1560ರ ಸುಮಾರಿನಲ್ಲಿ ಸ್ಕಾಟ್ಲೆಂಡಿನ ಸುಧಾರಕರು ಪ್ರತಿ ಗ್ರಾಮಕ್ಕೂ ಒಂದೊಂದು ಶಾಲೆಯೂ ಒಬ್ಬೊಬ್ಬ ಅಧ್ಯಾಪಕನೂ ಇರಬೇಕೆಂದು ಆಶಿಸಿದ್ದರು. 1969ರಲ್ಲಿ ಅಲ್ಲಿಯ ಪಾರ್ಲಿಮೆಂಟು ಎಲ್ಲ ಊರುಗಳೂ ಶಾಲೆಗಳಿಗೆ ಒಂದು ಮನೆಯನ್ನೂ ಅಧ್ಯಾಪಕರಿಗೆ ಸಂಬಳವನ್ನೂ ನೀಡಬೇಕೆಂದು ಶಾಸನ ಮಾಡಿತು. ಇದು ಪೂರ್ಣವಾಗಿ ಕಾರ್ಯರೂಪಕ್ಕೆ ಬರುವುದು ಸಾಧ್ಯವಾಗಲಿಲ್ಲ. 19ನೆಯ ಶತಮಾನದಲ್ಲಿ ಚರ್ಚುಗಳ ಯತ್ನದಿಂದಲೂ ಕೈಗಾರಿಕಾ ಕ್ರಾಂತಿ ಮೂಡಿಸಿದ ಒತ್ತಡದಿಂದಲೂ ಆ ಸೌಲಭ್ಯ ವಿಸ್ತರಿಸುವಂತಾಯಿತು. 1872ರ (ಸ್ಕಾಟ್ಲೆಂಡಿನ) ಶಾಸನದ ಮೂಲಕ ಶಿಕ್ಷಣದ ವ್ಯವಸ್ಥೆ ಮತ್ತು ಆಡಳಿತವನ್ನು ಚರ್ಚುಗಳಿಂದ ಸರ್ಕಾರ ವಹಿಸಿಕೊಂಡಿತು. ಅದಕ್ಕಾಗಿ 1,000 ಶಾಲಾಮಂಡಲಗಳನ್ನು ಸ್ಥಾಪಿಸಲಾಯಿತು. 5 ರಿಂದ 13 ವರೆಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವೂ ಆರಂಭವಾಯಿತು. ಶಾಲೆಯ ಮೇಲ್ವಿಚಾರಣೆಗೂ ಧನಸಹಾಯ ಹಂಚುವುದಕ್ಕೂ ಸ್ಕಾಟ್ಲೆಂಡಿನ ಶಿಕ್ಷಣ ಶಾಖೆ ಅಸ್ತಿತ್ವಕ್ಕೆ ಬಂತು. 1883ರ ಶಾಸನ ಕಡ್ಡಾಯ ಶಿಕ್ಷಣದ ವಯೋಮಿತಿಯನ್ನು 14ಕ್ಕೆ ಹೆಚ್ಚಿಸಿತು. 1918ರ ಶಾಸನ ಬಯಸತಕ್ಕವರಿಗೆಲ್ಲ ಪ್ರೌಢಶಿಕ್ಷಣದ ಸೌಲಭ್ಯವನ್ನು ಒದಗಿಸುವ ವ್ಯವಸ್ಥೆ ಮಾಡಲು 33 ಕೌಂಟಿಯ ಮತ್ತು 13 ನಗರದ ಶಿಕ್ಷಣವನ್ನು ಕೌಂಟಿ ಮತ್ತು ನಗರ ಕೌನ್ಸಿಲುಗಳಿಗೆ ವರ್ಗಾಯಿಸಿತು. 1936ರಲ್ಲಿ ಕಡ್ಡಾಯ ಶಿಕ್ಷಣದ ವಯೋಮಿತಿಯನ್ನು 15ಕ್ಕೆ ಹೆಚ್ಚಿಸಿತು. ಆದರೆ ಯುದ್ಧದ ದೆಸೆಯಿಂದ ಅದನ್ನು 1947ರ ವರೆಗೂ ಮುಂದೆಹಾಕಬೇಕಾಯಿತು. 1945ರ ಶಾಸನದ ಪ್ರಕಾರ 1963ರಲ್ಲಿ ಪರೀಕ್ಷಾ ಮಂಡಲಿ ಸ್ಥಾಪನೆಯಾಯಿತು. 1969ರ ಶಾಸನ ಎಲ್ಲ ಶಾಲೆಗಳಲ್ಲೂ ಶಿಕ್ಷಣವನ್ನೂ ಮನೋರಂಜನ

ಶಿಕ್ಷಣವನ್ನೂ ವ್ಯವಸ್ಥೆಗೊಳಿಸಬೇಕೆಂದು ಸೂಚಿಸಿತು. ಅದುತನಕ ಪಠ್ಯಕ್ರಮದ ಬದಲಾವಣೆಯೇ ಮುಂತಾದ ಕಾರ್ಯಗಳಿಗೆ ಸ್ಕಾಟ್ಲೆಂಡಿನ ಶಿಕ್ಷಣ ಕಾರ್ಯದರ್ಶಿಗಳ (ಸಚಿವರ) ಅನುಮತಿಯನ್ನು ಪಡೆಯಲೇಬೇಕಾಗಿದ್ದ ಅನಿವಾರ್ಯ ಇದರಿಂದ ಕಡಿಮೆಯಾಯಿತು.

ಪ್ರಾಥಮಿಕ ಶಿಕ್ಷಣ : ಇಂಗ್ಲೆಂಡು ಮತ್ತು ವೇಲ್ಸಿನಲ್ಲಿ ಪ್ರಾಥಮಿಕ ಶಿಕ್ಷಣ 5ರಿಂದ 12 ವರ್ಷದ ವರೆಗಿನ 7 ವರ್ಷ ಅವಧಿಉದ್ದಾಗಿರುತ್ತದೆ. ಸದ್ಯದಲ್ಲಿ ಅಲ್ಲಿ 2,553 ಪ್ರಾಥಮಿಕ ಶಾಲೆಗಳು 185 ಶಿಶುವಿಹಾರಗಳೂ ಇವೆ. ಸ್ಥಳೀಯ ಶಿಕ್ಷಣ ಪ್ರಾಧಿಕಾರದಿಂದ (ಲೋಕಲ್ ಎಜುಕೇಷನ್ ಅಥಾರಿಟಿ) ನಡೆಯುವ ಅಥವಾ ಅದರಿಂದ ಸಹಾಯಧನ ಪಡೆಯುವ ಶಾಲೆಗಳೆಲ್ಲ ಸರ್ಕಾರಿ ಶಾಲೆಗಳೆನಿಸಿವೆ. ಜನಸಂಖ್ಯೆ ವಿರಳವಾದ ಪ್ರದೇಶಗಳು ಹೆಚ್ಚಾಗಿರುವುದರಿಂದ ಅವುಗಳಲ್ಲಿ 15.2ರಷ್ಟು ಶಾಲೆಗಳು ಸಣ್ಣ ಏಕೋಪಾಧ್ಯಾಯ ಶಾಲೆಗಳು. ಧಾರ್ಮಿಕ ಶಿಕ್ಷಣವನ್ನು ಶಾಲೆಯ ಕಾರ್ಯಕ್ರಮಗಳಲ್ಲಿ ಸೇರಿಸಿದೆ. ಸ್ಕಾಟ್ಲೆಂಡಿನ ಸಚಿವರಿಂದ (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಸ್ಕಾಟ್ಲೆಂಡ್) ರೂಪಿತವಾದ ನಿಯಮಗಳನ್ನು ಅನುಸರಿಸಿ ಶಾಲೆಗಳು ಕೆಲಸ ಮಾಡುತ್ತವೆ. ತರಗತಿಯ ಸಂಖ್ಯಾಬಲ, ಸ್ಥಳ ಸೌಲಭ್ಯ, ಅಧ್ಯಾಪಕರ ಶಿಕ್ಷಣಾರ್ಹತೆ ಇಂಥ ವಿಷಯಗಳನ್ನು ಆ ನಿಯಮಗಳು ಗೊತ್ತುಮಾಡಿವೆ. ಒಳನಾಡಿನ ಗ್ರಾಮಗಳಲ್ಲೂ ಹತ್ತಿರದ ದ್ವೀಪಗಳಲ್ಲೂ ಗೇಲಿಕ್ ಮಾತೃಭಾಷೆ ಆದ್ದರಿಂದ ಅಲ್ಲಿಯ ಶಾಲೆಗಳಲ್ಲಿ ಗೇಲಿಕ್ ಮತ್ತು ಇಂಗ್ಲಿಷ್ ಈ ಎರಡು ಭಾಷೆಗಳನ್ನೂ ಬೋಧಿಸುವರು. ಮೇಲಿನ ತರಗತಿಗೆ ಹೋದಂತೆ ಪಾಠಗಳು ಇಂಗ್ಲಿಷ್ ಮಾಧ್ಯಮದಲ್ಲೆ ನಡೆಯುತ್ತವೆ. ಆದರೆ ಗೇಲಿಕ್ ಎಲ್ಲ ಶಾಲೆಗಳಲ್ಲೂ ಹಾಡುತ್ತಾರೆ.



ಪಾರ್ಲಿಮೆಂಟ್ ಅಧಿವೇಶನದ ಪ್ರಾರಂಭ ಸಮಾರಂಭ

ಪ್ರೌಢಶಿಕ್ಷಣ : ಕಳೆದ ಶತಮಾನದಲ್ಲಿ ಆರಂಭವಾದ ಕೆಲವು ನಗರಗಳ ಹಳೆಯ ಪ್ರೌಢಶಾಲೆಗಳನ್ನು ಬಿಟ್ಟರೆ ಮಿಕ್ಕೆಲ್ಲ ಸಹಶಿಕ್ಷಣದ ಪಾಠಶಾಲೆಗಳು. ಒಟ್ಟು 573 ಪ್ರೌಢಶಾಲೆಗಳಿದ್ದು ಅವುಗಳಲ್ಲಿ 110 ಸ್ವತಂತ್ರ (ವಸತಿ ವಿದ್ಯಾಲಯ) ಶಾಲೆಗಳು. ಪ್ರೌಢಶಿಕ್ಷಣ ಉಚಿತವಾಗಿದ್ದರೂ ಕೆಲವು ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಶುಲ್ಕವನ್ನು ವಿಧಿಸುವುದುಂಟು. ಒಳನಾಡಿನಲ್ಲಿ ವಿದ್ಯಾರ್ಥಿಗಳಿಗೆ ಮನೆ ಹತ್ತಿರವಿರುವ ಕೆಲವೆಡೆ ವಸತಿ ಸೌಕರ್ಯವೇರ್ಪಡಿಸಿರುವರು. ಧಾರ್ಮಿಕ ಶಿಕ್ಷಣ 6 ವರ್ಷ ಕಾಲದ್ದಾಗಿದೆ. ಕೆಲವೆಡೆ ಅದನ್ನು 4 ವರ್ಷದ ಜೂನಿಯರ್ ಮತ್ತು 2 ವರ್ಷದ ಸೀನಿಯರ್ ಪ್ರೌಢಶಾಲೆಗಳಲ್ಲಿ ವ್ಯವಸ್ಥೆಗೊಳಿಸಿರುವರು. ಸಾಮಾನ್ಯವಾಗಿ ವ್ಯಾಪಕ (ಕಾಂಪ್ರಿಹೆನ್ಸಿವ್) ಮಾದರಿಯ ಪ್ರೌಢಶಾಲೆಗಳು ಅಸ್ತಿತ್ವದಲ್ಲಿವೆ. 16 ವರ್ಷಗಳ ಕಡ್ಡಾಯ ಶಿಕ್ಷಣ ಮುಗಿಸಿ ಶಾಲೆಯನ್ನು ಬಿಡುವವರಿಗೆ ಜೂನಿಯರ್ ಪ್ರೌಢಶಾಲೆಗಳು ಅಸ್ತಿತ್ವದಲ್ಲಿವೆ. ಆಯ್ಕೆಯ (12+) ಪರೀಕ್ಷೆಯಿರುವೆಡೆ ವಿದ್ಯಾರ್ಥಿಗಳನ್ನು ಅವರ ವಯಸ್ಸು, ಯೋಗ್ಯತೆ ಮತ್ತು ಆಸಕ್ತಿಗಳಿಗನುಗುಣವಾದ ಪ್ರೌಢಶಾಲೆಗೆ ವರ್ಗಾಯಿಸಲು ಆಯಾ ಪ್ರೌಢಶಾಲೆಯ ಮತ್ತು ವಿದ್ಯಾರ್ಥಿಗಳು ಬರುವ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರನ್ನೊಳಗೊಂಡ ಸಮಿತಿಗಳು ನಿರ್ಧರಿಸುತ್ತವೆ. ಪರೀಕ್ಷೆಗೆ ಕೂಡದ ವಿದ್ಯಾರ್ಥಿಗಳಿಗೆ ಇಂಗ್ಲಿಷ್, ಚರಿತ್ರೆ ಭೂಗೋಳ, ಅಂಕಗಣಿತ, ವಿಜ್ಞಾನ, ಕಲೆ, ಸಂಗೀತ, ಧಾರ್ಮಿಕ ಮತ್ತು ದೈಹಿಕ ಶಿಕ್ಷಣ ಇವನ್ನು ಬೋಧಿಸುವರು. ಗಂಡುಮಕ್ಕಳು ತಾಂತ್ರಿಕ ವಿಷಯಗಳನ್ನೂ ಹೆಣ್ಣುಮಕ್ಕಳು ಗೃಹವಿಜ್ಞಾನ ಅಥವಾ ವಾಣಿಜ್ಯ ವ್ಯವಹಾರದ ವಿಷಯಗಳನ್ನೂ ಅಭ್ಯಾಸಿಸುವರು. ಕೆಲವು ಕಡೆ ಸಮುದ್ರಯಾನ ವಿಜ್ಞಾನವನ್ನೂ ಗ್ರಾಮೀಣ ವಿಜ್ಞಾನವನ್ನೂ ಆಯ್ದುಕೊಳ್ಳುವರು. ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳು ಅನ್ಯಭಾಷೆ ಮತ್ತು ಗಣಿತಶಾಸ್ತ್ರವನ್ನೂ ವ್ಯಾಸಂಗ ಮಾಡುವರು. ಪ್ರೌಢಶಾಲಾ ವಿದ್ಯಾರ್ಥಿಗಳು, 5ನೆಯ ವರ್ಷ ಆರ್ಡರಿನ ಅಥವಾ 6ನೆಯ ವರ್ಷ ಹೈಯರ್ ಸ್ಕಾಟಿಷ್ ಸರ್ಟಿಫಿಕೇಟ್ ಆಫ್ ಎಜುಕೇಷನ್ ಪರೀಕ್ಷೆಗೆ ಕೂಡುವರು.

ಮುಂದುವರಿದ ಶಿಕ್ಷಣ (ಮುನ್ನಡೆಯ ಶಿಕ್ಷಣ, ಫರ್ದರ್ ಎಜುಕೇಷನ್) : 3–4 ವರ್ಷ ಪ್ರೌಢಶಾಲಾ ಶಿಕ್ಷಣದ ಅನಂತರ ಉದ್ಯೋಗನಿರತರಾದವರಿಗೆ ಶಿಕ್ಷಣವನ್ನು ಮುಂದುವರಿಸುವ ಅವಕಾಶವನ್ನೊದಗಿಸಲು 92 ಸ್ಥಳೀಯ ಕೇಂದ್ರಗಳಿವೆ. ಅವುಗಳಲ್ಲಿ 79 ಸ್ಥಳೀಯ ಮುನ್ನಡೆ ಶಿಕ್ಷಣದ ಕೇಂದ್ರಗಳು; 13 ಕೇಂದ್ರೀಯ ಪ್ರಾದೇಶಿಕ ಸಂಸ್ಥೆಗಳೂ, ಕೇಂದ್ರೀಯ ಸಂಸ್ಥೆಗಳೂ 5 ವರ್ಷ ಪ್ರೌಢಶಾಲೆಯ ಶಿಕ್ಷಣವನ್ನು ಮುಗಿದವರನ್ನು ಮಾತ್ರ ಸೇರಿಸಿಕೊಂಡು, ಪೂರ್ಣಕಾಲದ ಶಿಕ್ಷಣವಿತ್ತು ಡಿಪ್ಲೊಮ ಪರೀಕ್ಷೆಗಳಿಗೆ ಸಿದ್ಧಪಡಿಸುತ್ತವೆ. ಔದ್ಯೋಗಿಕ ತರಬೇತಿ ಮಂಡಲಿಗಳೂ ಮುನ್ನಡೆಯ ಶಿಕ್ಷಣದಲ್ಲಿ ಭಾಗವಹಿಸುತ್ತವೆ. ತಾಂತ್ರಿಕ ಮತ್ತು ವೃತ್ತಿವಿಷಯಗಳನ್ನೊ ವಾಣಿಜ್ಯ ವ್ಯವಹಾರಾದಿ ವಿಷಯಗಳನ್ನೊ ಕಾರ್ಯಾಲಯ ನಿರ್ವಹಣೆಯ ವಿಷಯಗಳನ್ನೊ ವಿದ್ಯಾರ್ಥಿಗಳೂ ವ್ಯಾಸಂಗ ಮಾಡುವರು. ಅವು ನೀಡುವ ಶಿಕ್ಷಣ ಉನ್ನತ ಶಿಕ್ಷಣದ ಮಟ್ಟದ್ದೆಂದು ಪರಿಗಣಿತವಾಗಿದೆ.

ವಯಸ್ಕರ ಶಿಕ್ಷಣ ಇಂಗ್ಲೆಂಡಿನಲ್ಲಿದ್ದಂತೆಯೇ. ಆದರೆ ವಿಶ್ವವಿದ್ಯಾಲಯಗಳ ವಿಸ್ತರಣ ವಿಭಾಗವಾಗಲಿ, ಕಾರ್ಮಿಕರ ಶಿಕ್ಷಣ ಸಂಸ್ಥೆಯಾಗಲಿ ಅದನ್ನು ನಿರ್ವಹಿಸುವ ಹೊಣೆ ಹೊತ್ತಿಲ್ಲ. ವಯಸ್ಕರಿಗೆಂದೇ ನ್ಯೂಬ್ಯಾಟಲ್ ಆಬೆಯಲ್ಲಿ ಒಂದು ದೀರ್ಘಾವಧಿ ಶಿಕ್ಷಣದ ವಿದ್ಯಾಲಯವಿದೆ. ಸ್ಕಾಟ್ಲೆಂಡಿನ ವಯಸ್ಕರ ಶಿಕ್ಷಣ ಸಂಸ್ಥೆ ಆ ಕ್ಷೇತ್ರದಲ್ಲಿ ಸಮನ್ವಯ ಕಾರ್ಯವನ್ನು ನಿರ್ವಹಿಸುವುದಲ್ಲದೆ ಅಗತ್ಯ ಸುದ್ದಿ ಪ್ರಸಾರವನ್ನೂ ಕೈಗೊಳ್ಳುತ್ತದೆ.

ಯುವಜನರ ಪ್ರಶಿಕ್ಷಣಕ್ಕಾಗಿ ಎರಡು ಮಟ್ಟದ ಕಾರ್ಯಕ್ರಮಗಳುಂಟು – ಮೂರು ವರ್ಷದ ಮೂಲ ಪ್ರಶಿಕ್ಷಣ ಮತ್ತು ಶಿಕ್ಷಿತ ಯುವಕರಿಗೆ ಒಂದು ವರ್ಷದ ಪ್ರಶಿಕ್ಷಣ. ಇವೆರಡೂ ಯುವಕರ ಮತ್ತು ಸಮುದಾಯ ಶಿಕ್ಷಣ ವ್ಯವಸ್ಥೆಯ ಅಂಗವಾಗಿ ನಡೆಯುತ್ತದೆ.

ಉನ್ನತ ಶಿಕ್ಷಣ : ಉನ್ನತ ಶಿಕ್ಷಣ ಇಂಗ್ಲೆಂಡಿನಂತೆ ಇಲ್ಲಿಯ ವಿಶ್ವವಿದ್ಯಾಲಯಗಳಲ್ಲೂ 10 ಶಿಕ್ಷಣಶಾಸ್ತ್ರದ ಮತ್ತು ಇತರ ಕಾಲೇಜುಗಳಲ್ಲೂ 13 ಮುನ್ನಡೆ ಶಿಕ್ಷಣದ ಕೇಂದ್ರಿಯ ಸಂಸ್ಥೆಗಳಲ್ಲೂ ಪಾಲಿಟೆಕ್ನಿಕ್ ಮತ್ತು ಟೆಕ್ನಾಲಜಿ ಸಂಸ್ಥೆಗಳಲ್ಲೂ ವ್ಯವಸ್ಥೆಗೊಂಡಿದೆ.

ಆಕ್ಸ್‌ಫರ್ಡ್ ಕೇಂಬ್ರಿಜ್ ವಿಶ್ವವಿದ್ಯಾಲಯಗಳಷ್ಟೇ ಪ್ರಾಚೀನವೆನ್ನಬಹುದಾದ ಸೇಂಟ್ ಆ್ಯಂಡ್ರೂಸ್ ವಿಶ್ವವಿದ್ಯಾಲಯವನ್ನೂ ಒಳಗೊಂಡಂತೆ ನಾಲ್ಕು ಹಿಂದಿನ ವಿಶ್ವವಿದ್ಯಾಲಯಗಳೂ (ಸೇಂಟ್ ಆ್ಯಂಡ್ರೂಸ್, ಗ್ಲಾಸ್ಗೋ, ಎಡಿನ್‌ಬರಾ, ಅಬರ್ಡೀನ್) ಈಚೆಗೆ ಆರಂಭವಾದ ನಾಲ್ಕು ವಿಶ್ವವಿದ್ಯಾಲಯಗಳೂ (ಡಂಡಿ, ಹೆರಿಯಟ್ ವಾಟ್, ಸ್ಟರ್ಲಿಂಗ್ ಮತ್ತು ಸ್ಟ್ರಾತ್‌ಕ್ಲೈಡ್) ಸೇರಿ ಒಟ್ಟು 8 ವಿಶ್ವವಿದ್ಯಾಲಯಗಳಿವೆ. ಈ ವಿಶ್ವವಿದ್ಯಾಲಯಗಳೂ ಬ್ರಿಟನಿನ ಇತರ ವಿಶ್ವವಿದ್ಯಾಲಯಗಳಂತೆ ವಿಶ್ವವಿದ್ಯಾಲಯದ ಅನುದಾನ ಸಮಿತಿಯ ಕಾರ್ಯಕ್ಷೇತ್ರಕ್ಕೆ ಒಳಪಟ್ಟಿದ್ದು, ಆದರಿಂದ ಸಹಾಯಧನ ಪಡೆದುಕೊಳ್ಳುತ್ತವೆ. ಸಾಮಾನ್ಯವಾಗಿ ಪ್ರಥಮ ಪದವಿ 3 ವರ್ಷದ್ದು; ವಾಸ್ತುಶಿಲ್ಪ, ವೈದ್ಯ, ಪಶುವೈದ್ಯ – ಇವು 5–6 ವರ್ಷಗಳವು.

ಅಧ್ಯಾಪಕರ ಕಾಲೇಜುಗಳು ಪದವೀಧರರಲ್ಲದವರಿಗೆ 3 ವರ್ಷದ, ಪದವೀದರರಿಗೆ ಒಂದು ವರ್ಷದ ಪ್ರಶಿಕ್ಷಣ ನೀಡುತ್ತವೆ. ಕೆಲವು ಶಿಕ್ಷಕರ ಕಾಲೇಜುಗಳು ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿವೆ. ಅವು ನಾಲ್ಕು ವರ್ಷಗಳ ಪ್ರಶಿಕ್ಷಣವಿತ್ತು ಬಿ.ಎಡ್. ಪದವಿಗೆ ಸಿದ್ಧಪಡಿಸುವುವು.

ಆಡಳಿತ ಮತ್ತು ಹಣಕಾಸು : ವಿಶ್ವವಿದ್ಯಾಲಯಗಳನ್ನುಳಿದು ಮಿಕ್ಕ ಸಾರ್ವಜನಿಕ ಶಿಕ್ಷಣದ ಆಡಳಿತ ಸ್ಕಾಟ್ಲೆಂಡಿನ ರಾಜ್ಯ ಸಚಿವರಿಗೆ ಸೇರಿದೆ. ಆ ಕಾರ್ಯವನ್ನವರು ಸ್ಕಾಟ್ಲೆಂಡಿನ ಶಿಕ್ಷಣ ಶಾಖೆಯ ಮೂಲಕ ನಿರ್ವಹಿಸುವರು. ಶಾಲೆಯ ಆರೋಗ್ಯ ಕಾರ್ಯಕ್ರಮಗಳನ್ನು ಆರೋಗ್ಯ ಶಾಖೆಯ ಮೂಲಕ ನಿರ್ವಹಿಸುವರು. ಸ್ಥಳೀಯವಾಗಿ ಶಿಕ್ಷಣದ ಆಡಳಿತವನ್ನು 35 ಸ್ಥಳೀಯ ಶಿಕ್ಷಣ ಪ್ರಾಧಿಕಾರಗಳೂ ಅವು ನೇಮಿಸುವ ಶಾಸನದತ್ತ ಶಿಕ್ಷಣ ಸಮಿತಿಗಳೂ ನಿರ್ವಹಿಸುತ್ತವೆ. ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ಅಗತ್ಯವೆನಿಸುವಾಗ ಸಚಿವರು ತಮ್ಮ ಅಭಿಪ್ರಾಯ ಸೂಚಿಸುವರು. ಸಾಮಾಜಿಕ ಶಿಕ್ಷಣ, ಶಿಶುರಕ್ಷಣೆ, ಅಪ್ರೂವ್ಡ್ ಶಾಲೆಗಳ (ವಸತಿ ವಿದ್ಯಾಲಯ) ಆಡಳಿತ ಇವಿಷ್ಟೂ ಅವರಿಗೆ ಸೇರಿದೆ. ಸಾಮಾನ್ಯ ಶಿಕ್ಷಣ, ಪಠ್ಯಕ್ರಮ, ತಾಂತ್ರಿಕ ಶಿಕ್ಷಣ, ಯುವಜನ ಮತ್ತು ಸಮುದಾಯ ಸೇವೆ, ಅಧ್ಯಾಪಕರ ಶಿಕ್ಷಣ (ಬೋಧನೆ)– ಇವಕ್ಕೆ ಸಂಬಂಧಿಸಿದಂತೆ ರಚಿತವಾಗಿರುವ ಸಲಹಾಮಂಡಲಿಗಳು ಅವರಿಗೆ ಸಲಹೆ ನೀಡುತ್ತವೆ. ಅವರ ಮುಖ್ಯ ಕಾರ್ಯಾಲಯ ಎಡಿನ್‌ಬರಾದಲ್ಲಿದೆ.

ಸ್ಥಳೀಯ ಶಿಕ್ಷಣ ಪ್ರಾಧಿಕಾರಗಳು ಇಂಗ್ಲೆಂಡಿನಲ್ಲಿರುವಂತೆ ಕಾರ್ಯ ನಿರ್ವಹಿಸಿದರೂ ಅವುಗಳ ಅಧಿಕಾರವ್ಯಾಪ್ತಿ ಸ್ವಲ್ಪ ಕಡಿಮೆ; ಅವು ಮುನ್ನಡೆ ಶಿಕ್ಷಣದ ಕೇಂದ್ರಿಯ ಸಂಸ್ಥೆಗಳನ್ನಾಗಲಿ ಪ್ರಾದೇಶಿಕ ಮತ್ತು ರಾಷ್ಟ್ರೀಯ ತಾಂತ್ರಿಕ ಮತ್ತು ಕಲಾ ಕಾಲೇಜುಗಳನ್ನಾಗಲಿ ಅಧ್ಯಾಪಕರ ಕಾಲೇಜುಗಳನ್ನಾಗಲಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಹೊಂದಿಲ್ಲ. ಆದರೆ ಅವು ಸಾರ್ವಜನಿಕ (ಸರ್ಕಾರಿ) ಶಾಲೆಗಳನ್ನು ಸ್ಥಾಪಿಸಿ ನಡೆಸಿಕೊಂಡು ಬರುತ್ತವೆ. ಧಾರ್ಮಿಕ ಸಂಸ್ಥೆಗಳ

ಖಾಸಗಿ ಶಾಲೆಗಳನ್ನೂ ನೋಡಿಕೊಳ್ಳುತ್ತವೆ. ಶಾಲೆಯ ಆರೋಗ್ಯ ಆಹಾರ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದರ ಜೊತೆಗೆ ವಿಶ್ವವಿದ್ಯಾಲಯ ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳನ್ನುಳಿದು ಮಿಕ್ಕ ಸಂಸ್ಥೆಗಳಿಗೆ ಸಹಾಯಧನವನ್ನೂ ನೀಡುತ್ತವೆ. ಕೇಂದ್ರೀಯ ಸಂಸ್ಥೆಗಳೂ ಅಧ್ಯಾಪಕರ ಕಾಲೇಜುಗಳೂ ಸ್ವಯಂಸೇವಾ ಆಡಳಿತ ಮಂಡಲಿಗಳನ್ನು ಹೊಂದಿವೆ. 1965ರಿಂದ ಸ್ಕಾಟಿಷ್ ಸರ್ಟಿಫಿಕೇಟ್ ಆಫ್ ಎಜುಕೇಷನ್ ಪರೀಕ್ಷೆಯನ್ನು ಸ್ವಯಮಾಡಳಿತ ಸಂಸ್ಥೆಯೊಂದು ನಿರ್ವಹಿಸುತ್ತಿದೆ. ನ್ಯೂನ ಮಕ್ಕಳ ವಸತಿ ವಿಶ್ವವಿದ್ಯಾಲಯಗಳು ಬಹುಮಟ್ಟಿಗೆ ಸ್ವಯಂಸೇವಾ ಸಂಸ್ಥೆಗಳಿಗೆ ಸೇರಿವೆ.

ಶಿಕ್ಷಣದ ಆದಾಯವೆಚ್ಚಗಳು ಇಂಗ್ಲೆಂಡಿನಲ್ಲಿದ್ದಂತೆಯೇ. 1969–70ರಲ್ಲಿ ವಿದ್ಯಾಸೌಲಭ್ಯಗಳಿಗಾಗಿ ಸರ್ಕಾರ 26.65 ಕೋಟಿ ಪೌಂಡುಗಳನ್ನು ವೆಚ್ಚ ಮಾಡಿತು.

ಉತ್ತರ ಐರ್ಲೆಂಡಿನಲ್ಲಿ ಶಿಕ್ಷಣ : ಉತ್ತರ ಐರ್ಲೆಂಡ್ 1921ರಲ್ಲಿ ಸ್ವಯಮಾಡಳಿತ ಘಟಕವಾದೊಡನೆ ಆರಂಭವಾದ ಶಿಕ್ಷಣ ಸಚಿವಾಲಯ ಅದು ತನಕ ಮೂರು ಭಿನ್ನ ಶಾಖೆಗಳಿಗೊಳಪಟ್ಟಿದ್ದ ಶಿಕ್ಷಣ ಸೇವಾವ್ಯವಸ್ಥೆಯ ಎಲ್ಲ ಆಡಳಿತವನ್ನೂ ವಹಿಸಿಕೊಂಡಿತು.

1923ರ (ಐರ್ಲೆಂಡಿನ) ಶಾಸನದ ಪ್ರಕಾರ ಕೌಂಟಿ ಮತ್ತು ಕೌಂಟಿಬರೋ ಸ್ಥಳೀಯ ಸರ್ಕಾರಗಳ (ಸಂಸ್ಥೆ) ಸ್ಥಾಪನೆಯಾಗಿ ಅವುಗಳ ಶಿಕ್ಷಣ ಸಮಿತಿಗಳು ತಮ್ಮ ತಮ್ಮ ಕ್ಷೇತ್ರದ ಪ್ರಾಥಮಿಕ, ಪ್ರೌಢ ಮತ್ತು ತಾಂತ್ರಿಕ ಶಿಕ್ಷಣಗಳನ್ನು ವ್ಯವಸ್ಥೆಗೊಳಿಸಿ ನಡೆಸುವ ಅಧಿಕಾರ ಪಡೆದುವು. 5ರಿಂದ 14ರಮರೆಗೆ ಶಿಕ್ಷಣ ಕಡ್ಡಾಯವಾಯಿತು. ಅದುತನಕ ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿದ್ದ ಪ್ರಾಥಮಿಕ ಶಾಲೆಗಳಲ್ಲಿ ಬಹುಪಾಲನ್ನು ಅವು ವಹಿಸಿಕೊಂಡು ಮಿಕ್ಕವಕ್ಕೆ ಸಹಾಯಧನ ನೀಡುತ್ತಿದ್ದುವು. ಪ್ರೌಢ ಶಾಲೆಗಳೆಲ್ಲ ಬಹುಮಟ್ಟಿಗೆ ಸ್ವಯಂಸೇವಾ ಸಂಸ್ಥೆಗಳ ಆಡಳಿತದಲ್ಲೆ ಉಳಿದುವು. ಆದರೆ ಅವಕ್ಕೆ ಸರ್ಕಾರದ ಬೊಕ್ಕಸದಿಂದ ಹಣಸಹಾಯ ದೊರಕುತ್ತಿತ್ತು. ತಾಂತ್ರಿಕ ಶಿಕ್ಷಣವನ್ನು ಪೂರ್ಣವಾಗಿ ಸ್ಥಳೀಯ ಪ್ರಾಧಿಕಾರವೇ ನಡೆಸುತ್ತಿತ್ತು. 1938ರ ಶಿಕ್ಷಣ ಶಾಸನ ಕಡ್ಡಾಯ ಶಿಕ್ಷಣದ ಮಯೋಮಿತಿಯನ್ನು 18ಕ್ಕೆ ಏರಿಸಿತು. ಆದರೆ ಯುದ್ಧದ ದೆಸೆಯಿಂದ ಅದು 1947ರಲ್ಲಿ ಮಾತ್ರ ಕಾರ್ಯರೂಪಕ್ಕೆ ಬಂತು.

ಸದ್ಯದ ಶಿಕ್ಷಣವ್ಯವಸ್ಥೆ 1947ರ ಶಿಕ್ಷಣ ಶಾಸನವನ್ನು ಅವಲಂಬಿಸಿ ಏರ್ಪಟ್ಟಿದೆ. ಇದು ಇಂಗ್ಲೆಂಡಿನ 1944ರ ಶಿಕ್ಷಣ ಶಾಸನದಂತೆಯೇ ಇದೆ. ಪ್ರಾಥಮಿಕ, ಪ್ರೌಢ ಮತ್ತು ಮುನ್ನಡೆ ಎಂಬ ಮೂರು ಅಂತಸ್ತುಗಳಲ್ಲಿ ಶಿಕ್ಷಣವನ್ನು ವ್ಯವಸ್ಥೆಗೊಳಿಸಿದೆ: 6 ವರ್ಷಗಳ ಪ್ರಾಥಮಿಕ ಶಿಕ್ಷಣ, 4 ವರ್ಷಗಳ ಇಂಟರ್‌ಮಿಡಿಯೆಟ್ ಪ್ರೌಢ ಶಾಲೆಯ ಶಿಕ್ಷಣ, ಅನಂತರ ಶಾಲೆಯನ್ನು ಬಿಡುವವರಿಗೆ ಮುನ್ನಡೆ ಶಿಕ್ಷಣ. 1968ರ ರಾಜ್ಯ ಶಾಸನದ ಪ್ರಕಾರ ಅನೇಕ ಖಾಸಗಿ ಪ್ರೌಢಶಾಲೆಗಳು 'ಮೇಂಟೇನ್ಡ್' ಶಾಲೆಗಳಾದವು. ಅವು ತಮ್ಮ ಆಡಳಿತ ಮಂಡಲಿಯಲ್ಲಿ 1/3 ಭಾಗದಷ್ಟು ಸರ್ಕಾರದ ನಾಮಕರಣ ಸದಸ್ಯರನ್ನು ಸೇರಿಸಿಕೊಳ್ಳುವುದಕ್ಕೂ ತಮ್ಮ ಶಾಲೆಯ ಕಟ್ಟಡಕ್ಕಾಗಿ ಸೇ. 80ರಷ್ಟು ಧನಸಹಾಯವನ್ನು ಸರ್ಕಾರದಿಂದ ಪಡೆದುಕೊಳ್ಳುವುದಕ್ಕೂ ಅನುಕೂಲವಾಯಿತು. ಜೊತೆಗೆ ಅವುಗಳ ಇತರ ವೆಚ್ಚವನ್ನು ಸರ್ಕಾರವೇ ನೀಡುವಂತಾಯಿತು.

ಪ್ರಾಥಮಿಕ ಶಿಕ್ಷಣ : 1970ರಲ್ಲಿ 22 ಶಿಶುವಿಹಾರಗಳೂ 1256 (643 ಸರ್ಕಾರಿ, 613 ಖಾಸಗಿ) ಪ್ರಾಥಮಿಕ ಶಾಲೆಗಳೂ ಗ್ರಾಮರ್ ಶಾಲೆಗೆ ಸಿದ್ಧತೆ ನೀಡುತ್ತಿದ್ದ 41 ಶಾಲೆಗಳೂ ಇದ್ದುವು. 16 ವರ್ಷಗಳ ತನಕ ಉಚಿತ ಕಡ್ಡಾಯ ಶಿಕ್ಷಣ ಆಚರಣೆಯಲ್ಲಿದೆ. ಧಾರ್ಮಿಕ ಶಿಕ್ಷಣ ಎಲ್ಲ ಶಾಲೆಗಳಲ್ಲೂ ಉಂಟು.

ಪ್ರೌಢ ಶಿಕ್ಷಣ : ಸಾಮಾನ್ಯವಾಗಿ ಪ್ರೌಢಶಿಕ್ಷಣ ಉಚಿತ. 1970ರಲ್ಲಿ ಒಟ್ಟು 266 ಪ್ರೌಢಶಾಲೆಗಳಿದ್ದವು. ಅವುಗಳಲ್ಲಿ ಮೂರು ವಿಧ : ಗ್ರಾಮರ್‌ಶಾಲೆಗಳು (81); ಇಂಟರ್ ಮಿಡಿಯೆಟ್ ಪ್ರೌಢಶಾಲೆಗಳು (168) ಮತ್ತು ತಾಂತ್ರಿಕ ಪ್ರೌಢಶಾಲೆಗಳು (17). ಗ್ರಾಮರ್ ಪ್ರೌಢಶಾಲೆಯಲ್ಲಿ ಶಿಕ್ಷಣ 6 ವರ್ಷಕಾಲಾವಧಿಯದು; ಅಲ್ಲಿ ಮಾತ್ರ ಶುಲ್ಕವನ್ನು ವಿಧಿಸುವರು. ಧಾರ್ಮಿಕ ಶಿಕ್ಷಣ ಪ್ರಾಥಮಿಕ ಮಟ್ಟದಲ್ಲಿರುವಂತೆಯೇ ಮಿಕ್ಕ ಅಂಶಗಳು ಇಂಗ್ಲೆಂಡಿನಲ್ಲಿರುವಂತೆ; ಉತ್ತರ ಐರ್ಲೆಂಡಿನ 'ಜನರಲ್ ಸರ್ಟಿಫಿಕೇಟ್ ಆಫ್ ಎಜುಕೇಷನ್ ಕೌನ್ಸಿಲ್' ತನ್ನ ಪರೀಕ್ಷಾಮಂಡಳಿಯ ಮೂಲಕ ಪರೀಕ್ಷೆ ನಡೆಸುತ್ತದೆ. ಗ್ರಾಮರ್ ಮತ್ತು ಇತರ ಪ್ರೌಢಶಾಲೆಗಳ, ಹಾಗೂ ವಿಶಿಷ್ಟ ಶಿಕ್ಷಣದ ಶಾಲೆಗಳ ವಿದ್ಯಾರ್ಥಿಗಳೂ ಪರೀಕ್ಷೆಗೆ ಕೂಡಬಹುದು.

1973ರಿಂದ 'ಸರ್ಟಿಫಿಕೇಟ್ ಆಫ್ ಸೆಕೆಂಡರಿ ಎಜುಕೇಷನ್' (ಸಿ.ಎಸ್.ಇ.) ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಇವೆಲ್ಲ ಇಂಗ್ಲೆಂಡಿನ (ಜೆ.ಸಿ.ಇ.) ಪರೀಕ್ಷೆಗಳ ಮಟ್ಟದವು. ಕೇವಲ 15ನೆಯ ವರ್ಷಕ್ಕೆ ಶಿಕ್ಷಣ ಮುಗಿಸುವವರಿಗಾಗಿ ಒಂದು ಜೂನಿಯರ್ ಪರೀಕ್ಷೆಯನ್ನು ಆರಂಭಿಸುವ ಯೋಜನೆಯಿದೆ.

ಮುನ್ನಡೆಯ ಶಿಕ್ಷಣ : 15–16ನೆಯ ವರ್ಷದವರೆಗೆ ಶಿಕ್ಷಣ ಪಡೆದ ಉದ್ಯೋಗ ನಿರತರಾದ ಯುವಜನಕ್ಕೆ ಮುನ್ನಡೆಯ ಶಿಕ್ಷಣವನ್ನೊದಗಿಸುವ ಶಾಸನದತ್ತ ಕರ್ತವ್ಯ ಸ್ಥಳೀಯ ಶಿಕ್ಷಣ ಪ್ರಾಧಿಕಾರಕ್ಕೆ ಸೇರಿದೆ. ಇತರ ಖಾಸಗಿ ಸಂಸ್ಥೆಗಳೂ ಕಾರ್ಯದಲ್ಲಿ ಸಹಕರಿಸುತ್ತವೆ. 1969–70ರಲ್ಲಿ ವಿವಿಧ ಪಠ್ಯಕ್ರಮಗಳನ್ನೊಳಗೊಂಡ 31 ಕಾಲೇಜುಗಳೂ ಭಾಗಶಃ ಅಥವಾ ಪೂರ್ಣಕಾಲದ ಮುನ್ನಡೆ ಶಿಕ್ಷಣವನ್ನೊದಗಿಸುತ್ತಿದ್ದವು. ಇವುಗಳಲ್ಲಿ ನಾಲ್ಕು ಕೇಂದ್ರೀಯ ಸಂಸ್ಥೆಗಳು (ಬೆಲ್ಫಾಸ್ಟ್‌ನ ಟೆಕ್ನಾಲಜಿ, ಕಲೆ, ನಮೂನೆ ಮತ್ತು ಗೃಹವಿಜ್ಞಾನ ಕಾಲೇಜುಗಳು); ಜೊತೆಗೆ 159 ಬಾಹ್ಯ ಕೇಂದ್ರಗಳಲ್ಲೂ ಆ ಶಿಕ್ಷಣವನ್ನೂ ವ್ಯವಸ್ಥೆಗೊಳಿಸಿದೆ. 18ನೆಯ ವಯಸ್ಸಿನವರೆಗೆ ಅಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಉಚಿತ ಪುಸ್ತಕ ಮತ್ತು ಬಂದುಹೋಗಲು ತಗಲುವ ಪ್ರಯಾಣದ ಭತ್ಯ ಅಥವಾ ಉಚಿತ ಊಟವಸತಿ – ಇವನ್ನೆಲ್ಲ ಕೊಡುವರು. ಅಲ್ಲಿ ವಿದ್ಯಾರ್ಥಿಗಳು ಲಂಡನ್ ಇನ್ಸ್ಟಿಟ್ಯೂಟಿನ ಸಿಟಿಅಂಡ್‌ಗಿಲ್ಡ್ಸ್ ಪರೀಕ್ಷಾ ಸಂಸ್ಥೆಯ ಪಠ್ಯಕ್ರಮದ ಸುಮಾರು 140 ವಿಷಯಗಳಲ್ಲಿ ವ್ಯಾಸಂಗಕ್ಕೆ ಸೇರಬಹುದು. ಅವರು ನ್ಯಾಷನಲ್ ಸರ್ಟಿಫಿಕೇಟ್ ಮತ್ತು ಡಿಪ್ಲೊಮ ಪರೀಕ್ಷೆಗಳಿಗೆ ಕೂಡುವರು, ಕೈಗಾರಿಕಾ ತರಬೇತು ಮಂಡಲಿಗಳನ್ನು ಆರಂಭಿಸಿ ಆ ವಿದ್ಯಾರ್ಥಿಗಳಿಗೆ ಅಗತ್ಯ ಅಭ್ಯಾಸಾರ್ಥ ತರಬೇತನ್ನು ದೊರಕಿಸಲಾಗುತ್ತಿದೆ. ನೂತನವಾಗಿ ಆರಂಭವಾಗಿರುವ ಅಲ್ಸ್ಟರ್ ಕಾಲೇಜಿಗೆ ಮೇಲೆ ಉಲ್ಲೇಖಿಸಿದ ಬೆಲ್ಫಾಸ್ಟಿನ ನಾಲ್ಕು ಕಾಲೇಜುಗಳನ್ನೂ ಸೇರಿಸಿ ಉನ್ನತ ಶಿಕ್ಷಣವೀಯುವ ವ್ಯವಸ್ಥೆ ಮಾಡಿದೆ.

ವಯಸ್ಕರ ಶಿಕ್ಷಣ : ವಯಸ್ಕರ ಶಿಕ್ಷಣ ಇಲ್ಲೂ ಇಂಗ್ಲೆಂಡಿನಲ್ಲಿರುವಂತೆ ವ್ಯವಸ್ಥೆಗೊಂಡಿದೆ. ಮನೋರಂಜಕ ಕಾರ್ಯಕ್ರಮಗಳನ್ನು ಸ್ಥಳೀಯ ಶಿಕ್ಷಣ ಪ್ರಾಧಿಕಾರವೇ ಒದಗಿಸುತ್ತದೆ. ಕ್ವೀನ್ಸ್ ವಿಶ್ವವಿದ್ಯಾಲಯದ ಹೊರಗಿನ ಶಾಖೆಯೂ ಅಲ್ಸ್ಟರ್ ವಿಶ್ವವಿದ್ಯಾಲಯದ ವಯಸ್ಕರ ಶಿಕ್ಷಣದ ವಿಭಾಗವೂ ಕಾರ್ಮಿಕರ ಶಿಕ್ಷಣ ಸಂಘವೂ ವಯಸ್ಕರಿಗೆ ಮೇಲ್ಮಟ್ಟದ ಶಿಕ್ಷಣದ ತರಗತಿಗಳನ್ನು ನಡೆಸುತ್ತಿವೆ. ಸುಮಾರು 6 ಸಾವಿರ ವಿದ್ಯಾರ್ಥಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವರು.

ಯುವಜನಾ ಸೇವಾ ವ್ಯವಸ್ಥೆ : ಕೇಂದ್ರಸರ್ಕಾರ, ಸ್ಥಳೀಯ ಸರ್ಕಾರ ಮತ್ತು ಖಾಸಗಿ ಸ್ವಯಂಸೇವಾಸಂಸ್ಥೆಗಳು ಸಹಕರಿಸಿ ಯುವಜನರಿಗೆ ಆಟಪಾಟಗಳಲ್ಲೂ ಅಂಗಸಾಧನೆ, ಮನೋರಂಜನೆ ಮುಂತಾದ ಶಿಕ್ಷಣವನ್ನು ವ್ಯವಸ್ಥೆಗೊಳಿಸುತ್ತಿವೆ. ಆ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಲು ಯುವಜನ ಕ್ರೀಡಾಮಂಡಲಿಯನ್ನು ಸ್ಥಾಪಿಸಿದೆ. ಯುವಜನ ಕಲ್ಯಾಣಕಾರ್ಯಕ್ರಮಗಳಿಗಾಗಿ ವರ್ಷಂಪ್ರತಿ 60 ಲಕ್ಷ ಪೌಂಡುಗಳಷ್ಟು ಹಣ ವಿನಿಯೋಗವಾಗುತ್ತಿದೆ.

**ಶೈಕ್ಷಣಿಕ ಅಂಕಿ ಅಂಶಗಳು**

| | ಇಂಗ್ಲೆಂಡ್ ಮತ್ತು ವೇಲ್ಸ್ | ಸ್ಕಾಟ್ಲೆಂಡ್ | ಉತ್ತರ ಐರ್ಲೆಂಡ್ | ಸಂಯುಕ್ತ ರಾಜ್ಯ |
|---|---|---|---|---|
| ಒಟ್ಟು ಪ್ರಾಥಮಿಕ ಪ್ರೌಢಶಾಲಾ ವಿದ್ಯಾರ್ಥಿ ಸಂಖ್ಯೆ | 85,97,451 | 9,90,925 | 3,43,610 | 99,31,98 |
| ಮುನ್ನಡೆ ಶಿಕ್ಷಣದ ವಿದ್ಯಾರ್ಥಿ ಸಂಖ್ಯೆ | 30,82,555 | 3,57,144 | 62,394 | 35,02,093 |
| ಅಧ್ಯಾಪಕರು ವೃತ್ತಿಶಿಕ್ಷಣದ ವಿದ್ಯಾರ್ಥಿ ಸಂಖ್ಯೆ | 1,19,890 | 12,715 | 2,804 | 135,409 |
| ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಖ್ಯೆ | | | | |
| ಪೂರ್ಣಕಾಲದವರು | 1,84,304 | 35,202 | 6,866 | 2,26,372 |
| ಅಲ್ಪಕಾಲದವರು | 19,150 | 4,533 | 908 | 24,611 |
| ಪೂರ್ಣಕಾಲದ ಶಾಲಾಧ್ಯಾಪಕರ ಸಂಖ್ಯೆ | 3,34,400 | 40,727 | 14,213 | 3,89,340 |
| ವಿಶ್ವವಿದ್ಯಾಲಯಗಳ ಸಂಖ್ಯೆ | 34 | 8 | 3 | 44+1 |

ಉನ್ನತ ಶಿಕ್ಷಣ : ಬೆಲ್‌ಫಾಸ್ಟ್ ವಿಶ್ವವಿದ್ಯಾಲಯವೊಂದೇ ಇತ್ತೀಚಿನ ವರೆಗೆ ಉತ್ತರ ಐರ್ಲೆಂಡಿನಲ್ಲಿದ್ದ ವಿಶ್ವವಿದ್ಯಾಲಯ. 1965ರ ಲಾರ್‌ವುಡ್ ಸಮಿತಿಯ ಸಲಹೆಯಂತೆ ಕೊಲೆರೈನಿನಲ್ಲಿ ಅಲ್ಸ್ಟರ್ ವಿಶ್ವವಿದ್ಯಾಲಯ ನೂತನವಾಗಿ ಆರಂಭವಾಗಿದೆ. ಅದರಲ್ಲಿ ಬೆಲ್‌ಫಾಸ್ಟಿನಲ್ಲಿದ್ದ 4 ಕಾಲೇಜುಗಳು ಸೇರಿಹೋಗಿವೆ. ಈ ವಿಶ್ವವಿದ್ಯಾಲಯಗಳ ಜೊತೆಗೆ ನೂತನವಾಗಿ ಸಂಘಟಿಸಿರುವ ಅಲ್ಸ್ಟರ್ ಕಾಲೇಜಿನಲ್ಲಿ ಟೆಕ್ನಾಲಜಿ, ವಾಣಿಜ್ಯವಿದ್ಯೆ, ವ್ಯವಹಾರವಿದ್ಯೆ, ಕಲೆ, ದೈಹಿಕಶಿಕ್ಷಣ – ಇವನ್ನು ಬೋಧಿಸಲಾಗುತ್ತಿದೆ.

ಅಧ್ಯಾಪಕರ ಶಿಕ್ಷಣವನ್ನು ಕ್ವೀನ್ಸ್ ವಿಶ್ವವಿದ್ಯಾಲಯದ ಶಿಕ್ಷಣಶಾಸ್ತ್ರದ ವಿಭಾಗದಲ್ಲೂ ಅಲ್ಸ್ಟರ್ ವಿಶ್ವವಿದ್ಯಾಲಯದ ಶಿಕ್ಷಣಶಾಸ್ತ್ರದ ವಿದ್ಯಾಲಯದಲ್ಲೂ ವ್ಯವಸ್ಥೆಗೊಳಿಸಿದೆ. ಜೊತೆಗೆ, 3 ಶಿಕ್ಷಣ ಕಾಲೇಜುಗಳಲ್ಲಿ ಕಲೆ ಮತ್ತು ನಮೂನೆ, ಗೃಹ ವಿಜ್ಞಾನ – ಇವುಗಳಲ್ಲಿ ವಿಶಿಷ್ಟ ಪ್ರಶಿಕ್ಷಣದ ವ್ಯವಸ್ಥೆಯೂ ಉಂಟು.

ಆಡಳಿತ ಮತ್ತು ಹಣಕಾಸು : ಉತ್ತರಐರ್ಲೆಂಡಿನ ಪಾರ್ಲಿಮೆಂಟ್ ಶಿಕ್ಷಣಕ್ಕೆ ನಿರ್ದಿಷ್ಟ ಮೊತ್ತದ ಹಣವನ್ನು ವೆಚ್ಚಮಾಡಲು ಅನುಮತಿ ನೀಡುತ್ತದೆ. ಶಿಕ್ಷಣ ಸಚಿವರು ಪಾರ್ಲಿಮೆಂಟು ಅಂಗೀಕರಿಸುರುವ ಶಿಕ್ಷಣ ಕಾರ್ಯಕ್ರಮಗಳಿಗೆ ಅದನ್ನು ವಿನಿಯೋಗಿಸುವರು. ಇಂಗ್ಲೆಂಡಿನಲ್ಲಿರುವಂತೆ ಕೇಂದ್ರ ಮಟ್ಟದಲ್ಲಿ ಶಿಕ್ಷಣ ಸಚಿವಾಲಯವೂ ಸ್ಥಳೀಯಮಟ್ಟದಲ್ಲಿ ಸ್ಥಳೀಯ ಶಿಕ್ಷಣಪ್ರಾಧಿಕಾರಗಳೂ ಅದನ್ನು ವಿನಿಯೋಗಿಸುವುವು. ಗ್ರೇಟ್‌ಬ್ರಿಟನಿನಲ್ಲಿರುವಂತೆ ವಿಶ್ವವಿದ್ಯಾಲಯದ ಅನುದಾನಸಮಿತಿ ಇಲ್ಲಿನ ವಿಶ್ವವಿದ್ಯಾಲಯಗಳೊಡನೆ ನೇರವಾಗಿ ಸಂಪರ್ಕವಿಟ್ಟುಕೊಂಡಿಲ್ಲ. ಅಲ್ಲಿನ ಸಚಿವಾಲಯದ ಮೂಲಕ ಅಗತ್ಯವೆನಿಸುವ ಸಲಹೆಗಳನ್ನು ನೀಡುವುದು. ಶಿಕ್ಷಣಕ್ಕಾಗಿ 1969–70ರಲ್ಲಿ 6.43ಕೋಟಿ ಪೌಂಡ್ ವೆಚ್ಚಮಾಡಲಾಯಿತು.

ಶೈಕ್ಷಣಿಕ ಅಂಕಿ ಅಂಶಗಳು : ಹಿಂದಿನ ಪುಟದಲ್ಲಿರುವ ಪಟ್ಟಿಯಲ್ಲಿ 1970ಕ್ಕೆ ಸಂಬಂಧಿಸಿದಂತೆ ಇಂಗ್ಲೆಂಡ್ ಮತ್ತು ವೇಲ್ಸಿನ, ಸ್ಕಾಟ್ಲೆಂಡಿನ ಐರ್ಲೆಂಡಿನ, ಮತ್ತು ಇಡೀ ಸಂಯುಕ್ತ ರಾಜ್ಯದ ಶಿಕ್ಷಣಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಕೊಟ್ಟಿದೆ. (ಎನ್.ಎಸ್.ವಿ.)

**ಗ್ರೇಟ್ ಬ್ರಿಟನಿನ ಇತಿಹಾಸ :** ಗ್ರೇಟ್ ಬ್ರಿಟನ್ ಎಂಬ ಹೆಸರು ಅಧಿಕೃತವಾಗಿ ಬಳಕೆಗೆ ಬಂದದ್ದು 1604ರಿಂದ ಈಚೆಗೆ, ಸ್ಕಾಟ್ಲೆಂಡಿನ ಆರನೆಯ ಜೇಮ್ಸ್ ಇಂಗ್ಲೆಂಡ್ ಸ್ಕಾಟ್ಲೆಂಡ್‌ಗಳೆರಡಕ್ಕೂ ದೊರೆಯಾದ ಮೇಲೆ. ಆಗ ಅವನು ತನ್ನನ್ನು ಗ್ರೇಟ್ ಬ್ರಿಟನಿನ ದೊರೆಯೆಂದು ಕರೆದುಕೊಂಡ. ಆದರೆ ಈ ಹೆಸರು ಸಂವೈಧಾನಿಕವಾಗಿ ಬಳಕೆಗೆ ಬಂದದ್ದು 1707ರಲ್ಲಿ, ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳ ಪಾರ್ಲಿಮೆಂಟುಗಳನ್ನು ಒಂದುಗೂಳಿಸುವ ಅಧಿನಿಯಮ (ಆಕ್ಟ್ ಆಫ್ ಯೂನಿಯನ್) ಜಾರಿಗೆ ಬಂದಾಗ. ಇಂಗ್ಲೆಂಡಿನ ವಾಣಿಜ್ಯ ಸೌಲಭ್ಯಗಳು ಸ್ಕಾಟ್ಲೆಂಡಿಗೂ ದತ್ತವಾದವು. ಸ್ಕಾಟ್ಲೆಂಡಿನ ಚರ್ಚ್, ಸ್ಕಾಟಿಷ್ ಕಾನೂನುಗಳು ಮತ್ತು ನ್ಯಾಯ ಪ್ರಕ್ರಿಯೆಗಳನ್ನು ಪರಿಪಾಲಿಸುವ ಭರವಸೆ ನೀಡಲಾಯಿತು. ಸ್ಟ್ಯುಯರ್ಟ್ ಮನೆತನದ ಆನಳ ಆಳಿಕೆಯೊಂದಿಗೆ ಗ್ರೇಟ್ ಬ್ರಿಟನಿನ ಇತಿಹಾಸ ವಾಸ್ತವವಾಗಿ ಆರಂಭವಾಗುತ್ತದೆ.

1ನೆಯ ಜಾರ್ಜ್ 1714ರಿಂದ 1727ರ ವರೆಗೂ ಅನಂತರ 2ನೆಯ ಜಾರ್ಜ್ 1727ರಿಂದ 1760ರ ವರೆಗೂ ಆಳಿದರು. ಇವರ ಕಾಲದಲ್ಲಿ ಪ್ರಧಾನ ಮಂತ್ರಿಯ ಹುದ್ದೆ ಪ್ರಾರಂಭವಾಯಿತು. 1ನೆಯ ಮತ್ತು 2ನೆಯ ಜಾರ್ಜರಿಗೆ ಇಂಗ್ಲಿಷ್ ಭಾಷೆಯ ಜ್ಞಾನವಿರಲಿಲ್ಲ. ಅವರಿಗೆ ಇಂಗ್ಲೆಂಡಿನ ರಾಜಕೀಯದಲ್ಲಿ ಆಸಕ್ತಿ ಇರಲಿಲ್ಲ. ಆದ್ದರಿಂದ ಅವರು ಹಿಂದಿನ ದೊರೆಗಳಂತೆ ಮಂತ್ರಿಮಂಡಲದ ಸಭೆಯ ಅಧ್ಯಕ್ಷತೆ ವಹಿಸುತ್ತಿರಲಿಲ್ಲ. ಆಗ ಮಂತ್ರಿಗಳಲ್ಲೊಬ್ಬ ಅಧ್ಯಕ್ಷತೆ ವಹಿಸಲಾರಂಭಿಸಿದ. ಆತನನ್ನು ಪ್ರಧಾನಮಂತ್ರಿ ಎಂದು ಕರೆಯಲಾರಂಭವಾಯಿತು. ಕಾಲಕ್ರಮದಲ್ಲಿ ಆತ ತನ್ನ ಸಹೋದ್ಯೋಗಿಗಳ ನೇಮಕದ ಮೇಲೆ ಹತೋಟಿ ಪಡೆದ. ಮಂತ್ರಿಮಂಡಲ ಮುಂದುವರಿಯಲು ಕಾಮನ್ಸ್ ಸಭೆಯ ಬಹುಮತದ ಬೆಂಬಲ ಆವಶ್ಯಕವಾಯಿತು. ಹೀಗೆ 1ನೆಯ ಮತ್ತು 2ನೆಯ ಜಾರ್ಜರ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಮಂತ್ರಿಮಂಡಲ ಮತ್ತು ಪಕ್ಷಸರ್ಕಾರದ ವಿಕಾಸವಾಯಿತು. 2ನೆಯ ಜಾರ್ಜನ ಕಾಲದಲ್ಲಿ 1740–1748ರಲ್ಲಿ ಆಸ್ಟ್ರಿಯ ಸಿಂಹಾಸನದ ಉತ್ತರಾಧಿಕಾರಕ್ಕಾಗಿ ಯುದ್ಧ ನಡೆಯಿತು. ಇದರಲ್ಲಿ ಬ್ರಿಟನ್ ಮತ್ತು ಆಸ್ಟ್ರಿಯ ಒಂದು ಕಡೆಗೂ ಫ್ರಾನ್ಸ್ ಮತ್ತು ಪ್ರಷ್ಯ ಇನ್ನೊಂದು ಕಡೆಗೂ ಇದ್ದುವು. ಅನಂತರ ಬ್ರಿಟನ್ ಮತ್ತು ಫ್ರಾನ್ಸ್‌ಗಳ ನಡುವೆ ಏಳು ವರ್ಷಗಳ ಯುದ್ಧ (1756–63) ನಡೆಯಿತು. ಈ ಯುದ್ಧ 3ನೆಯ ಜಾರ್ಜನ ಆಳಿಕೆಯ ಕಾಲದಲ್ಲಿ (1760–1820) ಬ್ರಿಟನಿನ ವಿಜಯದೊಂದಿಗೆ ಮುಕ್ತಾಯವಾಯಿತು. ಇದರ ಫಲವಾಗಿ ಬ್ರಿಟನಿನ ಹಲವು ಸಾಗರಾಂತರ ವಸಾಹತುಗಳ ಸಂಪಾದನೆಯಾಯಿತು. ಬ್ರಿಟನಿನ ವಿಶಾಲ ಚಕ್ರಾಧಿಪತ್ಯ ಬೆಳೆಯಲಾರಂಭಿಸಿತು. ಬ್ರಿಟನಿನ ಕೀರ್ತಿಯಲ್ಲಿ ಹೆಮ್ಮೆ ತಳೆದ ಪ್ರಥಮ ಹ್ಯಾನೋವರಿಯನ್ ದೊರೆ 3ನೆಯ ಜಾರ್ಜ್. ಈತನ ಆಳಿಕೆಯ ಕಾಲದಲ್ಲಿ 1775ರಲ್ಲಿ ಸಂಗ್ರಾಮ ಆರಂಭವಾಯಿತು. ಉತ್ತರ ಅಮೆರಿಕದ ಹದಿಮೂರು ಸಂಸ್ಥಾನಗಳು ಸ್ವತಂತ್ರವಾದುವು. ಇವು 1783ರಲ್ಲಿ ಸಂಯುಕ್ತ ಸಂಸ್ಥಾನಗಳಾದುವು. 1789ರಲ್ಲಿ ಫ್ರಾನ್ಸಿನಲ್ಲಿ ಕ್ರಾಂತಿ ಸಂಭವಿಸಿತು. 1793ರಲ್ಲಿ ಫ್ರಾನ್ಸಿನೊಂದಿಗೆ ಬ್ರಿಟನಿನ ಯುದ್ಧ ಪ್ರಾರಂಭವಾಗಿ 1815ರಲ್ಲಿ ಫ್ರಾನ್ಸಿನ ನೆಪೋಲಿಯನನ ಸೋಲಿನೊಂದಿಗೆ ಕೊನೆಗೊಂಡಿತು. 1801ರಲ್ಲಿ ಜಾರಿಗೆ ಬಂದ ಒಕ್ಕೂಟ ಅಧಿನಿಯಮದಂತೆ ಐರ್ಲೆಂಡು ಗ್ರೇಟ್ ಬ್ರಿಟನಿನಲ್ಲಿ ಸಮಾವೇಶಗೊಂಡಿತು. ಗ್ರೇಟ್‌ಬ್ರಿಟನ್ ಮತ್ತು ಐರ್ಲೆಂಡ್ ಸಂಯುಕ್ತ ರಾಜ್ಯ ಎಂಬುದು ಈ ದೇಶದ ಅಧಿಕೃತ ನಾಮವಾಯಿತು.

4ನೆಯ ಜಾರ್ಜ್ 1820 ರಿಂದ 1830ರ ವರೆಗೆ ಆಳಿದ. 4ನೆಯ ವಿಲಿಯಮನ ಆಳಿಕೆಯ ಕಾಲ 1830–1837. ಈತನ ಆಳಿಕೆಯಲ್ಲಿ 1832ರಲ್ಲಿ ಮೊದಲನೆಯ ಪಾರ್ಲಿಮೆಂಟ್ ಸುಧಾರಣಾ ಅಧಿನಿಯಮ ಜಾರಿಗೆ ಬಂತು. ಅದುವರೆಗೆ ಬ್ರಿಟನಿನಲ್ಲಿ ಶ್ರೀಮಂತರು ರಾಜಕೀಯ ಅಧಿಕಾರ ಹೊಂದಿದ್ದರು. ಕಾಮನ್ಸ್‌ಗೆ ನಡೆಯುತ್ತಿದ್ದ ಚುನಾವಣೆಗಳಲ್ಲಿ ಮತ ನೀಡುವ ಹಕ್ಕು ಭೂಮಾಲೀಕರಿಗೆ ಮಾತ್ರ ಇದ್ದದ್ದು ಇದಕ್ಕೆ ಕಾರಣ. ಈ ಸುಧಾರಣಾ ಅಧಿನಿಯಮದ ಪ್ರಕಾರ ಮಧ್ಯಮ ವರ್ಗದವರಿಗೂ ಮತ ನೀಡುವ ಹಕ್ಕು ಲಭ್ಯವಾಯಿತು. ಈ ವೇಳೆಗೆ ಗ್ರೇಟ್ ಬ್ರಿಟನಿನ ಆರ್ಥಿಕತೆಯಲ್ಲಿ ಮಹತ್ತ್ವದ ಬದಲಾವಣೆಗಳಾಗಲಾರಂಭವಾಗಿತ್ತು. ಕೃಷಿಪ್ರಧಾನವಾಗಿದ್ದ ಬ್ರಿಟನ್ ಕೈಗಾರಿಕಾ ದೇಶವಾಗಹತ್ತಿತ್ತು. ಈ ಬದಲಾವಣೆಗಳನ್ನು ಕೈಗಾರಿಕಾ ಕ್ರಾಂತಿ ಎಂದು ಕರೆಯಲಾಗಿದೆ. 1837 – 1901 ವಿಕ್ಟೋರಿಯ ರಾಣಿಯ ಆಳಿಕೆಯ ಕಾಲ. ಈ ಕಾಲದಲ್ಲಿ 1867ರಲ್ಲಿ ಎರಡನೆಯ ಪಾರ್ಲಿಮೆಂಟ್ ಸುಧಾರಣಾ ಅಧಿನಿಯಮ ಜಾರಿಗೆ ಬಂತು. ಕಸಬುದಾರರಿಗೆ ಮತಚಲಾವಣೆಯ ಹಕ್ಕು ಲಭ್ಯವಾಯಿತು. ಗುಪ್ತ ಮತದಾನ ಅಧಿನಿಯಮ ಬಂದದ್ದು 1878ರಲ್ಲಿ. 1884ರಲ್ಲಿ ಬಂದ ಮೂರನೆಯ ಪಾರ್ಲಿಮೆಂಟ್ ಸುಧಾರಣಾ ಅಧಿನಿಯಮದಂತೆ ರೈತರಿಗೆ ಮತದಾನದ ಹಕ್ಕು ದೊರೆಯಿತು. ಪ್ರಾಪ್ತ ವಯಸ್ಕ ಗಂಡಸರೆಲ್ಲರಿಗೂ ಮತ ಹಕ್ಕು ಲಭಿಸಿದಂತಾಯಿತು. ಪ್ರಜಾಪ್ರಭುತ್ವ ಸ್ಥಿರವಾಯಿತು. 1901ರಿಂದ 1910ರ ವರೆಗೆ 7ನೆಯ ಎಡ್ವರ್ಡನೂ 1910ರಿಂದ1936ರ ವರೆಗೆ 5ನೆಯ ಜಾರ್ಜನೂ ರಾಜರಾಗಿದ್ದರು. 5ನೆಯ ಜಾರ್ಜ್ ದೊರೆಯ ಆಳಿಕೆಯ ಕಾಲದಲ್ಲಿ ಒಂದನೆಯ ಮಹಾಯುದ್ಧ ನಡೆಯಿತು. 1918ರ ಮತ್ತು 1928ರ ಅಧಿನಿಯಮಗಳಿಂದ ಸ್ತ್ರೀಯರಿಗೂ ಹಕ್ಕು ದೊರೆಯಿತು. 1911ರಲ್ಲಿ ಜಾರಿಗೆ ಬಂದ ಪಾರ್ಲಿಮೆಂಟ್ ಅಧಿನಿಯಮ ಲಾರ್ಡ್ಸ್ ಸಭೆಯ ಅಧಿಕಾರವನ್ನು ಮೊಟಕುಮಾಡಿತು. 1922ರಲ್ಲಿ ಐರ್ಲೆಂಡಿನ 26 ಕೌಂಟಿಗಳು ಸ್ವತಂತ್ರವಾದುವು. ಉತ್ತರ ಐರ್ಲೆಂಡ್ ಒಕ್ಕೂಟದಲ್ಲಿ ಉಳಿದುಕೊಂಡಿತು. ಗ್ರೇಟ್ ಬ್ರಿಟನ್ ಮತ್ತು ಉತ್ತರ ಐರ್ಲೆಂಡ್ ಸಂಯುಕ್ತ ರಾಜ್ಯ ಎಂಬುದು ದೇಶದ ಹೆಸರಾಯಿತು. ಕಾಮನ್ಸ್ ಸಭೆಯ ಸದಸ್ಯರಿಗೆ ಪ್ರಪ್ರಥಮವಾಗಿ ವೇತನ ಕೊಡುವ ಪದ್ಧತಿ ಪ್ರಾರಂಭವಾಯಿತು. ಕಾಮನ್ಸ್ ಸಭೆಯ ಅವಧಿ ಐದು ವರ್ಷಗಳೆಂದು ನಿಗದಿ ಮಾಡಲಾಯಿತು.

1936ರಲ್ಲಿ 8ನೆಯ ಎಡ್ವರ್ಡ್ ರಾಜನಾದ. ಎರಡು ಸಾರಿ ವಿವಾಹವಿಚ್ಛೇದನ ಮಾಡಿಕೊಂಡಿದ್ದ ಅಮೆರಿಕನ್ ಮಹಿಳೆ ಅರ್ನೆಸ್ಟ್ ಸಿಮ್ಸನಳನ್ನು ವಿವಾಹವಾಗಬಯಸಿದ ಎಡ್ವರ್ಡ್ ಆಕೆಗಾಗಿ ಸಿಂಹಾಸನತ್ಯಾಗ ಮಾಡಬೇಕಾಯಿತು. ಈತನ ಸಹೋದರ 6ನೆಯ ಜಾರ್ಜ್ 1936–1952ರಲ್ಲಿ ಗ್ರೇಟ್ ಬ್ರಿಟನಿನ ದೊರೆಯಾಗಿದ್ದ. ಈತನ ಆಳಿಕೆಯ ಕಾಲದಲ್ಲಿ ಎರಡನೆಯ ಮಹಾಯುದ್ಧ ಜರುಗಿತು. ಯುದ್ಧಾನಂತರದಲ್ಲಿ ಬ್ರಿಟನಿನ ಅನೇಕ ವಸಾಹತುಗಳು ಒಂದೊಂದಾಗಿ ಸ್ವತಂತ್ರಗೊಂಡುವು. 6ನೆಯ ಜಾರ್ಜ್ ದೊರೆ 1952ರಲ್ಲಿ ತೀರಿಕೊಂಡ. ಆತನ ಹಿರಿಯ ಮಗಳು 2ನೆಯ ಎಲಿಜಬೆತಳ ಆಳಿಕೆ ಆರಂಭವಾಯಿತು. ಈಕೆಯ ಆಳಿಕೆಯ ಕಾಲದಲ್ಲಿ ಮಹತ್ತರ ಬದಲಾವಣೆಗಳಾದುವು. ಬ್ರಿಟಿಷ್ ಕಾಮನ್‌ವೆಲ್ತ್ ಸ್ವರೂಪ ಬದಲಾವಣೆಗೊಂಡು ಅದು ಕಾಮನ್‌ವೆಲ್ತ್ ಬಂಧುಕೂಟವಾಗಿ ಪರಿಣಮಿಸಿತು. ಬ್ರಿಟನಿನ ಸಾಗರಾಂತರ ವಸಾಹತುಗಳೆಲ್ಲ ಕಳೆದುಹೋಗಿ ಅದರ ಪೂರ್ವದ ಪ್ರತಿಷ್ಠೆ ಬಹಳಮಟ್ಟಿಗೆ ನಷ್ಟವಾಯಿತು. (ಎ.ವಿ.ವಿ.;ಎಂ.ಎಸ್.ಬಿ.)

**ಗ್ರೇಟಿಯಸ್ ಫಾಲಿಸ್ಕಸ್ :** ರೋಮನ್ ಕವಿ. ಕಾಲ ಪ್ರ.ಶ.ಸು. 1ನೆಯ ಶತಮಾನ. ವರ್ಜಿಲ್ ಮತ್ತು ಓವಿಡ್ ಕವಿಗಳ ಸಮಕಾಲೀನ. ಈತನ ಜನ್ಮಸ್ಥಳ ಫಾಲಿರೀ ಎಂದು ಊಹಿಸಲಾಗಿದೆ. ಬೇಟೆಯಾಡುವುದರ ಬಗ್ಗೆ ಸೈನೆಜ಼ೆಟಿಕ ಎಂಬ ಕವನದಲ್ಲಿ ಬರುವ 536 ವಾಕ್ಯಗಳನ್ನು ಬಿಟ್ಟರೆ ಈತನ ಸಾಹಿತ್ಯ ಚಟುವಟಿಕೆಯ ಬಗ್ಗೆಯಾಗಲಿ ಅಥವಾ ವೈಯಕ್ತಿಕ ಜೀವನದ ಬಗ್ಗೆಯಾಗಲಿ ಯಾವ ಮಾಹಿತಿಯೂ ದೊರೆಯುವುದಿಲ್ಲ. ಓವಿಡ್ ತನ್ನ ಕೃತಿಯೊಂದರಲ್ಲಿ ಆಕಸ್ಮಿಕವಾಗಿ ಮಾಡಿರುವ ಉಲ್ಲೇಖವನ್ನು ಬಿಟ್ಟರೆ ಓದುಗರು ಈತನ ಕೃತಿಯನ್ನು ಮರೆತಿದ್ದರೆಂದೇ ತೋರುತ್ತದೆ. ಈ ಕೃತಿಯಲ್ಲಿ ಗ್ರೇಟಿಯಸ್ ಹೆಚ್ಚು ಕಡಿಮೆ ಜಿನೊಫನನ ರೀತಿಯಲ್ಲಿ ಬೇಟೆಯ ಆಟವನ್ನು, ಅದರ ರೀತಿನೀತಿಗಳನ್ನು, ಅದಕ್ಕೆ ಬಳಸುವ ಕುದುರೆ, ನಾಯಿಗಳನ್ನು ಮತ್ತು ಅವುಗಳ ತಳಿಗಳನ್ನು ಕುರಿತು ವಿವೇಚಿಸಿದ್ದಾನೆ. ಕವಿಯ ಮೇಲೆ ವರ್ಜಿಲನ ಪ್ರಭಾವವಿರುವುದಾದರೂ ವಿವರಣೆ ಅಲ್ಲಲ್ಲಿ ಮಂಕಾಗಿ ಶೈಲಿ ಭಾರವಾಗಿದೆ ಎನಿಸುತ್ತದೆ. ಆದರೆ ತನ್ನ ಸಾಮಗ್ರಿಗಳ ಜೋಡಣೆಯಲ್ಲಿ, ಅದನ್ನು ಬಳಸುವಲ್ಲಿ ತುಂಬ ಚತುರತೆಯನ್ನು ವ್ಯಕ್ತಪಡಿಸಿದ್ದಾನೆ. ಇಡೀ ಕವನ ಬೋಧಕನ ಶೈಲಿಯಲ್ಲಿದೆ.

(ಎನ್.ಎಸ್.ಆರ್‌ಎ.)

**ಗ್ರೇ, ಥಾಮಸ್ :** 1716–71. ಇಂಗ್ಲೆಂಡಿನ ನಿಯೋಕ್ಲಾಸಿಕಲ್ (ನವಅಭಿಜಾತ) ಕಾವ್ಯಸಂಪ್ರದಾಯದ ಇಳಿಗಾಲದಲ್ಲಿ ಅದೇ ಸಂಪ್ರದಾಯದವರಾದರೂ ತಮ್ಮ ಭಾವುಕತೆ ಹೃದಯವಂತಿಕೆಯ ಮೂಲಕ ರೊಮ್ಯಾಂಟಿಕ್ ಕಾವ್ಯಕ್ಕೆ ದಾರಿ ಮಾಡಿಕೊಟ್ಟ ಕವಿಗಳಲ್ಲಿ ಥಾಮಸ್ ಗ್ರೇನ ಹೆಸರು ಕಾಲಿನ್ಸ್ ಕವಿಯ ಜೊತೆಗೆ ಸೇರ್ಪಡೆಯಾಗಿದೆ. ಈತ ಅಭಿಜಾತ ಸಾಹಿತ್ಯ, ಮಧ್ಯಯುಗೀನ ಇತಿಹಾಸಗಳನ್ನು ಆಳವಾಗಿ ಅಭ್ಯಸಿಸಿದ ಕವಿ. ಇವೆರಡರ ಮೆರುಗು ಈತನ ಕಾವ್ಯದಲ್ಲಿದೆ.



ಬಂಧದ ಬಿಗುವು ಕ್ಲಾಸಿಕಲ್ ಸಂಪ್ರದಾಯದ್ದಾದರೂ ಇಂಗ್ಲಿಷ್ ಭಾಷೆಯ ಮಧ್ಯಯುಗೀನ ಕಾಲದ ಬಿರುಸು–ಓಜಸ್ಸು ಈತನ ವಿಚಾರಸರಣಿಯಲ್ಲಿ ಸೇರಿ ಕ್ಲಾಸಿಕಲ್ ಸಂಪ್ರದಾಯಬದ್ಧತೆಯನ್ನು ಮೂದಲಿಸಿತು. ಈತ ಹುಟ್ಟಿದ್ದು ಲಂಡನಿನಲ್ಲಿ. ತಂದೆ ಕೋರ್ಟಿನ ಕರಡು ಬರೆಯುವ ತಜ್ಞ; ಸಾಕಷ್ಟು ಹಣಗಳಿಸಿದ್ದ. ತಾಯಿ ಸ್ವತಂತ್ರವಾಗಿ ಹ್ಯಾಟ್ ಮಾಡುವ ಉದ್ಯೋಗ ನಡೆಸುತ್ತಿದ್ದಳು. ಒಡಹುಟ್ಟಿದವರನ್ನು ಚಿಕ್ಕಂದಿನಲ್ಲಿಯೇ ಕಳಕೊಂಡ ಗ್ರೇ ದುಃಖಿ; ಏಕಾಕಿ ಜೀವನಕ್ಕೆ ಮೊದಲಿನಿಂದಲೇ ಹೊಂದಿಕೊಂಡಿದ್ದ. ಸ್ಥಿತಿವಂತನಾಗಿದ್ದುದರಿಂದ ಈತನನ್ನು ಈಟನ್ ವಿದ್ಯಾಲಯಕ್ಕೆ ಕಳುಹಿಸಲಾಯಿತು. ಅಲ್ಲಿ ಹೊರೆಸ್ ವಾಲ್ ಪೋಲ್ ಲೇಖಕನ ಸಹಕಾರಿಯಾಗಿದ್ದುಕೊಂಡು ಆತನ ದೀರ್ಘಾವಧಿಯ ಗೆಳೆಯನಾದ. 18ನೆಯ ವಯಸ್ಸಿಗೆ ಕೇಂಬ್ರಿಜ್ ಸೇರಿದ ನಾದರೂ ಪದವಿ ಪಡೆಯುವುದರಲ್ಲಿ ವಿಫಲನಾದ. ಪುಸ್ತಕ–ಹೂದೋಟ ಗಳಿಗೆ ಮನಸೋತು ವಿವಿಧ ಜ್ಞಾನದಲ್ಲಿ ಮನಸ್ಸನ್ನು ಹರಿಸಿದ. ವಾಲ್‌ಪೋಲ್‌ನ ಜೊತೆಗೆ ಯುರೋಪಿನ ಪ್ರಯಾಣಕ್ಕೆ ಹೋದಾಗ ವಿರಸ ಮೂಡಿ ಇವರ ಸ್ನೇಹಸಂಬಂಧ ಮೂರು ನಾಲ್ಕು ವರ್ಷ ಮುರಿದರೂ ಮತ್ತೆ ಹೊಂದಿಕೆ ಯಾಯಿತು. ಅನಂತರ ಕೇಂಬ್ರಿಜ್‌ನಲ್ಲಿ ನೆಲೆಸಿ ಗ್ರಂಥಾಲಯ, ತೋಟಗಳಲ್ಲಿ ಸುಖವಾಗಿ ಕಾಲ ಕಳೆದ. 1768ರಲ್ಲಿ ಆಧುನಿಕ ಇತಿಹಾಸದ ಪ್ರೊಫೆಸರ್ ಹುದ್ದೆ ಸ್ವೀಕರಿಸಿದರೂ ಪಾಠ ಹೇಳಿಕೊಡುವ ಗೋಜಿಗೇ ಹೋಗಲಿಲ್ಲ. ಸದಾ ಶಾಂತ–ಅಂತರ್ಮುಖಿ ಜೀವನ ನಡೆಸಿದ. 1742ರಲ್ಲಿ ಪ್ರಥಮ ಇಂಗ್ಲಿಷ್ ಕವನ (ವಸಂತ ಸ್ತೋತ್ರ) ರಚಿಸಿದ. ಲ್ಯಾಟಿನ್ ಭಾಷೆಯಲ್ಲಿ ರಚಿಸಿದ ಈತನ ಚಿಂತನಪರ ಕವನಗಳುಂಟು. ಭಾವುಕ ಚಿಂತನಪರತೆಯ ಪರಾಕಾಷ್ಠೆಯನ್ನು ಎಲ್ ಎಲಿಜಿ ರಿಟನ್ ಇನ್ ಎ ಕಂಟ್ರಿ ಚರ್ಚ್ ಯಾರ್ಡ್ ಎಂಬ ಕವನದಲ್ಲಿ (ಹಳ್ಳಿಯ ಮಸಣದಲ್ಲಿ ಕುಳಿತು ರಚಿಸಿದ ಶೋಕಗೀತ) ಕಾಣುತ್ತೇವೆ. ಈ ಕವನ ಇಂಗ್ಲೆಂಡ್–ಅಮೆರಿಕಗಳ ಭಾವುಕರ ಪಠ್ಯವಾಯಿತು. ಗತಕಾಲದ ಚಿಂತನೆಯಿಂದ ಕೂಡಿದ ಹಿಮ್ ಟು ಅಡ್‌ವರ್ಸಿಟಿ, ಓಡ್ ಆನ್ ಎ ಡಿಸ್ಟೆಂಟ್ ಪ್ರಾಸ್ಪೆಕ್ಟ್ ಆಫ್ ಈಟನ್ ಕಾಲೇಜ್ ಇವು ಈತನ ನೆನೆ–ಕನಸುಗಳ ಶ್ರೇಷ್ಠ ಉದಾಹರಣೆಗಳು. ಇವನ ದಿ ಬಾರ್ಡ್ ಎಂಬ ಕವನದಲ್ಲಿ ಚಾರಿತ್ರಿಕ ದರ್ಶನವಿದೆ.

ಈತನಲ್ಲಿ ಹಾಸ್ಯಗುಣವೂ ಇತ್ತು. ಪತ್ರ ಸಾಹಿತ್ಯ ಸೃಷ್ಟಿಯಲ್ಲೂ ಈತ ಹೆಸರಾದವ.

(ಎಸ್.ಎಂ.ಪಿ.)

**ಗ್ರೇಪ್ ಹಣ್ಣು :** ರೂಟೇಸೀ (ಕಿತ್ತಳೆ) ಕುಟುಂಬಕ್ಕೆ ಸೇರಿದ ಒಂದು ಮರದ ಹಣ್ಣು. ವೃಕ್ಷದ ವೈಜ್ಞಾನಿಕ ಹೆಸರು ಸಿಟ್ರಸ್ ಪ್ಯಾರಡಿಸಿ. ಇದು ಚಕ್ಕೋತ ಹಣ್ಣಿನ ಮರಕ್ಕೆ (ಸಿಟ್ರಸ್ ಗ್ರ್ಯಾಂಡಿಸ್) ಬಲು ಹತ್ತಿರ ಸಂಬಂಧಿ. ಹಲವರ ಅಭಿಪ್ರಾಯದಂತೆ ಇದು ಚಕ್ಕೋತ ಮರದಿಂದ ವ್ಯತ್ಯಯದ (ಮ್ಯುಟೇಷನ್) ಮೂಲಕ ಉದ್ಭವಿಸಿದೆ. ಗ್ರೇಪ್ ಹಣ್ಣಿನ ಮರ ವೆಸ್ಟ್‌ಇಂಡೀಸಿನ ಮೂಲನಿವಾಸಿ. ಇದರ ರುಚಿಯಾದ ಹಣ್ಣುಗಳಿಗಾಗಿ ಇದನ್ನು ಬೇರೆ ದೇಶಗಳಲ್ಲಿ ಮುಖ್ಯವಾಗಿ ಅಮೆರಿಕ ಸಂಯುಕ್ತಸಂಸ್ಥಾನಗಳ ಫ್ಲಾರಿಡ, ಅರಿಜೋನ, ಕ್ಯಾಲಿಫೋರ್ನಿಯಗಳಲ್ಲೂ ಇಸ್ರೇಲಿನಲ್ಲೂ ದಕ್ಷಿಣ ಆಫ್ರಿಕದಲ್ಲೂ ಭಾರಿ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ. ಅಮೆರಿಕದ ಫ್ಲಾರಿಡ ರಾಜ್ಯವೊಂದರಲ್ಲಿ ಇದರ ವಾರ್ಷಿಕ ಇಳುವರಿ ಒಂದು ಮಿಲಿಯನ್ ಟನ್ನುಗಳಷ್ಟಿದೆ. ಭಾರತದಲ್ಲಿ ಪಂಜಾಬ್, ಹರಿಯಾಣಗಳಲ್ಲಿ ದೊಡ್ಡ ಮೊತ್ತದಲ್ಲೂ ದಕ್ಷಿಣ ಭಾರತದಲ್ಲಿ ಲಘು ಮೊತ್ತದಲ್ಲೂ ಇದರ ಬೇಸಾಯ ಉಂಟು.

ಇದು 7–12 ಮೀ ಎತ್ತರಕ್ಕೆ ಬೆಳೆಯುವ ಮರ. ಎಲೆಗಳು ಚಕ್ಕೋತದ ಎಲೆಗಳಿಗಿಂತ ಸ್ವಲ್ಪ ಚಿಕ್ಕವು. ತೊಟ್ಟಿನ ಆಚೀಚೆಯ ಭಾಗ ರೆಕ್ಕೆಯಂತೆ ಅಗಲವಾಗಿ ಹರಡಿದೆ. ಹೂಗಳು ಎಲೆಗಳ ಕಂಕುಳಲ್ಲಿ ಒಂಟೊಂಟಿಯಾಗಿ ಇಲ್ಲವೆ ಗೊಂಚಲುಗಳಲ್ಲಿ ಹುಟ್ಟುತ್ತವೆ. ಹಣ್ಣು ಮೋಸಂಬಿ ಹಣ್ಣಿಗಿಂತ ಎರಡರಷ್ಟು ಗಾತ್ರದ್ದು. ಮಾಗಿದ ಹಣ್ಣಿನ ಬಣ್ಣ ಹಳದಿ. ತಿರುಳು ರಸಭರಿತವಾಗೂ ಮೃದುವಾಗೂ ಇದೆ. ಅದರ ಬಣ್ಣ ಕೆಲವು ಬಗೆಗಳಲ್ಲಿ ತಿಳಿಹಳದಿ; ಇನ್ನು ಕೆಲವು ಬಗೆಗಳಲ್ಲಿ ನಸುಗೆಂಪು ಅಥವಾ ಕೆಂಪು. ಹಣ್ಣಿಗೆ ಒಂದು ವಿಶೇಷ ರೀತಿಯ ಮಧುರವಾಸನೆಯೂ ಕೊಂಚ ಹುಳಿ ಮಿಶ್ರಿತ ಸಿಹಿರುಚಿಯೂ ಇದೆ.

ಗ್ರೇಪ್ ಹಣ್ಣಿನ ಮರದ ಬೇಸಾಯಕ್ಕೆ ಮರಳಿನ ಪ್ರಮಾಣ ಹೆಚ್ಚಾಗಿರುವ ನೆಲ ಉತ್ತಮ. ಬೆಳೆ ಹುಲುಸಾಗಿರಲು ಸಾಕಷ್ಟು ಪರಿಮಾಣದಲ್ಲಿ ನೈಟ್ರೊಜನ್, ರಂಜಕ ಮತ್ತು ಪೊಟ್ಯಾಷಿಯಮ್‌ಗಳಲ್ಲದೆ ಲಘು ಪ್ರಮಾಣದಲ್ಲಿ ತಾಮ್ರ, ಮ್ಯಾಂಗನೀಸ್, ಸತು, ಕಬ್ಬಿಣ ಮತ್ತು ಬೋರಾನುಗಳನ್ನೂ ಹಾಕಬೇಕು. ಮರಗಳನ್ನು ಬೀಜಗಳಿಂದ ವೃದ್ಧಿಸಬಹುದಾದರೂ



ಹೀಗೆ ಪಡೆದ ಗಿಡಗಳಲ್ಲಿ ಹಣ್ಣಿನ ಗುಣ ಮತ್ತು ಗಾತ್ರಗಳು ವ್ಯತ್ಯಾಸವನ್ನು ತೋರುವುದರಿಂದ ಉತ್ತಮ ದರ್ಜೆಯ ಮರವೊಂದನ್ನು ಆರಿಸಿಕೊಂಡು ಅದರಿಂದ ಕಣ್ಣುಕಸಿಯ ಮೂಲಕ ಸಸಿಗಳನ್ನು ಪಡೆದು ವೃದ್ಧಿಸುವುದೇ ಹೆಚ್ಚು ವಾಡಿಕೆಯಲ್ಲಿರುವ ಕ್ರಮ. ಮರ 4–6 ವರ್ಷ ವಯಸ್ಸಾದ ಅನಂತರ ಫಲ ಬಿಡಲು ಆರಂಭಿಸುತ್ತದೆ. ಗ್ರೇಪ್ ಹಣ್ಣಿನ ಇಳುವರಿಯ ಮೊತ್ತ ಅಧಿಕ. ಹುಲುಸಾಗಿ ಬೆಳೆದ ಒಂದು ಮರ ವರ್ಷಕ್ಕೆ 585–675 ಕೆಜಿಯಷ್ಟು ಹಣ್ಣನ್ನು ಕೊಡಬಲ್ಲದು.

ಗ್ರೇಪ್ ಹಣ್ಣಿನಲ್ಲಿ ಸುಮಾರು 25ಕ್ಕೂ ಹೆಚ್ಚು ಬಗೆಗಳಿವೆ. ಇವುಗಳಲ್ಲಿ ಬಹುಪಾಲು ಹಳದಿ ಬಣ್ಣದ ತೊಳೆಗಳುಳ್ಳವು. ಉದಾಹರಣೆಗೆ ಮಾರ್ಷ್, ಡಂಕನ್, ಟ್ರಯಂಫ್, ಹಾಲ್ (ಸಿಲ್ವರ್ ಕ್ಲಸ್ಟರ್) ಇತ್ಯಾದಿ. ಇನ್ನು ಕೆಲವು ರೀತಿಯವು ಕೆಂಪು ಅಥವಾ ನಸುಗೆಂಪು ಬಣ್ಣದ ತೊಳೆಗಳುಳ್ಳವು. ಉದಾಹರಣೆಗೆ ರೂಬಿ, ವೆಬ್, ಫಾಸ್ಟರ್ ಮುಂತಾದವು. ಗ್ರೇಪ್ ಹಣ್ಣಿನ ಮರವನ್ನು ಸಿಟ್ರಸ್ ಜಾತಿಯ ಇತರ ಪ್ರಭೇದಗಳೊಂದಿಗೆ ಅಡ್ಡತಳಿಯೆಬ್ಬಿಸಿ ಕೆಲವು ಮಿಶ್ರಬಗೆಯ ಹಣ್ಣಿನ ಮರಗಳನ್ನು ಪಡೆಯಲಾಗಿದೆ. ಉದಾಹರಣೆಗೆ ಸ್ವಿಂಗಲ್ ಎಂಬಾತ 1897ರಲ್ಲಿ ಗ್ರೇಪ್ ಹಣ್ಣಿನ ಮರವನ್ನೂ ಕಿತ್ತಳೆಯನ್ನೂ ಅಡ್ಡಹಾಯಿಸಿ ಟ್ಯಾಂಜಲೊ ಎಂಬ ಮಿಶ್ರತಳಿಯೊಂದನ್ನು ಉತ್ಪಾದಿಸಿದ.

ಗ್ರೇಪ್ ಹಣ್ಣು ಹಲವಾರು ಪೌಷ್ಟಿಕಾಂಶಗಳ ಆಗರ ಎನಿಸಿದೆ. ಇದರಲ್ಲಿ ಅಧಿಕ ಮೊತ್ತದಲ್ಲಿ ಸಿ ವಿಟಮಿನ್ (ಕಿತ್ತಳೆ ಮತ್ತು ನಿಂಬೆ ಹಣ್ಣುಗಳನ್ನು ಬಿಟ್ಟರೆ ಸಿ ವಿಟಮಿನ್ ಪರಿಮಾಣ ಇದರಲ್ಲಿ ಅತಿ ಹೆಚ್ಚು) ಮತ್ತು ಸಾಕಷ್ಟು ಪರಿಮಾಣದಲ್ಲಿ ಬಿ ವಿಟಮಿನ್ ಹಾಗೂ ಶೇ.5–ಶೇ.12 ಸಕ್ಕರೆಯ ಅಂಶ ಇವೆ. ಗ್ರೇಪ್ ಹಣ್ಣಿನ ರಸ ಒಂದು ಉತ್ತಮ ಬಗೆಯ ಕ್ಷುಧಾಕಾರಕವೆಂದು ಹೆಸರಾಗಿದೆ. ಇದನ್ನು ಕಿತ್ತಳೆಹಣ್ಣಿನ ರಸದಂತೆ ಬೆಳಗಿನ ಉಪಾಹಾರದ ಜೊತೆಗೆ ಬಳಸುವುದುಂಟು. ರಸವನ್ನು ಕೊಂಚ ಪರಿಮಾಣದಲ್ಲಿ ವೈನ್, ಬ್ರ್ಯಾಂಡಿ ಮುಂತಾದ ಪಾನೀಯಗಳಿಗೆ ರುಚಿಕೊಡಲು ಬಳಸುತ್ತಾರೆ. ಸಿಪ್ಪೆಯಿಂದ ಪೆಕ್ಟಿನ್ ಎಂಬ ವಸ್ತುವನ್ನು ಬೇರ್ಪಡಿಸಿ ಜೆಲ್ಲಿ ತಯಾರಿಕೆಯಲ್ಲಿ ಉಪಯೋಗಿಸುವುದಿದೆ. (ಎಂ.ಎಚ್.ಎಂ.)

**ಗ್ರೇಯಮ್ ಥಾಮಸ್ :** 1805–69. ಸ್ಕಾಟಿಷ್ ರಸಾಯನ ವಿಜ್ಞಾನಿ. ಭೌತ ರಸಾಯನ ವಿಜ್ಞಾನದ ಸ್ಥಾಪಕರಲ್ಲಿ ಒಬ್ಬನೆಂದೂ ಕಲಿಲ ರಸಾಯನ ವಿಜ್ಞಾನದ (ಕಲಾಯ್ಡ್ ಕೆಮಿಸ್ಟ್ರಿ) ಮೂಲಪುರುಷನೆಂದೂ ಹೆಸರುಗಳಿಸಿದ್ದಾನೆ. ಅನಿಲಗಳು ವ್ಯಾಪಿಸುವ ದರವನ್ನು

ಅಳೆದು ಗ್ರೇಯಮನ ಅನಿಲ ವಿಸರಣ ನಿಯಮ ಎಂದು ಈಗ ಪ್ರಸಿದ್ಧವಾಗಿರುವ ನಿಯಮವನ್ನು ಕಂಡುಹಿಡಿದ. ಕಲಿಲ ರಸಾಯನ ವಿಜ್ಞಾನದಲ್ಲಿ ಇಂದು ಬಳಕೆಯಲ್ಲಿರುವ, ಮುಖ್ಯವಾಗಿ ಪಾರಿಭಾಷಿಕ ಪದಗಳಲ್ಲಿ ಬಹುಪಾಲು ಪದಗಳು ಈತ ಸೃಷ್ಟಿಸಿದಂಥವೇ.

ಸ್ಕಾಟ್ಲೆಂಡಿನ ಗ್ಲ್ಯಾಸ್ಗೋ ನಗರದಲ್ಲಿ 1805ರ ಡಿಸೆಂಬರ್ 20ರಂದು ಗ್ರೇಯಮ್ ಜನಿಸಿದ. ತಂದೆ ಐಶ್ವರ್ಯವಂತನಾಗಿದ್ದ ಒಬ್ಬ ವಾಣಿಜ್ಯೋದ್ಯಮಿ. ತಮ್ಮ ಮಗ ಇಗರ್ಜಿಯಲ್ಲಿ ಪಾದ್ರಿಯಾಗಬೇಕೆಂಬುದು ಆತನ ಆಶಯ. ಆದರೆ ಮಗ ವಿಜ್ಞಾನವನ್ನೇ ಅಭ್ಯಾಸ ಮಾಡುವುದಾಗಿ ಹಟ ಹಿಡಿದುದರಿಂದ ತಂದೆ ಆರ್ಥಿಕ ನೆರವು ನೀಡಲು ನಿರಾಕರಿಸಿದ. ಗ್ರೇಯಮ್ ಎದೆಗುಂದಲಿಲ್ಲ. ಉಪಾಧ್ಯಾಯನಾಗಿ ಮತ್ತು ಲೇಖಕನಾಗಿ ಜೀವನ ಸಾಗಿಸಿಕೊಂಡು ತನ್ನ ಅಧ್ಯಯನವನ್ನು ಮುಂದುವರಿಸಿದ. ಈಗ ರಾಯಲ್ ಟೆಕ್ನಿಕಲ್ ಕಾಲೇಜ್ ಎಂಬ ಹೆಸರು ಪಡೆದಿರುವ ಸಂಸ್ಥೆಯಲ್ಲಿ ಥಾಮಸ್ ಥಾಮ್ಸನ್ ಎಂಬಾತನಲ್ಲಿಯೂ ಅನಂತರ ಎಡಿನ್‌ಬರಾದಲ್ಲಿ ಥಾಮಸ್ ಹೋಪ್ ಎಂಬಾತನಲ್ಲಿಯೂ ವ್ಯಾಸಂಗ ಮಾಡಿ ಗ್ಲಾಸ್ಗೊ ವಿಶ್ವವಿದ್ಯಾಲಯದ ಪದವೀಧರನಾದ (1826). ಮುಂದೆ ಅದೇ ವಿಶ್ವವಿದ್ಯಾಲಯದಲ್ಲಿ, ಎಡಿನ್‌ಬರಾದಲ್ಲಿರುವ ಆಂಡರ್ಸನ್



ಇನ್ಸ್‌ಟಿಟ್ಯೂಷನ್ನಿನಲ್ಲಿ, ರಸಾಯನ ವಿಜ್ಞಾನದ ಪ್ರಾಧ್ಯಾಪಕನಾದ (1830). ಅಲ್ಲಿ ಏಳು ವರ್ಷ ಕೆಲಸ ಮಾಡಿ ಲಂಡನಿಗೆ ತೆರಳಿ (1837) ಯೂನಿವರ್ಸಿಟಿ ಕಾಲೇಜಿನಲ್ಲಿ ಪ್ರಾಧ್ಯಾಪಕನಾದ. ತರುವಾಯ ನ್ಯೂಟನ್ ಮತ್ತು ಸರ್ ಜಾನ್ ಹರ್ಷೆಲ್‌ರವರಂತೆ ಟಂಕಸಾಲೆಯ ಮುಖ್ಯಾಧಿಕಾರಿಯಾದ (1855). 1869ರ ಸೆಪ್ಟೆಂಬರ್ 11 ರಂದು ನಿಧನ ಹೊಂದುವವರೆಗೂ ಅದೇ ಹುದ್ದೆಯಲ್ಲಿ ಮುಂದುವರಿದ.

ಗ್ರೇಯಮನ ಆಸಕ್ತಿಯನ್ನು ಕೆರಳಿಸಿದ ಮೊತ್ತಮೊದಲ ವೈಜ್ಞಾನಿಕ ವಿಷಯವೆಂದರೆ ಅನಿಲಗಳ ವಿಸರಣಶೀಲತೆ (ಅಂದರೆ ವ್ಯಾಪನಶೀಲತೆ). ಒಂದು ಪಾತ್ರೆಯ ಕೆಳಗಿನ ಅರ್ಧ ಭಾಗದಲ್ಲಿ ಆಕ್ಸಿಜನ್ನನ್ನೂ (ಆಮ್ಲಜನಕ) ಮೇಲಿನ ಅರ್ಧ ಭಾಗದಲ್ಲಿ ಹೈಡ್ರೊಜನ್ನನ್ನೂ (ಜಲಜನಕ) ಇಟ್ಟು ಕೆಲಕಾಲ ಬಿಟ್ಟರೆ ಎರಡು ಅನಿಲಗಳೂ ಚೆನ್ನಾಗಿ ಬೆರೆತು ಒಂದೇ ಸಮವಾಗಿ ಪಾತ್ರೆಯಲ್ಲೆಲ್ಲ ವ್ಯಾಪಿಸುತ್ತವೆ. ಆಕ್ಸಿಜನ್ ಭಾರವಾದ ಅನಿಲವಾದರೂ ಅದು ಕೆಳಗಡೆಯೇ ಉಳಿಯದೆ ಸಮವಾಗಿ ಪಾತ್ರೆಯಲ್ಲೆಲ್ಲ ಹರಡಿ ಹೋಗುವುದಕ್ಕೂ ಅದೇ ರೀತಿ ಹಗುರವಾದ ಹೈಡ್ರೊಜನ್ ಪಾತ್ರೆಯಲ್ಲೆಲ್ಲ ಒಂದೇ ಸಮವಾಗಿ ಹರಡಿಕೊಳ್ಳುವುದಕ್ಕೂ ಅನಿಲ ಚಲನ ಸಿದ್ಧಾಂತ ಸೂಕ್ತ ವಿವರಣೆಯನ್ನು ನೀಡಬಲ್ಲದು. ಆದರೆ ಗ್ರೇಯಮ್ ಅನಿಲಗಳ ವಿಸರಣಶೀಲತೆಯ ಬಗ್ಗೆ ಸಂಶೋಧನೆ ಕೈಗೊಂಡಾಗ ಅನಿಲ ಚಲನ ಸಿದ್ಧಾಂತ ಇನ್ನೂ ಜನ್ಮತಾಳಿರಲಿಲ್ಲ. ಅನಿಲಗಳು ಯಾವ ದರದಲ್ಲಿ ವಿಸರಿಸುವುವೆಂಬುದನ್ನು ಪರೀಕ್ಷಿಸುವುದಕ್ಕಾಗಿ ಗ್ರೇಯಮ್ ಪ್ಯಾರಿಸ್ ಪ್ಲಾಸ್ಟರಿನ ಬೆಣೆಯ ಮೂಲಕ, ಸಪುರವಾದ ನಾಳಗಳ ಮೂಲಕ, ಪ್ಲಾಟಿನಮ್ ತಗಡಿನಲ್ಲಿ ಕೊರೆದ ಒಂದು ಚಿಕ್ಕ ರಂಧ್ರದ ಮೂಲಕ ಅನಿಲಗಳು ಪಸರಿಸುವುದನ್ನು ಅಧ್ಯಯನ ಮಾಡಿ ಅನಿಲಗಳ ಈ ವಿಸರಣೆಯ ದರ ಅವುಗಳ ಸಾಂದ್ರತೆಯ ವರ್ಗಮೂಲಕ್ಕೆ ವ್ಯಸ್ತ ಅನುಪಾತದಲ್ಲಿರುವುದೆಂಬ ನಿಯಮವನ್ನು ಕಂಡುಹಿಡಿದ. ಇದೇ ಗ್ರೇಯಮನ ಅನಿಲ ವಿಸರಣೆಯ ನಿಯಮ (ಗ್ರೇಯಮ್ಸ್ ಲಾ ಆಫ್ ಡಿಫ್ಯೂಷನ್). ತರುವಾಯ ಈತ ದ್ರಾವ್ಯಪದಾರ್ಥಗಳ ಅಣುಗಳೂ ಅಯಾನುಗಳೂ ದ್ರಾವಣಗಳಲ್ಲಿ ವ್ಯಾಪಿಸಿಕೊಳ್ಳುವ ರೀತಿಯನ್ನು ಅಧ್ಯಯನ ಮಾಡತೊಡಗಿದ. ನೀರು ತುಂಬಿದ ಸಿಲಿಂಡರಿನ ತಳದಲ್ಲಿ ತಾಮ್ರದ ಸಲ್ಫೇಟಿನ ಒಂದು ಹರಳನ್ನು ಇಟ್ಟರೆ ಅದರ ಅಯಾನುಗಳು ಕಾಲಕ್ರಮದಲ್ಲಿ ಸಿಲಿಂಡರಿನ ಮೇಲ್ಭಾಗದಲ್ಲೆಲ್ಲ ಹರಡಿಕೊಂಡು ಬಣ್ಣ ಒಂದೇ ಸಮವಾಗಿರುವ ಒಂದು ದ್ರಾವಣ ಫಲಿಸುತ್ತದೆ. ಇಲ್ಲಿ ಸಹ ಕೆಲವು ಪದಾರ್ಥಗಳು ಇನ್ನು ಕೆಲವಕ್ಕಿಂತ ಬೇಗನೆ ವ್ಯಾಪಿಸುವುವೆಂಬುದು ಗ್ರೇಯಮನ ಗಮನಕ್ಕೆ ಬಂತು. ಈ ಪ್ರಯೋಗಗಳಲ್ಲಿ ತೊಡಗಿದ್ದಾಗ ಇವನು ಒಂದು ಸ್ವಾರಸ್ಯಕರ ವಿಷಯವನ್ನು ಕಂಡ; ದ್ರಾವ್ಯ ಪದಾರ್ಥಗಳು ವ್ಯಾಪಿಸಿಕೊಳ್ಳುವಾಗ ಅವಕ್ಕೆ ಅಡಚಣೆ ಮಾಡುವಂತೆ ಒಂದು ಪಾರ್ಚ್‌ಮೆಂಟ್ ಹಾಳೆಯನ್ನಿಟ್ಟರೆ ಸ್ವಭಾವತಃ ಬೇಗ ವ್ಯಾಪಿಸಿಕೊಳ್ಳಬಲ್ಲ ವಿವಿಧ ಲವಣಗಳು, ಸಕ್ಕರೆ ಮುಂತಾದವು ಆ ಹಾಳೆಯನ್ನು ತೂರಿಕೊಂಡು ಹೋಗುವುದನ್ನೂ ನಿಧಾನವಾಗಿ ವ್ಯಾಪಿಸುವ ಅಂಟು, ಜಿಲೆಟಿನ್ ಮುಂತಾದ ಪದಾರ್ಥಗಳು ಅದನ್ನು ತೂರಿಕೊಂಡು ಹೋಗಲಾರದೆ ಅದರ ಒಂದು ಪಕ್ಕದಲ್ಲೇ ಉಳಿದುಬಿಡುವುದನ್ನೂ ಗಮನಿಸಿದ. ಪಾರ್ಚ್‌ಮೆಂಟ್ ಹಾಳೆಯ ಮೂಲಕ ತೂರಿ ಹೋಗಬಲ್ಲ ಪದಾರ್ಥಗಳು ಸಾಮಾನ್ಯವಾಗಿ ಸ್ಫಟಿಕರಿಸುವಂಥವಾದ್ದರಿಂದ ಅವನ್ನು ಸ್ಫಟಿಕೀಯ ಪದಾರ್ಥಗಳೆಂದೂ (ಕ್ರಿಸ್ಟಲಾಯಿಡ್‌ಗಳು) ಇನ್ನೊಂದು ಗುಂಪಿನ ಪದಾರ್ಥಗಳನ್ನು ಕಲಿಲ ಪದಾರ್ಥಗಳೆಂದೂ (ಕಲಾಯಿಡ್‌ಗಳು) ಇವನು ಕರೆದ. ಸರಂಧ್ರ ಪೊರೆಯಿಂದ ತಯಾರಿಸಿದ ಧಾರಕ ಒಂದರಲ್ಲಿ ಕಲಿಲ ಪದಾರ್ಥವನ್ನಿಟ್ಟು ಆ ಧಾರಕವನ್ನು ಹರಿಯುವ ನೀರಿನಲ್ಲಿಟ್ಟರೆ ಕಲಿಲದ ಜೊತೆ ಇರಬಹುದಾದ ಸ್ಫಟಿಕೀಯ ಕಶ್ಮಲಗಳೆಲ್ಲ ನೀರಿನ ಹರಿವಿಗೆ ಸಿಕ್ಕು, ಪೊರೆಯ ಮೂಲಕ ತೂರಿಕೊಂಡು, ಹೊರಕ್ಕೆ ಬಂದು, ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಬಿಡುವುವೆಂದೂ ಕಲಿಲ ಪದಾರ್ಥಗಳ ಶುದ್ಧೀಕರಣಕ್ಕೆ ಇದೊಂದು ಒಳ್ಳೆಯ ವಿಧಾನವೆಂದೂ ಗ್ರೇಯಮ್ ತೋರಿಸಿದ. ಈ ವಿಧಾನಕ್ಕೆ ಅಪೋಹನ (ಡಯಾಲಿಸಿಸ್) ಎಂಬ ಹೆಸರು ಕೊಟ್ಟ. ಇಂದು ನಾವೆಲ್ಲ ಅರಿತಿರುವಂತೆ ಕಲಿಲ ಪದಾರ್ಥಗಳಿಗೂ ಸ್ಫಟಿಕೀಯ ಪದಾರ್ಥಗಳಿಗೂ ಇರುವ ವ್ಯತ್ಯಾಸವೇನಿದ್ದರೂ ಆ ಪದಾರ್ಥಗಳ ಅಣುಗಳ ಗಾತ್ರಗಳಲ್ಲಿ ಮಾತ್ರ. ಸ್ಫಟಿಕೀಯ ಪದಾರ್ಥಗಳ ಅಣುಗಳು ಪುಟ್ಟಪುಟ್ಟ ಅಣುಗಳು. ಕಲಿಲ ಪದಾರ್ಥಗಳಾದರೋ ದೊಡ್ಡ ದೊಡ್ಡ ಅಣುಗಳಿಂದ ಮಾಡಲ್ಪಟ್ಟವು; ಇಲ್ಲವೇ ಚಿಕ್ಕ ಅಣುಗಳ ದೊಡ್ಡ ದೊಡ್ಡ ಸಮೂಹಗಳಿಂದ ಮಾಡಲ್ಪಟ್ಟವು.

ಗ್ರೇಯಮ್ ತನ್ನ ಈ ಪ್ರಮುಖ ಸಂಶೋಧನೆಗಳನ್ನು ನಡೆಸುತ್ತಿರುವಾಗಲೇ ಮಧ್ಯೆ ಮಧ್ಯೆ ಇನ್ನೂ ಹಲವಾರು ವೈಜ್ಞಾನಿಕ ಸಮಸ್ಯೆಗಳತ್ತ ಗಮನ ಹರಿಸಿದ. ಆರ್ಥೊ, ಮೆಟ ಮತ್ತು ಪೈರೊ ಫಾಸ್ಫಾರಿಕ್ ಆಮ್ಲಗಳ ಅಧ್ಯಯನವನ್ನು ಕೈಗೊಂಡು ಬಹುಪ್ರತ್ಯಾಮ್ಲೀಯ (ಪಾಲಿಬೇಸಿಕ್) ಆಮ್ಲಗಳಿರುವುದು ಸಾಧ್ಯವೆಂದು ತೋರಿಸಿದ. ಸ್ಫಟಿಕೀಕರಣ ಜಲಯುಕ್ತ (ವಾಟರ್ ಆಫ್ ಕ್ರಿಸ್ಟಲೈಸೇಷನ್) ಲವಣ ಹೈಡ್ರೇಟುಗಳನ್ನೂ (ಕ್ರಿಸ್ಟಲ್ ಹೈಡ್ರೇಟುಗಳು) ನೀರಿನ ಅಣುಗಳ ಬದಲಿಗೆ ಆಲ್ಕೊಹಾಲ್ ಅಣುಗಳಿರುವ ಆಲ್ಕೊಹಾಲೇಟುಗಳನ್ನೂ ಅಧ್ಯಯನ ಮಾಡಿದ. ತನ್ನ ಕೊನೆಯ ಸಂಶೋಧನ ಪತ್ರದಲ್ಲಿ ಪೆಲೇಡಿಯಮ್ ಹೈಡ್ರೈಡನ್ನು ಕುರಿತು ವರದಿ ಮಾಡಿದ. ಒಂದು ಲೋಹ ಅನಿಲ ಧಾತು ಒಂದರ ಜೊತೆ ಸಂಯೋಗ ಹೊಂದಿ ಒಂದು ಘನ ಸಂಯುಕ್ತ ಉತ್ಪತ್ತಿ ಮಾಡುವ ಮೊತ್ತಮೊದಲ ನಿದರ್ಶನ ಅದು.

1836ರಲ್ಲಿ ಥಾಮಸ್ ಗ್ರೇಯಮ್ ಲಂಡನಿನ ರಾಯಲ್ ಸೊಸೈಟಿಯ ಫೆಲೊ ಆಗಿ ಚುನಾಯಿತನಾದ. ಲಂಡನಿನ ಕೆಮಿಕಲ್ ಸೊಸೈಟಿ ಮತ್ತು ಕ್ಯಾವೆಂಡಿಷ್ ಸೊಸೈಟಿಗಳ ಸ್ಥಾಪಕರಲ್ಲೊಬ್ಬನಾಗಿದ್ದ ಗ್ರೇಯಮ್ 1841ರಲ್ಲಿ ಕೆಮಿಕಲ್ ಸೊಸೈಟಿಯ ಪ್ರಥಮ ಅಧ್ಯಕ್ಷನಾಗಿ ಆರಿಸಲ್ಪಟ್ಟ. 1846ರಲ್ಲಿ ಕ್ಯಾವೆಂಡಿಷ್ ಸೊಸೈಟಿಯ ಅಧ್ಯಕ್ಷನಾಗಿಯೂ ಆರಿಸಲ್ಪಟ್ಟ.

(ಜಿ.ಆರ್.ಎಲ್.)

**ಗ್ರೇಯಂ, ರಾಬರ್ಟ್ :** 1735–97. ಸ್ಕಾಟ್ ಕವಿ ಮತ್ತು ರಾಜಕಾರಣಿ. ಸ್ಟರ್ಲಿಂಗ್‌ಷೀರಿನ ಗಾರ್ಟ್‌ಮೋರಿನಲ್ಲಿ, ನಿಕೋಲ್ ಗ್ರೇಯಂ ಮತ್ತು ಮಾರ್ಗರೀಟರ ಮಗನಾಗಿ ಹುಟ್ಟಿದ. ಗ್ಲ್ಯಾಸ್ಗೋ ವಿಶ್ವವಿದ್ಯಾಲಯದಲ್ಲಿ ಉಚ್ಚಶಿಕ್ಷಣ ಪಡೆದು ತರುವಾಯ ಜಮೇಕಕ್ಕೆ ತೆರಳಿ ತೋಟದೊಡೆಯನಾಗಿ ಶ್ರೀಮಂತ ಜೀವನವನ್ನಾರಂಭಿಸಿದ. ಕೆಲಕಾಲ ಆಸ್ತಿನಿರ್ವಾಹಕನಾಗಿಯೂ ಕೆಲಸಮಾಡಿದ. 1784ರಲ್ಲಿ ಗ್ಲ್ಯಾಸ್ಗೋ ವಿಶ್ವವಿದ್ಯಾಲಯದ ಅಧ್ಯಕ್ಷನಾಗಿ ಚುನಾಯಿತನಾದ.

1794 ರಿಂದ 96 ರವರೆಗೆ ಸ್ಟರ್ಲಿಂಗ್‌ಷೀರಿನಿಂದ ಪಾರ್ಲಿಮೆಂಟಿಗೆ ಆಯ್ಕೆಯಾಗಿ ರಾಜಕೀಯದಲ್ಲಿ ವಿಶೇಷ ಆಸ್ಥೆ ವಹಿಸಿದ. ಈತ ಮಂಡಿಸಿದ ಪ್ರಜಾಧಿಕಾರ ಮಸೂದೆ 1832ರಲ್ಲಿ ಬರಲಿದ್ದ ಸುಧಾರಣಾಮಸೂದೆಗೆ ಮುನ್ಸೂಚನೆಯಂತಿದೆ. ಇದು ಈತನ ರಾಜಕೀಯ ದೂರದೃಷ್ಟಿಗೆ ನಿದರ್ಶನ. ಈತ 1796ರಲ್ಲಿ ತನ್ನ ಹೆಸರನ್ನು ರಾಬರ್ಟ್ ಕನಿಂಗ್‌ಹ್ಯಾಂ ಗ್ರೇಯಂ ಎಂಬುದಾಗಿ ಬದಲಾಯಿಸಿಕೊಂಡ. ಫ್ರೆಂಚ್ ಕ್ರಾಂತಿಯ ಆದರ್ಶತತ್ತ್ವಗಳ ಉಜ್ವಲಪ್ರತಿಪಾದಕನಾಗಿದ್ದ ಈತ ಬರೆದ ಭಾವಗೀತೆಗಳಲ್ಲಿ ಇಫ್ ಡೌಟಿ ಡೀಡ್ಸ್ ಮೈ ಲೇಡಿ ಪ್ಲೀಸ್–ತುಂಬ ಜನಪ್ರಿಯತೆಯನ್ನು ಗಳಿಸಿದುದಲ್ಲದೆ ಈತನ ಹೆಸರನ್ನೂ ಶಾಶ್ವತಗೊಳಿಸಿದೆ.

(ಎಂ.ಎಸ್.ವಿ.ಇ.)

**ಗ್ರೇವಿಲ್, ಚಾರ್ಲ್ಸ್ ಕ್ಯಾವೆಂಡಿಷ್ ಫಲ್ಕ್ :** 1794–1865. ದಿನಚರಿ ಸಾಹಿತ್ಯದಲ್ಲಿ ಪ್ರಸಿದ್ಧನಾದ ಇಂಗ್ಲಿಷ್ ಲೇಖಕ. ಈಟನ್ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ ವ್ಯಾಸಂಗ ಮಾಡಿದ. ಲಾರ್ಡ್ ಬೇಥರ್ಸ್ಟ್‌ನ ಆಪ್ತ ಕಾರ್ಯದರ್ಶಿಯ ಕೆಲಸ ಸಿಕ್ಕಿದ್ದರಿಂದ ಪದವೀಧರನಾಗುವ ಮುನ್ನವೇ ವ್ಯಾಸಂಗಕ್ಕೆ ಶರಣು ಹೊಡೆದ. ಅನಂತರ ಜಮೈಕದ ಕಾರ್ಯದರ್ಶಿಯ ಕಚೇರಿಯಲ್ಲಿ ಕೆಲಕಾಲ ಕೆಲಸ ಮಾಡಿದ. 1821ರಲ್ಲಿ ಪ್ರಿವಿ ಕೌನ್ಸಿಲ್ ಕಾರ್ಯಾಲಯದಲ್ಲಿ ಗುಮಾಸ್ತನಾಗಿ 40 ವರ್ಷ ಸೇವೆ ಸಲ್ಲಿಸಿದ. ಈ ಅವಧಿಯಲ್ಲಿ ಈತನಿಗೆ ನಾಲ್ಕನೆಯ ಜಾರ್ಜ್, ನಾಲ್ಕನೆಯ ವಿಲಿಯಂ ಮತ್ತು ವಿಕ್ಟೋರಿಯ ರಾಣಿ ಈ ಮೂವರ ರಾಜ್ಯಭಾರವನ್ನು ಅವಲೋಕಿಸುವ ಅವಕಾಶ ಸಿಕ್ಕಿತು. ತನ್ನ ಅನುಭವಗಳನ್ನೆಲ್ಲ ತನ್ನ ದಿನಚರಿಯಲ್ಲಿ ಈತ

ಬರೆದಿಟ್ಟಿದ್ದಾನೆ. ಸೂಕ್ಷ್ಮಗ್ರಾಹಿಯಾಗಿದ್ದ ಈತ ಅಂತರ್ದೃಷ್ಟಿಯಿಂದ ಪರಿಭಾವಿಸಿದ ಜೀವನಾನುಭವಗಳೆಲ್ಲ ಎಂಟು ಸಂಪುಟಗಳಷ್ಟಿರುವ ದಿನಚರಿಯಲ್ಲಿ ಅಡಕವಾಗಿವೆ. ಈ ಮೂವರ ಆಳಿಕೆಯ ಕಾಲದ ರಾಜಕೀಯ ಜೀವನದ ಸಮಗ್ರ ಚಿತ್ರಣವೂ ಅಲ್ಲಿದೆ. 1875ರಲ್ಲಿ ಪ್ರಕಟವಾದ ಮೂರು ಸಂಪುಟಗಳ ಪ್ರಥಮ ಭಾಗದಲ್ಲಿ ಜಾರ್ಜ್ ಮತ್ತು ವಿಲಿಯಂ ದೊರೆಗಳ ಕಾಲವನ್ನೂ ಅನಂತರ ಬಂದ ಐದು ಸಂಪುಟಗಳ ದ್ವಿತೀಯ ಭಾಗದಲ್ಲಿ ವಿಕ್ಟೋರಿಯ ರಾಣಿಯ ಕಾಲದ ಚರಿತ್ರೆಯನ್ನೂ ನೋಡಬಹುದು. ಗ್ರೇವಿಲ್ ಮೆಮೊರೀಸ್: ಎ ಜರ್ನಲ್ ಆಫ್ ದಿ ರೇನ್ಸ್ ಆಫ್ ಜಾರ್ಜ್ IV ಅಂಡ್ ವಿಲಿಯಂ IV ಎಂಬುದು ಎಂಟು ಸಂಪುಟಗಳ ಆ ದಿನಚರಿಯ ಹೆಸರು. ಬ್ರಿಟಿಷ್ ಇತಿಹಾಸಕ್ಕೆ ಈ ಕೃತಿಯೊಂದು ಆಧಾರಗ್ರಂಥವೆನ್ನಲಾಗಿದೆ.

ಸ್ಯಾಮ್ಯುಯೆಲ್ ಪೀಪ್ಸ್‌ನ ದಿನಚರಿಯನ್ನು ಬಿಟ್ಟರೆ ಗ್ರೇವಿಲ್‌ನ ದಿನಚರಿಯಷ್ಟು ಪ್ರಸಿದ್ಧವಾದ ಮತ್ತು ಶ್ರೇಷ್ಠವಾದ ಕೃತಿ ಇಂಗ್ಲಿಷ್ ದಿನಚರಿ ಸಾಹಿತ್ಯದಲ್ಲಿ ಮತ್ತೊಂದು ಇಲ್ಲವೆಂದು ವಿಮರ್ಶಕರ ಅಭಿಪ್ರಾಯ. (ಕೆ.ಬಿ.ಪಿ.)

**ಗ್ರೇವೀ, ಫ್ರಾಂಕಾಯ್ ಪಾಲ್ ಜೂಲ್ಸ್ :** 1807–91. ಫ್ರೆಂಚ್ ರಾಜಕಾರಣಿ. 1807ರ ಆಗಸ್ಟ್ 15 ರಂದು ಮಾಂಟ್-ಸೌಸ್- ವಾಡ್ರೆ ಯಲ್ಲಿ ಜನಿಸಿದ. ಪ್ಯಾರಿಸಿನಲ್ಲಿ ನ್ಯಾಯಪದವಿ ಗಳಿಸಿ ಅಲ್ಲಿಯ ನ್ಯಾಯವಾದಿಯಾಗಿ ಜೀವನವನ್ನಾರಂಭಿಸಿದ. ಈತ ಲೂಯಿ ಫಿಲಿಪ್ಪನ ವಿರೋಧಿಯಾಗಿದ್ದ. 1848ರಲ್ಲಿ ಝರ ಕ್ಷೇತ್ರದಿಂದ ಸಂವಿಧಾನ ಸಭೆಗೆ ಆಯ್ಕೆಹೊಂದಿ ಅಲ್ಲಿ 3ನೆಯ ನೆಪೋಲಿಯನನ ನೀತಿಯನ್ನು ವಿರೋಧಿಸಿದ. ಅಲ್ಲದೆ 3ನೆಯ ನೆಪೋಲಿಯನನ ಆಧಿಪತ್ಯದಲ್ಲಿ ಆಗಲಿದ್ದ ಎರಡನೆಯ ರಿಪಬ್ಲಿಕ್ ರಚನೆಯನ್ನು ವಿರೋಧಿಸಿದ. ಈತ ಸಂವಿಧಾನ ಸಭೆಯಲ್ಲಿ ತೀವ್ರಸ್ವರೂಪದ ತಿದ್ದುಪಡಿಗಳನ್ನು ಸೂಚಿಸಿದ. ಎರಡನೆಯ ರಿಪಬ್ಲಿಕ್‌ಗೆ ಅಧ್ಯಕ್ಷನೇ ಇರಕೂಡದೆಂದು ಕೂಡ ಸೂಚಿಸಿದ. ಒಂದು ವೇಳೆ ಅಂಥ ಅಧ್ಯಕ್ಷನಿದ್ದರೆ ಅವನನ್ನು ಆಯ್ಕೆ ಮಾಡುವ ಮತ್ತು ಪದಚ್ಯುತಿಗೊಳಿಸುವ ಅಧಿಕಾರ ಸಭೆಗೇ ಇರಬೇಕೆಂದು ಇವನು ಸಲಹೆ ಮಾಡಿದ. ಆದರೆ ಈ ಸಲಹೆ ಸಂಪೂರ್ಣವಾಗಿ ಕಾರ್ಯಗತವಾಗಲಿಲ್ಲ. 1851 ರಲ್ಲಿ ಈತ ದಸ್ತಗಿರಿಯಾದ. ಅನಂತರ 1868 ರವರೆಗೂ ಇವನು ರಾಜಕೀಯವನ್ನು ಪ್ರವೇಶಿಸಲಿಲ್ಲ. ನ್ಯಾಯವಾದಿ ವೃತ್ತಿಯಲ್ಲೆ ಮುಂದುವರಿದ.

1868 ರಲ್ಲಿ ಚೇಂಬರಿಗೆ ಗ್ರೇವೀಯ ಆಯ್ಕೆಯಾಯಿತು. ಮಿತಗಾಮಿ ರಿಪಬ್ಲಿಕನನ್ನಾಗಿ ಈತ ಅದರಲ್ಲಿ ಭಾಗವಹಿಸಿದ. 1871 ರಲ್ಲಿ ಇವನು ರಾಷ್ಟ್ರೀಯ ಸಭೆಯ ಅಧ್ಯಕ್ಷನಾಗಿ ಆಯ್ಕೆಯಾದ. 1876 ರಿಂದ 79 ರವರೆಗೆ ಈತ ರಾಷ್ಟ್ರೀಯ ಸಭೆಯ ಅಧ್ಯಕ್ಷನಾಗಿದ್ದ.

1879ರ ಜನವರಿ 30 ರಂದು ಅಧ್ಯಕ್ಷ ಮಾರ್ಷಲ್ ಮೆಕ್‌ಮೋಹನ್ ರಾಜೀನಾಮೆ ನೀಡಿದಾಗ ಗಣರಾಜ್ಯದ ಅಧ್ಯಕ್ಷನಾಗಿ ಈತ ಚುನಾಯಿತನಾದ. ಈ ಕಾಲದಲ್ಲಿ ಇವನು ಒಳ್ಳೆಯ ಹೆಸರು ಸಂಪಾದಿಸಿದ. ಆದ್ದರಿಂದ 1885ರ ಡಿಸೆಂಬರಿನಲ್ಲಿ ಮತ್ತೆ ಏಳು ವರ್ಷಗಳ ಅವಧಿಗೆ ಅಧ್ಯಕ್ಷನಾಗಿ ಚುನಾಯಿತನಾದ. ಇವನ ಅಳಿಯ ಡೇನಿಯಲ್ ವಿಲ್ಸನ್ ಲೀಜಿಯನ್ ಆಫ್ ಆನರ್ ಎಂಬ ಗೌರವ ಪದವಿಗಳ ನೀಡಿಕೆಯ ದುರ್ವ್ಯಾಪಾರದಲ್ಲಿ ನಿರತನಾಗಿದ್ದನೆಂಬ ಕಾರಣದಿಂದಾಗಿ ಇವನಿಗೂ ಕಳಂಕ ಅಂಟಿಕೊಂಡಿತು. ಈತ ಅಳಿಯನನ್ನು ಸಮರ್ಥಿಸುವ ನಿಲುವು ತಳೆದ. ಇವನು ಮಂತ್ರಿಮಂಡಲ ರಚಿಸಲು ಯಾರೂ ಒಪ್ಪಲಿಲ್ಲ. ಚೇಂಬರ್ ಕೂಡ ಇವನ ಬಗ್ಗೆ ಸರಿಯಾದ ಧೋರಣೆ ತಳೆಯಲಿಲ್ಲ. ಆದ್ದರಿಂದ ಈತ ರಾಜೀನಾಮೆ ನೀಡಬೇಕಾಯಿತು. ಈತ ತನ್ನ ಅಧಿಕಾರವನ್ನು ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಂಡನೆಂದೂ ತನ್ನ ಕುಟುಂಬದ ಮೇಲೆ ಅಂಧಾಭಿಮಾನ ಹೊಂದಿದ್ದನೆಂದೂ ಆಪಾದನೆಗೆ ಗುರಿಯಾದ. 1891ರ ಸೆಪ್ಟೆಂಬರ್ 9 ರಂದು ತನ್ನ ಜನ್ಮಸ್ಥಳದಲ್ಲಿ ನಿಧನ ಹೊಂದಿದ. (ಎನ್.ಎ.ಎಚ್.ಎಂ.)

**ಗ್ರೇವ್ಸ್, ರಾಬರ್ಟ್ ರ್‍ಯಾಂಕ :** 1895–1985. ಇಂಗ್ಲಿಷ್ ಕವಿ, ಕಾದಂಬರಿಕಾರ, ವಿಮರ್ಶಕ ಮತ್ತು ಗ್ರೀಕ್ ವಿದ್ವಾಂಸ. ಪ್ರಸಿದ್ಧ ಜರ್ಮನ್ ಇತಿಹಾಸಕಾರ ಫನ್ ರ್‍ಯಾಂಕನ ವಂಶಕ್ಕೆ ಸೇರಿದವ. ವಿಂಬಲ್‌ಡನ್‌ನಲ್ಲಿ ಜುಲೈ 24ರಂದು ಹುಟ್ಟಿದ. ತಂದೆ ಎ. ಪಿ. ಗ್ರೇವ್ಸ್ (1864–1931). ರಾಯಲ್ ವೆಲ್ಷ್ ಫ್ಯುಸಿಲಿಯರ್ಸ್ ವಿಭಾಗಕ್ಕೆ ಸೇರಿ ಒಂದನೆಯ ಮಹಾಯುದ್ಧದಲ್ಲಿ ಭಾಗವಹಿಸಿದ. ಯುದ್ಧಾನಂತರ ಆಕ್ಸ್‌ಫರ್ಡಿಗೆ ತೆರಳಿ ಆಧುನಿಕ ಕಾವ್ಯದ ಮೇಲೆ ಪ್ರೌಢ ಪ್ರಬಂಧ ಬರೆದು ಪದವಿ ಪಡೆದ. ಪ್ರಪ್ರಥಮವಾಗಿ ಈತ ಜಾರ್ಜಿಯನ್ ಕವಿಗಳ ಧಾಟಿಯನ್ನು ಅನುಸರಿಸಿ ಕೆಲವು ಕವನಗಳನ್ನು ಬರೆದ. ಆದರೆ ಯುದ್ಧ ಕಾಲದಲ್ಲಿ ಪಟ್ಟ ಕಟು ಅನುಭವಗಳಿಂದ ಮಾನಸಿಕ ತೊಳಲಾಟಕ್ಕೆ ಒಳಗಾದುದರಿಂದ ಈತನ ಅನಂತರದ ಕಾವ್ಯ ಹೆಚ್ಚು ಅರ್ಥಪೂರ್ಣವಾಗಿ ಮೂಡಿಬಂತು. ಈತ ತನ್ನ ಕಾವ್ಯಶೈಲಿಯನ್ನು ನಿರಂತರವಾಗಿ ಪರಿಷ್ಕರಿಸುತ್ತ, ಆತ್ಮಪರಿಶೋಧನೆಗೆ ಒಳಪಡಿಸುತ್ತ, ಪ್ರಯೋಗಗಳ ಮೂಲಕ ಅತ್ಯಂತ ವೈಯಕ್ತಿಕವಾದ ಅಭಿವ್ಯಕ್ತಿಯನ್ನು ರೂಪಿಸಿಕೊಂಡ. ಆಧುನಿಕ ಪ್ರಜ್ಞೆಯನ್ನು ಈತ ಅನನ್ಯವಾದ ರೀತಿಯಲ್ಲಿ ಮೈಗೂಡಿಸಿಕೊಂಡಿದ್ದರೂ ಯಾವ ಕಾವ್ಯ ಪಂಥವನ್ನಾಗಲೀ ಯಾವನೊಬ್ಬ ಕವಿಯ ವಿಶಿಷ್ಟ ಮಾದರಿಯನ್ನಾಗಲೀ ಅನುಸರಿಸದೆ, ಸಾಂಪ್ರದಾಯಿಕವೆನ್ನಬಹುದಾದ ಮಾರ್ಗದಲ್ಲಿ ಬೆರಗುಗೊಳಿಸುವಂಥ ಹೊಸತನವನ್ನು ಪ್ರದರ್ಶಿಸಿದ್ದಾನೆ. ಕಾವ್ಯ ಸಂಗೀತಮಯವಾಗಿ ಹೊಸೆದ ಶಬ್ದಗಳನ್ನು ಮೀರಿದಂಥದು. ಕಾವ್ಯವೆಂದರೆ ಸಂವೇದನೆ, ವಿವೇಕ; ಅನೇಕ ವೇಳೆ ಹೃದಯ ಬಿರಿಯುವಂಥ ಸಂವೇದನೆ ಎಂಬ ಈತನ ಮಾತುಗಳು ಈತನ ಕಾವ್ಯಕ್ಕೂ ಔಚಿತ್ಯಮಯವಾಗಿ ಅನ್ವಯವಾಗುತ್ತವೆ. ಆಧುನಿಕ ಕವಿಗಳಲ್ಲಿ ಈತನದು ಗಣ್ಯ ಸ್ಥಾನ. ಈತ ಲಾವಣಿ (ಬ್ಯಾಲಡ್) ಮಾದರಿಯ ಸರಳ ಕಥನಕವನಗಳನ್ನೂ ಶಿಶುಗೀತೆಗಳನ್ನೂ ಬರೆದಿದ್ದಾನೆ. ಆಧ್ಯಾತ್ಮಿಕ ಕವನಗಳನ್ನೂ ವಿಲಿಯಂ ಬ್ಲೇಕನ ಪುರಾಣ ಕಥಾಶೈಲಿಯನ್ನೂ ನೆನಪು ಮಾಡುವಂಥ ಸಂಕೀರ್ಣ, ಕ್ಲಿಷ್ಟ, ವೈಚಾರಿಕ ಕವನಗಳನ್ನೂ ಬರೆದಿದ್ದಾನೆ. ಪ್ರಣಯದ ದುರಂತ ಅನುಭವಗಳು, ಬಾಲ್ಯದ ಮುಗ್ಧ ಹಂಬಲ, ಅದ್ಭುತ ಘಟನೆಗಳಿಂದ ಕೂಡಿದ ಅಲೌಕಿಕ ಸನ್ನಿವೇಶಗಳು – ಇವು ಇವನ ಕಾವ್ಯಕ್ಕೆ ವೈವಿಧ್ಯಮಯ ವಸ್ತುವನ್ನು ಒದಗಿಸಿವೆ.

ಗ್ರೇವ್ಸ್ ಮುಖ್ಯವಾಗಿ ಕವಿಯೆಂದು ಪ್ರಸಿದ್ಧನಾಗಿದ್ದರೂ ಈತನ ಐತಿಹಾಸಿಕ ಕಾದಂಬರಿಗಳು, ವೈಚಾರಿಕ ಗದ್ಯಗ್ರಂಥಗಳು ಈತನಿಗೆ ಅಪಾರ ಖ್ಯಾತಿ ತಂದಿವೆ. ಈತನ ಆತ್ಮಕಥೆ ಗುಡ್‌ಬೈ ಟು ಆಲ್ ದಟ್ (1929)– ಒಂದು ಶ್ರೇಷ್ಠ ಗ್ರಂಥ. ಇದರಲ್ಲಿ ಸಮಕಾಲೀನ ಸಾಹಿತಿಗಳನ್ನು ಕುರಿತ ನಿಷ್ಠುರ, ವ್ಯಂಗ್ಯ ಟೀಕೆ ಇದೆ. ಯುದ್ಧಕಾಲದಲ್ಲಿ ತಾನು ಕಂಡುಂಡ ವ್ಯಾಕುಲಗಳ ಪರಿಯನ್ನು ತುಂಬ ಸೊಗಸಾಗಿ ಇದರಲ್ಲಿ ವರ್ಣಿಸಿದ್ದಾನೆ. ಈ ಗ್ರಂಥಕ್ಕೆ ಉತ್ತರ ರೂಪವಾಗಿ ಟು ರಿಟರ್ನ್ ಟು ಆಲ್ ದಟ್ (1930) ಎಂಬ ಆತ್ಮಕಥಾನಕವನ್ನು ಈತನ ತಂದೆ ಎ.ಪಿ. ಗ್ರೇವ್ಸ್ ಬರೆದಿದ್ದಾನೆಂಬುದನ್ನು ಇಲ್ಲಿ ನೆನೆಯಬಹುದು.

ಕಾದಂಬರಿಗಳನ್ನು ಬರೆದದ್ದು ಕೇವಲ ಹಣ ಸಂಪಾದನೆಗಾಗಿಯೇ ವಿನಾ ಕೀರ್ತಿಗಾಗಿಯಲ್ಲ ಎಂದು ಹೇಳಿಕೊಂಡಿದ್ದರೂ ಗ್ರೇವ್ಸ್ ಅಮೂಲ್ಯ ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದಾನೆ. ಚಿಕ್ಕಂದಿನಿಂದಲೂ ಈತ ಬೆಳೆಸಿಕೊಂಡ ಕುತೂಹಲ ದೃಷ್ಟಿ, ಅನಂತರ ಗಳಿಸಿದ ಅಭಿಜಾತ ಪಾಂಡಿತ್ಯ, ಐತಿಹಾಸಿಕ ಪ್ರಜ್ಞೆ– ಈತನ ಕಾದಂಬರೀ ರಚನೆಗೆ ಸ್ಫೂರ್ತಿ ನೀಡಿವೆ. ಇತಿಹಾಸದ ಯಾವುದೋ ಕಾಲದೇಶಗಳಲ್ಲಿನ ಘಟನಾವಳಿಗಳು, ಪಾತ್ರಗಳು, ಪರಿಸರ – ಎಲ್ಲವನ್ನೂ ತನ್ನ ಕಾವ್ಯಾತ್ಮಕವಾದ ವಿಭಾವನೆಯ ಮೂಲಕ ಸಂಘಟಿಸಿ, ರಸಭರಿತ ಕಾದಂಬರಿಗಳನ್ನು ಈತ ನೇಯ್ದಿದ್ದಾನೆ. ಪುರಾತನ, ಸೀಜûರೋತ್ತರ ರೋಮನ್ ಇತಿಹಾಸವನ್ನು ಚಿತ್ರಿಸುವ ಐ, ಕ್ಲಾಡಿಯಸ್ (1934), ಕ್ಲಾಡಿಯಸ್ ದಿ ಗಾಡ್ ಇವುಗಳು ಒಟ್ಟಾಗಿ ಒಂದು ಕಲಾಪರಿಪೂರ್ಣವಾದ ಕಾದಂಬರೀ ಚಕ್ರವೆನಿಸಿಕೊಂಡಿವೆ. ಮೊದಲ ಕಾದಂಬರಿಗೆ ಹಾಥಾರನ್‌ಡನ್ ಮತ್ತು ಜೇಮ್ಸ್ ಟೇಟ್ ಬ್ಲ್ಯಾಕ್ ಬಹುಮಾನಗಳು ಬಂದಿವೆ



(1934). ಇವಲ್ಲದೆ ಬೈಜಾಂಟಿಯಂನ ಚರಿತ್ರೆಯನ್ನು ಆಧರಿಸಿ ಬರೆದ ಕೌಂಟ್ ಬೆಲಿಸೇರಿಯಸ್, ಮಿಲ್ಟನ್ ಕವಿಯ ಜೀವನವನ್ನು ಕುರಿತ ವೈಫ್ ಟು ಮಿಲ್ಟನ್, ಹೋಮರನನ್ನು ಕುರಿತ ಹೋಮರ್ಸ್ ಡಾಟರ್ – ಮುಂತಾದ ಕಾದಂಬರಿಗಳನ್ನೂ ಬರೆದಿದ್ದಾನೆ. ಕಿಂಗ್ ಜೀಸಸ್ (1946), ಸೆವೆನ್ ಡೇಸ್ ಇನ್ ನ್ಯೂ ಕ್ರೀಟ್ (1949), ದಿ ವೈಟ್ ಗಾಡೆಸ್ (1947) ಮುಂತಾದ ಕೃತಿಗಳಲ್ಲಿ ಈತನ ಗ್ರೀಕ್ ಪಾಂಡಿತ್ಯ ವ್ಯಕ್ತವಾಗಿದೆ. ತನ್ನ ದಿ ವೈಟ್ ಗಾಡೆಸ್ ಎಂಬುದು ಕಾವ್ಯೈತಿಹ್ಯಕ್ಕೆ ಬರೆದ ಒಂದು ಐತಿಹಾಸಿಕ ವ್ಯಾಕರಣ – ಎಂದು ಗ್ರೇವ್ಸ್ ಹೇಳಿಕೊಂಡಿದ್ದಾನೆ. ಕ್ರೈಸ್ತ ಪುರಾಣೇತಿಹಾಸಗಳಿಗೆ ಸಂಬಂಧಿಸಿದ ಈತನ ವೈದುಷ್ಯಪೂರ್ಣ, ವೈಚಾರಿಕ ಗ್ರಂಥಗಳೂ ಉಜ್ವಲ ಗ್ರೀಕ್ ಭಾಷಾಂತರಗಳೂ ಇವನ ಬಹುಮುಖ ಪ್ರತಿಭೆಯ ಪ್ರತೀಕಗಳಾಗಿವೆ. ಪೊಯೆಟಿಕ್ ಅನ್‌ರೀಸನ್ (1925), ಕ್ರೌನಿಂಗ್ ಪ್ರಿವಿಲೆಜ್ (1955) – ಇವು ಈತನ ಪ್ರಸಿದ್ಧ ವಿಮರ್ಶನ ಗ್ರಂಥಗಳು. ಈತನ ಸಮಗ್ರ ಕವನಗಳ ಸಂಕಲನ 1959ರಲ್ಲಿ ಬೆಳಕು ಕಂಡಿತು.

ಡಬ್ಲ್ಯು. ಎಚ್. ಆಡೆನ್ನನ ಅನಂತರ ಈತ 1961ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಕಾವ್ಯ ಪ್ರಾಧ್ಯಾಪಕನಾದ. 1970ರ ದಶಕದಲ್ಲಿ ಇವನ ಪ್ರತಿಭಾಶಕ್ತಿ ಕುಂದಿತಲ್ಲದೆ ಜೀವಿತದ ಕಡೆಯ ಹತ್ತು ವರ್ಷಗಳ ಕಾಲ ಈತ ವಯೋ ಸಹಜವಾದ ಮನೋವ್ಯಾಧಿಯಿಂದ ಬಳಲಿದ. 1985ರ ಡಿಸೆಂಬರ್ 7 ರಂದು ಈತ ನಿಧನನಾದ. (ಎಚ್.ಕೆ.ಆರ್.)

**ಗ್ರೇಷಿಯನ್ :** 359–83. ರೋಮನ್ ಚಕ್ರವರ್ತಿ. ವ್ಯಾಲೆಂಟಿನಿಯನ್‌ನ ಮಗ. ಪೆನೋನಿಯದ (ಈಗಿನ ಹಂಗರಿ, ಯೂಗೋಸ್ಲಾವಿಯಗಳ ಭಾಗ) ಸಿರ್ಮಿಯಮಿನಲ್ಲಿ ಹುಟ್ಟಿದ. ವ್ಯಾಲೆಂಟಿನಿಯನ್‌ನಿಗೆ ಕಾನ್‌ಸ್ಟೆಂಟಿನ ಮತ್ತು ಜಸ್ಟಿನ ಎಂಬ ಇಬ್ಬರು ರಾಣಿಯರಿದ್ದರು. ಗ್ರೇಷಿಯನ್ ಕಾನ್‌ಸ್ಟೆಂಟಿನಳ ಮಗ. 2ನೆಯ ವ್ಯಾಲೆಂಟಿನಿಯನ್ ಜಸ್ಟಿನಳ ಮಗ. ಇವರಿಬ್ಬರೂ ಅನಂತರ ರೋಂ ಸಾಮ್ರಾಜ್ಯದ ಬೇರೆಬೇರೆ ಭಾಗಗಳಿಗೆ ಚಕ್ರವರ್ತಿಗಳಾದರು.

ವ್ಯಾಲೆಂಟಿನಿಯನ್ ಗ್ರೇಷಿಯನನನ್ನು 367ರಲ್ಲಿ ಆಗಸ್ಟಸ್ ಎಂದು ಘೋಷಿಸಿದ. ಆಸೋನಿಯಸನಿಂದ ಶಿಕ್ಷಣ ಕೊಡಿಸಿದ. ಗ್ರೇಷಿಯನ್ 374ರಲ್ಲಿ 2ನೆಯ ಕಾನ್‌ಸ್ಟಾಂಟಿಯಸನ ಮಗಳಾದ ಹನ್ನೆರಡು ವರ್ಷ ವಯಸ್ಸಿನ ಕಾನ್‌ಸ್ಟಾಂಷಿಯಳನ್ನು ವಿವಾಹವಾದ. ಮರುವರ್ಷ ವ್ಯಾಲೆಂಟಿನಿಯನ್ ಮರಣ ಹೊಂದಿದ. ಗ್ರೇಷಿಯನ್ ರೋಮನ್ ಸಾಮ್ರಾಜ್ಯದ ಇಡೀ ಪಶ್ಚಿಮ ಪ್ರದೇಶದ ಚಕ್ರವರ್ತಿಯಾದ. ಆದರೆ ಅದೇ ಸಮಯದಲ್ಲಿ ಅವನ ತಂದೆಯ ಸೈನ್ಯದ ಒಂದು ಭಾಗ ಬಂಡೆದ್ದು ಗ್ರೇಷಿಯನನ ನಾಲ್ಕು ವರ್ಷ ವಯಸ್ಸಿನ ಮಲತಮ್ಮ ವ್ಯಾಲೆಂಟಿನಿಯನನ್ನು ಚಕ್ರವರ್ತಿಯನ್ನಾಗಿ ಘೋಷಿಸಿತು. ಗ್ರೇಷಿಯನ್ ಅವನನ್ನೂ ಚಕ್ರವರ್ತಿಯೆಂದು ಪುರಸ್ಕರಿಸಿ ಯುದ್ಧ ತಪ್ಪಿಸಿದ. ಅವನು ತನ್ನ ತಾಯಿಯೊಂದಿಗೆ ಮಿಲಾನ್ ನಗರದಿಂದ ಆಡಳಿತವನ್ನು ನಡೆಸುವಂತೆ ಏರ್ಪಡಿಸಿದ. ಒಟ್ಟಿನಲ್ಲಿ ರೋಮನ್ ಸಾಮ್ರಾಜ್ಯ ಗ್ರೇಷಿಯನ್, ವ್ಯಾಲೆಂಟಿನಿಯನ್, ಇವರಿಬ್ಬರ ಚಿಕ್ಕಪ್ಪನಾದ ವ್ಯಾಲೆನ್ಸ್ – ಈ ಮೂವರು ಚಕ್ರವರ್ತಿಗಳ ಆಳಿಕೆಗೊಳಗಾಗಿತ್ತು.

ರೈನ್ ಗಡಿಯಾಚೆಯ ಅನೇಕ ಅನಾಗರಿಕ ತಂಡಗಳು ಆಗಾಗ್ಗೆ ರೋಮನ್ ಸಾಮ್ರಾಜ್ಯದೊಳಗೆ ನುಗ್ಗಿ ಕಿರುಕುಳ ಕೊಡುತ್ತಿದ್ದವು. ಗ್ರೇಷಿಯನ್ ಆ ತಂಡಗಳನ್ನು ತಡೆದು ಅವುಗಳ ಉಪದ್ರವವನ್ನು ನಿವಾರಿಸುವುದರಲ್ಲೆ ಹೆಚ್ಚು ಕಾಲ ಕಳೆದ. ಆಗಾಗ ಇಟಲಿಗೆ ಬಂದು ಹೋಗುತ್ತಿದ್ದರೂ ಅವನ ಗಮನ ಗಾಲ್ ಪ್ರದೇಶದಲ್ಲಿ ಕೇಂದ್ರೀಕೃತವಾಗಿತ್ತು. ಈ ಮಧ್ಯೆ ಗಾತಿಕ್ ಬಣಗಳಿಂದ ಸಾಮ್ರಾಜ್ಯದ ಪ್ರಾಚ್ಯ ಭಾಗಗಳಿಗೆ ಉಪದ್ರವ ತಲೆದೋರಿತು. 378ರಲ್ಲಿ ಗ್ರೇಷಿಯನನ ಚಿಕ್ಕಪ್ಪನಾದ ವ್ಯಾಲೆನ್ಸ್ ಏಡ್ರಿಯಾನೋಪಲ್ ಕದನದಲ್ಲಿ ಅಜಾಗರೂಕತೆಯಿಂದ ಶತ್ರುಶಿಬಿರದ ಬಳಿಗೆ ಮಿತ ಬೆಂಗಾವಲು ಪಡೆಯೊಡನೆ ಮುಂದುವರಿದು ಗಾಯಗೊಂಡು ನರಳುತ್ತಿದ್ದಾಗ ಶತ್ರುಗಳು ಅವನ ಸಮೇತ ಆ ಪ್ರದೇಶವನ್ನೆಲ್ಲ ಬೆಂಕಿಗೆ ಆಹುತಿ ಮಾಡಿದರು. ಈ ಘಟನೆ ರೋಮನ್ ಸಾಮ್ರಾಜ್ಯದ ಪತನ ಸನ್ನಿಹಿತವಾಯಿತೆಂಬುದರ ಸೂಚನೆಯಾಗಿತ್ತೆಂದು ಹಲವು ಚರಿತ್ರಕಾರರು ಅಭಿಪ್ರಾಯಪಟ್ಟಿದ್ದಾರೆ. ಈ ವಾರ್ತೆ ಗ್ರೇಷಿಯನನಿಗೆ ತಲುಪಿದರೂ ಅವನು ದೂರದಲ್ಲಿದ್ದುದರಿಂದ ವ್ಯಾಲೆನ್ಸನ ಸಹಾಯಕ್ಕೆ ತತ್‌ಕ್ಷಣ ಧಾವಿಸಲಾಗಲಿಲ್ಲ.

ಈ ದುರ್ಭರ ಸನ್ನಿವೇಶದಲ್ಲಿ ರೋಮನ್ ಸಾಮ್ರಾಜ್ಯದ ಪ್ರತಿಷ್ಠೆಯನ್ನು ಎತ್ತಿಹಿಡಿಯಲು ಗ್ರೇಷಿಯನ್ ನಿಶ್ಚಯಿಸಿದ. ಕ್ರೂರಿಗಳೂ ಯುದ್ಧಪ್ರಿಯರೂ ಆದ ಶತ್ರುಗಳನ್ನು ಅಡಗಿಸಲು ಸಾಹಸಿಯಾದ ನೇತಾರನ ಆವಶ್ಯಕತೆಯಿತ್ತು. ಗ್ರೇಷಿಯನನ ಆಳಿಕೆಯಲ್ಲಿದ್ದ ಪ್ರದೇಶಗಳು ಶತ್ರುಗಳ ದಾಳಿಗೆ ಒಳಗಾಗುತ್ತಿದ್ದುವಾದ್ದರಿಂದ ಈತ ಅಲ್ಲಿಂದ ಬಹುಕಾಲ ಕದಲುವಂತಿರಲಿಲ್ಲ. ಗಾತಿಕ್ ಯುದ್ಧವನ್ನು ಮುಂದುವರಿಸಲು ಹೆಚ್ಚು ಕಾಲವೂ ಅನಿರ್ಬಂಧಿತ ಅಧಿಕಾರವೂ ದೃಢಮನಸ್ಸೂ ಅನಿವಾರ್ಯವಾಗಿ ಆವಶ್ಯಕವಾಗಿದ್ದವು. ತನ್ನ ಅಧಿಕಾರ ಮತ್ತು ಪ್ರತಿಷ್ಠೆಗಿಂತ ರೋಮನ್ ಸಾಮ್ರಾಜ್ಯದ ಗೌರವವನ್ನು ಕಾಪಾಡುವುದು ಅತಿ ಮುಖ್ಯ ಕರ್ತವ್ಯವೆಂದು ಈತ ಬಗೆದು, ವೀರಯೋಧನೊಬ್ಬನನ್ನು ಆರಿಸಿ ಅವನಿಗೆ ವ್ಯಾಲೆನ್ಸ್‌ನ ಪದವಿಯನ್ನು ಕೊಡಲು ತೀರ್ಮಾನಿಸಿದ. ಮುಂದೆ ರೋಂ ಹಾಗೂ ಕೆಥೊಲಿಕ್ ಚರ್ಚ್ ಇತಿಹಾಸದ ಪ್ರಸಿದ್ಧ ವ್ಯಕ್ತಿಗಳಲ್ಲೊಬ್ಬನಾದ ತೀಯೊಡೋಷಿಯಸನ ವ್ಯಕ್ತಿತ್ವ ಗ್ರೇಷಿಯನನ ಗಮನ ಸೆಳೆಯಿತು. 379ರಲ್ಲಿ ಗ್ರೇಷಿಯನ್ ಅವನನ್ನು ಸಿರ್ಮಿಯಮಿಗೆ ಬರಮಾಡಿಕೊಂಡು ಅವನಿಗೆ ಥ್ರೇಸ್, ಏಷ್ಯ, ಈಜಿಪ್ಟ್ ಮತ್ತು ಮ್ಯಾಸಿಡೋನಿಯಗಳ ಆಡಳಿತ ವಹಿಸಿ ಸಾಮ್ರಾಜ್ಯ ಪದವಿಯನ್ನು ಕೊಟ್ಟು ಗೌರವಿಸಿ ಶತ್ರುಗಳನ್ನು ನಿಗ್ರಹಿಸುವ ಕಾರ್ಯವನ್ನು ಅವನಿಗೆ ವಹಿಸಿದ. ತನಗೆ ವಹಿಸಿದ ಜವಾಬ್ದಾರಿಯ ಕಾರ್ಯವನ್ನು ತೀಯೊಡೋಷಿಯಸ್ ಯಶಸ್ವಿಯಾಗಿ ನಿರ್ವಹಿಸಿದ. ಅವನು ಅನೇಕ ವರ್ಷಗಳ ಕಾಲ ನಿರಂತರವಾಗಿ ಹೋರಾಡಿ ಕೊನೆಗೆ 380ರಲ್ಲಿ ಶತ್ರುಗಳನ್ನು ಸಂಪೂರ್ಣವಾಗಿ ಸೋಲಿಸಿದ.

ತನ್ನ ಆಳಿಕೆಯ ಉತ್ತರಾರ್ಧದಲ್ಲಿ ಗ್ರೇಷಿಯನನ ಜನಪ್ರಿಯತೆ ಕುಂದತೊಡಗಿತು. ಇವನು ಬಿಷಪ್ ಆಂಬ್ರೋಸನ ಪ್ರಭಾವಕ್ಕೊಳಗಾಗಿ ಅತ್ಯಂತ ಧಾರಾಳ ನೀತಿಯನ್ನನುಸರಿಸತೊಡಗಿದ. ಪಾಂಟಿಫೆಕ್ಸ್ ಮ್ಯಾಕ್ಸಿಮಸ್ ಎಂಬ ಬಿರುದನ್ನು ತ್ಯಜಿಸಿದ. ಅಲ್ಲದೆ ರೋಮನ್ ಸೆನೆಟ್ ಮುಂದಿದ್ದ ವಿಜಯ ಪ್ರತಿಮೆಯನ್ನು ತೆಗೆಯಲು ತೀರ್ಮಾನಿಸಿದ. ಇವನು ಈ ತೀರ್ಮಾನ ಬದಲಿಸುವಂತೆ ಸೆನೆಟ್ ಸದಸ್ಯರು ಮಾಡಿದ ಪ್ರಯತ್ನ ಫಲಕಾರಿಯಾಗಲಿಲ್ಲ. 383ರಲ್ಲಿ ಇವನ ರಾಣಿಯಾದ ಕಾನ್‌ಸ್ಟಾಂಷಿಯ ಮರಣ ಹೊಂದಿದಳು. ಗ್ರೇಷಿಯನ್ ಬೇಟೆ ಮತ್ತು ಇತರ ವಿನೋದಗಳಲ್ಲಿ ಹೆಚ್ಚು ಕಾಲ ಕಳೆಯತೊಡಗಿದ. ಇವನ ಆಮೋದಪ್ರಮೋದಗಳಿಗೆ ಆಪ್ತಮಿತ್ರರು ಉತ್ತೇಜನ ಕೊಡುತ್ತಿದ್ದರು. ಗ್ರೇಷಿಯನ್ ತನ್ನ ಆಳಿಕೆಯ ಪ್ರಾರಂಭದಲ್ಲಿ ಸೈನಿಕರ ಮೇಲ್ವಿಚಾರಣೆ ಮತ್ತು ಅದರ ಮೇಲ್ಮೆಗೆ ಹೆಚ್ಚು ಗಮನ ನೀಡುತ್ತಿದ್ದ. ಕ್ರಮೇಣ ಇದರಿಂದ ವಿಮುಖನಾದ್ದರಿಂದ ಇವನ ಸೈನಿಕರಲ್ಲಿ ಅತೃಪ್ತಿ ಮೂಡಿತು. ಅಲ್ಲದೆ ತಾನು ಸೋಲಿಸಿದ ಸಿಥಿಯನ್ ಪಂಗಡದ ಒಂದು ಗುಂಪಿನವರನ್ನು ತನ್ನ ಅಂಗರಕ್ಷಕ ದಳಕ್ಕೆ ನೇಮಿಸಿಕೊಂಡು ಅವರೊಡನೆ ಸಲುಗೆಯಿಂದ ವರ್ತಿಸಲು ಪ್ರಾರಂಭಿಸಿದ. ಮಿಗಿಲಾಗಿ ತಾನೂ ಸಿಥಿಯನರ ಉಡುಗೆ ತೊಡಲು ಪ್ರಾರಂಭಿಸಿದ. ಇದರಿಂದ ಇವನ ಸೈನಿಕರಲ್ಲೂ ಪ್ರಜೆಗಳಲ್ಲೂ ಅತೃಪ್ತಿ ಉಂಟಾಯಿತು.

ಅತೃಪ್ತ ಸೈನಿಕರು 383ರಲ್ಲಿ ಬ್ರಿಟನಿನಲ್ಲಿದ್ದ ಗ್ರೇಷಿಯನನ ದಳಪತಿ ಮ್ಯಾಕ್ಸಿಮಸನನ್ನು ಸಾಮ್ರಾಟನನ್ನಾಗಿ ಘೋಷಿಸಿದರು. ಮ್ಯಾಕ್ಸಿಮಸ್ ಸೈನ್ಯ ಗಾಲ್ ಪ್ರದೇಶಕ್ಕೆ ನುಗ್ಗಿತು. ಇದನ್ನು ಎದುರಿಸಲು ಗ್ರೇಷಿಯನ್ ಪ್ಯಾರಿಸಿನವರೆಗೆ ಹೋದ. ಇವನ ಸೈನ್ಯ ಇವನನ್ನು ತ್ಯಜಿಸಿ ಮ್ಯಾಕ್ಸಿಮಸನ ಕಡೆಗೆ ಸೇರಿಕೊಂಡಿತು. ಗ್ರೇಷಿಯನ್ ತಪ್ಪಿಸಿಕೊಳ್ಳಲು ಪ್ರಯತ್ನಿಸಿ ಕೊಲೆಗೆ ಈಡಾದ (383ರ ಆಗಸ್ಟ್ 25).

ಗ್ರೇಷಿಯನ್ ಒಳ್ಳೆಯ ವಾಗ್ಮಿ, ಸಾಹಿತ್ಯಪ್ರಿಯ. ಯುದ್ಧ ಮತ್ತು ಬೇಟೆಯಲ್ಲಿ ಇವನಿಗೆ ವಿಶೇಷ ಅಭಿರುಚಿ ಇತ್ತು. ಅಶ್ವಾರೋಹಣ, ಬಿಲ್ಲು ವಿದ್ಯೆ, ಭರ್ಜಿ ಎಸೆತ ಮೊದಲಾದವುಗಳಲ್ಲಿ ಈತ ಪ್ರವೀಣನಾಗಿದ್ದ. ಸುಂದರವಾದ ಅರಮನೆಯನ್ನೂ ವಿಶಾಲವಾದ ಉದ್ಯಾನಗಳನ್ನೂ ಇವನು ನಿರ್ಮಾಣ ಮಾಡಿಸಿದ್ದ. ಪ್ರಾಣಿಗಳನ್ನು ಸಂಗ್ರಹಿಸುವುದರಲ್ಲೂ ಇವನಿಗೆ ವಿಶೇಷ ಆಸಕ್ತಿ ಇತ್ತು. ಇವನ ಸಂಗ್ರಹಾಲಯದಲ್ಲಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಮೃಗಪಕ್ಷಿಗಳಿದ್ದವು. ಈತ ಕೆಥೊಲಿಕ್ ಪಂಥದ ನಮ್ರ ಅನುಯಾಯಿಯಾಗಿದ್ದ. ಆಪ್ತವರ್ಗದವರು ಇವನಲ್ಲಿದ್ದ ಹಲವು ದೋಷಗಳನ್ನು ಪ್ರಚೋದಿಸದೆ ಯುಕ್ತ ಸಲಹೆಗಳನ್ನು ನೀಡಿದ್ದ ಪಕ್ಷದಲ್ಲಿ ಗ್ರೇಷಿಯನ್ ಚಕ್ರವರ್ತಿ ಸಮರ್ಥ ರೋಮನ್ ಸಾಮ್ರಾಟರಲ್ಲೊಬ್ಬನಾಗುತ್ತಿದ್ದನೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. (ಜಿ.ಆರ್.ಆರ್.)

**ಗ್ರೇಸ್, ವಿಲಿಯಂ ಗಿಲ್ಬರ್ಟ್ :** 1848–1945. ವಿಕ್ಟೋರಿಯ ಯುಗದ ಪ್ರಸಿದ್ಧ ಇಂಗ್ಲಿಷ್ ಕ್ರಿಕೆಟ್ ಕ್ರೀಡಾಪಟು. ತನ್ನ ಐವತ್ತು ವರ್ಷಗಳ ಚಟುವಟಿಕೆಗಳಿಂದ ಕ್ರಿಕೆಟ್ ಅನ್ನು ಇಂಗ್ಲೆಂಡಿನ ರಾಷ್ಟ್ರೀಯ ಕ್ರೀಡೆಯನ್ನಾಗಿ ಮಾಡಿದ ಪ್ರತಿಭಾವಂತ. ಹುಟ್ಟಿದ್ದು ಬ್ರಿಸ್ಟಲ್ ಹತ್ತಿರದ ಡೌನೆಂಡ್‌ನಲ್ಲಿ. ಲಂಡನಿನ ಸೇಂಟ್ ಬಾರ್ತಲೊಮೊದಲ್ಲಿ ವೈದ್ಯ ಶಿಕ್ಷಣ ಮುಗಿಸಿ ಬ್ರಿಸ್ಟಲಿನಲ್ಲಿ ಖಾಸಗಿ ವೈದ್ಯನಾಗಿ ಕೆಲಸ ಮಾಡತೊಡಗಿದ.

ಗ್ರೇಸನ ತಂದೆ ವೈದ್ಯನಾಗಿದ್ದುದರ ಜೊತೆಗೆ ಒಳ್ಳೆಯ ಕ್ರಿಕೆಟ್ ಆಟಗಾರನೂ ಆಗಿದ್ದ. ಅವನೇ ತನ್ನ ಮಗನನ್ನು ಕ್ರಿಕೆಟ್ ಕ್ರೀಡಾ ಜಗತ್ತಿಗೆ ತಂದ. ಗ್ಲಾಸ್ಟರ್‌ಷೈರ್ ಪರವಾಗಿ 1865ರಲ್ಲಿ ಮೊದಲಿಗೆ ಕ್ರಿಕೆಟ್ ದಾಂಡನ್ನು ಹಿಡಿದ ಗ್ರೇಸ್ 1908 ರವರೆಗೂ, ಸುಮಾರು



43 ವರ್ಷಗಳ ಕಾಲ, ವೈಭವದಿಂದ ಆಟವಾಡಿ ಅನೇಕ ದಾಖಲೆಗಳನ್ನು ಸ್ಥಾಪಿಸಿದ. ಪ್ರಸಿದ್ಧ ಕ್ರೀಡಾಪಟುವಾಗಿ ಗ್ರೇಸ್ ಕ್ರಿಕೆಟ್ ಜಗತ್ತಿನಲ್ಲಿ ಸಾಧಿಸಿದ್ದು ಅಂದರೆ 13 ಬಾರಿ ಇಂಗ್ಲೆಂಡ್ ಕ್ರಿಕೆಟ್ ಟೀಮಿನ ಕ್ಯಾಪ್ಟನ್ ಆಗಿದ್ದುದು, 22 ಮುಖ್ಯ ಕ್ರಿಕೆಟ್ ಟೆಸ್ಟುಗಳಲ್ಲಿ ಭಾಗವಹಿಸಿದ್ದುದು, 54,896 ರನ್ನುಗಳನ್ನು ಮಾಡಿ, 2,876 ವಿಕೆಟ್ ಗಳಿಸಿ, 871 ಕ್ಯಾಚುಗಳನ್ನು ಹಿಡಿದದ್ದು. ಒಂದೇ ಪಂದ್ಯದಲ್ಲಿ ಈತ ಎರಡು ಶತಕ ಗಳಿಸಿದ ಮೊದಲನೆ ಕ್ರಿಕೆಟ್ ಕ್ರೀಡಾಪಟುವೆಂದು ಹೆಸರು ಗಳಿಸಿದ. 1,000 ರನ್ನುಗಳನ್ನು ಎರಡು ಸಾರಿ ಮಾಡಿದ. ಆಟದ ಒಂದೇ ಸರಣಿಯಲ್ಲಿ (1873) 100 ವಿಕೆಟ್‌ಗಳಿಸಿ, ಮೊದಲನೆಯ ದರ್ಜೆಯ ಕ್ರಿಕೆಟ್‌ನಲ್ಲಿ 100 ಶತಕಗಳನ್ನು ಗಿಟ್ಟಿಸಿದ. 1880ರಲ್ಲಿ ಆಸ್ಟ್ರೇಲಿಯದೊಡನೆ ಆಡಿದ ಪ್ರಥಮ ಕ್ರಿಕೆಟ್ ಪಂದ್ಯದಲ್ಲಿ ಭಾಗವಹಿಸಿದ. *

**ಗ್ರೋಟ್, ಜಾರ್ಜ್ :** 1794–1871. ಗ್ರೀಸ್ ದೇಶದ ಇತಿಹಾಸವನ್ನು 12 ಸಂಪುಟಗಳಲ್ಲಿ ಬರೆದು ಪ್ರಕಟಿಸಿದ ಇಂಗ್ಲಿಷ್ ಇತಿಹಾಸಕಾರ. 1794ರ ನವೆಂಬರ್ 17ರಂದು ಜನಿಸಿದ. ಈತನ ಪೂರ್ವಿಕರು ಜರ್ಮನರು. ಇವನ ತಂದೆ ಖಾಸಗಿ ಬ್ಯಾಂಕ್ ಒಂದನ್ನು ನಡೆಸುತ್ತಿದ್ದ. ಹದಿನಾರನೆಯ ವಯಸ್ಸಿನಲ್ಲಿ ತನ್ನ ತಂದೆಯ ಸಂಸ್ಥೆಯೊಂದನ್ನು ಸೇರಿದ ಜಾರ್ಜ್ ಗ್ರೋಟ್‌ಗೆ ವಿಶ್ವವಿದ್ಯಾಲಯ ಶಿಕ್ಷಣ ದೊರೆಯಲಿಲ್ಲವಾದರೂ ಪ್ರಾಚೀನ ಗ್ರೀಕ್ ಸಾಹಿತ್ಯ, ಸಂಸ್ಕೃತಿ, ಕಲೆಗಳು, ಆಧ್ಯಾತ್ಮಶಾಸ್ತ್ರ, ರಾಜಕೀಯ ಅರ್ಥಶಾಸ್ತ್ರ–ಇವು ಈತನ ಒಲವಿನ ವಿಷಯಗಳಾಗಿದ್ದುವು. ಇವಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಈತ ಅಧ್ಯಯನ ಮಾಡಿದ. ತತ್ತ್ವಶಾಸ್ತ್ರಜ್ಞ ಜೇಮ್ಸ್ ಮಿಲ್ಲನ ಸ್ನೇಹ ಇವನಿಗೆ ಲಭಿಸಿತು. ಅವನನ್ನೂ ಜೆರೆಮಿ ಬೆಂಥಮ್‌ನನ್ನೂ ಈತ ಗುರುಗಳಂತೆ ಭಾವಿಸಿದ.

ಲಂಡನ್ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಯೋಜನೆಯಲ್ಲಿ ಈತ ಆಸಕ್ತಿವಹಿಸಿದ್ದ. 1827ರಿಂದ 1830ರವರೆಗೆ ಆ ಸಂಸ್ಥೆಯ ಮಂಡಲಿಯ ಸದಸ್ಯನಾಗಿದ್ದ. ಜೆ.ಎಸ್.ಮಿಲ್ಲನೊಂದಿಗೆ ಈತನಿಗೆ ಭಿನ್ನಾಭಿಪ್ರಾಯ ಬಂದದ್ದರಿಂದ ಆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ. 1832 ರಿಂದ 1841 ರವರೆಗೆ ಈತ ಲಂಡನ್ ನಗರದಿಂದ ಪಾರ್ಲಿಮೆಂಟ್ ಸದಸ್ಯನಾಗಿದ್ದ. 1841ರಲ್ಲಿ ರಾಜಕೀಯದಿಂದ ನಿವೃತ್ತನಾದ. ಮತ್ತೆ ಇತಿಹಾಸ ರಚನೆಯಲ್ಲಿ ನಿರತನಾದ. ಗ್ರೀಕ್ ಇತಿಹಾಸದ ಹನ್ನೆರಡು ಸಂಪುಟಗಳು 1846 ರಿಂದ 1856 ರವರೆಗಿನ ಕಾಲದಲ್ಲಿ ಪ್ರಕಟವಾದುವು. ಪ್ರ.ಶ.ಪೂ. 301ರ ವರೆಗಿನ ಇತಿಹಾಸವದು. ಈ ನಡುವೆ ಮತ್ತೆ ಈತ ವಿಶ್ವವಿದ್ಯಾಲಯದ ಕೋಶಾಧಿಕಾರಿಯೂ 1868ರಲ್ಲಿ ಅದರ ಅಧ್ಯಕ್ಷನೂ ಆದ. ಅಲ್ಲದೆ 1862ರಿಂದ ತನ್ನ ಜೀವನದ ಕೊನೆಯವರೆಗೂ ಕುಲಪತಿಯಾಗಿದ್ದ. ಈತನ ಮರಣಾನಂತರ ಇವನ ವೈಯಕ್ತಿಕ ಗ್ರಂಥಾಲಯ ಆ ವಿಶ್ವವಿದ್ಯಾಲಯಕ್ಕೆ ಬಳುವಳಿಯಾಗಿ ಸೇರಿತು. ಮಾನಸಿಕ ತತ್ತ್ವಶಾಸ್ತ್ರದ ಅಧ್ಯಯನಕ್ಕಾಗಿ ಈತ 6,000 ಪೌಂಡುಗಳ ದತ್ತಿ ಬಿಟ್ಟ. ಈತ ರಾಯಲ್ ಸೊಸೈಟಿಯ ಸದಸ್ಯನಾಗಿದ್ದ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಈತನಿಗೆ ಗೌರವ ಡಿ.ಸಿ.ಎಲ್. ಪದವಿಯನ್ನೂ ಕೇಂಬ್ರಿಜ್ ವಿಶ್ವವಿದ್ಯಾಲಯ ಎಲ್.ಎಲ್.ಡಿ. ಪದವಿಯನ್ನೂ ನೀಡಿ ಗೌರವಿಸಿದುವು. ಇವನಿಗೆ ಕೀರ್ತಿ ಬಂದದ್ದು ಗ್ರೀಸಿನ ಇತಿಹಾಸ ಕುರಿತ ಗ್ರಂಥದಿಂದ. ಮೂಲತಃ ರಾಜಕಾರಣಿಯೂ ವ್ಯವಹಾರಚತುರನೂ ಆದ ಈತ ಪ್ರಜಾಪ್ರಭುತ್ವವಾದಕ್ಕೆ ವಿರುದ್ಧವಾಗುವಂತೆ ಗ್ರೀಸ್ ದೇಶದ ಚರಿತ್ರೆಯನ್ನು ನಿರೂಪಿಸಿದ ಮಿಟ್‌ಫರ್ಡನ ಬರೆಹವನ್ನು ಖಂಡಿಸುವ ಸಲುವಾಗಿಯೇ ಎಂಬಂತೆ ಈ ಕಾರ್ಯವನ್ನು ಕೈಗೊಂಡ. ಗ್ರೀಸಿನ ಪೌರಾಣಿಕ ಕಥೆಗಳಿಂದ ಆರಂಭವಾಗಿ ಅಲೆಗ್ಸಾಂಡರನ ದಂಡಯಾತ್ರೆಯವರೆಗೂ, ಅಂದರೆ ಪ್ರ.ಶ.ಪೂ. 4ನೆಯ ಶತಮಾನದವರೆಗೂ, ಗ್ರೀಸಿನ ಇತಿಹಾಸವನ್ನು ಈತ ನಿರೂಪಿಸಿದ್ದಾನೆ. ಇದು ಇಂದು ಉತ್ಕೃಷ್ಟ ಇತಿಹಾಸಗ್ರಂಥವೆನಿಸದಿದ್ದರೂ ವಸ್ತು ಸಂಗ್ರಹಣೆ ಮುಂತಾದವುಗಳಲ್ಲಿ ಈತನ ನೈಪುಣ್ಯವನ್ನು ಇದರಲ್ಲಿ ಕಾಣಬಹುದು. ಪ್ಲೇಟೊ ಅಂಡ್ ಅದರ್ ಕಂಪ್ಯಾನಿಯನ್ಸ್ ಆಫ್ ಸಾಕ್ರಟೀಸ್ ಎಂಬ ಮೂರು ಸಂಪುಟಗಳ ಗ್ರಂಥ 1865ರಲ್ಲಿ ಹೊರಬಿತ್ತು. ಬಳಿಕ ಈತ ಅರಿಸ್ಟಾಟಲನ್ನು ಕುರಿತು ಬರೆಯತೊಡಗಿದ. ಆದರೆ ಈ ಕೃತಿ ಸಂಪೂರ್ಣವಾಗಲಿಲ್ಲ. 1871ರಲ್ಲಿ ಈತ ಮರಣಹೊಂದಿದ. 1872ರಲ್ಲಿ ಇದನ್ನು ಬೇನ್ ಮತ್ತು ರಾಬರ್ಟ್‌ಸನ್ ಸಂಪಾದಿಸಿ ಪ್ರಕಟಿಸಿದರು. ಸ್ಟೇಟ್‌ಮೆಂಟ್ ಆನ್ ದಿ ಕ್ವೆಶ್ಚನ್ ಆಫ್ ಪಾರ್ಲಿಮೆಂಟರಿ ರಿಫಾರ್ಮ್ (1821), ಎಸೆನ್ಷಿಯಲ್ ಆಫ್ ಪಾರ್ಲಿಮೆಂಟರಿ ರಿಫಾರ್ಮ್ (1831), ಸೆವೆನ್ ಲೆಟರ್ಸ್ ಆನ್ ದಿ ರೀಸೆಂಟ್ ಪಾಲಿಟಿಕ್ಸ್ ಆಫ್ ಸ್ವಿಟ್ಜರ್ಲೆಂಡ್ (1847) ಇವು ಈತನ ಇತರ ಕೆಲವು ಕೃತಿಗಳು. (ಜೆ.ಬಿ.ಆರ್.)

**ಗ್ರೋಷಿಯಸ್, ಹ್ಯೂಗೊ :** 1583–1645. ಡಚ್ ನ್ಯಾಯಶಾಸ್ತ್ರಜ್ಞ, ರಾಜತಂತ್ರ ನಿಪುಣ, ಭಾಷಾಶಾಸ್ತ್ರಜ್ಞ, ಕವಿ, ದೇವತಾಶಾಸ್ತ್ರವಿದ, ಇತಿಹಾಸಕಾರ, ಅಂತರರಾಷ್ಟ್ರೀಯ ನ್ಯಾಯವನ್ನು ರೂಪಿಸುವುದರಲ್ಲಿ ಈತನ ಬರೆಹಗಳು ಪ್ರಧಾನ ಪಾತ್ರ ವಹಿಸಿವೆ.

ಗ್ರೋಷಿಯಸ್ 1583ರ ಏಪ್ರಿಲ್ 10ರಂದು ಡೆಲ್ಫ್ಟ್‌ನಲ್ಲಿ ಹುಟ್ಟಿದ. ತಂದೆ ಸುಸಂಸ್ಕೃತ; ಡೆಲ್ಫ್ಟ್‌ನ ಪೌರಾಧ್ಯಕ್ಷ (ಬರ್ಗೊಮಾಸ್ಟರ್) ಮತ್ತು ಲೈಡನ್ ವಿಶ್ವವಿದ್ಯಾಲಯದ ಕ್ಯೂರೇಟರ್. ಅವನಿಗೆ ಮಗನ ವಿದ್ಯಾಭ್ಯಾಸದಲ್ಲಿ ವಿಶೇಷ ಆಸಕ್ತಿಯಿತ್ತು. ಡಂಭವಿಲ್ಲದ ವಿದ್ವತ್ತನ್ನೂ ಆಡಂಬರವಿಲ್ಲದ ಧರ್ಮದೃಷ್ಟಿಯನ್ನೂ ಗ್ರೋಷಿಯಸ್ ಸಂಪಾದಿಸಿಕೊಂಡ. 15ನೆಯ ವಯಸ್ಸಿನಲ್ಲಿ ಮಾರ್ಷಿಯಾನೆಸ್ ಕ್ಯಾಪೆಲನ ವಿಶ್ವಕೋಶವನ್ನು ಈತ ಸಂಪಾದಿಸಿದ. ರಾಯಭಾರಿ ಓಲ್ಡೆನ್ ಬಾರ್ನೆವೆಲ್ಟನೊಂದಿಗೆ ಫ್ರಾನ್ಸಿಗೆ ಹೋದ. ಫ್ರಾನ್ಸಿನ ದೊರೆ 4ನೆಯ ಹೆನ್ರಿ ಇವನನ್ನು ಹಾಲೆಂಡಿನ ಪವಾಡವೆಂದು ಹೊಗಳಿ ಸ್ವಾಗತಿಸಿದ. ಆ ಕಾಲದ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು ಗ್ರೋಷಿಯಸ್ ಒಂದು ಪದ್ಯ ಬರೆದ. ಈತ ಹಾಲೆಂಡಿಗೆ ಮರಳುವಾಗ ಆರ್ಲಿಯನ್ಸಿನಲ್ಲಿ ಇವನಿಗೆ ಡಾಕ್ಟರ್ ಆಫ್ ಲಾ ಪದವಿ ಲಭ್ಯವಾಯಿತು. ಹೇಗಿನಲ್ಲಿ ಇವನು ಪ್ರಮುಖ ನ್ಯಾಯವಾದಿಯಾದ. ಸರ್ಕಾರದ ವರಿಷ್ಠರು ಇವನ ಗೆಳೆಯರಾದರು. 1601ರಲ್ಲಿ ಹಾಲೆಂಡ್ ರಾಜ್ಯಗಳ ಇತಿಹಾಸಲೇಖಕನಾಗಿ ಇವನ ನೇಮಕವಾಯಿತು. ಈತ ಲ್ಯಾಟಿನಿನಲ್ಲಿ ಎರಡು ನಾಟಕಗಳನ್ನು ರಚಿಸಿದನಲ್ಲದೆ ಸೋಲಿಯ ಆರಾಟಸನ ಸಾಹಿತ್ಯಕೃತಿಗಳನ್ನು ಸಂಪಾದಿಸಿದ.



1604ರಲ್ಲಿ ಡಚ್ ಈಸ್ಟ್ ಇಂಡಿಯ ಕಂಪನಿಯ ಅಧಿಕಾರಿಯೊಬ್ಬ ಪೋರ್ಚುಗೀಸ್ ನೌಕೆಯೊಂದನ್ನು ಹಿಡಿದುಕೊಂಡ. ವ್ಯಾಪಾರನೌಕೆಗಳನ್ನು ಹಿಡಿದುಕೊಳ್ಳುವುದರ ನ್ಯಾಯಬದ್ಧತೆಯನ್ನು ಕುರಿತು ಬರೆಯಬೇಕೆಂದು ಕಂಪನಿ ಗ್ರೋಷಿಯಸನನ್ನು ಕೇಳಿಕೊಂಡಿತು. 1608ರಲ್ಲಿ ಈತ ಈ ಬಗ್ಗೆ ಒಂದು ವಿದ್ವತ್ಪ್ರಬಂಧ ಬರೆದ. ದೈವೇಚ್ಛೆಯಿಂದ ನಿಸರ್ಗದತ್ತವಾಗಿ ಬಂದಿರುವ ನಿಯಮಗಳು ನಾಲ್ಕು : ರಾಷ್ಟ್ರವೇ ಆಗಲಿ, ವ್ಯಕ್ತಿಯೇ ಆಗಲಿ ಇನ್ನೊಂದು ರಾಷ್ಟ್ರ ಅಥವಾ ವ್ಯಕ್ತಿಯ ಮೇಲೆ ಆಕ್ರಮಣ ನಡೆಸಬಾರದು, ಇನ್ನೊಂದು ರಾಷ್ಟ್ರ ಅಥವಾ ವ್ಯಕ್ತಿಗೆ ಸೇರಿದ್ದನ್ನು ವಶಪಡಿಸಿಕೊಳ್ಳಬಾರದು, ಕೌಲುಗಳನ್ನೂ ಕರಾರುಗಳನ್ನೂ ಕಡೆಗಣಿಸಬಾರದು, ಅಪಕೃತ್ಯ ಮಾಡಬಾರದು. ಈ ನಾಲ್ಕು ನಿಯಮಗಳನ್ನೂ ನ್ಯಾಯಮೂರ್ತಿಗಳು ಎತ್ತಿ ಹಿಡಿಯಬೇಕು. ನ್ಯಾಯಮೂರ್ತಿಗಳಿಲ್ಲದಿದ್ದರೆ ರಾಷ್ಟ್ರಗಳೇ ಅಥವಾ ವ್ಯಕ್ತಿಗಳೇ ಯುದ್ಧ ಅಥವಾ ಖಾಸಗಿ ಮೊಕದ್ದಮೆಯ ಮೂಲಕ ಇವನ್ನು ಎತ್ತಿಹಿಡಿಯಬೇಕು. ಡಚ್ಚರು ವ್ಯಾಪಾರೋದ್ದೇಶದಿಂದ ವಿಶಾಲ ಸಾಗರದಲ್ಲಿ ಈಸ್ಟ್ ಇಂಡೀಸಿಗೆ ಯಾನ ಮಾಡುವುದಕ್ಕೆ ಪೋರ್ಚುಗೀಸರು ಅಡ್ಡಿಪಡಿಸಿದ್ದರಿಂದ ತಮಗೆ ಆದ ನಷ್ಟವನ್ನು ತುಂಬಿಕೊಳ್ಳಲು ಅವರು ಪೋರ್ಚುಗೀಸ್ ವ್ಯಾಪಾರ ನೌಕೆಗಳನ್ನು ಹಿಡಿದುಕೊಂಡಿದ್ದು ತಪ್ಪಲ್ಲ – ಎಂದು ಈತ ವಾದಿಸಿದ. ಮುಂದೆ ಈ ನಿಯಮಗಳನ್ನೇ ಆಧಾರವಾಗಿ ಇಟ್ಟುಕೊಂಡು ಇಡೀ ಮಾನವತೆಯ ನ್ಯಾಯವನ್ನು– ಖಾಸಗಿ, ದಂಡೀಯ, ಸಂವೈಧಾನಿಕ, ಅಂತರರಾಷ್ಟ್ರೀಯ – ಎಲ್ಲವನ್ನೂ ಕುರಿತ ಗ್ರಂಥವೊಂದನ್ನು ಬರೆದ. ಇದು ತುಂಬ ಪ್ರಸಿದ್ಧವಾಯಿತು. 1607ರಲ್ಲಿ ಈತ ಹಾಲೆಂಡ್ ಪ್ರಾಂತದ ಮಹಾನ್ಯಾಯವಾದಿಯಾಗಿ ನೇಮಕವಾದ. ಮರುವರ್ಷ ಇವನು ಮೇರಿಯ ವಾನ್ ರೀಜರ್ಸ್‌ಬರ್ಕಳನ್ನು ಮದುವೆಯಾದ. 1613ರಲ್ಲಿ ರಾಟರ್ಡಾಮಿನ ಅಧಿಕಾರಿಯಾದ.

ಆ ಸಮಯದಲ್ಲಿ ಹಾಲೆಂಡಿನಲ್ಲಿ ಮತೀಯ ಕಲಹಗಳು ಪ್ರಬಲವಾಗಿದ್ದವು. ಇವುಗಳಲ್ಲಿ ಓಲ್ಡೆನ್ ಬಾರ್ನೆವೆಲ್ಟ್ ಒಂದು ಪಕ್ಷದ ಪರವಾಗಿದ್ದ. ಗ್ರೋಷಿಯಸ್ ತನ್ನ ಲೇಖನಗಳ ಮೂಲಕ ಅವನಿಗೆ ಬೆಂಬಲ ನೀಡಿದ. ಈ ಕಲಹಗಳು ಕೇವಲ ಮತೀಯವಾಗಿಲ್ಲದೆ ರಾಜಕೀಯ ಬಣ್ಣವನ್ನೂ ತಳೆದಿದ್ದುದರಿಂದ 1618ರಲ್ಲಿ ಓಲ್ಡೆನ್ ಬಾರ್ನೆವೆಲ್ಟನೂ ಗ್ರೋಷಿಯಸನೂ ದಸ್ತಗಿರಿಯಾದರು. ಓಲ್ಡೆನ್ ಬಾರ್ನೆವೆಲ್ಟ್ ಮರಣ ದಂಡನೆಗೂ ಗ್ರೋಷಿಯಸ್ ಜೀವಾವಧಿ ಶಿಕ್ಷೆಗೂ ಗುರಿಯಾದರು. ಪುಸ್ತಕ ಹಾಗೂ ಬಟ್ಟೆ ತುಂಬುವ ಪೆಟ್ಟಿಗೆಯೊಂದರಲ್ಲಿ ಅಡಗಿ ಗ್ರೋಷಿಯಸ್ ತಪ್ಪಿಸಿಕೊಂಡ. ಇವನ ಬದಲು ಇವನ ಹೆಂಡತಿ ಸೆರೆಮನೆಯಲ್ಲಿ ಉಳಿದುಕೊಂಡಳು. ಗ್ರೋಷಿಯಸ್ ಪ್ಯಾರಿಸಿನಲ್ಲಿ ಆಶ್ರಯ ಪಡೆದ (1621). 13ನೆಯ ಲೂಯಿ ಇವನಿಗೆ ಪೆನ್ಷನ್ ನೀಡಿದ. ಹತ್ತು ವರ್ಷಗಳ ಅನಂತರ ಇದು ನಿಂತುಹೋಯಿತು. ಇವನು ಹಿಂದೆಯೇ ಬರೆದು ಮುಗಿಸಿ ಆಗ್ಗಿಂದಾಗ್ಗೆ ಪರಿಷ್ಕರಿಸಿದ ನ್ಯಾಯಗ್ರಂಥ 1625ರಲ್ಲಿ ಪ್ರಕಟವಾಯಿತು. ಇದರಿಂದ ಇವನ ಕೀರ್ತಿ ಬೆಳೆಯಿತು. ಸ್ವೀಡನಿನ ದೊರೆ ಹಾಗೂ ರಾಣಿ ಇವನನ್ನು ಫ್ರೆಂಚ್ ರಾಜಾಸ್ಥಾನದಲ್ಲಿ ರಾಯಭಾರಿಯಾಗಿ ನೇಮಿಸಿದರು (1634). ಗ್ರೋಷಿಯಸ್ 1645 ರವರೆಗೂ ಈ ಹುದ್ದೆಯಲ್ಲಿದ್ದು ಸ್ಟಾಕ್‌ಹೋಂಗೆ ಹಿಂದಿರುಗಿದ. ಅಲ್ಲಿಯ ರಾಜಾಸ್ಥಾನದ ವಾತಾವರಣ ಬದಲಾಗಿರಲಿಲ್ಲ. ಇವನಿಗೆ ಅಲ್ಲಿ ಸ್ವಾಗತ ದೊರಕಲಿಲ್ಲ. ಗ್ರೋಷಿಯಸ್ ಹಾಲೆಂಡಿಗೆ ಹಿಂದಿರುಗುತ್ತಿದ್ದಾಗ ಮಾರ್ಗಮಧ್ಯದಲ್ಲಿ ರಾಸ್ಟಾಕ್‌ನಲ್ಲಿ 1645ರ ಆಗಸ್ಟ್ 29ರಂದು, ಇವನ ಹಡಗು ಬಂಡೆಗೆ ಬಡಿಯಿತು; ಗ್ರೋಷಿಯಸ್ ತೀರಿಕೊಂಡ. (ಬಿ.ಡಿ.ಎಚ್.)

**ಗ್ರೋಸ್ಸಿ, ಟಾಮಾಜ್ಜೊ :** 1790–1853. ಇಟಲಿಯ ಕವಿ ಮತ್ತು ಕಾದಂಬರಿಕಾರ. ಬೆಲಾನೊದಲ್ಲಿ ಹುಟ್ಟಿದ ಈತ ಪಾವಿಯಾದಲ್ಲಿ ನ್ಯಾಯಶಾಸ್ತ್ರದ ಅಧ್ಯಯನ ಮಾಡಿ, ಮಿಲಾನ್‌ನಲ್ಲಿ ವಕೀಲವೃತ್ತಿಯನ್ನು ಕೈಕೊಂಡ. ಈತನ ರಾಜನಿಷ್ಠೆಯನ್ನು ಶಂಕಿಸಿದ ಆಸ್ಟ್ರಿಯನ್ ಸರ್ಕಾರ ಈತನ ಪ್ರಗತಿಗೆ ಅಡ್ಡಬಂತು. ಪರಿಣಾಮವಾಗಿ ಈತ ತನ್ನ ಜೀವನಪರ್ಯಂತ ಕರಾರು ಪತ್ರಗಳನ್ನು ಬರೆಯುವ ಒಬ್ಬ ಸಾಧಾರಣ ಅಧಿಕಾರಿಯಾಗಿರ ಬೇಕಾಯಿತು. ಈತನ ಪ್ರಥಮ ಕವನವಾದ ಲಾ ಪ್ರಿನೈಡಿ (1814), ಮಿಲಾನಿನ ಪ್ರಾಂತ್ಯಭಾಷೆಯಲ್ಲಿ ಬರೆದ ಯುದ್ಧಗೀತೆ. ಈತ ನಾಟಕಕಾರ ಮಾನ್‌ಜೋನಿಯ ಜತೆಯಲ್ಲಿ ಅನೇಕ ವರ್ಷಗಳನ್ನು ಮಿಲಾನಿನಲ್ಲಿ ಕಳೆದ. ಮಾನ್‌ಜೋನಿಯ ಪ್ರಭಾವದಿಂದಾಗಿ ಈತ ವಿಡಂಬನ ಸಾಹಿತ್ಯವನ್ನು ಕೈಬಿಟ್ಟು ಕವನಗಳಲ್ಲಿ ರಂಜಕ ಕಥೆಗಳನ್ನು ನಿರೂಪಿಸಿದ. ಅವುಗಳಲ್ಲಿ ಲಾ ಫ್ಯುಜಿಟಿವಿಯ (1816) ಮತ್ತು ಲಾ ಇಲ್ಡೆಗೊಂಡ (1820) ಮುಖ್ಯವಾದವು. ಈತ 1826ರಲ್ಲಿ ಐ ಲೊಂಬಾರ್ಡಿ ಅಲಾ ಪ್ರಿಮಾ ಕ್ರೋಸಿಯಾಟಾ ಎಂಬ ಮಹಾಕಾವ್ಯವನ್ನು ಬರೆದ. ಮಾರ್ಕೊ ವೈಕಾಂಟಿ (1834) ಎಂಬ ಐತಿಹಾಸಿಕ ಕಾದಂಬರಿಯನ್ನು ಈತನ ಅತ್ಯುತ್ತಮ ಕೃತಿಯೆಂದು ಪರಿಗಣಿಸಲಾಗಿದೆ. ಆದರೆ ಈ ಕಾದಂಬರಿಯಲ್ಲಿ ಕಥಾವಸ್ತು ಮತ್ತು ಐತಿಹಾಸಿಕ ಹಿನ್ನೆಲೆಗಳ ನಡುವೆ ಸರಿಯಾದ ಸಂಬಂಧ ಕಾಣುವುದಿಲ್ಲವೆಂದೂ ನಾಟಕೀಯ ಸಾಧ್ಯತೆಗಳ ಪೂರ್ಣ ಉಪಯೋಗವಾಗಿಲ್ಲವೆಂದೂ ಅನೇಕ ಪಾತ್ರಗಳು ಕಳೆಯಿಲ್ಲದ ಭಾವಶೀಲ ವ್ಯಕ್ತಿಗಳಾಗಿವೆಯೆಂದೂ ಹೇಳುವವರಿದ್ದಾರೆ. (ಎಸ್.ವಿ.ಎಸ್‌ಯು.)

**ಗ್ರೌಪರ್ :** ಸೆರಾನಿಡೀ ಕುಟುಂಬಕ್ಕೆ ಸೇರಿದ ಹಲವಾರು ಬಗೆಯ ಮೀನುಗಳಿಗಿರುವ ಸಾಮಾನ್ಯ ಹೆಸರು. ಇವು ಸಮಶೀತೋಷ್ಣವಲಯದ ಕಡಲುಗಳಲ್ಲಿ ವಾಸಿಸುತ್ತವೆ; ವೆಸ್ಟ್ ಇಂಡೀಸ್, ಅಮೆರಿಕ ಸಂಯುಕ್ತ ಸಂಸ್ಥಾನಗಳ ದಕ್ಷಿಣಪ್ರದೇಶಗಳ ಕಡಲುಗಳು ಇವುಗಳ

ಮುಖ್ಯ ವಾಸಸ್ಥಳ. ಭಾರತದಲ್ಲೂ ಕೆಲವು ಪ್ರಭೇದಗಳಿವೆ. ಬಂಡೆಗಳಿರುವ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಬರುವುದರಿಂದ ಇವಕ್ಕೆ ರಾಕ್ ಬಾಸ್ ಎಂಬ ಹೆಸರೂ ಇದೆ. ಕಡಲ (ಸೀ) ಬಾಸ್ ಪರ್ಯಾಯನಾಮ. ಮಧ್ಯಮ ಗಾತ್ರದಿಂದ ದೈತ್ಯಾಕಾರದವರೆಗೂ ಬೆಳೆಯುವ ಮೀನುಗಳಿವು. ಕೋನಿ ಎಂಬುದು ಗ್ರೌಪರುಗಳಲ್ಲೆಲ್ಲ ಅತ್ಯಂತ ಚಿಕ್ಕ ಮೀನು; ಇದರ ಉದ್ದ ಕೇವಲ 23 ಸೆಂಮೀ. ಬಣ್ಣ ಕೆಂಪುಮಿಶ್ರಿತ ಬೂದು. ಮೈಮೇಲೆ ಅಲ್ಲಲ್ಲಿ ನೀಲಿವರ್ಣದ ಚುಕ್ಕೆಗಳಿವೆ. ಜ್ಯೂ ಮೀನುಗಳು ಗ್ರೌಪರುಗಳಲ್ಲೆಲ್ಲ ಅತ್ಯಂತ ದೊಡ್ಡವು. ಇವು 2.5 ಮೀ (7') ಉದ್ದವಿದ್ದು ಸುಮಾರು 225 ಕೆಜಿ ತೂಗುತ್ತವೆ. ಗ್ರೌಪರುಗಳಲ್ಲೆಲ್ಲ ಅತಿಮುಖ್ಯವಾದವು ಎಪಿನೆಫೆಲಸ್ ಮತ್ತು ಮಿಕ್ಟಿರೋಪರ್ಕ ಎಂಬ ಎರಡು ಜಾತಿಗಳಿಗೆ ಸೇರಿದ ವಿವಿಧ ಪ್ರಭೇದಗಳು. ಇವುಗಳ ಬಣ್ಣ ಮತ್ತು ಗಾತ್ರಗಳಲ್ಲಿ ಅನೇಕ ವ್ಯತ್ಯಾಸಗಳಿವೆ.



ಗ್ರೌಪರುಗಳ ವಿಶೇಷ ಲಕ್ಷಣವೆಂದರೆ ತಮ್ಮ ದೇಹದ ಬಣ್ಣವನ್ನು ಬದಲಿಸುತ್ತಿರುವುದು. ಚುಕ್ಕಿ ಜ್ಯೂ ಮೀನು ನಾಲ್ಕು ರೀತಿಯ ಬಣ್ಣಗಳನ್ನು – ದಟ್ಟ ಕಪ್ಪು, ಕಪ್ಪು ಮಚ್ಚೆಗಳಿಂದ ಕೂಡಿದ ಬೂದು, ಕಪ್ಪು ಮಚ್ಚೆಗಳಿಂದ ಕೂಡಿದ ಕೆನೆಬಣ್ಣ ಮತ್ತು ಸಂಪೂರ್ಣ ಕೆನೆಬಣ್ಣಗಳನ್ನು ಪ್ರದರ್ಶಿಸುತ್ತದೆ. ನಾಸ್ಸಾ ಗ್ರೌಪರ್ ಎಂಬುದು ತನ್ನ ಮೈಬಣ್ಣವನ್ನು ಕೆನೆಯಿಂದ ಕಪ್ಪುಬಣ್ಣಕ್ಕೆ ಕ್ಷಣಾರ್ಧದಲ್ಲಿ ಬದಲಿಸುತ್ತದೆ. ಈ ರೀತಿಯ ಬಣ್ಣ ಬದಲಾವಣೆಗೆ ಈ ಮೀನುಗಳ ಚರ್ಮದಲ್ಲಿರುವ ವರ್ಣ ದ್ರವ್ಯ ಜೀವಕೋಶಗಳು ಕಾರಣ. ಚರ್ಮದಲ್ಲಿ 4 ಅಥವಾ 5 ಬಗೆಯ ವಿಶೇಷ ಜೀವಕೋಶಗಳಿವೆ. ಇವುಗಳ ಒಂದುಗೂಡುವಿಕೆ ಹಾಗೂ ಇವುಗಳ ಸಂಕೋಚನ ಮತ್ತು ವಿಕಸನ ರೀತಿಗಳನ್ನು ಅನುಸರಿಸಿ ದೇಹದ ಬಣ್ಣ ಬದಲಾಗುತ್ತಿರುತ್ತದೆ. ವಿಶ್ರಾಂತಿ ಪಡೆಯುವಾಗ, ಜಲಸಸ್ಯಗಳ ಮಧ್ಯೆ ಅಡಗಿಕೊಂಡು ಶತ್ರುಗಳಿಂದ ತಪ್ಪಿಸಿಕೊಳ್ಳಲು ಈ ವರ್ಣ ಪರಿವರ್ತನೆ ಸಹಾಯಕ ಎಂದು ಕಾಣುತ್ತದೆ. ಗ್ರೌಪರುಗಳು ಮಾಂಸಾಹಾರಿಗಳು; ಇತರ ಬಗೆಯ ಮೀನುಗಳು ಮತ್ತು ಮುಳ್ಳು ಲಾಬ್‌ಸ್ಟರ್‌ಗಳು ಇವುಗಳ ಮೆಚ್ಚಿನ ಆಹಾರ.

ಗ್ರೌಪರ್ ಮೀನು ಮೇ– ಆಗಸ್ಟ್ ತಿಂಗಳ ಅವಧಿಯಲ್ಲಿ ಪ್ರಜನನ ಕ್ರಿಯೆಯಲ್ಲಿ ತೊಡಗುತ್ತದೆ. ಪ್ರೌಢಾವಸ್ಥೆಯನ್ನು ತಲುಪುವವರೆಗೆ ಹೆಣ್ಣಾಗಿರುವ ಈ ಮೀನು ಅನಂತರದಲ್ಲಿ ಯಾವುದೇ ಸಂದರ್ಭದಲ್ಲಿ ಗಂಡಾಗಿ ಪರಿವರ್ತನೆಗೊಳ್ಳಬಹುದು. (ಬಿ.ಕೆ.ಜಿ.)

**ಗ್ರೌಬುಂಡೆನ್ :** ಸ್ವಿಟ್ಜರ್ಲೆಂಡಿನ ಪೂರ್ವದ ಅಂಚಿನಲ್ಲಿ ಇರುವ ಅತ್ಯಂತ ದೊಡ್ಡ ಮಂಡಲ (ಕ್ಯಾಂಟನ್). ವಿಸ್ತೀರ್ಣ 7,105 ಚ.ಕಿಮೀ. ಜನಸಂಖ್ಯೆ 1,92,621 (2010). ಗ್ರೌಬುಂಡೆನ್ ಮಂಡಲದ 359 ಚ.ಕಿಮೀ ಪ್ರದೇಶ ಹಿಮನದಿಗಳಿಂದ ಕೂಡಿದೆ. ಉತ್ತರದ ಟಡಿ, ನೈರುತ್ಯದ ಮೆಡೆಲ್ಸ್ ಆಡೂಲಾ ಗುಂಪು ಮತ್ತು ರೈನ್‌ವಾಲ್ಡ್ ಹಾರ್ನ್, ಆಗ್ನೇಯದ ಬೆರ್ನಿನಾ, ಪೂರ್ವದ ಪೀಟ್ಸ್‌ಕೆಷ್ ಮತ್ತು ಈಶಾನ್ಯದ ಪೀಟ್ಸ್ ಲಿನಾರ್ಡವನ್ನೊಳಗೊಂಡ ಸಿಲ್ವರೆಟ ಗುಂಪು–ಈ ಉನ್ನತ ಪ್ರದೇಶಗಳಲ್ಲಿ ಹಿಮನದಿಗಳಿವೆ.

ಸ್ವಿಟ್ಜರ್ಲೆಂಡಿನ ರೈನ್ ಮತ್ತು ಇನ್ ನದಿಗಳಿಗೂ ಪೋ ನದಿಯ ಉಪನದಿಗಳಿಗೂ ನೀರು ಒದಗಿಸುವುದು ಈ ಪ್ರದೇಶವೇ. ಇಲ್ಲಿಯ ಕಣಿವೆಗಳು ಕಿರಿದಾಗಿವೆ; ಸಾಗುವಳಿ, ಪಶುಪಾಲನೆಗಳಿಗೆ ಉಪಯುಕ್ತವಾದ ಫಲವತ್ತಾದ ಭೂಮಿಯಿಂದ ಕೂಡಿವೆ. ಪೂರ್ವಭಾಗದಲ್ಲಿರುವ ಮೇಲಿನ ಮತ್ತು ಕೆಳಗಿನ ಇಂಗಡೈನ್ ಕಣಿವೆಗಳು ಉಳಿದವಕ್ಕಿಂತ ಅಗಲವಾಗಿವೆ. ರೈನ್ ನದಿ ಹರಿಯುವುದು ಇಲ್ಲೇ. ಕಣಿವೆ ಪ್ರದೇಶಗಳಲ್ಲಿ ಬೆಚ್ಚನೆಯ ಹಿತಕರ ಹವೆ ಇರುತ್ತದೆ.

ಗ್ರೌಬುಂಡೆನಿನ ಕಣಿವೆಗಳಲ್ಲಿ ಆಲ್ಪ್ಸ್ ಪರ್ವತ ಪ್ರದೇಶದ ಅತ್ಯಂತ ಸುಂದರವಾದ ತಾಣಗಳಿವೆ. ಕಣಿವೆ ಪ್ರದೇಶಗಳಲ್ಲಿ ಒಳ್ಳೆಯ ರಸ್ತೆಗಳನ್ನು ನಿರ್ಮಿಸಿದ್ದಾರೆ. ಖನಿಜಾಂಶವಿರುವ ನೀರಿನ ಅನೇಕ ಚಿಲುಮೆಗಳು ಇಲ್ಲಿವೆ. ಒತ್ತಾದ ಅರಣ್ಯಗಳೂ ಉಂಟು. ಪಶುಪಾಲನೆ, ಕೃಷಿಗಳ ಜೊತೆಗೆ ಪ್ರವಾಸೋದ್ಯಮವೂ ಇಲ್ಲಿಯವರ ಒಂದು ಜೀವನೋಪಾಯ.

ಈ ಮಂಡಲದ ರಾಜಧಾನಿ ಕೂರ್. ಕೂರ್, ದಾವೋಸ್, ಸೇಂಟ್ ಮರಿಟ್ಸ್ ಮತ್ತು ಆರೋಸ ಪ್ರವಾಸ ಕೇಂದ್ರಗಳು. ಕೂರ್‌ನಿಂದ ಇಟಲಿಗೆ ರೈಲು ಸಂಪರ್ಕವುಂಟು.

ಕೂರ್, ಆರೋಸ ಮತ್ತು ದಾವೋಸ್‌ಗಳಲ್ಲಿ ಜನ ಮುಖ್ಯವಾಗಿ ಜರ್ಮನ್ ಭಾಷೆ ಆಡುತ್ತಾರೆ. ದಕ್ಷಿಣ ಭಾಗಗಳಲ್ಲಿ ಇಟಾಲಿಯನ್ ಭಾಷೆಯೂ ಪ್ರಚಾರದಲ್ಲಿದೆ. ಇಂಗಡೈನ್ ಮತ್ತು ಸುತ್ತಣ ಕಣಿವೆಯ ಜನ ರೊಮಾನ್ಷ್ ಭಾಷೆ ಆಡುತ್ತಾರೆ. ಆಧುನಿಕ ಗ್ರೌಬುಂಡೆನ್ ಮಂಡಲದ ಬಹುಭಾಗ ಹಿಂದೆ ರೇಟಿಯ ಪ್ರಾಂತ್ಯವಾಗಿತ್ತು. ರೋಮನರು ಪ್ರ.ಶ.ಪೂ. 15ರಲ್ಲಿ ಈ ಭಾಗವನ್ನು ಗೆದ್ದುಕೊಂಡಿದ್ದರು. ಬಹಳ ಕಾಲ ಜರ್ಮನಿಯ ಒಂದು ಭಾಗವಾಗಿದ್ದ ಗ್ರೌಬುಂಡೆನ್ 1803 ರಲ್ಲಿ ಸ್ವಿಟ್ಜರ್ಲೆಂಡಿಗೆ ಸೇರಿತು.

ಜರ್ಮನ್ ಭಾಷೆಯಲ್ಲಿ ಗ್ರೌ ಎಂದರೆ ಬೂದುಬಣ್ಣ. 14 ನೆಯ ಶತಮಾನದ ಅಂತ್ಯ ಮತ್ತು 15ನೆಯ ಶತಮಾನದ ಆರಂಭಕಾಲದಲ್ಲಿ ಈ ಪ್ರದೇಶದ ಆಳರಸರ ವಿರುದ್ಧ ಸಂಘಟಿತರಾದ ಜನರು ಮನೆಯಲ್ಲಿ ನೇದ, ಬೂದುಬಣ್ಣದ ಮೇಲುಡುಗೆ ತೊಡುತ್ತಿದ್ದುದರಿಂದ ಈ ಪ್ರದೇಶಕ್ಕೆ ಗ್ರೌಬುಂಡೆನ್ ಎಂದು ಹೆಸರು ಬಂತೆಂದು ಹೇಳಲಾಗಿದೆ.

(ಎಸ್.ಸಿ.ಜಿ.)

**ಗ್ರೌಸ್ :** ಗ್ಯಾಲಿಫಾರ್ಮೀಸ್ ಗಣದ ಟೆಟ್ರವೋನಿಡೀ ಕುಟುಂಬಕ್ಕೆ ಸೇರಿದ ಒಂದು ಹಕ್ಕಿ. ಸುಮಾರು 10 ಜಾತಿಗಳ 18 ಪ್ರಭೇದಗಳಿಗೆ ಈ ಹೆಸರು ಅನ್ವಯವಾಗುತ್ತದೆ. ಎಲ್ಲ ಪ್ರಭೇದಗಳೂ ಪ್ರಪಂಚದ ಉತ್ತರಾರ್ಧಕ್ಕೆ ಸೀಮಿತವಾಗಿವೆ. ಕೋಳಿ, ಫೆಸೆಂಟ್, ನವಿಲು, ಟರ್ಕಿಕೋಳಿ ಮುಂತಾದ ಹಕ್ಕಿಗಳಿಗೆ ಹತ್ತಿರ ಸಂಬಂಧಿಗಳಾದ ಇವು ಹೆಚ್ಚು ಕಡಿಮೆ ಕೋಳಿಯಷ್ಟೇ ಗಾತ್ರದವಾಗಿವೆ. ಆದರೆ ಇವುಗಳ ಮೈಬಣ್ಣ ಮಾತ್ರ ಅತ್ಯಂತ ಸಾಧಾರಣ ಬಗೆಯದು. ನವಿಲು ಅಥವಾ ಫೆಸೆಂಟುಗಳ ಉಜ್ವಲ ವರ್ಣವಿನ್ಯಾಸ ಗ್ರೌಸುಗಳಲ್ಲಿ ಇಲ್ಲ. ಆದರೂ ತಾವಿರುವ ನೆಲೆಗಳಲ್ಲಿ ಶತ್ರುಗಳ ಕಣ್ಣಿಗೆ ಬೀಳದಂತೆ ಮರೆಮಾಡಿಕೊಂಡು ವಾಸಿಸಲು ಅನುಕೂಲವಾಗುವಂತೆ ಇವುಗಳ ಮೈ ಬಣ್ಣ ಇದೆ. ಕೆಲವು ಬಗೆಯ ಗ್ರೌಸುಗಳು ಋತುಮಾನಕ್ಕನುಗುಣವಾಗಿ ತಮ್ಮ ಮೈಬಣ್ಣವನ್ನು ಬದಲಿಸುತ್ತವೆ. ಉದಾಹರಣೆಗೆ ಉತ್ತರ ಧ್ರುವದಲ್ಲಿ ವಾಸಿಸುವ ವಿಲೊ ಗ್ರೌಸ್ (ವಿಲೊ ಟಾರ್ಮಿಗನ್) ಎಂಬ ಹಕ್ಕಿಗೆ ಬೇಸಗೆಯಲ್ಲಿ



ರಫ್ಡ್ ಗ್ರೌಸ್

ಕಪ್ಪು ಮತ್ತು ಕಂದುಬಣ್ಣವೂ ಚಳಿಗಾಲದಲ್ಲಿ ಅಚ್ಚ ಬಿಳಿಬಣ್ಣವೂ ಇರುತ್ತವೆ. ಇದರಿಂದ ಆಯಾಕಾಲದ ಪರಿಸರದ ಹಿನ್ನೆಲೆಗೆ ಹೊಂದಿಕೊಳ್ಳಲು ಅನುಕೂಲ. ದಷ್ಟಪುಷ್ಟವಾದ ದೇಹ, ಪುಕ್ಕಗಳಿಂದ ಸಂಪೂರ್ಣವಾಗಿ ಆವೃತವಾದ ಬಲವಾದ ಕಾಲುಗಳು (ಕೆಲವು ಸಲ ಪಾದಗಳು ಸಹ), ಮೋಟಾದ ಮತ್ತು ಕೆಳಮುಖವಾಗಿ ನಸುಬಾಗಿದ ಕೊಕ್ಕು, ಪುಕ್ಕಗಳಿಂದ ಆವೃತವಾದ ಮೂಗಿನ ಹೊಳ್ಳೆಗಳು, ಪಾದದ ಮುಂದಿನ ಬೆರಳುಗಳಿಗಿಂತ ಚಿಕ್ಕದಾದ ಹಾಗೂ ಕೊಂಚ ಮೇಲಕ್ಕೆತ್ತಿದಂತೆ ಇರುವ ಹಿಂಬೆರಳು ಮತ್ತು ನಿಮಿರಿ ನಿಲ್ಲುವಂಥ ಗರಿಗಳುಳ್ಳ ಇಲ್ಲವೆ ಗರಿಗಳೇ ಇಲ್ಲದೆ ಬೋಳು ಬೋಳಾದ ವರ್ಣರಂಜಿತ ಭಾಗವನ್ನುಳ್ಳ ಮೋಟು ಕತ್ತು – ಇವು ಗ್ರೌಸುಗಳ ಪ್ರಮುಖ ಲಕ್ಷಣಗಳು. ಕೆಲವು

ಬಗೆಗಳಲ್ಲಿ ಕಾಲ್ಬೆರಳುಗಳ ಎರಡು ಪಕ್ಕಗಳಲ್ಲೂ ಚಳಿಗಾಲದಲ್ಲಿ ಬಾಚಣಿಗೆಯ ಹಲ್ಲುಗಳಂಥ ರಚನೆಗಳು ಹುಟ್ಟಿಕೊಳ್ಳುತ್ತವೆ. ಹಿಮದಲ್ಲಿ ನಡೆಯುವಾಗ ಕಾಲಿಗೆ ಹಿಡಿತವನ್ನು ಕೊಡಲು ಈ ರಚನೆಗಳು ಸಹಕಾರಿಯಾಗಿವೆ. ಬೇಸಗೆಯಲ್ಲಿ ಈ ಹಲ್ಲುಗಳು ಬಿದ್ದುಹೋಗುತ್ತವೆ. ಗ್ರೌಸುಗಳು ಭೂವಾಸಿಗಳು. ದಟ್ಟವಾದ ಕಾಡುಗಳು ಇಲ್ಲವೆ ಕುರುಚಲು ಅಥವಾ ಹುಲ್ಲು ಬೆಳೆದ ಕಾಡುಗಳು ಇವುಗಳ ನೆಲೆ. ಇವು ಬೀಜ, ಸಣ್ಣ ಪುಟ್ಟ ಕಾಯಿ, ಗಿಡಗಳ ಚಿಗುರು ಮುಂತಾದವನ್ನು ತಿಂದು ಜೀವಿಸುತ್ತವೆ. ಚೆನ್ನಾಗಿ ಹಾರಲಾರವು. ಅಪಾಯವೊದಗಿದಾಗ ಮಾತ್ರ ಶೀಘ್ರಗತಿಯಲ್ಲಿ ಕೊಂಚದೂರ ಹಾರಿ ಪೊದೆಗಳಲ್ಲಿ ಅಡಗಿಕೊಂಡು ಬಿಡುತ್ತವೆ.

(ಕೆ.ಎಂ.ವಿ.)

ಬಹುಪಾಲು ಗ್ರೌಸುಗಳು ಬಹುಪತ್ನೀಕಗಳು. ಅಲ್ಲದೆ ಇವು ತಮ್ಮ ಪ್ರಣಯಾಚರಣೆಗೆ ಹೆಸರುವಾಸಿಯಾಗಿವೆ. ವಿಚಿತ್ರ ಬಗೆಯ ನೃತ್ಯ ವಿಲಾಸಗಳನ್ನೊಳಗೊಂಡ ಈ ಕೇಳಿಯನ್ನು ರಫ್ಡ್ ಗ್ರೌಸ್, ಬ್ಲ್ಯಾಕ್‌ಗ್ರೌಸ್, ಕೇಪರ್‌ಕೇಲಿ ಮುಂತಾದವುಗಳಲ್ಲಿ ಕಾಣಬಹುದು. ರಫ್ಡ್ ಗ್ರೌಸ್ ಹಕ್ಕಿಯ ಕತ್ತಿನಲ್ಲಿ ದೊಡ್ಡ ಗರಿಗಳ ಗುಚ್ಛವೊಂದಿದೆ. ಪ್ರಣಯಾಚರಣೆಯಲ್ಲಿ ತೊಡಗಿರುವಾಗ ಯಾವುದಾದರೂ ಒಂದು ಮರದಿಮ್ಮಿಯ ಮೇಲೆ ಓಡಾಡುತ್ತ ತನ್ನ ಕತ್ತಿನ ಗುಚ್ಛವನ್ನು ನಿಮಿರಿಸಿಕೊಂಡು, ರೆಕ್ಕೆಗಳನ್ನು ಅತ್ಯಂತ ತ್ವರಿತಗತಿಯಲ್ಲಿ ಚಲಿಸುತ್ತ ಗಾಳಿಯನ್ನು ಬಡಿಯುತ್ತದೆ. ಈ ಬಡಿತದಿಂದ ತಮಟೆ ಬಡಿದಂಥ ಶಬ್ದ ಉಂಟಾಗುತ್ತದೆ. ಕೇಪರ್‌ಕೇಲಿ ಎಂಬ ಹಕ್ಕಿ ತನ್ನದೇ ಆದ ಒಂದು ನೆಲೆಯನ್ನು ಸ್ಥಾಪಿಸಿಕೊಂಡು ಅಲ್ಲಿನ ಪೈನ್ ಮರವೊಂದನ್ನು ಆರಿಸಿಕೊಂಡು ಅದರ ರೆಂಬೆಯ ಮೇಲೆ ನಡೆದಾಡುತ್ತ ವಿಚಿತ್ರ ರೀತಿಯಲ್ಲಿ ಕೂಗುತ್ತ, ಕೆನೆಯುತ್ತ, ತನ್ನ ಬಾಲದ ಗರಿಗಳನ್ನು ಜಪಾನೀ ಬೀಸಣಿಗೆಯ ಆಕಾರದಲ್ಲಿ ಹರಡಿಕೊಂಡು ಪ್ರಣಯಕೇಳಿಯಲ್ಲಿ ತೊಡಗುತ್ತದೆ. ಬಹುಪತ್ನಿತ್ವಕ್ಕೆ ಹೆಸರಾದ ಈ ಹಕ್ಕಿ ಒಂದು ಋತುವಿನಲ್ಲಿ 3–12 ಕ್ಕೂ ಹೆಚ್ಚು ಹೆಣ್ಣುಗಳೊಂದಿಗೆ ಸಂಪರ್ಕವಿರಿಸಿಕೊಳ್ಳುತ್ತದೆ. ಇದೇ ರೀತಿ ಉತ್ತರ ಅಮೆರಿಕದ ಸೇಜ್‌ಗ್ರೌಸ್, ಪ್ರೈರಿ ಚಿಕನ್ ಮುಂತಾದವು ತಮ್ಮ ಕತ್ತಿನ ಆಚೀಚೆಯಿರುವ ಬೋಳಾದ ಭಾಗವನ್ನು ಗಾಳಿಯಿಂದ ಹಿಗ್ಗಿಸಿಕೊಂಡು ಆಗಿಂದಾಗ್ಗೆ ವಿಚಿತ್ರವಾಗಿ ಕೂಗುತ್ತ ಹೆಣ್ಣು ಹಕ್ಕಿಗಳನ್ನು ಆಕರ್ಷಿಸುತ್ತವೆ. ಕತ್ತಿನ ಬೋಳು ಚೀಲಗಳು ಕಿತ್ತಳೆ, ಹಳದಿ ಇತ್ಯಾದಿ ಬಣ್ಣಗಳಿಂದ ಕೂಡಿದ್ದು ಗಾಳಿ ತುಂಬಿ ಉಬ್ಬಿದಾಗ ವರ್ಣರಂಜಿತ ಫಲಗಳಂತೆ ಕಾಣುವುದರಿಂದ ಆಕರ್ಷಣೆ ಹೆಚ್ಚಾಗುತ್ತದೆ. ಪ್ರಣಯಕೇಳಿ ಸಂಭೋಗಕ್ರಿಯೆಯಲ್ಲಿ ಪರ್ಯವಸಾನವಾದ ಮೇಲೆ ಹೆಣ್ಣು ಹಕ್ಕಿಗಳು ಗಂಡಿನ ಅಧೀನ ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಇಲ್ಲವೆ ಬೇರೆಡೆಯಲ್ಲಿ ನೆಲದಲ್ಲಿ ಗುಂಡಿಮಾಡಿ ಕಡ್ಡಿಗಳನ್ನು ಹರಡಿ ಗೂಡನ್ನು ನಿರ್ಮಿಸಿ ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಸಂಖ್ಯೆ ಒಂದು ಸೂಲಿಗೆ 5–16. ಸುಮಾರು 23–29 ದಿವಸಗಳ ಅನಂತರ ಮೊಟ್ಟೆಗಳೊಡೆದು ಮರಿಗಳಾಗುತ್ತವೆ. ಕಾವು ಕೊಟ್ಟು ಮರಿ ಮಾಡುವುದೂ ಮರಿಗಳ ಪಾಲನೆಯೂ ಸಂಪೂರ್ಣವಾಗಿ ಹೆಣ್ಣಿನ ಕೆಲಸ.

ಪ್ರಪಂಚದಲ್ಲಿ ಕಾಣಬರುವ ಗ್ರೌಸುಗಳಲ್ಲಿ ಮುಖ್ಯ ಪ್ರಭೇದಗಳಿವು :

1. ಬೊನಾಸ ಅಂಬೆಲಸ್ (ರಫ್ಡ್ ಗ್ರೌಸ್) : ಉತ್ತರ ಅಮೆರಿಕದ ಉತ್ತರದ ಭಾಗಗಳ ಪರ್ಣಪಾತಿ ಮತ್ತು ಕುರುಚಲು ಕಾಡುಗಳಲ್ಲಿ ವಾಸಿಸುತ್ತದೆ. ಇದರ ದೇಹದ ಬಣ್ಣ ಕಂದು; ಬಿಳಿ ಮತ್ತು ಕಪ್ಪು ಮಚ್ಚೆಗಳಿಂದ ಕೂಡಿದೆ. ಕೆಲವು ಬಗೆಗಳಲ್ಲಿ ಬಾಲ ಕಂದು ಬಣ್ಣದ್ದೂ ಇನ್ನು ಕೆಲವಲ್ಲಿ ಬೂದು ಬಣ್ಣದ್ದೂ ಆಗಿದೆ. ಉಳಿದ ಗ್ರೌಸುಗಳಂತಲ್ಲದೆ ಇದು ಏಕಪತ್ನೀಕ. 2. ಟೆಟ್ರಾವೊ ಯುರೋಗ್ಯಾಲಸ್ (ಕೇಪರ್‌ಕೇಲಿ) : ಯುರೋಪ್ ಹಾಗೂ ಮಧ್ಯ ಸೈಬೀರಿಯಗಳಲ್ಲಿ ಕಾಣಬರುತ್ತದೆ. ಗಂಡು ಹಕ್ಕಿ ಕಪ್ಪುಬಣ್ಣದ್ದೂ ಹೆಣ್ಣು ಕಂದುಬಣ್ಣದ್ದೂ ಆಗಿದೆ. 3. ಲೈರೂರಸ್ ಟೆಟ್ರಿಕ್ಸ್ (ಬ್ಲ್ಯಾಕ್ ಗ್ರೌಸ್) ಇದರ ವಿವರಗಳಿಗೆ **(ನೋಡಿ – ಕರಿಹುಂಜ)**. 4. ಕ್ಯಾನಕೈಟಿಸ್ ಕೆನಡೆನ್ಸಿಸ್ (ಸ್ಪ್ರೂಸ್ ಗ್ರೌಸ್): ಅಲಾಸ್ಕದಿಂದ ಲ್ಯಾಬ್ರಡಾರ್‌ವರೆಗಿನ ಶಂಕುಪರ್ಣಿಗಳ ಕಾಡುಗಳಲ್ಲಿ ವಾಸಿಸುತ್ತದೆ. 5. ಸೆಂಟ್ರೊಸರ್ಕಸ್ ಯೂರೊಫೇಸಿಯಾನಸ್ (ಸೇಜ್ ಗ್ರೌಸ್): ಉತ್ತರ ಅಮೆರಿಕದ ಮಧ್ಯ ಹಾಗೂ ಪಶ್ಚಿಮ ಭಾಗಗಳಲ್ಲಿದೆ. 6. ಲಗೋಪಸ್ ಜಾತಿಯ ಹಲವಾರು ಪ್ರಭೇದಗಳು (ಟಾರ್ಮಿಗನ್ಸ್): ಉತ್ತರ ಧ್ರುವದಲ್ಲಿ ವಾಸಿಸುತ್ತವೆ. ಇವುಗಳಲ್ಲಿ ವಿಲೊ ಟಾರ್ಮಿಗನ್, ರಾಕ್ ಟಾರ್ಮಿಗನ್‌ಗಳು ಮುಖ್ಯವೆನಿಸಿವೆ.

(ಕೆ.ಎಸ್.ಎನ್)

**ಗ್ರಾಂಟ್, ಯುಲಿಸಿಸ್ ಸಿಂಪ್ಸನ್ :** 1822–85. ಅಮೆರಿಕ ಸಂಯುಕ್ತಸಂಸ್ಥಾನಗಳ ಒಬ್ಬ ಜನರಲ್ ಹಾಗೂ 18ನೆಯ ಅಧ್ಯಕ್ಷ. ಜನನ ಒಹಾಯೋದ ಪಾಯಿಂಟ್ ಪ್ಲೆಸೆಂಟಿನಲ್ಲಿ 1822ರ ಏಪ್ರಿಲ್ 27ರಂದು. ತಂದೆ ಜೆಸ್ಸಿ ಆರ್. ಗ್ರಾಂಟ್, ತಾಯಿ ಹ್ಯಾನ ಸಿಂಪ್ಸನ್. ಇವರ ಹಿರಿಯ ಮಗ ಗ್ರಾಂಟ್. ಚಿಕ್ಕಂದಿನಲ್ಲಿ ತಂದೆಗೆ ಹೊಲದ ಕೆಲಸದಲ್ಲಿ ನೆರವು ನೀಡುತ್ತಿದ್ದ. ಈತ 1839ರಲ್ಲಿ ವೆಸ್ಟ್ ಪಾಯಿಂಟಿನ ಮಿಲಿಟರಿ ಅಕಾಡೆಮಿ ಸೇರಿದ. ಇವನಿಗೆ ಪದವಿ ದೊರಕಿದ್ದು 1843ರಲ್ಲಿ. 1845ರಲ್ಲಿ ತನ್ನ ರೆಜಿಮೆಂಟಿನೊಂದಿಗೆ ಮೆಕ್ಸಿಕೋಗೆ ಹೋಗಿ ಅಲ್ಲಿಯ ಕದನಗಳಲ್ಲಿ ಪಾಲ್ಗೊಂಡ. 1847ರಲ್ಲಿ ಇವನಿಗೆ ಲೆಫ್ಟಿನೆಂಟ್ ಹುದ್ದೆ ದೊರಕಿತು. ಜೂಲಿಯ ಟಿ. ಡೆಂಟಳನ್ನು ಈತ ಮದುವೆಯಾದದ್ದು 1848ರಲ್ಲಿ. 1853ರಲ್ಲಿ ಇವನು ಕ್ಯಾಪ್ಟನ್ ಆದ. ಆದರೆ ಅತಿಯಾಗಿ ಕುಡಿಯುವವನೆಂಬ ಅಪಖ್ಯಾತಿಯಿಂದಾಗಿ ಮರುವರ್ಷ ತನ್ನ ಹುದ್ದೆಗೆ ಈತ ರಾಜೀನಾಮೆ ಕೊಡಬೇಕಾಯಿತು. ಮುಂದಿನ ಆರು ವರ್ಷಗಳಲ್ಲಿ ಈತ ತನ್ನ ಜಮೀನಿನ ಕೃಷಿ ಕಾರ್ಯ ನಡೆಸಿದ. 1860ರಲ್ಲಿ ಇಲಿನಾಯ್‌ನ ಗ್ಯಾಲಿನಕ್ಕೆ ಹೋಗಿ ತಂದೆಯ ಚರ್ಮದಂಗಡಿಯಲ್ಲಿ ಗುಮಾಸ್ತೆಯಾದ. ಆಗ ಇವನ ವರಮಾನ ಬಹಳ ಕಡಿಮೆಯಿತ್ತು. ಇವನ ಜೀವನ ವಿಫಲವೆಂದೇ ಭಾಸವಾಗುತ್ತಿತ್ತು.

1861ರಲ್ಲಿ ಅಮೆರಿಕದಲ್ಲಿ ಅಂತರ್ಯುದ್ಧ ಆರಂಭವಾಯಿತು. ಈತ ಬಹಳ ಶ್ರಮಪಟ್ಟು ಹುದ್ದೆ ಗಳಿಸಿಕೊಂಡ. ಈತನ ದಕ್ಷತೆ ಸಾಮರ್ಥ್ಯಗಳನ್ನು ಮನಗಂಡ ಲಿಂಕನ್ ಈತನಿಗೆ ಬ್ರಿಗೇಡಿಯರ್ ಹುದ್ದೆಗೆ ಬಡ್ತಿ ನೀಡಿದ. ಕ್ರಮಕ್ರಮವಾಗಿ ಇವನು ಉನ್ನತಿ ಹೊಂದಿದ.



ಯುದ್ಧಕೌಶಲವೂ ಕರಗತವಾಯಿತು. ಯಾವುದೇ ಪಕ್ಷದ ರಾಜಕೀಯ ಸುಳಿಯಲ್ಲಿ ಸಿಕ್ಕಿಕೊಳ್ಳದೆ ನಿಷ್ಠಾವಂತ ಸೈನಿಕನಾಗಿದ್ದುಕೊಂಡು ಗ್ರಾಂಟ್ ತೋರಿದ ಅಸಾಧಾರಣ ಧೈರ್ಯ, ಸಾಹಸ, ನಿಷ್ಠೆ ನಿರ್ಧಾರ ಇವು ಈತನ ಪ್ರತಿಷ್ಠೆಯನ್ನು ಹೆಚ್ಚಿಸಿದವು. ಲಿಂಕನ್ ಇವನನ್ನು ಮೆಚ್ಚಿಕೊಂಡಿದ್ದ. ಲಿಂಕನನ ಕೊಲೆಯಾದ ಮೇಲೆ ಅಧ್ಯಕ್ಷನಾದ ಆಂಡ್ರ್ಯೂ ಜಾನ್ಸನನೂ ಗ್ರಾಂಟನೂ ಪರಸ್ಪರ ಸೌಹಾರ್ದದಿಂದಿದ್ದರು. ಆದರೆ ಕ್ರಮೇಣ ಇವರಲ್ಲಿ ವಿರಸ ಬೆಳೆಯಿತು. ಅನೇಕ ಮಂದಿ ರಿಪಬ್ಲಿಕನರು ಗ್ರಾಂಟನನ್ನು ಅಧ್ಯಕ್ಷ ಸ್ಥಾನಕ್ಕೆ ನಿಲ್ಲಿಸಿದರು. ಚುನಾವಣೆಯಲ್ಲಿ ಗ್ರಾಂಟ್ ಜಯಗಳಿಸಿದ. 1869ರಲ್ಲಿ ಈತ ಅಮೆರಿಕ ಸಂಯುಕ್ತಸಂಸ್ಥಾನಗಳ ಅಧ್ಯಕ್ಷನಾದ. ಆರಂಭದಲ್ಲಿ ರಾಜಕೀಯವಾಗಿ ಗ್ರಾಂಟ್ ಅನೇಕ ತಪ್ಪುಗಳನ್ನು ಮಾಡಿದ. ಹಲವು ಸ್ಥಾನಗಳಿಗೆ ಸಚಿವರನ್ನು ನೇಮಿಸುವ ವಿಚಾರದಲ್ಲಿ ಇವನಿಗೂ ಪಕ್ಷದ ನಾಯಕರಿಗೂ ಘರ್ಷಣೆ ಉಂಟಾಯಿತು. ಜೇ ಗೌಲ್ಡ್ ಮತ್ತು ಜೇಮ್ಸ್ ಫಿಸ್ಕ್ ಎಂಬಿಬ್ಬರು ನ್ಯೂಯಾರ್ಕ್ ಚಿನ್ನದ ಪೇಟೆಯಲ್ಲಿ ನಡೆಸಲು ಯತ್ನಿಸಿದರೆನ್ನಲಾದ ದುರ್ವ್ಯವಹಾರಗಳಲ್ಲಿ ಗ್ರಾಂಟನೂ ಸೇರಿದ್ದನೆಂಬ ಆಪಾದನೆಗೆ ಒಳಗಾದ. ಗ್ರಾಂಟನ ಭಾವ ಮೈದುನನಿಗೂ ಇವಕ್ಕೂ ಸಂಬಂಧವಿತ್ತೆಂಬುದಂತೂ ವ್ಯಕ್ತಪಟ್ಟಿತು.

1872ರಲ್ಲಿ ಮತ್ತೆ ಅಧ್ಯಕ್ಷತೆಗೆ ಗ್ರಾಂಟ್ ಸ್ಪರ್ಧಿಸಿದ. ಡೆಮೊಕ್ರಾಟರು ಸೂಕ್ತ ವ್ಯಕ್ತಿಯನ್ನು ತಮ್ಮ ಅಭ್ಯರ್ಥಿಯಾಗಿ ಆರಿಸಲಿಲ್ಲವಾದ್ದರಿಂದ ಗ್ರಾಂಟ್ ಸುಲಭವಾಗಿ ವಿಜಯಗಳಿಸಿದ.

1873ರಲ್ಲಿ ಗ್ರಾಂಟನ ಅಧ್ಯಕ್ಷತೆಯ ಎರಡನೆಯ ಅವಧಿ ಆರಂಭವಾಯಿತು. ಆ ಕಾಲದಲ್ಲಿ ಹಲವಾರು ಭ್ರಷ್ಟಾಚಾರಗಳ ಬಗ್ಗೆ ನಾನಾ ಬಗೆಯ ವದಂತಿಗಳು ಹಬ್ಬಿದವು. ಕಾಂಗ್ರೆಸಿಗರು ಮತ್ತು ಸಚಿವರ ಲಂಚಕೋರತನಗಳು ಬಯಲಿಗೆ ಬಂದವು. ಕಾಂಗ್ರೆಸಿಗರು ತಮ್ಮ ಸಂಬಳ ಹೆಚ್ಚಿಸಿಕೊಂಡಿದ್ದನ್ನು ಸಂಬಳ ಬಡಕತನವೆಂದು ಪತ್ರಿಕೆಗಳು ಟೀಕಿಸಿದವು. ಅಧ್ಯಕ್ಷನ ಆಪ್ತಕಾರ್ಯದರ್ಶಿಯೇ ಮೋಸ ವ್ಯವಹಾರವೊಂದರಲ್ಲಿ ಸಿಕ್ಕಿಬಿದ್ದಿದ್ದ. ಚುನಾವಣೆಯ ಕಾಲದಲ್ಲಿ ನಡೆಯಿತೆನ್ನಲಾದ ಅಕ್ರಮಗಳು ಬಯಲಾದವು. ಈತನ ಅಧಿಕಾರಾವಧಿಯಲ್ಲಾದ ಒಂದು ಮುಖ್ಯ ಸಾಧನೆಯೆಂದರೆ ದಕ್ಷಿಣದ ರಾಜ್ಯಗಳ ಪುನರ್ರಚನೆ. ಅಲ್ಲಿಯ ಸರ್ಕಾರಗಳ ವರ್ಣಭೇದ ನೀತಿಯ ತೀವ್ರತೆ ಕಡಿಮೆಯಾಯಿತು. ವರ್ಣೀಯರಿಗೆ ಮತಹಕ್ಕು ನೀಡಬಾರದೆಂಬ ದೃಷ್ಟಿ ಕ್ರಮೇಣ ಕಡಿಮೆಯಾಯಿತು. ಅಂತರ್ಯುದ್ಧಕಾಲದಲ್ಲಿ ಒಕ್ಕೂಟ ಸರ್ಕಾರದ ವಿರುದ್ಧವಾಗಿದ್ದವರಿಗಾಗಿ ಡಿಸ್ಟ್ರಾಯರ್ ನೌಕೆಗಳನ್ನು ನಿರ್ಮಿಸಿಕೊಟ್ಟಿದ್ದ ಬ್ರಿಟಿಷ್ ಸರ್ಕಾರ ಅಮೆರಿಕಕ್ಕೆ ಪರಿಹಾರ ನೀಡಬೇಕೆಂಬ ಪ್ರಶ್ನೆಯನ್ನು ಪಂಚಾಯತಿ ನ್ಯಾಯಾಲಯಕ್ಕೆ ಒಪ್ಪುವ ವಾಷಿಂಗ್ಟನ್ ಕೌಲು (1871) ಆದದ್ದು ಗ್ರಾಂಟನ ಅಧ್ಯಕ್ಷತೆಯ ಕಾಲದಲ್ಲಿ.

1877ರಲ್ಲಿ ಗ್ರಾಂಟನ ಅಧ್ಯಕ್ಷಾಧಿಕಾರಾವಧಿ ಮುಗಿಯಿತು. ಗ್ರಾಂಟ್ ಲೋಕ ಪರ್ಯಟನ ಮಾಡಿದ. ಆ ಸಮಯದಲ್ಲಿ ಭಾರತ, ಚೀನ, ಜಪಾನ್‌ಗಳಿಗೂ ಭೇಟಿ ನೀಡಿದ. 1880ರಲ್ಲಿ ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಇವನ ಪಕ್ಷದ ಕೆಲವರು ಇವನನ್ನು ಮತ್ತೊಮ್ಮೆ ಅಧ್ಯಕ್ಷತೆಗೆ ನಿಲ್ಲಿಸಲು ಯತ್ನಿಸಿದರು. ಆದರೆ ಒಬ್ಬ ವ್ಯಕ್ತಿಯೇ ಮೂರನೆಯ ಬಾರಿ ಅಧ್ಯಕ್ಷನಾಗುವುದಕ್ಕೆ ವಿರೋಧವಿತ್ತಾದ್ದರಿಂದ ಇವನು ಬರಲಿಲ್ಲ. ಈತ ನ್ಯೂಯಾರ್ಕಿನಲ್ಲಿ ನೆಲೆಸಿದ. ಬ್ಯಾಂಕಿಂಗ್ ವ್ಯವಹಾರದಲ್ಲಿ ತನ್ನೆಲ್ಲ ಐಶ್ವರ್ಯವನ್ನೂ ತೊಡಗಿಸಿದ. ಈತ ಪಾಲುದಾರನಾಗಿದ್ದ ಬ್ಯಾಂಕು ಮುಳುಗಿಹೋಯಿತು. ಇವನ ಪಾಲುದಾರರು ಇವನಿಗೆ ಮೋಸ ಮಾಡಿದ್ದರು. ಗ್ರಾಂಟ್

ಕೊನೆಗಾಲದಲ್ಲಿ ಬಹಳ ಕಷ್ಟಪಡಬೇಕಾಯಿತು. ಕಾಯಿಲೆಯಿಂದ ನರಳುತ್ತಿದ್ದಾಗಲೂ ತನ್ನ ಅಭಿಮಾನವನ್ನು ಕಳೆದುಕೊಳ್ಳಲಿಲ್ಲ. ಪತ್ರಿಕೆಯೊಂದರ ಬೇಡಿಕೆಯಂತೆ ಅದರಲ್ಲಿ ಪ್ರಕಟಣೆಗಾಗಿ ತನ್ನ ಜೀವನದ ನೆನಪುಗಳನ್ನು ಕುರಿತು ಲೇಖನಗಳನ್ನು ಬರೆದ. ಇದರಿಂದ 5,00,000 ಡಾಲರುಗಳ ಸಂಪಾದನೆಯಾಯಿತು. ಸಾಯುವುದಕ್ಕೆ ನಾಲ್ಕು ದಿನಗಳ ಮುಂಚೆ ತಾನೇ ಅದು ಮುಗಿಯಿತು. 1885ರ ಜುಲೈ 23ರಂದು ಗ್ರಾಂಟ್ ನಿಧನನಾದ. (ಎಚ್.ಆರ್.ಆರ್.ಬಿ.)

**ಗ್ರ್ಯಾಂಡ್ ಐಲೆಂಡ್ :** ಅಮೆರಿಕ ಸಂಯುಕ್ತ ಸಂಸ್ಥಾನಗಳ ನಿಬ್ರಾಸ್ಕ ರಾಜ್ಯದ ಆಗ್ನೇಯ ಭಾಗದಲ್ಲಿರುವ ಒಂದು ನಗರ. ಹಾಲ್ ಕೌಂಟಿಯ ಮುಖ್ಯ ಪಟ್ಟಣ. ಅದು ಲಿಂಗ್ಕನ್ ನಗರದ ಪಶ್ಚಿಮಕ್ಕೆ 136 ಕಿಮೀ ದೂರದಲ್ಲೂ ಓಮಹಾ ನಗರದ ನೈರುತ್ಯಕ್ಕೆ 224 ಕಿಮೀ ದೂರದಲ್ಲೂ ಇದೆ. ಪ್ಲ್ಯಾಟ್ ನದಿಯಲ್ಲಿರುವ ಮಹಾದ್ವೀಪದಿಂದಾಗಿ (ಗ್ರ್ಯಾಂಡ್ ಐಲೆಂಡ್) ಈ ನಗರಕ್ಕೆ ಈ ಹೆಸರು ಬಂತು. ಇಲ್ಲಿಗೆ ಬಂದ ಮೊದಲ ಪರಿಶೋಧಕರು ಈ ದ್ವೀಪವನ್ನು ಒಂದು ಹೆಗ್ಗುರುತಾಗಿ ಪರಿಗಣಿಸಿದ್ದರು. ಸಾರಿಗೆ ಸೌಲಭ್ಯಗಳಿದ್ದ ಈ ನಗರವನ್ನು ಸ್ಥಾಪಿಸಿದವರು ಜರ್ಮನಿಯ ವಲಸೆಗಾರರು (1857). ನಗರದ ಆಧುನಿಕ ಭಾಗವನ್ನು 1866ರಲ್ಲಿ ರಚಿಸಲಾಯಿತು.

ಯೂನಿಯನ್ ಪೆಸಿಫಿಕ್ ಮತ್ತು ಬರ್ಲಿಂಗ್ಟನ್ ರೈಲುಮಾರ್ಗಗಳು ಈ ನಗರದ ಮೂಲಕ ಹಾದುಹೋಗುತ್ತವೆ. ನಿಬ್ರಾಸ್ಕ ರಾಜ್ಯದ ಹೆದ್ದಾರಿಯ ಕೇಂದ್ರವಾಗಿಯೂ ಈ ನಗರ ಅಭಿವೃದ್ಧಿ ಹೊಂದಿತ್ತು. 20ನೆಯ ಶತಮಾನದಲ್ಲಿ ಪ್ಲ್ಯಾಟ್ ನದಿಯನ್ನು ನೀರಾವರಿಗೆ ಬಳಸಿಕೊಳ್ಳಲಾರಂಭಿಸಿದ ಮೇಲೆ ಈ ನಗರ ನೀರಾವರಿಯ ಕೇಂದ್ರವಾಯಿತು. ಸಕ್ಕರೆ ಬೀಟ್ ಪರಿಷ್ಕರಣ, ಮಾಂಸದ ಡಬ್ಬೀಕರಣ, ಧಾನ್ಯಗಳ ದಾಸ್ತಾನು ಈ ನಗರದ ಮುಖ್ಯ ಉದ್ಯಮಗಳು. (ವಿ.ಜಿ.ಕೆ.)

**ಗ್ರ್ಯಾಂಡ್ ಕನೇರಿ :** ಸ್ಪೇನಿಗೆ ಸೇರಿದ ಲಾಸ್ ಪಾಲ್ಮಾಸ್ ಪ್ರಾಂತ್ಯದ ಕನೇರಿ ದ್ವೀಪಸ್ತೋಮದ ಒಂದು ದ್ವೀಪ; ಅತಿಹೆಚ್ಚು ಜನಸಾಂದ್ರತೆಯುಳ್ಳ ಎರಡನೆಯ ದ್ವೀಪ. ವಿಸ್ತೀರ್ಣ 1533 ಚ.ಕಿಮೀ. ಅಡ್ಡಳತೆ 32 ಕಿಮೀ. ಇದಕ್ಕೆ 193 ಕಿಮೀ ಗಳಷ್ಟು ಕಡಲ ತೀರ ಇದೆ. ಜನಸಂಖ್ಯೆ 8,38,397 (2010).

ಲಾಸ್ ಪೆಕೋಸ್ (1950 ಮೀ) ಇಲ್ಲಿಯ ಅತ್ಯುನ್ನತ ಶಿಖರ. ಗ್ರ್ಯಾಂಡ್ ಕನೇರಿ ದ್ವೀಪದ ಬೆಟ್ಟದ ತಪ್ಪಲುಗಳಲ್ಲಿ ಆಳವಾದ ಕಮರಿಗಳಿವೆ. ಉತ್ತರದ ಇಳಕಲು ಭೂಮಿಯಲ್ಲಿ ಆಲ್ಪ್ಸ್ ಪರ್ವತಗಳ ವಾಯುಗುಣವೂ ಸಸ್ಯಗಳೂ ಇವೆ. ದ್ವೀಪದ ದಕ್ಷಿಣ ಭಾಗ ಬೆಂಗಾಡು.

ಇಲ್ಲಿಯ ಜನರ ಮುಖ್ಯ ಕಸುಬು ವ್ಯವಸಾಯ. ಬಾಳೆ, ಟೊಮೆಟೊ, ಹೊಗೆಸೊಪ್ಪು ಮುಖ್ಯ ಬೆಳೆಗಳು. ಇಲ್ಲಿ ಕಸೂತಿ, ಬುಟ್ಟಿ ಮತ್ತು ಮಡಕೆ ತಯಾರಾಗುತ್ತವೆ. ಹಲವಾರು ಖನಿಜಯುಕ್ತ ಜಲಬುಗ್ಗೆಗಳು ಇಲ್ಲುಂಟು. ಈ ದ್ವೀಪದ ಮುಖ್ಯ ಪಟ್ಟಣವಾದ ಲಾಸ್ ಪಾಲ್ಮಾಸ್ (3,83,308) ಒಂದು ಬಂದರು. ಈಚೆಗೆ ಈ ದ್ವೀಪ ಪ್ರವಾಸಿ ತಾಣವಾಗಿದ್ದು ಈ ಕಾರಣದಿಂದ ಸಾಕಷ್ಟು ಆರ್ಥಿಕ ಆದಾಯ ಪಡೆಯುತ್ತಿದೆ. (ವಿ.ಜಿ.ಕೆ.)

**ಗ್ರ್ಯಾಂಡ್ ಕ್ಯಾನ್ಯನ್ :** ಅಮೆರಿಕ ಸಂಯುಕ್ತಸಂಸ್ಥಾನದ ಅರಿಜೋನ ರಾಜ್ಯದ ಉತ್ತರ ಭಾಗದ ಪ್ರಸ್ಥಭೂಮಿಯಲ್ಲಿ ಕಾಲರಾಡೋ ನದಿಯ ಕೊರೆತದಿಂದ ಸಂಭವಿಸಿರುವ ಆಳವಾದ ಕಮರಿ. ಪ್ರಪಂಚದ ಏಳು ಪ್ರಾಕೃತಿಕ ವಿಸ್ಮಯಗಳಲ್ಲೊಂದು. ಇದರ ಹೊರಗೋಡೆಗಳ ನಡುವೆ ಹಲವು ವರ್ಣರಂಜಿತ ಶಿಖರಗಳಿವೆ. ಕಮರಿಯೊಳಗೆ ಕಮರಿಗಳು ಕವಲುಕವಲಾಗಿ ಸಾಲು ಸಾಲಾಗಿ ಗುಂಪು ಗುಂಪಾಗಿ ವಿಚಿತ್ರ ವಿನ್ಯಾಸ ಮೆರೆದಿವೆ. ಇದರ ಅಗಲ 6.5–29 ಕಿಮೀ. ಕೆಲವು ಕಡೆ ಒಂದೂವರೆ ಕಿಮೀಗೂ ಹೆಚ್ಚು ಆಳವಾಗಿದೆ. ಅರಿಜೋನ ರಾಜ್ಯದ ಉತ್ತರ ಅಂಚಿನಿಂದ ನೆವಾಡದ ಬಳಿಯ ಗ್ರ್ಯಾಂಡ್ ವಾಷ್ ಗುಡ್ಡಗಳ ಸಾಲಿನವರೆಗೆ ಸು. 450 ಕಿಮೀ ಸಾಗಿದೆ. ಕಾಲರಾಡೋ ನದಿ ಈ ಕಮರಿಯಲ್ಲಿ 170 ಕಿಮೀ ದೂರ ಸುತ್ತಿ ಬಳಸಿ ಹರಿಯುತ್ತದೆ. ಕಮರಿಯ ಗುಡ್ಡಗಳ ಬಣ್ಣ ಮಾಸಲು ಕೆಂಪು. ಆದರೆ ಒಂದೊಂದು ಪದರಕ್ಕೂ ಪದರಗಳ ಸಮೂಹಕ್ಕೂ ವಿಶಿಷ್ಟ ಬಣ್ಣವುಂಟು. ಮಾಸಲು ಹಳದಿ, ಸಾಧಾರಣ ಹಸುರು, ಎಳೆಗೆಂಪು – ಇಂಥ ಬಣ್ಣಗಳಿಂದ ಇದರ ಗುಡ್ಡಗಳು ಮನಮೋಹಕವಾಗಿವೆ. ಗ್ರ್ಯಾಂಡ್ ಕ್ಯಾನ್ಯನ್‌ಗೆ ಸಾಟಿಯಾದ ಕಮರಿ ವಿಶ್ವದಲ್ಲಿ ಮತ್ತೊಂದಿಲ್ಲ.

ಕ್ಯಾನ್ಯನ್ ಕಮರಿಯ ಗೋಡೆಗಳು ಸಮುದ್ರ ಸುಣ್ಣಗಲ್ಲು, ನದೀಜೇಡಿ ಪದರಗಲ್ಲು, ಆದಿಭೂಯುಗದ ಮರಳುಗಲ್ಲು, ಸುಣ್ಣದ ಮಣ್ಣು ಹಾಗೂ ಮರಳುಗಳ ಮಿಶ್ರಣದಿಂದ ಯುಗಯುಗಗಳಲ್ಲಿ ರೂಪುಗೊಂಡ ಬಂಡೆಗಳು – ಇವುಗಳಿಂದ ಕೂಡಿವೆ. ಕಮರಿಯ ಒಳಭಾಗದಲ್ಲಿ ತಿರುಚಿಕೊಂಡಿರುವ ಸ್ಫಟಿಕ ಶಿಲೆಗಳು ಆರ್ಕೇಯನ್ ಪ್ರಾಕ್ ಹಾಗೂ ಕೇಂಬ್ರಿಯನ್ ಯುಗದ ಶಿಲೆಗಳು; ಬೆಣಚುಕಲ್ಲು ಮತ್ತು ಪದರಗಲ್ಲುಗಳಿಂದ ಆಗಿವೆ. ಬಂಡೆಗಳ ಮೇಲೆ ಎರಡನೆಯ ಭೂಯುಗದ ಚಪ್ಪಟೆಯ ಗುಡ್ಡಗಳು ಕುಂಕುಮ, ಎಳೆಗೆಂಪು ಹಾಗೂ ಬಿಳಿಯ ಬಣ್ಣಗಳಿಂದ ಕೂಡಿದ ಪ್ರಪಾತಗಳು ಮತ್ತು ಇಳಿಮೇಡುಗಳು ಇವೆ. ಕ್ಯಾನ್ಯನ್ ಬಯಲಿನ ಕೆಲವು ಭಾಗಗಳಲ್ಲಿ ಅಗ್ನಿಪರ್ವತಗಳಿಂದ ಹೊರಬಿದ್ದ ಕರಿಯ ಶಿಲಾಪ್ರವಾಹ ಹರಡಿದೆ. ಈ ಅಗ್ನಿಪರ್ವತಗಳು 1,000 ವರ್ಷಗಳಿಂದ ಜೀವಂತವಾಗಿವೆ. ಕಾಲೊರಾಡೋ ನದಿ ಕ್ಯಾನ್ಯನ್ ಕಮರಿಯಲ್ಲಿ ಪ್ರತಿದಿನವೂ ಸರಾಸರಿ 5,00,000 ಟನ್ನುಗಳಷ್ಟು ಮಣ್ಣು, ಮರಳು ಮತ್ತು ಕಂಕರನ್ನು ಸಾಗಿಸುತ್ತದೆ. ಕ್ಯಾನ್ಯನ್ ಕಮರಿಯ ಆಳ ರಭಸವಾಗಿ ಹರಿಯುವ ನದಿಯ ಕೊರೆತದಿಂದಾದ್ದು. ಪ್ರವಾಹ, ಗಾಳಿ, ಉಷ್ಣತೆ, ರಾಸಾಯನಿಕ ಕ್ರಿಯೆ – ಇವೆಲ್ಲವುಗಳಿಂದ ಮೆತುಬಂಡೆಗಳು ಕರಗಿ ನದಿಯ ಅಗಲ ವಿಸ್ತರಿಸಿದೆ. ಕ್ಯಾನ್ಯನ್ ಕಮರಿಯ ಸೃಷ್ಟಿಗೆ ನದಿಯ ಹಿಂಪ್ರವಾಹ ಕಾರಣ. ನದಿಯ ಹರಿವಿಗೆ ಅಡಚಣೆಯಾಗಿ ಭೂಮಿ ಏಳಲಾರಂಭಿಸಿದಾಗ ನದಿ ಅದರ ಮೇಲೆ ಹರಿದು ಕಮರಿಯನ್ನು ಕೊರೆಯಿತು. ದಕ್ಷಿಣದ ಕಡೆಯ ಇಳಕಲು ಭೂಮಿಗೆ ಅಡ್ಡಲಾಗಿರುವ ಕಮರಿಯ ಪೂರ್ವ ಪಶ್ಚಿಮ ಭಾಗಗಳು ಈ ಪ್ರಕ್ರಿಯೆಗೆ ನಿದರ್ಶನವಾಗಿವೆ.

ಕಲ್ನಾರು, ತಾಮ್ರ, ಸೀಸ ಮತ್ತು ಯುರೇನಿಯಂ ಇಲ್ಲಿ ಸಿಗುವ ಖನಿಜಗಳು. ಇಲ್ಲಿ ಹಳೆಯ ಯುಗದ ಬಂಡೆಗಳೂ ಸಸ್ಯ ಮತ್ತು ಪ್ರಾಣಿಗಳ ಪಳೆಯುಳಿಕೆಗಳೂ ಹೇರಳವಾಗಿವೆ. ಕಮರಿಯ ಕೆಳಗಿನ ಸ್ತರಗಳಲ್ಲಿಯ ಪ್ರಾಚೀನಸಮುದ್ರ ಚಿಪ್ಪುಗಳು; ಟ್ರೈಲೋಬೈಟ್, ಸಮುದ್ರ ಸಂಧಿಪದಿಗಳು, ಒಂಟೆ, ಆನೆ, ಕುದುರೆ, ಡೈನೊಸಾರ್ (ಮೂಳೆ ಮತ್ತು ಹೆಜ್ಜೆ ಗುರುತು); ನೆಲದ ಸ್ಲಾತ್ ಮುಂತಾದ ವಿವಿಧ ಜೀವಿಗಳ ಪಳೆಯುಳಿಕೆಗಳು ಇಲ್ಲಿವೆ. ಇವುಗಳಿಂದ ಇಲ್ಲಿ ಹಿಂದೆ ಇದ್ದ ಜೀವಿಗಳ ಪರಿಚಯ ದೊರಕುತ್ತದೆ.

ಗ್ರ್ಯಾಂಡ್ ಕ್ಯಾನ್ಯನ್ ಕಮರಿಯನ್ನು 1554ರಲ್ಲಿ ಕೊರೊನಾಡೋ ಪರಿಶೋಧನ ತಂಡ ಕಂಡುಹಿಡಿಯಿತು. ಫ್ರಾನ್ಸಿಸ್ಕೊ ಗಾರ್ಸಿಸ್, ಸಿಲ್ವೆಸ್ಟ್ರೆ ವೆಲೇಜ್‌ದ ಎಸ್ಕಲಾಂಟೆ ಎಂಬ ಇಬ್ಬರು ಸ್ಪ್ಯಾನಿಷ್ ಪಾದ್ರಿಗಳು ಇದರ ಇರವನ್ನು ಮತ್ತೆ ಕಂಡರು (1776). ಈ ಪ್ರದೇಶದ ಭೌಗೋಳಿಕ, ಭೂವೈಜ್ಞಾನಿಕ ಹಾಗೂ ಮಾನವಶಾಸ್ತ್ರೀಯ ಸಂಶೋಧನೆಗಳು 1869 ಮತ್ತು 1870 ರಲ್ಲಿ ನಡೆದಿವೆ.

**ಸಸ್ಯಪ್ರಾಣಿ ಜೀವನ :** ಭೂಗುಣ, ವಾಯುಗುಣ, ಭೂಮಿಯ ಮಟ್ಟ ಇವಕ್ಕೆ ಅನುಗುಣವಾಗಿ ಕ್ಯಾನ್ಯನ್ ಪ್ರದೇಶವನ್ನು ಐದು ಜೀವವಲಯಗಳನ್ನಾಗಿ ವಿಭಜಿಸಿದೆ. ಆದರೆ ಇಲ್ಲಿ ಉಷ್ಣವಲಯದ ಸಸ್ಯಗಳಿಲ್ಲ. ಕಮರಿಯ ಮಧ್ಯಭಾಗ ಸಸ್ಯರಹಿತವಾಗಿ ಮರುಭೂಮಿಯ ಲಕ್ಷಣ ಹೊಂದಿದೆ. ಪ್ರಸ್ಥಭೂಮಿಯ ಭಾಗಗಳಲ್ಲಿ ಪೈನ್, ಫರ್ ಮತ್ತು ಆಸ್ಪಿನ್ ಮರಗಳು ಬೆಳೆಯುತ್ತವೆ. ನೂರು ಬಗೆಯ ಪಕ್ಷಿಗಳೂ 60 ಬಗೆಯ ಸಸ್ತನಿ ಪ್ರಾಣಿಗಳೂ 25 ಬಗೆಯ ಸರ್ಪಗಳೂ ಇಲ್ಲಿವೆ. ಪ್ರಾಕೃತಿಕ ತಡೆಗಳಿಂದಾಗಿ ಕಮರಿಯ ವಿವಿಧ ಅಂಚುಗಳಲ್ಲಿಯ ಪ್ರಾಣಿಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಕಮರಿಯ ಕೆಲವು ಭಾಗಗಳಲ್ಲಿ ಪ್ರಾಗೈತಿಹಾಸಿಕ ಜನಜೀವನದ ಕುರುಹುಗಳುಂಟು.

1919 ರಲ್ಲಿ 12,17,262 ಎಕರೆ ವಿಸ್ತೀರ್ಣದ ಗ್ರ್ಯಾಂಡ್‌ಕ್ಯಾನ್ಯನ್ ನ್ಯಾಷನಲ್ ಪಾರ್ಕ್ ಪ್ರವಾಸ ಕ್ಷೇತ್ರ ಸ್ಥಾಪಿತವಾಯಿತು. ಇದನ್ನು 1979ರಲ್ಲಿ ವಿಶ್ವ ಪರಂಪರೆಯ ತಾಣವೆಂದು ಘೋಷಿಸಲಾಯಿತು. ಕ್ಯಾನ್ಯನಿನ ಉತ್ತರದ ಮತ್ತು ದಕ್ಷಿಣದ ಅಂಚುಗಳ ನಡುವೆ ಸಂಬಂಧ ಕಲ್ಪಿಸಲು 350 ಕಿಮೀ ರಸ್ತೆಯನ್ನೂ 34 ಕಿಮೀ ರೈಲು ಮಾರ್ಗವನ್ನೂ ಹಾಕಿದ್ದಾರೆ. ರಮ್ಯವಾದ ಈ ಭಾಗದ ಕಮರಿಯ ಎರಡು ಅಂಚುಗಳಲ್ಲೂ ಪ್ರವಾಸಿಗಳಿಗಾಗಿ ವಸತಿಗಳಿವೆ. ಪ್ರಪಾತದೊಳಗೆ ಹೇಸರಗತ್ತೆಯ ಸವಾರಿ ಮಾಡುವುದೂ ಹೆಲಿಕಾಪ್ಟರ್‌ನಲ್ಲಿ ಸುತ್ತಿಬರುವುದೂ ನದಿಯ ಮೇಲೆ ಮೋಟಾರ್ ದೋಣಿ ಅಥವಾ ಗಾಳಿ ತುಂಬಿದ ತೆಪ್ಪದ ಮೇಲೆ ಪ್ರಯಾಣ ಮಾಡುವುದೂ ಚಾರಣ ಮಾಡುವುದೂ ರೋಮಾಂಚಕಾರಿ ಅನುಭವಗಳು. ಕಮರಿಯ ದಕ್ಷಿಣದ ಅಂಚು ಇಡೀ ವರ್ಷ ಪ್ರವಾಸಿಗಳಿಗೆ ತೆರೆದಿರುತ್ತದೆ. ಉತ್ತರದ ಅಂಚಿನ ಪ್ರವಾಸಿಮಂದಿರಗಳನ್ನು ಚಳಿಗಾಲದಲ್ಲಿ ಮುಚ್ಚಿರುತ್ತಾರೆ. ಕ್ಯಾನ್ಯನ್ ಭಾಗಕ್ಕೆ ಪ್ರಯಾಣ ಮಾಡಲು ರೈಲು ಮತ್ತು ರಸ್ತೆ ಸೌಲಭ್ಯಗಳುಂಟು. (ವಿ.ಜಿ.ಕೆ.)

**ಗ್ರ್ಯಾಂಡ್ ಡ್ಯೂಕ್ :** ಯುರೋಪಿನಲ್ಲಿ ರಾಜರಿಗೂ ಡ್ಯೂಕರಿಗೂ ನಡುವೆ ಇದ್ದ ಒಂದು ಪದವಿ. ರಷ್ಯದಲ್ಲಿ ರಾಜಮನೆತನದ ಕೆಲವರಿಗೆ ಈ ಪದವಿ ಇತ್ತು. ಪಶ್ಚಿಮ ಯುರೋಪಿನಲ್ಲಿ ಮೊದಲನೆಯ ಗ್ರ್ಯಾಂಡ್ ಡ್ಯೂಕ್ ಪದವಿ ದತ್ತವಾದ್ದು 1567ರಲ್ಲಿ. ಟಸ್ಕನಿಯ ಕಾಸಿಮೊ ಡಿ ಮೆಡಿಚಿ ಐದನೆಯ ಪಯಸ್ ಪೋಪ್ ಈ ಪದವಿ ದಯಪಾಲಿಸಿದ. ಅವನ ಮಗನಾದ ಫ್ರಾನ್ಸಿಸ್ಕೋನನ್ನು ಗ್ರ್ಯಾಂಡ್ ಎಂದು ಹೋಲಿ ರೋಮನ್ ಸಾಮ್ರಾಟ 2ನೆಯ ಮಾಕ್ಸಿಮಿಲಿಯನ್ 1576ರಲ್ಲಿ ಮಾನ್ಯ ಮಾಡಿದ. ಈ ಬಿರುದು 18ನೆಯ ಶತಮಾನದಲ್ಲಿ ಟಸ್ಕನಿಯಿಂದ ಹಾಬ್ಸ್‌ಬರ್ಗ್ ಲೊರೈನ್ ಮನೆತನಕ್ಕೆ ಬಂತು.

ನೆಪೋಲಿಯಾನಿಕ್ ಯುದ್ಧಗಳ ಕಾಲದಲ್ಲಿ ಜರ್ಮನಿ ಹಾಗೂ ಪೂರ್ವ ಯುರೋಪ್ ರಾಷ್ಟ್ರಗಳ ಪುನರ್ವ್ಯವಸ್ಥೆಯ ವೇಳೆಯಲ್ಲಿ ಅನೇಕ ಗ್ರ್ಯಾಂಡ್ ಡ್ಯೂಕ್ ಪದವಿಗಳು ಹುಟ್ಟಿಕೊಂಡವು. ಈ ವ್ಯವಸ್ಥೆಯಂತೆ ಜೊಕಿಮ್ ಮುರಾತ್‌ಗೆ ಬೆರ್ಗ್, ಚಾರ್ಲ್ಸ್ ಫ್ರೆಡ್ರಿಕ್‌ಗೆ

ಬೇಡನ್, ಒಂದನೆಯ ಲೂಯಿಗೆ ಹೆಸ್ಸೆ ಮತ್ತು ಮೂರನೆಯ ಫರ್ಡಿನೆಂಡನಿಗೆ ವರ್ಜ್‌ಬರ್ಗ್ ಗ್ರ್ಯಾಂಡ್ ಡಚಿಗಳು 1806ರಲ್ಲಿ ಕೊಡಲ್ಪಟ್ಟವು. ಅಲ್ಲದೆ 1808ರಲ್ಲಿ ವಾರ್ಸಾ ಡಚಿಯನ್ನು ಸ್ಯಾಕ್ಸನಿ ರಾಜ ಫ್ರೆಡ್ರಿಕ್ ಆಗಸ್ಟಸನಿಗೂ 1810ರಲ್ಲಿ ಫ್ರಾಂಕ್‌ಫರ್ಟನ್ನು ಕಾರ್ಲ್ ತಿಯೊಡೋರ್ ಫಾನ್ ಡಾಲ್ಬರ್ಗನಿಗೂ ಅನುಗ್ರಹಿಸಲಾಯಿತು. 1815ರಲ್ಲಿ ನಡೆದ ವಿಯೆನ್ನ ಕಾಂಗ್ರೆಸಿನ ಫಲವಾಗಿ ಡಚಿಗಳ ಪುನರ್ವ್ಯವಸ್ಥೆಯಾಯಿತು.

ರಷ್ಯದ ವೆಲಿಕಿ ಕ್ನ್ಯಾಜ್ ಅಥವಾ ಗ್ರ್ಯಾಂಡ್ ಪ್ರಿನ್ಸ್ ಎಂಬ ಪದವಿಗೆ ಗ್ರ್ಯಾಂಡ್ ಡ್ಯೂಕ್ ಎಂಬ ಪದವನ್ನು ಪರ್ಯಾಯವಾಗಿ ಬಳಸಲಾಗಿದೆ. ರಾಜನನ್ನು ವೆಲಿಕಿ ಕ್ನ್ಯಾಜ್ ಎಂದು ಕರೆಯಲಾಗುತ್ತಿತ್ತು. ಕೀಯೆಫ್ ರಾಜಕುಮಾರನಿಗೆ ಈ ಬಿರುದು ಇತ್ತು. 12ನೆಯ ಶತಮಾನದ ಉತ್ತರಾರ್ಧದಲ್ಲಿ ವ್ಲಾಡಿಮಿರ್ ರಾಜರು, 14–15ನೆಯ ಶತಮಾನಗಳಲ್ಲಿ ಮಸ್ಕೊವಿ, ಟ್ವೆರ್, ರ್‍ಯಾಜ್ಹಾನ್, ನಿಝ್ನಿ ನೊವ್‌ಗೊರಾಡ್ ಮತ್ತು ಸ್ಮೊಲೆನ್ಸ್ಕ ರಾಜರು ಈ ಬಿರುದನ್ನು ಧರಿಸುತ್ತಿದ್ದರು. ಕಾಲಕ್ರಮದಲ್ಲಿ ಈ ಬಿರುದು ಮಸ್ಕೊವಿ ರಾಜರ ಏಕಸ್ವಾಮ್ಯವಾಯಿತು. 1547ರಿಂದ ಅವರನ್ನು ಜಾರ್ ಎಂದು ಕರೆಯಲಾಯಿತು. ಪೀಟರ್ ಮಹಾಶಯ ಇಂಪಿರೇಟರ್ (ಸಾಮ್ರಾಟ) ಬಿರುದನ್ನು ಧರಿಸಿದ ಮೇಲೆ ರೋಮನೊವ್ ಸಂತತಿಯವರಿಗೆ 1886ರ ವರೆಗೆ ವೆಲಿಕಿ ಕ್ನ್ಯಾಜ್ ಬಿರುದು ಸಲ್ಲುತ್ತಿತ್ತು. ಅನಂತರ ಇದು ಸಾಮ್ರಾಟನ ಗಂಡುಮಕ್ಕಳು, ಹೆಣ್ಣುಮಕ್ಕಳು, ಸೋದರರು, ಸೋದರಿಯರು ಮತ್ತು ಮೊಮ್ಮಕ್ಕಳಿಗೆ ಮೀಸಲಾಯಿತು. ಗ್ರ್ಯಾಂಡ್ ಡ್ಯೂಕ್ ಬಿರುದು ಇಂಗ್ಲೆಂಡಿನಲ್ಲೂ ಬಳಕೆಯಲ್ಲಿತ್ತು.

(ಎಚ್.ವಿ.ಎಸ್.ಎಂ.)

**ಗ್ರ್ಯಾಂಡ್ ಬ್ಯಾಂಕ್ಸ್ :** ಅಟ್ಲಾಂಟಿಕ್ ಸಾಗರದ ಆಗ್ನೇಯ ಭಾಗದಲ್ಲಿರುವ ಉತ್ತರ ಅಮೆರಿಕ ಖಂಡಾಂತರ ಮುಳುಗುದಡದ (ನಾರ್ತ್ ಅಮೆರಿಕನ್ ಕಾಂಟಿನೆಂಟಲ್ ಶೆಲ್ಫ್) ಒಂದು ಭಾಗ. ನ್ಯೂಫೌಂಡ್‌ಲೆಂಡಿನ ಆಗ್ನೇಯದಲ್ಲಿ ಸು. 560 ಕಿಮೀ ದೂರ ಹರಡಿದೆ. ಇದೊಂದು ಅಂತಾರಾಷ್ಟ್ರೀಯ ಮೀನುಗಾರಿಕೆ ಕೇಂದ್ರ. ಗ್ರ್ಯಾಂಡ್ ಬ್ಯಾಂಕ್ಸ್‌ನಲ್ಲಿ ಹಲವು ಮುಳುಗುದಡಗಳಿವೆ. ಇವುಗಳಲ್ಲಿ ಮುಖ್ಯವಾದವು ಗ್ರ್ಯಾಂಡ್ ಬ್ಯಾಂಕ್, ಸೇಂಟ್ ಬ್ಯಾಂಕ್ ಮತ್ತು ಗ್ರೀನ್ ಬ್ಯಾಂಕ್. ಈ ದಡಗಳು 24–100 ಮೀ ಆಳದಲ್ಲಿವೆ. ಅನೇಕ ಕಡೆಗಳಲ್ಲಿ 100 ಫ್ಯಾದಮುಗಳಿಗಿಂತಲೂ ಹೆಚ್ಚು ಆಳವಾಗಿದೆ. ಇದರ ಸಮೀಪದಲ್ಲೆ ಲ್ಯಾಬ್ರಡಾರ್ ಶೀತೋದಕ ಪ್ರವಾಹವೂ ಗಲ್ಫ್ ಉಷ್ಣೋದಕ ಪ್ರವಾಹವೂ ಕೂಡುತ್ತವೆ. ಈ ಪರಸ್ಪರ ವಿರುದ್ಧ ಪ್ರವಾಹಗಳ ಕೂಡುವಿಕೆಯಿಂದಾಗಿ ಆಗಿಂದಾಗ್ಗೆ ದಟ್ಟವಾದ ಮಂಜು ಕವಿಯುತ್ತದೆ. ಹೀಗೆ ಶೈತ್ಯ ಉಷ್ಣ ಉದಕಗಳ ಸಮ್ಮಿಶ್ರಣದಲ್ಲಿ ಸೃಷ್ಟಿಯಾಗುವ ಜೀವರಾಶಿ ಮೀನುಗಳಿಗೆ ಒಳ್ಳೆಯ ಆಹಾರ. ಗ್ರ್ಯಾಂಡ್ ಬ್ಯಾಂಕಿನ ಮತ್ಸ್ಯಸಂಪತ್ತನ್ನು ಜಾನ್ ಕ್ಯಾಬಟ್ ನಾಲ್ಕು ಶತಮಾನಗಳ ಹಿಂದೆ ಕಂಡ (1497). ಇಲ್ಲಿ ಕಾಡ್, ಹ್ಯಾಡಕ್, ಗುಲಾಬಿ ಮೀನು, ಪೊಲಾಕ್, ಚಪ್ಪೆಮೀನು, ಹೆರಿಂಗ್, ಕಡಲಮೀನು ಹೇರಳವಾಗಿವೆ. ಇಲ್ಲಿ ಕೆನಡ, ಅಮೆರಿಕ, ಇಂಗ್ಲೆಂಡ್, ಪೋರ್ಚುಗಲ್, ಸ್ಪೇನ್ ಮತ್ತು ಫ್ರಾನ್ಸಿನಿಂದ ಮೀನು ಹಿಡಿಯಲು ಬಲೆದೋಣಿಗಳು ಬರುತ್ತವೆ. ಮೀನುಗಳ ನಿಬಿಡತೆಯನ್ನು ಅಧ್ಯಯನಮಾಡುವ, ಅವುಗಳ ಸಂಖ್ಯೆ ಕ್ಷೀಣಿಸದಂತೆ ರಕ್ಷಿಸುವ ಉದ್ದೇಶದಿಂದ ಅಂತರರಾಷ್ಟ್ರೀಯ ಆಯೋಗವೊಂದು 1949ರಲ್ಲಿ ಸ್ಥಾಪಿತವಾಯಿತು. ಮೀನುಗಾರಿಕೆಗೆ ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದಾಗಿಯೂ ಅಗಾಧ ಪ್ರಮಾಣದಲ್ಲಿ ಮೀನುಗಾರಿಕೆ ನಡೆಸುತ್ತಿರುವುದರಿಂದಲೂ 1990 ರಿಂದೀಚೆಗೆ ಇಲ್ಲಿನ ಮತ್ಸ್ಯ ಸಂಪತ್ತು ಗಣನೀಯವಾಗಿ ಕ್ಷೀಣಿಸಿದೆ. ಮತ್ಸ್ಯೋದ್ಯಮವನ್ನು ಅವಲಂಬಿಸಿರುವ ಲ್ಯಾಬ್ರಡಾರ್ ಹಾಗೂ ನ್ಯೂಫೌಂಡ್‌ಲೆಂಡ್‌ಗಳು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿವೆ.

ಗ್ರ್ಯಾಂಡ್ ಬ್ಯಾಂಕ್ಸ್‌ನಲ್ಲಿ ಇತ್ತೀಚೆಗೆ ಪೆಟ್ರೋಲಿಯಂ ಸಂಪನ್ಮೂಲಗಳು ಶೋಧಿಸಲ್ಪಟ್ಟಿವೆ.

ಗ್ರ್ಯಾಂಡ್ ಬ್ಯಾಂಕ್ಸ್ ಸಮೀಪದಲ್ಲಿ ಸಾಗರದಲ್ಲಿ ಸ್ಥಾಪಿಸಿದ್ದ ಓಷನ್ ರೇಂಜರ್ ಎಂಬ ಡ್ರಿಲ್ಲಿಂಗ್ ಘಟಕವೊಂದು 1982ರ ಫೆಬ್ರವರಿ 15ರಂದು ಸಮುದ್ರ ಮಾರುತದ ಪ್ರಕೋಪಕ್ಕೆ ಸಿಕ್ಕು ಮುಳುಗಿ ಹೋಯಿತು. 84 ಜನ ಜಲಮರಣವಪ್ಪಿದ ಈ ಅಪಘಾತ ಪ್ರಪಂಚದ ದುರ್ಘಟನೆಗಳಲ್ಲೊಂದೆನಿಸಿದೆ.

(ಎಸ್.ಎನ್.ಎಲ್.ಎ.)

**ಗ್ರ್ಯಾಂಡ್ ರ್‍ಯಾಪಿಡ್ಸ್ :** ಅಮೆರಿಕ ಸಂಯುಕ್ತಸಂಸ್ಥಾನಗಳ ಮಿಷಿಗನ್ ರಾಜ್ಯದ ಒಂದು ನಗರ. ಜನಸಂಖ್ಯೆಯ ದೃಷ್ಟಿಯಿಂದ ಈ ರಾಜ್ಯದ ಎರಡನೆಯ ದೊಡ್ಡ ನಗರ. ಗ್ರ್ಯಾಂಡ್ ನದಿಯ ದಡದಲ್ಲಿದೆ. ಜನಸಂಖ್ಯೆ 7,74,361 (2010). 1838ರಲ್ಲಿ ಇದು ಒಂದು ಹಳ್ಳಿಯಾಗಿತ್ತು. 1850ರ ವೇಳೆಗೆ ನಗರವಾಗಿ ಬೆಳೆದಿತ್ತು. 1824ಕ್ಕಿಂತಲೂ ಮೊದಲೇ ಇಲ್ಲಿ ಅನೇಕ ಇಂಡಿಯನ್ ವಸತಿಗಳೂ ವ್ಯಾಪಾರ ಕೇಂದ್ರಗಳೂ ಇದ್ದವು. ಇಲ್ಲಿ ಪೀಠೋಪಕರಣ, ರೈಲ್ವೆ ಉಪಕರಣ ತಯಾರಿಸುವ ಬೃಹತ್ ಉದ್ಯಮಗಳಿವೆ. ಎರಕದ ಸರಕುಗಳು, ರೆಫ್ರಿಜರೇಟರ್ ಯಂತ್ರಗಳ ಬಿಡಿ ಭಾಗಗಳು, ರೇಡಿಯೊ ಫೋನೋಗ್ರಾಫ್, ಸೀಸದ ಸಾಮಾನು, ರಾಸಾಯನಿಕ ವಸ್ತು, ಗೊಬ್ಬರ, ಬಣ್ಣ, ಕಾಗದ ಮೊದಲಾದವನ್ನು ತಯಾರಿಸುವ ಕೈಗಾರಿಕೆಗಳು ಈ ನಗರದಲ್ಲಿವೆ. ಈ ಸುತ್ತಿನಲ್ಲಿ ಹಣ್ಣುಗಳನ್ನು ಹೇರಳವಾಗಿ ಬೆಳೆಯುತ್ತಾರೆ. ಜಲ್ಲಿಕಲ್ಲು ಧಾರಾಳವಾಗಿ ದೊರಕುತ್ತದೆ. ಈ ನಗರದಲ್ಲಿ ಕಲಾವಸ್ತು ಸಂಗ್ರಹಾಲಯ ಮತ್ತು ಪೀಠೋಪಕರಣ ವಸ್ತುಸಂಗ್ರಹಾಲಯಗಳೂ ರಂಗಮಂದಿರಗಳೂ ಇವೆ. ಕಾಲ್‌ವಿನ್ ಕಾಲೇಜೂ ಮಿಷಿಗನ್ ವಿಶ್ವವಿದ್ಯಾಲಯದ ಮತ್ತು ಮಿಷಿಗನ್ ಸ್ಟೇಟ್ ವಿಶ್ವವಿದ್ಯಾಲಯದ ವಿಸ್ತರಣ ಕೇಂದ್ರಗಳೂ ತೋಟಗಾರಿಕೆ ಪ್ರಯೋಗಾಲಯ ಕೇಂದ್ರವೂ ಇಲ್ಲಿವೆ.

ಅಮೆರಿಕದ ಮಿನ್ನೆಸೋಟದಲ್ಲಿ ಇದೇ ಹೆಸರಿನ ಒಂದು ಹಳ್ಳಿ ಇದೆ.

(ಎಸ್.ಎನ್.ಎಲ್.)

**ಗ್ರ್ಯಾಂಪಸ್ :** ಸಿಟೇಸಿಯ ಗಣದ ಡೆಲ್ಫಿನಿಡೀ ಕುಟುಂಬಕ್ಕೆ ಸೇರಿದ ಒಂದು ಜಲಚರ ಸ್ತನಿ. ಡಾಲ್ಫಿನಿನ ಹತ್ತಿರ ಸಂಬಂಧಿ. ಇದಕ್ಕೆ ರಿಸ್ಸೋನ ಡಾಲ್ಫಿನ್ ಎಂಬ ಹೆಸರೂ ಇದೆ. ಗ್ರ್ಯಾಂಪಸ್ ಗ್ರಿಸಿಯಸ್ ಇದರ ವೈಜ್ಞಾನಿಕ ಹೆಸರು. ಅಮೆರಿಕದ ಸಂಯುಕ್ತಸಂಸ್ಥಾನದ ಪೂರ್ವ ಹಾಗೂ ಪಶ್ಚಿಮ ತೀರ ಪ್ರದೇಶಗಳು, ಉತ್ತರ ಅಟ್ಲಾಂಟಿಕ್, ಮೆಡಿಟರೇನಿಯನ್, ಕೆಂಪು ಸಮುದ್ರ ಹಾಗೂ ಜಪಾನ್, ಚೀನ, ಆಸ್ಟ್ರೇಲಿಯಗಳ ಕರಾವಳಿಯಲ್ಲಿ ಇದು ವಾಸಿಸುತ್ತದೆ.



ಗ್ರ್ಯಾಂಪಸಿನ ಉದ್ದ ಸುಮಾರು 4 ಮೀ (13 ಅಡಿ). ಇದರ ದೇಹ ಜಲವಾಸಕ್ಕೆ ಅನುಕೂಲವಾಗುವಂತೆ ಕದಿರಿನಾಕಾರದ್ದಾಗಿದ್ದು ಬಲಿಷ್ಠವಾಗಿದೆ. ಬೆನ್ನುಭಾಗ ಹೊಳಪುಳ್ಳ ಕಪ್ಪುಬಣ್ಣದ್ದಾಗಿಯೂ ಉದರ ಭಾಗ ಬಿಳಿಬಣ್ಣದ್ದಾಗಿಯೂ ಇವೆ. ಬೆನ್ನಿನ ಮೇಲೆ ಒಂದೇ ಒಂದು ಈಜುರೆಕ್ಕೆ ಮತ್ತು ಭುಜದ ಬಳಿ ಆಚೀಚೆ ಎರಡು ಬಲವಾದ ಈಜುರೆಕ್ಕೆಗಳಿವೆ, ತಲೆ ಗುಂಡಗಿದೆ. ಇದರ ಹತ್ತಿರ ಸಂಬಂಧಿಯಾದ ಡಾಲ್ಫಿನಿನಲ್ಲಿ ಮೂತಿ ಚೂಪಾದ ಕೊಕ್ಕಿನಂತಿದೆಯಾದರೆ ಗ್ರ್ಯಾಂಪಸಿನಲ್ಲಿ ಮುಂಚಾಚಿದ ಮೂತಿಯಿಲ್ಲ. ದೇಹದ ಹಿಂತುದಿಯಲ್ಲಿ ಡಾಲ್ಫಿನುಗಳಲ್ಲಿರುವಂತೆ ಇಬ್ಭಾಗವಾದ ಬಾಲ ಇದೆ. ಕಣ್ಣುಗಳು ಬಲು ಚಿಕ್ಕವು. ಕೆಳದವಡೆಯಲ್ಲಿ ಮಾತ್ರ 3–7 ಜೊತೆ ಹಲ್ಲುಗಳಿವೆ. ಮೇಲ್ದವಡೆಯಲ್ಲಿ ಅಪರೂಪಕ್ಕೆ ಒಂದೆರಡು ಅವಶೇಷೀ ಹಲ್ಲುಗಳಿರುವುದುಂಟು. ಈ ಲಕ್ಷಣದಲ್ಲಿ ಗ್ರ್ಯಾಂಪಸ್ ಡಾಲ್ಫಿನುಗಳಿಂದ ಭಿನ್ನವೆನಿಸಿದೆ.

ಮೀನು ಮತ್ತು ಶಿರಪಾದಿಗಳು ಗ್ರ್ಯಾಂಪಸಿನ ಮುಖ್ಯ ಆಹಾರ. ಕೆಲವೊಮ್ಮೆ ಸಣ್ಣಗಾತ್ರದ ಡಾಲ್ಫಿನುಗಳನ್ನು, ಪಾರ್ಪಾಯಿಸ್ ಮತ್ತು ಸೀಲ್ ಪ್ರಾಣಿಗಳನ್ನು ಇದು ತಿನ್ನುವುದುಂಟು. ಎರೆಗಳನ್ನು ಹಿಡಿಯುವಾಗ ಬಲು ಉಗ್ರವಾಗಿ ವರ್ತಿಸುವುದರಿಂದ ಗ್ರ್ಯಾಂಪಸಿಗೆ ಕೊಲೆಗಡುಕ ಎಂಬ ಹೆಸರಿದೆ. ಬಲು ಹೊಟ್ಟೆಬಾಕ ಪ್ರಾಣಿಯಿದು. ಇದು 5–10 ಪ್ರಾಣಿಗಳನ್ನೊಳಗೊಂಡ ಗುಂಪುಗಳಲ್ಲಿ ವಾಸಿಸುತ್ತದೆ.

(ಕೆ.ಪಿ.ಆರ್.)

**ಗ್ರ್ಯಾಕಲ್ :** ಪ್ಯಾಸೆರಿಫಾರ್ಮೀಸ್ ಗಣದ ಇಕ್ಟೆರಿಡೀ ಕುಟುಂಬಕ್ಕೆ ಸೇರಿದ ಹಲವಾರು ಬಗೆಯ ಹಕ್ಕಿಗಳ ಸಾಮಾನ್ಯ ಹೆಸರು. ಇವುಗಳಲ್ಲಿ ಮುಖ್ಯವಾದವು – ಉತ್ತರ ಅಮೆರಿಕದ ಕ್ವಿಸ್‌ಕೆಲಸ್ ಕ್ವಿಸ್‌ಕ್ಯುಲ (ಕಾಮನ್ ಗ್ರ್ಯಾಕಲ್), ವೆನಿಜ಼ುವೆಲ, ಪೆರು ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳ ದಕ್ಷಿಣ ಭಾಗದ ಕ್ಯಾಸಿಡಿಕ್ಸ್ ಮೆಕ್ಸಿಕಾನಸ್ (ಬೋಟ್ ಟೇಲ್ಡ್ ಗ್ರ್ಯಾಕಲ್) ಮತ್ತು ಮಧ್ಯ ಹಾಗೂ ದಕ್ಷಿಣ ಅಮೆರಿಕಗಳ ಸ್ಕೇಫಿಡ್ಯೂರ ಒರೈಜಿವೋರ (ರೈಸ್ ಗ್ರ್ಯಾಕಲ್). ಭಾರತದ ಬೆಟ್ಟಗಾಡುಗಳಲ್ಲಿ ಕಾಣಬರುವ ಗ್ರ್ಯಾಕ್ಯುಲ ಅಥವಾ ಯೂಲೇಬಿಸ್ ರಿಲಿಜಿಯೋಸಕ್ಕೂ (ಹಿಲ್ ಮೈನ) ರೂಢಿಯಲ್ಲಿ ಗ್ರ್ಯಾಕಲ್ ಎಂಬ ಹೆಸರೇ ಇದೆ. ಇದರ ವಿವರಗಳಿಗೆ (**ನೋಡಿ– ಮೈನಾ**).

ಅಮೆರಿಕದಲ್ಲಿ ಕಾಣಸಿಗುವ ಗ್ರ್ಯಾಕಲ್ ಹಕ್ಕಿಗಳೆಲ್ಲ ಕಪ್ಪುಬಣ್ಣದ ಹೊಳೆಯುವ ದೇಹ, ಉದ್ದವಾದ ರೆಕ್ಕೆಗಳು, ದೃಢವಾದ ಕಾಲುಗಳು, ನಸುಬಾಗಿದ ಕೊಕ್ಕು – ಈ ಲಕ್ಷಣಗಳನ್ನು ತೋರುತ್ತವೆ. ಇವುಗಳ ವಾಸ ಸಾಮಾನ್ಯವಾಗಿ ಮರಗಳಲ್ಲಿ. ಗ್ರ್ಯಾಕಲುಗಳು ಸರ್ವಭಕ್ಷಿಗಳು. ಕೀಟ, ಕಾಳು ಮುಂತಾದವನ್ನು ಮಾತ್ರವಲ್ಲದೆ ಬೇರೆ ಹಕ್ಕಿಗಳ ಗೂಡನ್ನು ಕೂಡ ಕೊಳ್ಳೆ ಹೊಡೆದು ಮೊಟ್ಟೆಗಳನ್ನು ಕಬಳಿಸುವುದುಂಟು. ಸಣ್ಣಪುಟ್ಟ ಹಲ್ಲಿ, ಓತಿಕೇತ, ಕಪ್ಪೆ

ಮುಂತಾದವನ್ನೂ ತಿನ್ನುವುದಿದೆ. ಕೆಲವು ಬಗೆಯವು ಮೀನನ್ನೂ ತಿನ್ನುತ್ತವೆ. ಇವು ಸಾಮಾನ್ಯವಾಗಿ ಗುಂಪು ಗುಂಪಾಗಿದ್ದು ಒಂದು ನಿರ್ದಿಷ್ಟ ನೆಲೆಯಲ್ಲಿ ಒಟ್ಟಾಗಿ ಗೂಡುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತವೆ. ಗೂಡು ಕಟ್ಟುವ ಕೆಲಸ ಹೆಣ್ಣಿನದು. ಕ್ಯಾಸಿಡಿಕ್ಸ್ ಮೆಕ್ಸಿಕಾನಸ್ ಪ್ರಭೇದದ ಗ್ರ್ಯಾಕಲುಗಳಲ್ಲಿ ಒಂದು ಗಂಡು ಹಕ್ಕಿ ಹಲವಾರು ಹೆಣ್ಣುಗಳೊಂದಿಗೆ ಜೀವಿಸುತ್ತವೆ. ಬಹುಪಾಲು ಗ್ರ್ಯಾಕಲುಗಳು ತಾವು ನಿರ್ಮಿಸಿದ ಗೂಡುಗಳಲ್ಲಿ ಮೊಟ್ಟೆಯಿಡುವುವಾದರೂ ಸ್ಕೇಫಿಡ್ಯೂರ ಬಗೆಯದು ಮಾತ್ರ ಬೇರೆ ಹಕ್ಕಿಗಳ ಗೂಡಿನಲ್ಲಿ ಮೊಟ್ಟೆಯಿಡುತ್ತದೆ. (ಕೆ.ಎಂ.ವಿ.)

**ಗ್ರ್ಯಾಕಸ್ :** ಪ್ರಾಚೀನ ರೋಮಿನಲ್ಲಿ ಸೆಂಪ್ರೋನಿಯಸ್ ಕುಲಕ್ಕೆ ಸೇರಿದ ಒಂದು ಮನೆತನದ ಹೆಸರು. ಈ ಮನೆತನದ ಟೈಬೀರಿಯಸ್ ಮತ್ತು ಗೇಯಸ್ ಎಂಬ ಸೋದರರು ಪ್ರಸಿದ್ಧ ರಾಜಕಾರಣಿಗಳೂ ಸುಧಾರಕರೂ ಆಗಿದ್ದರು.

**ಟೈಬೀರಿಯಸ್ ಗ್ರ್ಯಾಕಸ್ :** ಪ್ರ.ಶ.ಪೂ. 163–133. ಇವನನ್ನೂ ಇವನ ಸೋದರ ಗೇಯಸ್‍ನನ್ನೂ ಇವರ ತಾಯಿ ಕಾರ್ನೀಲಿಯಳೇ ಬೆಳೆಸಿ ಮುಂದೆ ತಂದಳು. ಫಿನೀಷಿಯನರ ವಿರುದ್ಧ ನಡೆದ ಕೊನೆಯ ಪ್ಯೂನಿಕ್ ಯುದ್ಧದಲ್ಲಿ (ಪ್ರ.ಶ.ಪೂ. 147) ಈತ ಭಾಗವಹಿಸಿದ. ಕ್ರಮೇಣ ಅನೇಕ ಸರ್ಕಾರಿ ಹುದ್ದೆಗಳಲ್ಲಿದ್ದು ಕೊನೆಗೆ ಟ್ರಿಬ್ಯೂನ್ ಎಂಬ ಅಧಿಕಾರಿಯಾದ (ಪ್ರ.ಶ.ಪೂ. 133). ಇವನು ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಅನೇಕ ತೀವ್ರಗಾಮಿ ಯೋಜನೆಗಳನ್ನು ಪ್ರಚಾರದಲ್ಲಿ ತಂದ. ಶ್ರೀಮಂತರಿಗೆ ಸೇರಿದ ದೊಡ್ಡ ಜಮೀನುಗಳನ್ನು ರೈತರಿಗೆ ಹಂಚಿದ. ರೋಮನರನ್ನು ಮತ್ತೆ ಸಾಗುವಳಿಗೆ ಹಚ್ಚಿ ಅವರನ್ನು ಉತ್ತಮ ಸ್ಥಿತಿಗೆ ತರಬೇಕೆಂಬುದು ಇವನ ಒಂದು ಉದ್ದೇಶ. ರೋಮನರ ಪೌರುಷ ಕುಂದುತ್ತಿದ್ದದ್ದು ಇವನನ್ನು ಚಿಂತೆಗೆ ಈಡುಮಾಡಿತ್ತು. ಇವನ ಕ್ರಮಗಳನ್ನು ಒಪ್ಪದಿದ್ದ ಬಲಿಷ್ಠ ಸೆನೇಟು ಇವನ ವಿರುದ್ಧ ಒಳಸಂಚು ನಡೆಸಿತು. ಮರುವರ್ಷ ಟ್ರಿಬ್ಯೂನನ ಆಯ್ಕೆಯ ಸಮಯದಲ್ಲಿ ಸಂಭವಿಸಿದ ದಂಗೆಯಲ್ಲಿ ಇವನ ಕೊಲೆಯಾಯಿತು.

**ಗೇಯಸ್ ಗ್ರ್ಯಾಕಸ್ :** ಪ್ರ.ಶ.ಪೂ. 153–121 . ಟೈಬೀರಿಯಸನ ಸೋದರ. ಶ್ರೇಷ್ಠ ರಾಜಕಾರಣಿ. ಉತ್ತಮ ವಾಗ್ಮಿ. ತನ್ನ ಸೋದರನಿಂದ ಪ್ರಾರಂಭವಾದ ಕಾರ್ಯವನ್ನು ಪೂರ್ಣಗೊಳಿಸುವ ಉದ್ದೇಶದಿಂದ ರಾಜಕೀಯವನ್ನು ಪ್ರವೇಶಿಸಿದ. ಪ್ರ.ಶ.ಪೂ. 123 ರಲ್ಲಿ ಟ್ರಿಬ್ಯೂನನಾಗಿ ಆಯ್ಕೆಹೊಂದಿದ. ಸರ್ಕಾರದ ಲೋಪದೋಷಗಳನ್ನು ತಿದ್ದುವ ಮತ್ತು ಜನತೆಯ ಕಲ್ಯಾಣದ ಸಲುವಾಗಿ ಅನೇಕ ಕ್ರಮಗಳನ್ನು ಕೈಗೊಂಡ. ಮರುವರ್ಷವೂ ಟ್ರಿಬ್ಯೂನನಾಗಿ ಆಯ್ಕೆಹೊಂದಿದಾಗ ರೋಮ್ ಪೌರತ್ವವನ್ನು ಇಟಲಿಯ ಮಿತ್ರಗುಂಪುಗಳ ಜನರಿಗೆ ಕೊಡುವ ಯೋಜನೆಯನ್ನು ತಯಾರಿಸಿದ. ಇದರಿಂದ ಸೆನೇಟಿನ ಕೋಪ ಅಧಿಕವಾಯಿತು. ಅದರ ಒಳಸಂಚಿನಿಂದಾಗಿ ಗೇಯಸ್ ಗ್ರ್ಯಾಕಸ್ ದಂಗೆಯೊಂದರಲ್ಲಿ ಸಿಕ್ಕಿ ಮರಣ ಹೊಂದಿದ. (ಕೆ.ವಿ.ಎಸ್‍ಯು.)

**ಗ್ರ್ಯಾಟನ್, ಹೆನ್ರಿ :** 1746–1820. ಐರ್ಲೆಂಡಿನ ಒಬ್ಬ ವಾಗ್ಮಿ, ರಾಜಕಾರಣಿ, ತನ್ನ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದವ. 1746ರ ಜುಲೈ 3ರಂದು ಡಬ್ಲಿನ್ ನಗರದಲ್ಲಿ ಜನಿಸಿದ. ಅಲ್ಲಿಯ ಟ್ರಿನಿಟಿ ಕಾಲೇಜಿನಲ್ಲಿ ಶಿಕ್ಷಣ ಪಡೆದ. ಈತನಿಗೆ ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಬೆಳೆಯಿತು. ವಿದ್ಯಾರ್ಥಿಯಾಗಿದ್ದಾಗ ಉನ್ನತ ವಾಗ್ಮಿಗಳಿಂದ ಸ್ಫೂರ್ತಿ ಹೊಂದಿದ. ಈತ ವಕೀಲನಾಗಿ ಜೀವನದಲ್ಲಿ ತೊಡಗಿದನಾದರೂ ಇವನಿಗೆ ಆ ವೃತ್ತಿಯಲ್ಲಿ ಹೆಚ್ಚು ಆಸಕ್ತಿ ಇರಲಿಲ್ಲವಾಗಿ ರಾಜಕೀಯವನ್ನು ಪ್ರವೇಶಿಸಿದ. ಐರಿಷ್ ಪಾರ್ಲಿಮೆಂಟಿನ ಸದಸ್ಯನಾಗಿ ಐರ್ಲೆಂಡಿನ ಸ್ವಾತಂತ್ರ್ಯ ಚಳವಳಿಯಲ್ಲಿ ಮಗ್ನನಾದ. ಐರಿಷ್ ಪಾರ್ಲಿಮೆಂಟನ್ನು ಇಂಗ್ಲಿಷ್ ಪಾರ್ಲಿಮೆಂಟಿನ ಅಧೀನತೆಯಿಂದ ತಪ್ಪಿಸುವುದು ಇವನ ಮುಖ್ಯ ಗುರಿಯಾಗಿತ್ತು.

ಅಮೆರಿಕನ್ ಕ್ರಾಂತಿಯಿಂದ ಗ್ರ್ಯಾಟನ್ ಸ್ಫೂರ್ತಿ ಪಡೆದ. ಐರಿಷ್ ಪಾರ್ಲಿಮೆಂಟು ಅನುಮೋದಿಸಿದ ವಿಧೇಯಕಗಳಿಗೆಲ್ಲ ಇಂಗ್ಲಿಷ್ ಪಾರ್ಲಿಮೆಂಟಿನ ಒಪ್ಪಿಗೆ ಅಗತ್ಯವೆಂಬ ಪಾಯ್ನಿಂಗ್ಸ್ ಅಧಿನಿಯಮವನ್ನು ರದ್ದು ಮಾಡಲು 1780ರಲ್ಲಿ ಚಳವಳಿ ಹೂಡಿದ. ಐರಿಷ್ ಕೆಥೊಲಿಕರ ವಿರುದ್ಧ ಜಾರಿಯಲ್ಲಿದ್ದ ಅಧಿನಿಯಮಗಳನ್ನು ಸಡಿಲಗೊಳಿಸಬೇಕೆಂದು ಈತ ವಾದಿಸಿದ.

ಆಗ ಇಂಗ್ಲೆಂಡ್ ಮತ್ತು ಫ್ರಾನ್ಸ್ ಪರಸ್ಪರವಾಗಿ ಯುದ್ಧದಲ್ಲಿ ತೊಡಗಿದ್ದವು. ಆಗ ನಡೆಯುತ್ತಿದ್ದ ಅಮೆರಿಕನ್ ಸ್ವಾತಂತ್ರ್ಯ ಯುದ್ಧದಲ್ಲಿ ಫ್ರೆಂಚರು ಅಮೆರಿಕನರಿಗೆ ಬೆಂಬಲ ನೀಡಿದ್ದರು. ಫ್ರೆಂಚರು ಐರ್ಲೆಂಡಿನ ಮೇಲೆ ದಂಡಯಾತ್ರೆ ಕೈಗೊಳ್ಳುವ ಸಾಧ್ಯತೆ ಇದ್ದುದರಿಂದ ಅದನ್ನು ತಡೆಗಟ್ಟಲು ಐರ್ಲೆಂಡಿನಲ್ಲಿ ಸ್ವಯಂಸೇವಕ ದಳ ಅಸ್ತಿತ್ವಕ್ಕೆ ಬಂದಿತು. ಆದರೆ ಐರ್ಲೆಂಡಿನ ಸ್ವಾತಂತ್ರ್ಯವಾದಿಗಳಾಗಿದ್ದ ಕೆಥೊಲಿಕರು ಶಸ್ತ್ರಗಳನ್ನು ಹೊಂದಿರುವಂತಿರಲಿಲ್ಲ. 1782ರಲ್ಲಿ ಐರ್ಲೆಂಡಿನ ಆಲ್ಸ್ಟರ್ ಸ್ವಯಂಸೇವಕರು ಐರ್ಲೆಂಡಿನ ಸ್ವಾತಂತ್ರ್ಯ ಮತ್ತು ದಂಡನೆಯ ಕಾನೂನುಗಳ ರದ್ದನ್ನು ಕೋರಿ ನಿರ್ಣಯಗಳನ್ನು ಮಾಡಿದರು. ಏಪ್ರಿಲ್ 1782ರಲ್ಲಿ ಗ್ರ್ಯಾಟನ್ ಐರ್ಲೆಂಡಿನ ಪಾರ್ಲಿಮೆಂಟಿನಲ್ಲಿ ಮಂಡಿಸಿದ ಹಕ್ಕುಗಳ ಘೋಷಣೆಯ ವಿಧೇಯಕ ಒಮ್ಮತದಿಂದ ಅಂಗೀಕೃತವಾಯಿತು. ಅನಂತರ ಇಂಗ್ಲಿಷ್ ಪಾರ್ಲಿಮೆಂಟು ಪಾಯ್ನಿಂಗ್ಸ್ ಅಧಿನಿಯಮವನ್ನು ರದ್ದು ಮಾಡಿ, ಐರ್ಲೆಂಡಿನ ಪಾರ್ಲಿಮೆಂಟಿಗೆ ಅಧಿನಿಯಮ ರಚಿಸುವ ಹಕ್ಕನ್ನು ನೀಡಿತು.

ಆದರೂ ಐರ್ಲೆಂಡಿನ ಕಾರ್ಯಾಂಗ ಇಂಗ್ಲಿಷ್ ಸರ್ಕಾರದ ಹತೋಟಿಯಲ್ಲಿತ್ತು. 1799ರಲ್ಲಿ ಗ್ರ್ಯಾಟನ್ ಇದನ್ನೂ ವಿರೋಧಿಸಿದ. ಐರ್ಲೆಂಡಿನಲ್ಲಿ ಕೆಥೊಲಿಕರು ಹೆಚ್ಚು ಸಂಖ್ಯೆಯಲ್ಲಿದ್ದರೂ ಅವರಿಗೆ ಮತ ನೀಡುವ ಹಕ್ಕಿರಲಿಲ್ಲ. ಗ್ರ್ಯಾಟನ್ ಇದಕ್ಕಾಗಿ ಹೋರಾಟ ನಡೆಸಿದ. 1792ರಲ್ಲಿ ಕೆಥೊಲಿಕರ ಪರಿಹಾರ ಮಸೂದೆಗೆ ಐರಿಷ್ ಪಾರ್ಲಿಮೆಂಟಿನಲ್ಲಿ ಬೆಂಬಲ ನೀಡಿದನಾದರೂ ಅದು ಯಶಸ್ವಿಯಾಗಲಿಲ್ಲ. ಆಮೇಲೆ ಬಹುಕಾಲ ಐರ್ಲೆಂಡಿನ ಮೇಲೆ ದಬ್ಬಾಳಿಕೆ ನಡೆಯಿತು. ಗ್ರ್ಯಾಟನ್ ಅನಾರೋಗ್ಯದ ನಿಮಿತ್ತ ಹಲವು ವರ್ಷಗಳ ಕಾಲ ರಾಜಕೀಯದಿಂದ ದೂರವಾಗಿದ್ದ. ಆದರೆ 1797ರಲ್ಲಿ ಪಾರ್ಲಿಮೆಂಟಿನಿಂದ ನಿವೃತ್ತನಾದ ಇವನು ಇಂಗ್ಲೆಂಡಿಗೆ ಹೋದ.

1798ರಲ್ಲಿ ಐರ್ಲೆಂಡಿನಲ್ಲಿ ಸಂಭವಿಸಿದ ದಂಗೆಯನ್ನು ಇಂಗ್ಲಿಷರು ಅಡಗಿಸಿದರು. ಐರ್ಲೆಂಡ್ ಮತ್ತು ಇಂಗ್ಲೆಂಡ್ ಪಾರ್ಲಿಮೆಂಟುಗಳನ್ನು ಒಟ್ಟುಗೂಡಿಸಲು ಬ್ರಿಟಿಷ್ ಪ್ರಧಾನಿ ವಿಲಿಯಮ್ ಪಿಟ್ ಯೋಜನೆಯೊಂದನ್ನು ರೂಪಿಸಿದ. ಗ್ರ್ಯಾಟನ್ ಇದಕ್ಕೆ ವಿರೋಧ ವ್ಯಕ್ತಪಡಿಸಿದ. ಈತನನ್ನು ಐರಿಷ್ ಪ್ರಿವಿ ಕೌನ್ಸಿಲ್ ಮತ್ತು ಡಬ್ಲಿನ್ ವ್ಯಾಪಾರಿಗಳ ಶ್ರೇಣಿ ಹೊರಹಾಕಿದವು. ಐರಿಷ್ ಪಾರ್ಲಿಮೆಂಟಿನ ಸದಸ್ಯರಿಗೆ ಲಂಚ ಕೊಟ್ಟು ಅವರನ್ನು



ಕೊಳ್ಳಲು ಪಿಟ್ ಮಾಡಿದ ಪ್ರಯತ್ನವನ್ನು ಗ್ರ್ಯಾಟನ್ ತೀವ್ರವಾಗಿ ವಿರೋಧಿಸಿದ. ಪಾರ್ಲಿಮೆಂಟಿಗೆ ಆಯ್ಕೆಯಾಗಿ ಅಲ್ಲಿಂದ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದ. ಆಗ ಇವನು ಮಾಡಿದ ಭಾಷಣ ಪ್ರಸಿದ್ಧವಾಗಿದೆ. 1801ರಲ್ಲಿ ಒಕ್ಕೂಟ ಆಯಿತು. ಸ್ವಲ್ಪ ಕಾಲ ಪಾರ್ಲಿಮೆಂಟಿನ ಹೊರಗಿದ್ದ ಇವನು 1805ರಲ್ಲಿ ಮತ್ತೆ ಪಾರ್ಲಿಮೆಂಟ್ ಪ್ರವೇಶಿಸಿದ. ಆಳುವ ಪಕ್ಷದವರು ಇವನನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಯತ್ನಿಸಿದರು. ಆದರೆ ಗ್ರ್ಯಾಟನ್ ಅವರ ಬಲೆಗೆ ಬೀಳಲಿಲ್ಲ. ಇವನಿಗಿಂತ ತೀವ್ರವಾದಿಗಳಾದ ಯುವಕರ ಚಳವಳಿಯೊಂದು ಪ್ರಬಲವಾಯಿತು. ಕೆಥೊಲಿಕರ ಹಕ್ಕುಗಳ ರಕ್ಷಣೆಯೇ ಅದರ ಗುರಿಯಾಗಿತ್ತು. ಕೆಥೊಲಿಕರ ಕಷ್ಟ ಪರಿಹಾರಕ್ಕೆ 1813ರಲ್ಲಿ ಈತ ತಂದ ವಿಧೇಯಕವೊಂದು ಸ್ವಲ್ಪದರಲ್ಲಿ ಕಾಮನ್ಸ್ ಸಭೆಯಲ್ಲಿ ಪರಾಜಯ ಹೊಂದಿತ್ತು. ಅವರ ಹಕ್ಕುಗಳನ್ನು ಕುರಿತ ಚರ್ಚೆಯಲ್ಲಿ ಭಾಗವಹಿಸಲು ಇವನು ಅನಾರೋಗ್ಯವನ್ನೂ ಲೆಕ್ಕಿಸದೆ ಲಂಡನಿಗೆ ಪ್ರಯಾಣ ಮಾಡಿದ. ಆದರೆ ತನ್ನ ಉದ್ದೇಶವನ್ನು ಪೂರೈಸಲಾಗದೆಯೆ 1820ರ ಜೂನ್ 6ರಂದು ಲಂಡನಿನಲ್ಲಿ ತೀರಿಕೊಂಡ.

ಅದ್ಭುತವಾದ ವಾಗ್ಮಿತೆ, ರಾಷ್ಟ್ರನಿಷ್ಠೆ, ಸೇವಾಮನೋಭಾವ, ಪ್ರಾಮಾಣಿಕತೆ ಇವು ಗ್ರ್ಯಾಟನನ ಗುಣಗಳು. ಆದರೆ ಜಟಿಲ ಪ್ರಶ್ನೆಗಳನ್ನು ಪರಿಹರಿಸುವ ಸಾಮರ್ಥ್ಯ ಇವನಿಗೆ ಇರಲಿಲ್ಲ. ತೀವ್ರವಾಗಿ ಬದಲಾಗುತ್ತಿದ್ದ ಪರಿಸ್ಥಿತಿಗಳನ್ನು ಅರಿತು ಅವಕ್ಕೆ ತಕ್ಕಂತೆ ನಡೆಯುವ ಚಾಕಚಕ್ಯತೆ ಈತನಿಗಿರಲಿಲ್ಲ. (ಎ.ವಿ.ವಿ.)

**ಗ್ರ್ಯಾನ್ಯುಲೈಟ್ :** ಸಮಗಾತ್ರದ ಖನಿಜಕಣಗಳಿಂದ ರಚಿತವಾದ ರೂಪಾಂತರ ಶಿಲಾವಿಶೇಷ. ಅಗ್ನಿಶಿಲೆಗಳು, ಜಲಜಶಿಲೆಗಳು ಮತ್ತು ರೂಪಾಂತರ ಶಿಲೆಗಳು ಕೂಡ ಗ್ರ್ಯಾನ್ಯುಲೈಟುಗಳಾಗಿ ಮಾರ್ಪಡಬಹುದು. ಚದರ ಸೆಂಮೀ 8,000 ಕಿ.ಗ್ರಾಂ.ಗಳಿಗೂ ಮೀರಿದ ಒತ್ತಡ ಮತ್ತು $500^{0}$ ಸೆಂ ಗೂ ಮೀರಿದ ಉಷ್ಣತೆ ಒದಗಿದಾಗ ಉಂಟಾಗುವ ರೂಪಾಂತರ ಶಿಲಾಸಮುದಾಯಗಳಿವು. ನಿಸರ್ಗದಲ್ಲಿ ಸಾಮಾನ್ಯವಾಗಿ ಅತ್ಯಂತ ಕ್ಷಾರಶಿಲೆಗಳು ಬೃಹತ್ ಪ್ರಾದೇಶಿಕ ರೂಪಾಂತರಿತ ಗ್ರ್ಯಾನ್ಯುಲೈಟ್ ಶಿಲಾಪಂಕ್ತಿಗಳ ಗುಂಪಿನಲ್ಲಿ ದೊರೆಯುತ್ತವೆ. ಮೂಲಧಾತುಗಳನ್ನು ಅನುಸರಿಸಿ ಕ್ವಾರ್ಟ್ಜ್, ಸಿಲಿಮನೈಟ್, ಕಯನೈಟ್, ಆರ್ಥೋಕ್ಲೇಸ್, ಪ್ಲೇಜಿಯೋಕ್ಲೇಸ್, ಹೈಪರ್‌ಸ್ಥೀನ್, ಕ್ಯಾಲ್ಸೈಟ್, ಗಾರ್ನೆಟ್, ಎನ್‌ಸ್ಟಟೈಟ್, ಫಾರ್ಸ್‌ಟೆರೈಟ್, ಡಯಾಪ್ಸೈಡ್, ಹಾರ್ನ್‌ಬ್ಲೆಂಡ್, ಪೈರೋಪ್–ಆಮಂಡೈಟ್ ಗ್ರ್ಯಾನ್ಯುಲೈಟುಗಳು ಈ ಶಿಲೆಗಳಲ್ಲಿ ದೊರೆಯುವ ಪ್ರಮುಖ ಖನಿಜಕಣಗಳು. ಕರ್ನಾಟಕದ ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿನ ರೂಪಾಂತರ ಶಿಲಾಪಂಕ್ತಿಗಳಲ್ಲಿ ಬಗೆಬಗೆಯ ಗ್ರ್ಯಾನ್ಯುಲೈಟುಗಳು ದೊರೆಯುತ್ತವೆ. ಇವು ಕಯನೈಟ್, ಕುರಂದ, ಬಳಪದಕಲ್ಲು, ಮ್ಯಾಗ್ನಸೈಟ್, ಕ್ರೋಮೈಟ್, ನಿಕ್ಕಲ್ ಮತ್ತು ಪ್ಲಾಟಿನಮ್ ಮುಂತಾದ ಲೋಹಾಲೋಹ ಗಣಿಗೆಳಿಗೆ ಆಧಾರವಾಗಿವೆ. ಅತಿಕ್ಷಾರ ಶಿಲೆಗಳು ಪರ್ವತಶ್ರೇಣಿಗಳ ಗರ್ಭವನ್ನು ಆಕ್ರಮಿಸಿರುವುದರಿಂದ ಗ್ರ್ಯಾನ್ಯುಲೈಟುಗಳಿಗೆ ಆಧುನಿಕ ಶಿಲಾಶಾಸ್ತ್ರದಲ್ಲಿ ಮಹತ್ತ್ವದ ಸ್ಥಾನ ಉಂಟು. (ಎಸ್.ಆರ್.ಎನ್.)

**ಗ್ರ್ಯಾನ್‌ವಿಲ್-ಬಾರ್ಕರ್ ಹಾರ್ಲೆ :** 1877–1946. ನಟ, ನಾಟಕಕಾರ, ವಿಮರ್ಶಕ. ಲಂಡನಿನಲ್ಲಿ ಹುಟ್ಟಿದ ಈತ ಹದಿಮೂರನೆಯ ವಯಸ್ಸಿಗೇ ರಂಗಶಿಕ್ಷಣವನ್ನು ಪಡೆದು ಹದಿನೈದರ ವೇಳೆಗೆ ನಟನಾಗಿ ರಂಗಪ್ರವೇಶ ಮಾಡಿದ. ಈತನಿಗೆ ವೃತ್ತಿರಂಗದಲ್ಲಿ ಯಶಸ್ಸು, ಹಣ ಎರಡನ್ನೂ ಗಳಿಸುವ ಅವಕಾಶವಿತ್ತು. ಆದರೆ ಈತನ ಪ್ರಯೋಗಶೀಲ ಮನಸ್ಸು ಬಯಸಿದ್ದೇ ಬೇರೆ. ವಿಲಿಯಮ್ ಪೋಯೆಲ್‌ನ ಎಲಿಜ಼ಬೆತನ್ ಸ್ಟೇಜ್ ಸೊಸೈಟಿಯಲ್ಲೂ ಬೆನ್ ಗ್ರೀಟ್‌ನ ಷೇಕ್ಸ್‌ಪಿಯರ್ ರೆಪರ್ಟರಿಯಲ್ಲೂ ಕೆಲಸಮಾಡಿದ ಅನಂತರ 1900ರಲ್ಲಿ ಪ್ರಯೋಗಾತ್ಮಕ ಸ್ಟೇಜ್ ಸೊಸೈಟಿಯಲ್ಲೂ 1904ರಲ್ಲಿ ಜೆ. ಇ. ವೆಡ್ರೆನ್‌ನೊಂದಿಗೆ ಸೇರಿ ಕೋರ್ಟ್‌ಥಿಯೇಟರಿನ ನಿರ್ವಾಹಕನಾಗಿಯೂ ಕೆಲಸ ಮಾಡಿದ. ಅನೇಕ ಹೊಸ ನಾಟಕಗಳನ್ನು ರಂಗದ ಮೇಲೆ ತಂದದ್ದಲ್ಲದೆ ಹಳೆಯವನ್ನೂ ಹೊಸದೃಷ್ಟಿಯಿಂದ ಪ್ರದರ್ಶಿಸಿದ. ಒಂದನೆಯ ಮಹಾಯುದ್ಧ ಈತನ ಸಾಧನೆಗಳಿಗೆ ದೊಡ್ಡ ತಡೆಯಾಯಿತು. ಯುದ್ಧ ಕಾಲದಲ್ಲಿ ರೆಡ್‌ಕ್ರಾಸ್ ಸೇರಿ ಸೇವೆ ಸಲ್ಲಿಸಿದ. ಅನಂತರ ಬ್ರಿಟಿಷ್ ಡ್ರಾಮಾಲೀಗಿನ ಅಧ್ಯಕ್ಷನಾದ. ಪ್ಯಾರಿಸಿನಲ್ಲಿ ನೆಲೆಸಿ ಸ್ಪಾನಿಷ್ ನಾಟಕಗಳನ್ನು ಅನುವಾದಿಸಿದ್ದಲ್ಲದೆ ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ ಬ್ರಿಟಿಷ್ ಇನ್‌ಸ್ಟಿಟ್ಯೂಟಿನ ನಿರ್ದೇಶಕನಾದ. ಅನಂತರ ಕೊಂಚಕಾಲ ಅಮೆರಿಕದಲ್ಲಿ ಬ್ರಿಟಿಷ್ ವೃತ್ತಾಂತ ಸಂಸ್ಥೆಯ ಪರವಾಗಿ ಕೆಲಸಮಾಡಿದ. 1946ರಲ್ಲಿ ಪುನಃ ಪ್ಯಾರಿಸಿಗೆ ಬಂದು, ಅದೇ ವರ್ಷ ಗತಿಸಿದ.



ಈತನ ಕೃತಿಗಳಲ್ಲಿ ಹೆಸರಾದವು – ವಾಯ್ಸೀ ಇನ್‌ಹೆರಿಟೆನ್ಸ್; ಮದ್ರಾಸ್ ಹೌಸ್ ಮತ್ತು ಮ್ಯಾರಿಯಿಂಗ್ ಆಫ್ ಆ್ಯನ್ ಲೀಟ್. ಇವು ಸಾಮಾಜಿಕ ಗದ್ಯನಾಟಕ ಪ್ರಕಾರಕ್ಕೆ ಸೇರಿದವಾಗಿ ಬರ್ನಾರ್ಡ್ ಷಾನ ಕೃತಿಗಳನ್ನು ನೆನಪಿಗೆ ತರುವಂಥವು. ಇವಲ್ಲದೆ ಇತರರೊಂದಿಗೆ ಸೇರಿ ಇನ್ನೂ ಹಲವು ಇದೇ ಪ್ರಕಾರದ ಕೃತಿಗಳನ್ನು ರಚಿಸಿದ್ದಾನೆ. ವ್ಯಕ್ತಿ ಮತ್ತು ಸಮಾಜದ ದೋಷಗಳನ್ನು ಯಶಸ್ವಿಯಾಗಿ ತನ್ನ ನಾಟಕಗಳಲ್ಲಿ ತಂದಿರುವನಾದರೂ ಈತನ ಕೀರ್ತಿ ನಿಂತಿರುವುದು ಈತ ಷೇಕ್ಸ್‌ಪಿಯರನ ಕೆಲವು ನಾಟಕಗಳಿಗೆ ಬರೆದಿರುವ ವಿಮರ್ಶಾತ್ಮಕ ಪ್ರಸ್ತಾವನೆಗಳಿಂದ.

ಪ್ರಯೋಗಶೀಲ ಹವ್ಯಾಸೀ ರಂಗಭೂಮಿಗೆ ಈತ ಸಲ್ಲಿಸಿದ ಸೇವೆ ಅಪಾರ. ಇಬ್ಸೆನ್, ಮೇಟರ್‌ಲಿಂಕ್, ಷಾ, ಗಾಲ್ಸ್‌ವರ್ದಿ ಮುಂತಾದ ಅನೇಕರ ಕೃತಿಗಳನ್ನೂ ಗ್ರೀಕ್ ನಾಟಕಗಳನ್ನೂ ಪ್ರದರ್ಶಿಸಿದ. ಮೊದಲ ಹೆಂಡತಿ ಲಿಲ ಮೆಕಾರ್ತಿಯೊಂದಿಗೆ ಎಷ್ಟೋ ನಾಟಕಗಳಲ್ಲಿ ಅಭಿನಯಿಸಿದ. ಕೋರ್ಟ್‌ಥಿಯೇಟರ್ ಒಂದು ಪ್ರಗತಿಶೀಲ ಲೇಖಕನ ರಂಗಭೂಮಿ ಎನಿಸಿದ್ದು ಈತನಿಂದಾಗಿ. ಇದಕ್ಕೂ ಮಿಗಿಲಾಗಿ ಈತ ಷೇಕ್ಸ್‌ಪಿಯರ್‌ಗೆ, ಎಲಿಜ಼ಬೆತನ್ ನಾಟಕಗಳಿಗೆ ಸಲ್ಲಿಸಿರುವ ಸೇವೆ ಅಪಾರ. 19ನೆಯ ಶತಮಾನದ ಚಿತ್ರಚೌಕಟ್ಟಿನ ರಂಗಮಂಚ, ಅದರ ದೃಶ್ಯ ವೈಭವ, ಸಜ್ಜಿಕೆಯ ಅತಿ ಸಮೃದ್ಧಿಗಳಿಂದಾಗಿ ಷೇಕ್ಸ್‌ಪಿಯರ್ ಉಸಿರುಗಟ್ಟಿ ಬಣ್ಣಗೆಟ್ಟು ವಿಕಾರ ಹೊಂದಿದ್ದ. ಆತನನ್ನು ಅದರಿಂದ ಪಾರುಮಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಈತ ಎಲಿಜ಼ಬೆತನ್ ರಂಗಮಂಚವನ್ನೇ ಅಳವಡಿಸಿಕೊಂಡದ್ದು ಮಾತ್ರವಲ್ಲ, ನಾಟಕದ ನಡೆಯ ವೇಗವನ್ನೂ ಹೆಚ್ಚಿಸಿದ. ಸಂಪೂರ್ಣ ಷೇಕ್ಸ್‌ಪಿಯರ್ ಕೃತಿಗಳನ್ನು ಮೂಲರೂಪದಲ್ಲಿಯೇ ಪ್ರದರ್ಶಿಸಿದ. ಅಭಿನಯ ಮತ್ತು ಮಾತುಗಾರಿಕೆಯಲ್ಲೂ ತುಂಬ ಯೋಗ್ಯ ಸುಧಾರಣೆಗಳನ್ನು ತಂದ. ನಿರ್ಮಾತೃಗಳು ತಮ್ಮ ಮನಸ್ಸಿಗೆ ಬಂದಂತೆ ಪಠ್ಯಭಾಗವನ್ನು ಪಲ್ಲಟಗೊಳಿಸಿ ವಿಕಾರಗೊಳಿಸುತ್ತಿದ್ದುದರಲ್ಲಿ ಎಂಥ ಹಾನಿ ಇದೆಯೆಂಬುದನ್ನು ಸ್ಪಷ್ಟಪಡಿಸಿದ. ಷೇಕ್ಸ್‌ಪಿಯರ್ ನಾಟಕಗಳ ಇಂದಿನ ಪ್ರದರ್ಶನ ವಿಧಾನ ಯಾವುದೇ ಇರಲಿ, ಅದು ಬಾರ್ಕರ್‌ಗೆ ಕೊಂಚಮಟ್ಟಿಗಾದರೂ ಋಣಿ ಎನ್ನಬೇಕು.

ಈತನ ರಂಗಸಾಧನೆಗಳಲ್ಲಿ ಮೊದಲ ಹೆಂಡತಿಯಂತೆ ಎರಡನೆಯ ಹೆಂಡತಿ ಹೆಲೆನ್ ಎಂಬ ಅಮೆರಿಕನ್ ಮಹಿಳೆಯೂ ಸಹಕರಿಸಿದಳು. ಸ್ಪಾನಿಷ್ ಅನುವಾದಗಳಲ್ಲಿ ಆಕೆಯ ನೆರವು ಈತನಿಗೆ ಲಭಿಸಿತು. ತಾವು ಕಾರ್ಯವಾಹಿಯಾಗಿ ರಂಗಪ್ರಯೋಗಗಳನ್ನು ನಡೆಸಿದುದರ ಅನುಭವದ ಹಿನ್ನೆಲೆಯಲ್ಲಿ ಈತ ಷೇಕ್ಸ್‌ಪಿಯರ್‌ಗೆ ಪೀಠಿಕೆಗಳು ಎಂಬ ಒಂದು ವಿಮರ್ಶನ ಗ್ರಂಥವನ್ನು ಬರೆದಿದ್ದಾನೆ. ಲವ್ಸ್ ಲೇಬರ್ ಲಾಸ್ಟ್, ರೋಮಿಯೋ ಮತ್ತು ಜೂಲಿಯೆಟ್, ಟ್ವೆಲ್ಫ್ತ್ ನೈಟ್, ಹ್ಯಾಮ್ಲೆಟ್, ಒಥೆಲೋ, ಕಿಂಗ್ ಲಿಯರ್ ಮುಂತಾಗಿ ಹತ್ತು ನಾಟಕಗಳ ವಿಮರ್ಶಾತ್ಮಕ ಪ್ರಸ್ತಾವನೆಗಳನ್ನುಳ್ಳ ಈ ಗ್ರಂಥ ಈತನ ಇತರ ಎಲ್ಲ ಸಾಧನೆಗಳಿಗಿಂತಲೂ ಹಿರಿದಾದದ್ದು; ಶಾಶ್ವತ ಕೀರ್ತಿಯನ್ನು ತಂದುಕೊಡುವಂಥದ್ದು. ಇದನ್ನು ಓದುವುದೇ ನಾಟಕಾಸಕ್ತನಿಗೆ ಒಂದು ಹೊಸ ಅನುಭವ. ಜೀವಂತ ಷೇಕ್ಸ್‌ಪಿಯರನನ್ನು ಒಡಮೂಡಿಸುವುದು ಈತನ ಉದ್ದೇಶ. ಅದರಲ್ಲಿ ಈತ ಸಂಪೂರ್ಣ ಯಶಸ್ವಿಯಾಗಿದ್ದಾನೆ. (ಆರ್.ಎನ್.ಎಚ್.)

**ಗ್ರ್ಯಾನ್ಷಿಯ :** ಪ್ಯಾರಜೋವ (ಪೋರಿಫರ) ವಿಭಾಗದ ಕ್ಯಾಲ್ಕೇರಿಯ ವರ್ಗಕ್ಕೆ ಸೇರಿದ ಒಂದು ಸ್ಪಂಜುಪ್ರಾಣಿ. ಇದು ಸಮುದ್ರದಲ್ಲಿ ಯಾವುದಾದರೊಂದು ಗಟ್ಟಿ ಪದಾರ್ಥಕ್ಕೆ ಅಂಟಿಕೊಂಡು ತನ್ನ ಜೀವ ಕಾಲವನ್ನು ಕಳೆಯುತ್ತದೆ. ಇದರ ದೇಹದ ಆಕಾರ ಕಲಶದಂತೆ: ಗಾತ್ರ 1.2–2.5 ಸೆಂಮೀ. ದೇಹದ ಮೇಲೆ ಆಸ್ಟಿಯಗಳೆಂಬ ಅನೇಕ ರಂಧ್ರಗಳಿವೆ. ದೇಹದ ಮೇಲ್ತುದಿ ಯಲ್ಲಿ ಆಸ್ಕ್ಯುಲಮ್ ಎಂಬ ಒಂದು ದೊಡ್ಡ ದ್ವಾರವಿದೆ. ಆಸ್ಟಿಯಗಳ ಮೂಲಕ ನೀರು ದೇಹದೊಳಕ್ಕೆ ನುಗ್ಗಿ ಅಲ್ಲಿನ ಅಸಂಖ್ಯ ಕಾಲುವೆಗಳೊಳಗೆ ಪ್ರವಹಿಸಿ ಅಲ್ಲಿಂದ ಆಸ್ಕ್ಯುಲಮಿನ ಮೂಲಕ ಹೊರಬರುತ್ತದೆ. ಆಸ್ಕ್ಯುಲಮಿನ ಸುತ್ತ ಸೂಜಿಗಳಂತಿರುವ ಅನೇಕ ಮುಳ್ಳುಗಳಿವೆ (ಸ್ಪಿಕ್ಯೂಲ್ಸ್).



ಗ್ರ್ಯಾನ್ಷಿಯದ ಆಹಾರ ಸೇವನ ಕ್ರಮ, ಉಸಿರಾಡುವಿಕೆ ಮತ್ತು ಶುದ್ಧೀಕರಣಗಳೆಲ್ಲ ಉಳಿದ ಸ್ಪಂಜು ಪ್ರಾಣಿಗಳಲ್ಲಿದ್ದಂತೆಯೇ ಇವೆ. ಇದು ನಿರ್ಲಿಂಗ ಹಾಗೂ ಲೈಂಗಿಕ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತದೆ. ನಿರ್ಲಿಂಗವೃದ್ಧಿ ಅಂಕುರಣ (ಬಡಿಂಗ್) ರೀತಿಯಲ್ಲಿ ನಡೆಯುತ್ತದೆ. ಲೈಂಗಿಕ ರೀತಿಯ ಸಂತಾನಾಭಿವೃದ್ಧಿಯಲ್ಲಿ ರೇತ್ರಾಣು ಹಾಗೂ ಅಂಡಗಳು ಸಂಯೋಗವಾಗಿ ಯುಗ್ಮವಾಗಿ ರೂಪುಗೊಳ್ಳುತ್ತವೆ. ಯುಗ್ಮ ಕೆಲಕಾಲಾನಂತರ ಕಶಾಂಗವುಳ್ಳ ಡಿಂಭವಾಗಿ ಬೆಳೆದು ಕೊನೆಗೆ ಪ್ರೌಢಜೀವಿಯಾಗುತ್ತದೆ. ಡಿಂಭಕ್ಕೆ ಆಂಫಿಬ್ಲಾಸ್ಟುಲ ಎಂದು ಹೆಸರು. (ಎಸ್.ಬಿ.ಎಂ.)

**ಗ್ರ್ಯಾಪ್ಟೊಲೈಟುಗಳು :** ಗತವಂಶಿ ಪ್ರಾಣಿಗಳ ಒಂದು ವರ್ಗ. ಪ್ರಾಚೀನ ಜೀವಿಕಲ್ಪದ ಪೂರ್ವಾರ್ಧದಲ್ಲಿ, ಅದರಲ್ಲೂ ಆರ್ಡೊವಿಸಿಯನ್ ಮತ್ತು ಸೈಲೂರಿಯನ್ ಎಂಬೆರಡು ಯುಗಗಳಲ್ಲಿ ಮಾತ್ರ ಈ ಪ್ರಾಣಿಗಳು ಜೀವಿಸಿದ್ದುವು. ಆಗ ಅವು ಅಧಿಕ ಸಂಖ್ಯೆಯಲ್ಲಿ ವೃದ್ಧಿಸಿ ಭೌಗೋಳಿಕವಾಗಿ ವಿಶೇಷ ವ್ಯಾಪ್ತಿ ಪಡೆದಿದ್ದುವು. ಆದ್ದರಿಂದ ಆರ್ಡೊವಿಸಿಯನ್ ಮತ್ತು ಸೈಲೂರಿಯನ್ ಕಾಲಗಳ ಶಿಲಾಸ್ತೋಮಗಳ ವಿಸ್ತೃತ ವಿಭಜನೆ ಮತ್ತು ಪರಸ್ಪರ ಸಂಬಂಧ ನಿರ್ಣಯದಲ್ಲಿ ಗ್ರ್ಯಾಪ್ಟೊಲೈಟುಗಳೇ ಮುಖ್ಯವಾದ ಆಧಾರಗಳು. ಈ ಪ್ರಾಣಿಗಳು ಜೇಡು ನಿಕ್ಷೇಪ ಪ್ರದೇಶಗಳಲ್ಲಿ ಹೇರಳವಾಗಿಯೂ ಮರಳು ಅಥವಾ ಸುಣ್ಣ ನಿಕ್ಷೇಪ ಪ್ರದೇಶಗಳಲ್ಲಿ ವಿರಳವಾಗಿಯೂ ಇದ್ದಂತೆ ತೋರುವುದು.

ಗ್ರ್ಯಾಪ್ಟೊಲೈಟುಗಳು ಸಂಘಜೀವಿಗಳು. ಇವುಗಳಿಗೆ ಕಂಕಾಲಗಳಿದ್ದುವು. ಈ ಕಂಕಾಲಗಳಿಗೆ ಪಾಲಿಪೆರಿ ಎಂದು ಹೆಸರು. ಪಾಲಿಪೆರಿಯ ಮಧ್ಯದಲ್ಲಿ ದಾರ ಅಥವಾ ಕಡ್ಡಿಯ ಹಾಗಿರುವ ಎಲುಬು ಉಂಟು. ಇದಕ್ಕೆ ವಿರ್ಗುಲ ಎಂದು ಹೆಸರು. ಇದರ ಉದ್ದಕ್ಕೂ ಹಲ್ಲುಗಳ ಅಥವಾ ಬಟ್ಟಲುಗಳ ಆಕಾರದ ಎಲುಬುಗಳ ಸಾಲುಗಳಿವೆ. ಬಟ್ಟಲುಗಳಿಗೆ ಹೈಡ್ರೊತೀಕೆ ಎಂದು ಹೆಸರು. ಗ್ರ್ಯಾಪ್ಟೊಲೈಟ್ ಪ್ರಾಣಿಗಳೂ ಈ ಬಟ್ಟಲುಗಳಲ್ಲಿ ವಾಸಿಸುತ್ತಿದ್ದಿರಬೇಕು. ಪ್ರತಿ ಬಟ್ಟಲಿಗೂ ಎರಡು ದ್ವಾರಗಳಿವೆ. ಒಂದು ದ್ವಾರದಿಂದ ಪಕ್ಕದ ಬಟ್ಟಲಿನೊಡನೆ ಸಂಪರ್ಕ ಏರ್ಪಟ್ಟಿದೆ. ಮತ್ತೊಂದು ದ್ವಾರ ಹೊರ ಪ್ರಪಂಚದ ಸಂಪರ್ಕ ಇಟ್ಟುಕೊಳ್ಳಲು ಸಹಾಯಕವಾಗಿದೆ. ಮೊದಲನೆಯ ದ್ವಾರಗಳೆಲ್ಲ ಒಂದೇ ಸಾಲಿನಲ್ಲಿದ್ದು ಅವುಗಳಿಂದ ಒಂದು ಕಾಲುವೆ ಏರ್ಪಟ್ಟಿದೆ. ಇದಕ್ಕೆ ಸಾಮಾನ್ಯ ಕಾಲುವೆ ಎಂದು ಹೆಸರು. ವಿರ್ಗುಲದ ಕೆಳತುದಿಗೆ ಕೋನಾಕಾರಾದ ಎಲುಬೊಂದು ತಾಕು ಹಾಕಿದಂತಿದೆ. ಇದಕ್ಕೆ ಸಿಕ್ಯುಲ ಎಂದು ಹೆಸರು. ಮಾನೊಗ್ರ್ಯಾಪ್ಟಸಿನಲ್ಲಿ ಒಂದೇ ಒಂದು ಬಟ್ಟಲು ಸಾಲು ಉಂಟು. ಅಂಥ ಪ್ರಾಣಿ ಸಂಘಕ್ಕೆ ಏಕಪಂಕ್ತಿ ಸಂಘ ಎಂದು ಹೆಸರು. ಅನೇಕ ಗ್ರ್ಯಾಪ್ಟೊಲೈಟುಗಳಲ್ಲಿ ಎರಡು ಅಥವಾ ಹೆಚ್ಚು ಬಟ್ಟಲು ಸಾಲು ಗಳು ಇರುವುದುಂಟು. ಅವುಗಳಿಗೆ ಅನುಕ್ರಮ ವಾಗಿ ದ್ವಿಪಂಕ್ತಿ ಅಥವಾ ಬಹುಪಂಕ್ತಿ ಸಂಘಗಳು ಎಂದು ಹೆಸರು. ದ್ವಿಪಂಕ್ತಿ ಸಂಘಗಳಲ್ಲಿ ಎರಡು ಸಾಲುಗಳ ಮಧ್ಯೆ ಇರುವ ಕೋನಕ್ಕೆ ವಿಕೇಂದ್ರೀಕರಣ ಕೋನ ಎಂದು ಹೆಸರು. ಈ ಲಕ್ಷಣ ಗ್ರ್ಯಾಪ್ಟೊಲೈಟ್ ಪ್ರಾಣಿಗಳ ವರ್ಗೀಕರಣಕ್ಕೆ ಸಹಾಯಕವಾಗಿದೆ.

ಜಾತಿಜಾತಿಗೂ ಕೆಲವು ವೇಳೆ ಪ್ರಭೇದ ಪ್ರಭೇದಕ್ಕೂ ಬಟ್ಟಲು ಗಳು ಭಿನ್ನವಾಗಿರುತ್ತವೆ. ತುದಿಯಗಾತ್ರ ತುದಿಯ ಕಡೆಗೆ ಹೋದಂತೆಲ್ಲ ಹೆಚ್ಚಾಗುವುದು. ಬಟ್ಟಲುಗಳಿಗೆ ಕೊಳವೆ, ಕೋನ, ಪ್ರಿಸಮ್ ಆಕಾರಗಳು ಇರ ಬಹುದು. ಅವುಗಳಲ್ಲಿ ಪರಸ್ಪರ ಸಂಪರ್ಕ ಇರಬಹುದು



ಡೆಂಡ್ರಾಯ್ಡ್ ಗ್ರ್ಯಾಪ್ಟೊಲೈಟಿನ ರಚನೆ

ಇಲ್ಲವೆ ಇಲ್ಲದಿರಬಹುದು. ಸಿಕ್ಯುಲ ಒಂದು ಟೊಳ್ಳಾದ ಕೋನಾಕಾರದ ಕೊಳವೆ. ಅದರಲ್ಲಿ ಎರಡು ಭಾಗಗಳಿವೆ. ತೆಳು ಹೊದಿಕೆಯ ಮೇಲ್ಭಾಗ; ಬೆಳೆವಣಿಗೆಯ ಗೀರುಗಳಿಂದ ಕೂಡಿದ ದಪ್ಪ ಹೊದಿಕೆಯ ತಳಭಾಗ. ತಳಭಾಗದ ಕೆಳತುದಿಯಲ್ಲಿ ಒಂದು ಮುಳ್ಳು ಉಂಟು. ಮೇಲ್ಭಾಗ ವಿರ್ಗುಲವಾಗಿ ಮುಂದುವರಿಯುತ್ತದೆ. ಸಿಕ್ಯುಲ ಊರುಗೋಲಾಗಿ ಉಪಯುಕ್ತವಾಗಿರುವುದೇ ಅಲ್ಲದೆ ಪ್ರಜನನ ಕಾರ್ಯವನ್ನೂ ನಿರ್ವಹಿಸುವುದು.

ಪ್ರಜನನ ವಿಧಾನ : ಸಿಕ್ಯುಲದ ಮಗ್ಗುಲಲ್ಲಿ ಒಂದು ಕುಡಿ ಹೊರಡುತ್ತದೆ. ಇದು ಮೊದಲನೆಯ ಬಟ್ಟಲಾಗಿ ಪರಿವರ್ತಿಸುತ್ತದೆ. ಬಳಿಕ ಈ ಬಟ್ಟಲು ಇಬ್ಭಾಗವಾಗಿ ಎರಡು ಬಟ್ಟಲುಗಳಾಗುತ್ತವೆ. ಇದೇ ರೀತಿ ಬಟ್ಟಲುಗಳು ಪುನಃ ಪುನಃ ಇಬ್ಭಾಗವಾಗಿ ಅವುಗಳ ಒಂದು ಸಾಲೇ ಆಗುತ್ತದೆ. ದ್ವಿಪಂಕ್ತಿ ಸಂಘಗಳಲ್ಲಿ ಕುಡಿಯ ಜೊತೆಗೆ ಕೊಳವೆಯೊಂದು ಹೊರಡು ತ್ತದೆ. ಇದು ಬೇರೊಂದು ಮಗ್ಗುಲಿಗೆ ಹಾಯ್ದು ಅಲ್ಲಿ ಒಂದು ಬಟ್ಟಲಾಗಿ ಪರಿವರ್ತನೆಗೊಳ್ಳುತ್ತದೆ. ಇದು ಇಬ್ಭಾಗವಾಗಿ ಎರಡು ಬಟ್ಟಲುಗಳಾಗುತ್ತದೆ. ಮೇಲೆ ವಿವರಿಸಿದಂತೆ ಈ ಬಟ್ಟಲುಗಳೂ ಎರಡನೆಯ ಬಟ್ಟಲು ಸಾಲಾಗುತ್ತವೆ. ಜಲಜ ಶಿಲೆಗಳಲ್ಲಿ ಮೆಡೂಸಗಳ ಅವಶೇಷಗಳು ದೊರೆತಿಲ್ಲ. ಆದರೆ ಅವುಗಳ ಜನನ ಗ್ರಂಥಿಗಳನ್ನು ಹೋಲುವ ಕೋಶಗಳು ಸಿಕ್ಕಿವೆ. ಇವುಗಳ ರಚನಾ ವಿಧಾನವನ್ನಾಗಲಿ, ಕ್ರಿಯಾತಂತ್ರವನ್ನಾಗಲಿ ನಿರ್ದಿಷ್ಟವಾಗಿ ಹೇಳುವಂತಿಲ್ಲ. ಗ್ರ್ಯಾಪ್ಟೊಲೈಟುಗಳ ಮೃದು ಭಾಗಗಳು ರಕ್ಷಿಸಲ್ಪಟ್ಟಿಲ್ಲ. ಆದ್ದರಿಂದ ಈ ಪ್ರಾಣಿಗಳು ಯಾವ ವರ್ಗದ ಪ್ರಾಣಿಗಳಿಗೆ ಹತ್ತಿರದ ಸಂಬಂಧಿಗಳೆಂದು ಹೇಳುವುದು ಸುಲಭವಲ್ಲ. ಅಂಗರಚನೆಯ ಸಾಮ್ಯ ಮತ್ತು ಪ್ರಜನನ ಗ್ರಂಥಿಗಳನ್ನು ಪಡೆದಿರುವುದರ ಆಧಾರದ ಮೇಲೆ ಈ ಪ್ರಾಣಿಗಳು ಹೈಡ್ರೊಜ಼ೋವ ವರ್ಗದ ಒಂದು ಶಾಖೆ ಎಂದು ಆಲ್‌ಮನ್ ಅಭಿಪ್ರಾಯಪಟ್ಟಿದ್ದಾನೆ. ಆದರೆ ಹೈಡ್ರೊಜ಼ೋವ ವರ್ಗದ ಪ್ರಾಣಿಗಳಲ್ಲಿ ವಿರ್ಗುಲ, ಸಿಕ್ಯುಲಗಳಿಲ್ಲ. ಗ್ರ್ಯಾಪ್ಟೊಲೈಟುಗಳು ಬೆನ್ನೆಲುಬಿಲ್ಲದ ಪ್ರಾಣಿಗಳ ಮೂಲಶಾಖೆಯೆಂದು ವಿಜ್ಞಾನಿಗಳ ಅಭಿಪ್ರಾಯ. (ಡಿ.ಆರ್.)



ಕ್ಲೈಮಕೊಗ್ರ್ಯಾಪ್ಟಸ್ ಟಿಪಿಕ್ಯಾಲಿಸ್ ಪ್ರಭೇದದ ಬೆಳೆವಣಿಗೆಯ ಮೂರು ಹಂತಗಳು

**ಗ್ರ್ಯಾಫೈಟ್ :** ಖನಿಜವಾಗಿ ದೊರೆಯುವ ಇಂಗಾಲದ ಒಂದು ರೂಪ. ವಜ್ರ ಮತ್ತು ಗ್ರ್ಯಾಫೈಟುಗಳು ಇಂಗಾಲದ ಸ್ಫಟಿಕರೂಪಗಳು. ಗ್ರ್ಯಾಫೈಟ್ ಷಣ್ಮುಖ ರೂಪದ್ದು (ಹೆಕ್ಸಗೊನಲ್). ಇದರ ಹರಳುಗಳು ಸಿಕ್ಕುವುದು ಅಪರೂಪ. ಆದರೆ ಗಮನಿಸಿ ನೋಡಿದಾಗ ಗ್ರ್ಯಾಫೈಟಿನಲ್ಲಿ ಷಣ್ಮುಖ ರೂಪದ ಸಣ್ಣ ಸಣ್ಣ ಕಣಗಳು ಕಂಡುಬರುತ್ತವೆ. ಗ್ರ್ಯಾಫೈಟ್ ಬಹಳ ಮೃದುವಾದ ಖನಿಜ. ಸ್ಪರ್ಶಕ್ಕೆ ಬಲು ನುಣುಪು. ಮುಟ್ಟಿದರೆ ಕೈಮಸಿಯಾಗುವುದು.




ಇದರಿಂದ ಕಾಗದದ ಮೇಲೆ ಗುರುತು ಮಾಡಬಹುದು. ಇದರ ಸಾಪೇಕ್ಷ ಸಾಂದ್ರತೆ 2.09–2.23. ಬಣ್ಣ ಕಪ್ಪು ಇಲ್ಲವೇ ಉಕ್ಕಿನ ಬಣ್ಣ. ಇದು ವಿದ್ಯುದ್ವಾಹಕ. ಶ್ರೀಲಂಕ, ಭಾರತ, ಸೈಬೀರಿಯ, ಕೊರಿಯ, ಅಮೆರಿಕದ ಸಂಯುಕ್ತಸಂಸ್ಥಾನಗಳು ಮೊದಲಾದ ಸ್ಥಳಗಳಲ್ಲಿ ಗ್ರ್ಯಾಫೈಟ್ ದೊರೆಯುತ್ತದೆ. ಮೊದಲಿಗೆ ಮಾಲಿಬ್ಡಿನೈಟ್, ಗೆಲೆನಾ (ಸೀಸದ ಸಲ್ಫೈಡ್) ಎಂಬ ಅದಿರುಗಳು ಮತ್ತು ಗ್ರ್ಯಾಫೈಟ್ ಎಲ್ಲವೂ ಒಂದೇ ವಸ್ತು ಎಂದು ಭ್ರಮಿಸಿದ್ದರು. ಈ ಕಾರಣದಿಂದಲೇ ಪ್ಲಂಬೆಗೋ, ಬ್ಲ್ಯಾಕ್‌ಲೆಡ್ (ಕರೀ ಸೀಸ) ಎಂಬ ಹೆಸರುಗಳು ಪ್ರಚಲಿತವಾದುವು. ರಾಸಾಯನಿಕವಾಗಿ ಗ್ರ್ಯಾಫೈಟ್ ಪಟುವಾದ ವಸ್ತುವಲ್ಲ. ಕ್ರೋಮಿಕ್ ಆಮ್ಲ ಇದನ್ನು ಇಂಗಾಲದ ಡೈಆಕ್ಸೈಡಿಗೆ ಉತ್ಕರ್ಷಿಸುತ್ತದೆ. ನೈಟ್ರಿಕ್ ಆಮ್ಲ ಇದನ್ನು ಗ್ರ್ಯಾಫಿಟಿಕ್ ಆಮ್ಲವೆಂಬ ಒಂದು ಹಳದಿಯ ಪದಾರ್ಥಕ್ಕೆ ಪರಿವರ್ತನೆ ಮಾಡುತ್ತದೆ. ಗ್ರ್ಯಾಫಿಟಿಕ್ ಆಮ್ಲ ಮೆಲಿಟಿಕ್ ಆಮ್ಲವೆಂಬ ಪದಾರ್ಥಕ್ಕೆ ಪರಿವರ್ತನೆ ಆಗುತ್ತದೆ. ಈ ಕ್ರಿಯೆಯಿಂದ ಗ್ರ್ಯಾಫೈಟಿನ ಅಂತಾರಚನೆ ಅಂದರೆ ಅದರಲ್ಲಿ ಇಂಗಾಲದ ಪರಮಾಣುಗಳ ಜೋಡಣೆ ಹೇಗಿದೆ ಎಂಬುದರ ಸುಳಿವು ದೊರೆಯುತ್ತದೆ. ಇಂಗಾಲದ ಪರಮಾಣುಗಳು ಷಟ್ಕೋನಾಕೃತಿಯಲ್ಲಿ ಜೋಡಿಸಲ್ಪಟ್ಟಿವೆ. ಎಕ್ಸ್‌ಕಿರಣ ಪರೀಕ್ಷೆಯಿಂದ ಈ ರಚನೆ ಸ್ಪಷ್ಟಪಟ್ಟಿದೆ. ಇಂಥ ಷಟ್ಕೋನ ಜೋಡಣೆಗಳ ಪದರಗಳು ಒಂದರ ಮೇಲೊಂದಿವೆ.



ಒಂದು ಷಟ್ಕೋನದಲ್ಲಿ ಇಂಗಾಲದ ಪರಮಾಣುಗಳ ಅಂತರ 1.4 Å . ಪದರಗಳ ಅಂತರ 3.4 Å ಪದರಗಳ ನಡುವಣ ಅಂತರ ಹೆಚ್ಚಾಗಿದ್ದು ಈ ಬಂಧ ಬಹಳ ದುರ್ಬಲವಾಗಿರುವುದರಿಂದ ಒಂದು ಪದರ ಇನ್ನೊಂದರ ಮೇಲೆ ಜಾರಲು ಅನುಕೂಲವಾಗಿರುತ್ತದೆ. ಇದು ಗ್ರ್ಯಾಫೈಟಿನ ಮೃದುತ್ವಕ್ಕೂ ಸ್ನೇಹಿ ಗುಣಕ್ಕೂ (ಲ್ಯೂಬ್ರಿಕೇಟಿಂಗ್ ಪ್ರಾಪರ್ಟಿ) ಕಾರಣವಾಗಿದೆ. ಅಲ್ಲದೆ ಇಂಗಾಲದ ಪರಮಾಣುಗಳ ಕೆಲವು ಎಲೆಕ್ಟ್ರಾನುಗಳು ಬಂಧಕ್ಕೊಳಪಡದೆ ಸ್ವತಂತ್ರವಾಗಿರುವುದರಿಂದ ಗ್ರ್ಯಾಫೈಟ್ ವಿದ್ಯುದ್ವಾಹಕವಾಗಿದೆ.



ಗ್ರ್ಯಾಫೈಟಿನ ರಚನೆ

ಗ್ರ್ಯಾಫೈಟಿಗೆ ವೈದ್ಯುತ, ರಾಸಾಯನಿಕ, ಲೋಹವಿದ್ಯೆ, ನ್ಯೂಕ್ಲಿಯರ್ ಮತ್ತು ರಾಕೆಟ್ ಕ್ಷೇತ್ರಗಳಲ್ಲಿ ಅನೇಕ ಉಪಯೋಗಗಳಿವೆ.

ವಿದ್ಯುತ್ ಕುಲುಮೆಗಳಲ್ಲಿ ಎಲೆಕ್ಟ್ರೋಡ್, ಕ್ಲೋರಿನ್, ಕಾಸ್ಟಿಕ್‌ಸೋಡ, ಸೋಡಿಯಮ್, ಮೆಗ್ನೀಷಿಯಂ ಇತ್ಯಾದಿ ವಸ್ತುಗಳ ತಯಾರಿಕೆಯಲ್ಲಿ ಆ್ಯನೋಡ್, ಎಲೆಕ್ಟ್ರಾನಿಕ್ ಕೊಳವೆಗಳಲ್ಲಿ ಆ್ಯನೋಡ್, ಮೋಟಾರ್‌ಬ್ರಷ್, ಉಷ್ಣನಿರೋಧಕ ಮೂಸೆಗಳು, ರಾಸಾಯನಿಕ ಕ್ರಿಯೆಯನ್ನು ನಡೆಸುವ ಪಾತ್ರೆಗಳಲ್ಲಿ ಅಸ್ತರ (ಲೈನಿಂಗ್), ನ್ಯೂಕ್ಲಿಯರ್ ರಿಯಾಕ್ಟರುಗಳಲ್ಲಿ ಮಂದಕಾರಿ (ಮಾಡರೇಟರ್), ರಾಕೆಟ್ ಮೋಟಾರುಗಳ ತುದಿ, ಯಂತ್ರೋಪಕರಣಗಳಲ್ಲಿ ಕೀಲೆಣ್ಣೆಯಾಗಿ ತುಕ್ಕುಹಿಡಿಯದಂತೆ ಮಾಡಲು ಕಬ್ಬಿಣದ ಸಲಕರಣೆಗಳಿಗೆ ಲೇಪನ ಇತ್ಯಾದಿಗಳಲ್ಲಿ ಇದರ ಬಳಕೆಯುಂಟು. ಹೀಗಾಗಿ ಗ್ರ್ಯಾಫೈಟಿನ ಕೃತಕ ತಯಾರಿಕೆಯ ಆವಶ್ಯಕತೆಯುಂಟು. ಆಂಥ್ರಸೈಟ್ ಎಂಬ ಬಗೆಯ ಕಲ್ಲಿದ್ದಲು ಮತ್ತು ಮರಳು, ಇಲ್ಲವೇ ಪೆಟ್ರೋಲಿಯಮ್ ಕೋಕ್, ಕಲ್ಲಿದ್ದಲಿನ ಟಾರ್ ಮತ್ತು ಮರಳುಗಳ ಮಿಶ್ರಣವನ್ನು ವಿದ್ಯುತ್ ಕುಲುಮೆಯಲ್ಲಿ 2,600°–3000° ಸೆಂ. ಉಷ್ಣತೆಗೆ ಕಾಯಿಸುವುದರಿಂದ ಗ್ರ್ಯಾಫೈಟ್ ಉತ್ಪನ್ನವಾಗುತ್ತದೆ. ಮೊದಲು ಸಿಲಿಕಾನ್ ಕಾರ್ಬೈಡ್ ಉತ್ಪನ್ನವಾಗಿ ಅನಂತರ ಇದರ ವಿಭಜನೆಯಿಂದ ಗ್ರ್ಯಾಫೈಟ್ ಉಂಟಾಗುತ್ತದೆಂದು ಊಹಿಸಲಾಗಿದೆ. (ಎನ್.ಎಸ್.ಕೆ.)

**ಗ್ರ್ಯಾವಿಟಾನ್ :** ಗುರುತ್ವಕ್ಷೇತ್ರದ ಕ್ವಾಂಟಮ್ ಎಂದು ಭಾವಿಸಲಾಗಿರುವ ಕಣ. ಗುರುತ್ವಕ್ಷೇತ್ರದ ಕ್ವಾಂಟಮ್ ಸಿದ್ಧಾಂತದಲ್ಲಿ ವಸ್ತುಗಳ ನಡುವಣ ಗುರುತ್ವಾತ್ಮಕ ಅಂತರ ಕ್ರಿಯೆಯ (ಗ್ರ್ಯಾವಿಟೇಷನಲ್ ಇಂಟರ್‌ಆ್ಯಕ್ಷನ್) ವಾಹಕವಾಗಿ ಈ ಕಣ ಪಾತ್ರ ವಹಿಸುತ್ತದೆ ಎನ್ನಬಹುದು. ಇತ್ತೀಚಿನ ವರ್ಷಗಳಲ್ಲಿ ಗುರುತ್ವಕ್ಷೇತ್ರದ (ಅಂದರೆ ಐನ್‌ಸ್ಟೈನ್ ಗುರುತ್ವ ಸಿದ್ಧಾಂತದ) ಕ್ವಾಂಟೀಕರಣದತ್ತ (ಕ್ವಾಂಟೈಸೇಷನ್) ಹೆಚ್ಚಿನ ಲಕ್ಷ್ಯ ಹರಿಸಲಾಗಿದೆ. ಆದರೆ ಗುರುತ್ವ ಕ್ಷೇತ್ರದ ಮೂಲಭೂತ ಅರೇಖೀಯತೆ (ನಾನ್ ಲೀನಿಯಾರಿಟಿ) ಮತ್ತು ಕ್ಷೇತ್ರ ಸಮೀಕರಣಗಳ ಸಾರ್ವತ್ರಿಕ ಸಹವಿಚರಣೆಗಳಿಂದಾಗಿ (ಕೋವೇರಿಯನ್ಸ್) ಗುರುತ್ವಕ್ಷೇತ್ರದ ಕ್ವಾಂಟೀಕರಣ ಇಂದಿಗೂ ಬಹು ತೊಡಕಿನ ಸಮಸ್ಯೆಯಾಗಿಯೇ ಉಳಿದಿದೆ. ಹೀಗಿದ್ದರೂ ದುರ್ಬಲ ಗುರುತ್ವ ಕ್ಷೇತ್ರಗಳಲ್ಲಿ ಅಂದರೆ ಐನ್‌ಸ್ಟೈನ್ ಸಮೀಕರಣಗಳ ದುರ್ಬಲ ಕ್ಷೇತ್ರ ಸನ್ನಿಹಿತತೆಯಲ್ಲಿ (ಅಪ್ರಾಕ್ಸಿಮೇಷನ್) ಕೆಲವು ಗುಣಾತ್ಮಕ ಪರಿಶೀಲನೆಗಳನ್ನು ಮಾಡಬಹುದು.

ಗುರುತ್ವಕ್ಷೇತ್ರವನ್ನು ಪ್ರತಿನಿಧಿಸುವ ಐನ್‌ಸ್ಟೈನ್ ಸಮೀಕರಣಗಳು ಆಕರರಹಿತ ಪ್ರದೇಶಗಳಲ್ಲಿ

$R_{\mu\nu} = 0$ ......(1)

ಎಂದಾಗುತ್ತವೆ. ಗುರುತ್ವ ಕ್ಷೇತ್ರ ಬಹಳ ದುರ್ಬಲವಾದಾಗ ಈ ಸಮೀಕರಣಗಳನ್ನು

$\phi_{\mu\nu} = 0, \qquad \phi_{\mu\nu,\nu} = 0$ ...(2)

ಎಂಬ ಸನ್ನಿಹಿತ ರೂಪದಲ್ಲಿ ಬರೆಯಬಹುದು. ಇಲ್ಲಿ $\phi_{\mu\nu}$ ಎಂಬುವು ಗುರುತ್ವ ವಿಭವ (ಅಥವಾ ಮೆಟ್ರಿಕ್ ಟೆನ್ಸರ್) $g_{\mu\nu}$ ಗೆ ಸಂಬಂಧಿಸಿದ ಕ್ಷೇತ್ರ ಚರಗಳು. ದುರ್ಬಲ ಗುರುತ್ವ ಕ್ಷೇತ್ರಗಳನ್ನು ಪ್ರತಿನಿಧಿಸುವ ಮೇಲಿನ ಸಮೀಕರಣಗಳು (2) ಸಾಪೇಕ್ಷಕವಾಗಿ ಸಹವಿಚರವಾದ (ಕೋವೇರಿಯಂಟ್) ಭ್ರಮಣೆ (ಸ್ಪಿನ್) ಇರುವ ಶೂನ್ಯ ವಿಶ್ರಾಂತಿ ದ್ರವ್ಯರಾಶಿಯ (ರೆಸ್ಟ್ ಮಾಸ್) ಅಲೆ ಸಮೀಕರಣಗಳೆಂಬ ಗಮನಾರ್ಹ ಸಂಗತಿಯನ್ನು ಪೌಲಿ ಮತ್ತು ಫಿಯರ್ಜ್ ಹೊರಗೆಡಹಿದರು (1939). ಇದೇ ಕಾರಣದಿಂದ ಗುರುತ್ವಕ್ಷೇತ್ರದ ಕ್ವಾಂಟಮಿನ, ಅಂದರೆ ಗ್ರ್ಯಾವಿಟಾನಿನ, ಭ್ರಮಣೆ ಇರಬೇಕೆಂದು ಊಹಿಸಲಾಗಿದೆ. ಗುರುತ್ವ ಬಲಗಳ ವ್ಯಾಪ್ತಿ ಅನಂತವಾದ್ದರಿಂದ ಗ್ರ್ಯಾವಿಟಾನಿನ ವಿಶ್ರಾಂತಿ ದ್ರವ್ಯರಾಶಿ ಶೂನ್ಯವಾಗಿರಬೇಕು. (ಗುರುತ್ವಬಲಗಳು $m_g$ ವಿಶ್ರಾಂತಿ ದ್ರವ್ಯರಾಶಿಯ ಗ್ರ್ಯಾವಿಟಾನುಗಳ ವಿನಿಮಯದಿಂದ ಜನಿಸುತ್ತವೆ ಎಂದಾದರೆ, ಗುರುತ್ವಕ್ಷೇತ್ರವನ್ನು ಸ್ಥೂಲವಾಗಿ, ಯುಕಾವ ರೀತಿಯ–ವಿಭವ

$$\phi \sim \frac{1}{\gamma}\exp\left(-m_g c\gamma/\hbar\right)$$

ಎಂಬುದರಿಂದ ಪ್ರತಿನಿಧಿಸಬಹುದು. ಈಗ $\phi$ ಯ ವ್ಯಾಪ್ತಿ ಅನಂತವಾಗಬೇಕಾದರೆ $m_g \sim 0$ ಆಗಬೇಕು).

ಲಭ್ಯವಿರುವ ಅಂದಾಜುಗಳ ಪ್ರಕಾರ $m_g \overset{V}{\sim} 5\times10^{-62}$ gm ಎಂದು ತಿಳಿದುಬರುತ್ತವೆ. ವಿಶ್ರಾಂತಿ ದ್ರವ್ಯರಾಶಿ ಶೂನ್ಯವಾದ್ದರಿಂದ ಗ್ರ್ಯಾವಿಟಾನಿನ ವೇಗ ಬೆಳಕಿನ ವೇಗಕ್ಕೆ ಸಮವಾಗಿರುತ್ತದೆ. ಅಲ್ಲದೆ ಗ್ರ್ಯಾವಿಟಾನಿಗೆ ಚಲನೆಯ ನೇರ ಮತ್ತು ಅದರ ವಿರುದ್ಧ ನೇರಗಳಲ್ಲಿ ಮಾಲಿಕೊಂಡಿರುವ ಭ್ರಮಣ ಕೋನ ಸಂವೇಗವಿರುವ ಎರಡೇ ಭ್ರಮಣ ಸ್ಥಿತಿಗಳಿರುತ್ತವೆ. ಈ ಮೇಲಿನ ಪರಿಗಣನೆಗಳಿಂದ ಗ್ರ್ಯಾವಿಟಾನಿಗೂ ವಿದ್ಯುತ್ಕಾಂತ ಕ್ಷೇತ್ರದ ಕ್ವಾಂಟಮ್ ಆದ ಫೋಟಾನಿಗೂ ಬಹಳ ಹೋಲಿಕೆಯಿರುವುದು ಕಂಡುಬರುತ್ತದೆ. ಗ್ರ್ಯಾವಿಟಾನ್ ಮತ್ತು ಫೋಟಾನುಗಳೆರಡೂ ಶೂನ್ಯ ವಿಶ್ರಾಂತಿ ದ್ರವ್ಯರಾಶಿಯ ಬೋಸ್ ಕಣಗಳು. ಆದ್ದರಿಂದ ಇವು ಗುರುತ್ವಶಕ್ತಿಯ ಕಪ್ಪು–ವಸ್ತು–ವಿಸರಣ ಪ್ಲಾಂಕ್ ನಿಯಮವನ್ನು ಸಂಪೂರ್ಣವಾಗಿ ಪಾಲಿಸುತ್ತವೆ (**ನೋಡಿ– ಕ್ವಾಂಟಂ ಸಂಖ್ಯಾಕಲನಶಾಸ್ತ್ರ**). ಮೂಲ ಕಣಗಳ ನಡುವಿನ ಗುರುತ್ವಾತ್ಮಕ ಅಂತರಕ್ರಿಯೆ ಉಳಿದ ಅಂತರಕ್ರಿಯೆಗಳಿಗೆ ಹೋಲಿಸಿದಾಗ, ತೀರ ಅಗಣನೀಯವಾದ್ದರಿಂದ ಇಂದು ಲಭ್ಯವಿರುವ ಪ್ರಾಯೋಗಿಕ ಭೌತವಿಜ್ಞಾನ ವಿಧಾನಗಳಿಂದ ಸೂಚಿತವಾದ ಗ್ರ್ಯಾವಿಟಾನಿನ ಇರುವಿಕೆ ಹಾಗೂ ಇತರ ಗುಣಗಳ ಪ್ರಾಯೋಗಿಕ ಸಮರ್ಥನೆ ಅಸಾಧ್ಯವೆಂದು ತೋರುತ್ತದೆ. (ಎ.ವಿ.ಜಿ.)

**ಗ್ರ್ಯಾವಿಮೆಟ್ರಿಕ್ ವಿಶ್ಲೇಷಣೆ: ನೋಡಿ – ಭಾರಾತ್ಮಕ ವಿಶ್ಲೇಷಣೆ**

**ಗ್ಲಟನ್ :** ಕಾರ್ನಿವೊರ ಗಣದ ಮಸ್ಟೆಲಿಡೀ ಕುಟುಂಬಕ್ಕೆ ಸೇರಿದ ಒಂದು ಮಾಂಸಾಹಾರಿ ಸ್ತನಿ. ವಲ್ವರೈನ್ ಪರ್ಯಾಯನಾಮ. ಗ್ಯೂಲೊ ಗ್ಯೂಲೊ ಇದರ ಶಾಸ್ತ್ರೀಯ ನಾಮ. ಕೆನಡ, ಆರ್ಕ್‌ಟಿಕ್ ಪ್ರದೇಶದ ದ್ವೀಪಗಳು, ಅಮೆರಿಕ ಸಂಯುಕ್ತ ಸಂಸ್ಥಾನದ ಕ್ಯಾಲಿಫೋರ್ನಿಯ, ಕಾಲರಾಡೋ ರಾಜ್ಯಗಳಲ್ಲಿ ಕಾಣಬರುತ್ತದೆ. ಗ್ಲಟನ್ ಚಿಕ್ಕ ಗಾತ್ರದ ಪ್ರಾಣಿಯಾದರೂ (ಇದರ ಉದ್ದ 0.75–1 ಮೀ. ಎತ್ತರ ಸುಮಾರು 45 ಸೆಂಮೀ) ಬಹಳ ಬಲಿಷ್ಠವಾದ್ದು. ಇದರ ಸರಾಸರಿ ತೂಕ ಸುಮಾರು 15–17.5 ಕಿಗ್ರಾಂ. ಕಾಲುಗಳು ಮೋಟು. ಪಾದಗಳು ಮಾತ್ರ ಅಗಲವಾಗಿವೆ. ಒಂದೊಂದರಲ್ಲೂ ಬಲು ಚೂಪಾದ ಮತ್ತು ಬಾಗಿದ ನಖಗಳುಳ್ಳ 5 ಬೆರಳುಗಳಿವೆ. ದೇಹವೆಲ್ಲ ಕಪ್ಪು ಮಿಶ್ರಿತ ಕಂದುಬಣ್ಣದ ದಟ್ಟ ತುಪ್ಪಳಿನಿಂದ ಆವೃತವಾಗಿದೆ. ದೇಹದ ಅಕ್ಕಪಕ್ಕಗಳಲ್ಲಿ ಭುಜದಿಂದ ಪೃಷ್ಠದವರೆಗೆ ತಿಳಿ ಕಂದುಬಣ್ಣದ ಪಟ್ಟೆಗಳಿವೆ. ಗುದದ್ವಾರದ ಬಳಿ ದುರ್ಗಂಧಪೂರಿತವಾದ ಮತ್ತು ಹಳದಿ ಬಣ್ಣದ ದ್ರವವನ್ನು ಸ್ರವಿಸುವ ಗ್ರಂಥಿಗಳಿವೆ.



ಗ್ಲಟನ್ ಏಕಾಂತಜೀವಿ. ಪ್ರತಿ ಪ್ರಾಣಿಯೂ ತನ್ನದೇ ಆದ ಅಧೀನ ಪ್ರಾಂತ್ಯವೊಂದನ್ನು ಗುರುತಿಸಿಕೊಂಡು ಅದರೊಳಗೇ ಕಾಲ ಕಳೆಯುತ್ತದೆ. ಸಾಮಾನ್ಯವಾಗಿ ಇದರ ಚಟುವಟಿಕೆಯೆಲ್ಲ ಭೂಮಿಯ ಮೇಲೆಯೇ ಇದ್ದರೂ ಕೆಲವೊಮ್ಮೆ ಮರಗಳನ್ನೇರುವುದೂ ಉಂಟು. ಇದು ತನ್ನ ಹೊಟ್ಟೆಬಾಕತನಕ್ಕೆ ಹೆಸರುವಾಸಿ (ಇದರಿಂದಲೇ ಇದಕ್ಕೆ ಗ್ಲಟನ್ ಎಂಬ ಹೆಸರು ಬಂದಿದೆ). ಇದು ಸಣ್ಣಪುಟ್ಟ ಸ್ತನಿಗಳು, ಹಕ್ಕಿಗಳು ಮತ್ತು ಅವುಗಳ ಮೊಟ್ಟೆಗಳು, ಸತ್ತ ಪ್ರಾಣಿಗಳು ಮುಂತಾದವನ್ನೆಲ್ಲ ತಿನ್ನುತ್ತದೆ. ಕಾಯಿ, ಬೀಜಗಳನ್ನೂ ತಿನ್ನುವುದುಂಟು. ಕೆಲವು ಸಲ ಬೇಟೆಗಾರರು ಬೇರೆ ಪ್ರಾಣಿಗಳನ್ನು ಹಿಡಿಯಲೆಂದು ಒಡ್ಡಿದ ಬಲೆಗಳನ್ನು ಕೊಳ್ಳೆ ಹೊಡೆದು ಅದರಲ್ಲಿ ಸಿಕ್ಕಿಕೊಂಡಿರಬಹುದಾದ ಪ್ರಾಣಿಗಳನ್ನು ತಿನ್ನುತ್ತದೆ. ಇದು ಬಹಳ ಸೂಕ್ಷ್ಮ, ಜಾಗರೂಕ ಹಾಗೂ ಕಪಟಿ. ವಿವಿಧ ಬಗೆಯ ವಸ್ತುಗಳನ್ನು ಕದಿಯುವುದರ ಜೊತೆಗೆ ಅವನ್ನು ಬಚ್ಚಿಡುವ ಸ್ವಭಾವವೂ ಇದಕ್ಕಿದೆ. ತನ್ನ ಗಾತ್ರಕ್ಕಿಂತ ಹೆಚ್ಚು ದೊಡ್ಡದಾದ ಹಾಗೂ ಶಕ್ತಿಯುತವಾದ ಪ್ರಾಣಿಗಳನ್ನು ಎದುರಿಸಿ ಸೆಣಸುವುದುಂಟು.

ಇದರ ಸಂತಾನಾಭಿವೃದ್ಧಿಯ ಕಾಲ ಮಾರ್ಚ್ ತಿಂಗಳು. ಗರ್ಭಧರಿಸಿದ ಹೆಣ್ಣು ಗಂಡಿನಿಂದ ಬೇರೆ ಹೋಗಿ ಮರದ ಪೊಟರೆಯಲ್ಲಿ ಇಲ್ಲವೆ ಬಂಡೆಯ ಸಂದುಗಳಲ್ಲಿ ತನ್ನದೇ ಆದ ನೆಲೆಯನ್ನು ಸ್ಥಾಪಿಸಿಕೊಳ್ಳುತ್ತದೆ. ಸುಮಾರು 9 ವಾರಗಳ ಅನಂತರ 4 – 5 ಮರಿಗಳನ್ನು ಹಾಕುತ್ತದೆ. ಮರಿಗಳು ಸುಮಾರು 2 ವರ್ಷಗಳ ಕಾಲ ತಾಯೊಂದಿಗೇ ಇದ್ದು ಆಮೇಲೆ ಬೇರೆ ಹೋಗುತ್ತವೆ. ಗ್ಲಟನನ್ನು ಅದರ ತುಪ್ಪಳಕ್ಕಾಗಿ ಬೇಟೆಯಾಡುವುದಿದೆ. ಸೀಲ್, ವೀಸೆಲ್, ಮಿಂಕ್ ಮುಂತಾದವುಗಳ ತುಪ್ಪಳಕ್ಕಿರುವಷ್ಟು ಬೇಡಿಕೆ ಇದಕ್ಕಿಲ್ಲವಾದರೂ ಗ್ಲಟನಿನ ತುಪ್ಪಳ ಎಂಥ ಕಡುಚಳಿಯಲ್ಲೂ ಗಡುಸಾಗದೆ ಕೆಡದೆ ಇರುವುದರಿಂದ ಉತ್ತರ ಮೇರು ಪ್ರದೇಶಗಳಲ್ಲಿ ಉಪಯುಕ್ತವೆನಿಸಿದೆ. (ಕೆ.ಪಿ.ಆರ್.)

**ಗ್ಲಾಕ್ಸಿನಿಯ :** ಜೆಸ್ನೇರಿಯೇಸೀ ಕುಟುಂಬಕ್ಕೆ ಸೇರಿದ ಸಿನಿಂಜಿಯ ಸ್ಪೀಶಿಯೋಸ ಪ್ರಭೇದದ ಹಲವಾರು ಅಲಂಕಾರ ಸಸ್ಯಗಳಿಗಿರುವ ಸಾಮಾನ್ಯ ಹೆಸರು. ಎಲ್ಲವೂ ಬ್ರೆಜಿಲಿನ ಮೂಲನಿವಾಸಿಗಳು. ಮೃದುವಾದ ಮಖಮಲಿನಂಥ ಎಲೆಗಳನ್ನೂ ಅಪಾರವಾದ ವರ್ಣ ವೈವಿಧ್ಯವುಳ್ಳ ಹೂಗಳನ್ನೂ ಪಡೆದಿರುವುದರಿಂದ ಇವನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ ಕುಂಡ ಸಸ್ಯಗಳನ್ನಾಗಿ ಬೆಳೆಸುತ್ತಾರೆ.



ಗ್ಲಾಕ್ಸಿನಿಯದಲ್ಲಿ ಸುಮಾರು 25 ಬಗೆಗಳಿವೆ. ಎಲ್ಲವೂ ಚಿಕ್ಕಗಾತ್ರದ ಬಹುವಾರ್ಷಿಕ ಮೂಲಿಕೆಗಳು. ಇವುಗಳಲ್ಲೆಲ್ಲ ನೆಲದೊಳಗೇ ಹುದುಗಿ ಬೆಳೆಯುವ ಟ್ಯೂಬರ್ ಮಾದರಿಯ ಪ್ರಕಂದವಿದೆ. ಇದರಿಂದ ಕವಲೊಡೆಯದ ಇಲ್ಲವೆ ಕವಲೊಡೆದ ಅನೇಕ ಕಾಂಡಗಳು ಹುಟ್ಟಿ ನೆಲದಿಂದ ಮೇಲಕ್ಕೆ ಬೆಳೆಯುತ್ತವೆ (ಕೆಲವು ಬಗೆಗಳಲ್ಲಿ ಈ ತೆರನ ಕಾಂಡವಿರುವುದಿಲ್ಲ). ಎಲೆಗಳು ಕಾಂಡಗಳ ಮೇಲೆ ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿವೆ. ಎಲೆಗಳಿಗೆ ಉದ್ದನೆಯ ತೊಟ್ಟಿದೆ. ಹೂಗಳು ಒಂಟೊಂಟಿಯಾಗಿ ಇಲ್ಲವೆ ಹೂಗೊಂಚಲುಗಳಲ್ಲಿ ಅರಳುತ್ತವೆ. ಹೂಗಳ ಬಣ್ಣ ಬಿಳಿ, ನಸುಗೆಂಪು, ಕಡುಗೆಂಪು, ನೀಲಿ, ಊದಾ – ಹೀಗೆ ವೈವಿಧ್ಯಮಯ. ಜೊತೆಗೆ ದಳಸಮೂಹದ ಗಂಟಲಿನ ಬಳಿ ಚೆಲುವಾದ ಚುಕ್ಕಿಗಳಿದ್ದು ಹೂವಿನ ಅಂದವನ್ನು ಹೆಚ್ಚಿಸುತ್ತವೆ. ಪ್ರತಿ ಹೂವಿನಲ್ಲಿ 5 ದಳಗಳಿಂದ ಕೂಡಿದ ಸಂಯುಕ್ತ ಮಾದರಿಯ ಹಾಗೂ ಗಂಟೆಯಾಕಾರದ ದಳ ಸಮೂಹ, 4 ಕೇಸರಗಳು ಮತ್ತು ಎರಡು ಕಾರ್ಪೆಲುಗಳ ಉಚ್ಚಸ್ಥಾನದ ಅಂಡಾಶಯ ಇವೆ. ಕೇಸರಗಳ ಪರಾಗಕೋಶಗಳು ಜೊತೆ ಜೊತೆಯಾಗಿ ಸೇರಿಕೊಂಡುಬಿಟ್ಟಿದೆ. ಬಹುಪಾಲು ಬಗೆಗಳಲ್ಲಿ ದಳ ಸಮೂಹ ಒಂಟಿ ಸುತ್ತಿನದಾದರೂ ಕೆಲವಲ್ಲಿ ಎರಡು ಸುತ್ತಿನದಾಗಿರುವುದುಂಟು.

ಗ್ಲಾಕ್ಸಿನಿಯದ ವಿವಿಧ ಬಗೆಗಳಲ್ಲಿ ಸ್ಪೀಶಿಯೋಸ, ಡೈವರ್ಸಿಫೋಲಿಯ, ಜೆಸ್ನೆರಾಯ್ಡಿಸ್, ಗ್ಲಾಬ್ರ, ಮ್ಯಾಕ್ಯುಲೇಟ ಮತ್ತು ಮಲ್ಟಿಫ್ಲೋರಗಳು ಬಲು ಮುಖ್ಯವಾದವು.

ಗ್ಲಾಕ್ಸಿನಿಯದ ವೃದ್ಧಿಗೆ ಉಷ್ಣ ಹವಾಗುಣ ಉತ್ತಮ. ಎಲ್ಲ ಬಗೆಗಳನ್ನೂ ಬೀಜಗಳಿಂದ, ಪ್ರಕಂದದ ತುಂಡುಗಳಿಂದ ಇಲ್ಲವೆ ಎಲೆಗಳಿಂದ ವೃದ್ಧಿಸಬಹುದು. (ಎಂ.ಎಚ್.ಎಂ.)

**ಗ್ಲಾಬರ್ ಲವಣ :** ಸೋಡಿಯಮ್ ಸಲ್ಫೇಟ್ ಲವಣದ ಹರಳುಗಳು: ರಾಸಾಯನಿಕ ಅಣುಸೂತ್ರ $Na_2SO_4 10H_2O$. ಸೋಡಿಯಮ್ ಕ್ಲೋರೈಡಿನಿಂದ ಹೈಡ್ರೋಕ್ಲೋರಿಕ್ ಆಮ್ಲವನ್ನು ತಯಾರಿಸುವ ವಿಧಾನದಲ್ಲಿ ದೊರೆಯುವ ಉಪೋತ್ಪನ್ನವಿದು. ನೈಸರ್ಗಿಕವಾಗಿ ದೊರೆಯುವ ಇದೇ ಲವಣಕ್ಕೆ ಮಿರಾಬಲೈಟ್ ಎಂದು ಹೆಸರು. ಗ್ಲಾಬರ್ ಲವಣ ಪಾರದರ್ಶಕಗಳಾದ ದೊಡ್ಡ ಹರಳುಗಳ ರೂಪದಲ್ಲಿ ದೊರೆಯುತ್ತದೆ. ಸಣ್ಣ ಸಣ್ಣ ಸೂಜಿರೂಪದಲ್ಲಿ ಅಥವಾ ಚೂರ್ಣದ ರೂಪದಲ್ಲಿ ದೊರೆಯುವುದೂ ಉಂಟು. $33^0$ ಸೆ.ನಲ್ಲಿ ದ್ರವಿಸುತ್ತದೆ. $100^0$ ಸೆಂ.ನಲ್ಲಿ ಸ್ಫಟಿಕಜಲವನ್ನು (ವಾಟರ್ ಆಫ್ ಹೈಡ್ರೇಷನ್) ಕಳೆದುಕೊಳ್ಳುತ್ತದೆ. ನೀರು ಮತ್ತು ಗ್ಲಿಸರಿನ್ನಿನಲ್ಲಿ ವಿಲೀನವಾದರೂ ಆಲ್ಕೊಹಾಲಿನಲ್ಲಿ (ಈಥೈಲ್ ಆಲ್ಕೊಹಾಲ್) ವಿಲೀನವಾಗುವುದಿಲ್ಲ. ಸಾರ ಆಮ್ಲ ಮತ್ತು ಸಾರ ಪ್ರತ್ಯಾಮ್ಲಗಳ ಸಂಯೋಗದಿಂದ ಉತ್ಪತ್ತಿಯಾಗುವ ಲವಣವಾದ್ದರಿಂದ ಜಲೀಯ ದ್ರಾವಣ ಲಿಟ್ಮಸ್ಸಿಗೆ ತಟಸ್ಥವಾಗಿರುತ್ತದೆ. ಈ ಲವಣವನ್ನು ಮುಖ್ಯವಾಗಿ ಬಟ್ಟೆಗಳಿಗೆ ಬಣ್ಣಹಾಕುವ ಉದ್ಯಮದಲ್ಲಿ ಬಳಸುತ್ತಾರೆ. ಕ್ರಾಫ್ಟ್ ಕಾಗದ, ಕಾಗದದ ರಟ್ಟು ಮತ್ತು ಗಾಜಿನ ತಯಾರಿಕೆಯಲ್ಲಿ, ಚಲುವೆಕಾರಿಗಳ ಉತ್ಪಾದನೆಯಲ್ಲಿ ಸೆರಾಮಿಕ್ (ಮೃಣ್ಮಯ) ಪಾತ್ರೆಗಳಿಗೆ ಹೊಳಪು ಕೊಡುವುದರಲ್ಲಿ, ಚರ್ಮವನ್ನು ಹದಮಾಡುವುದರಲ್ಲಿ, ಔಷಧಿಗಳ ತಯಾರಿಕೆಯಲ್ಲಿ ಮತ್ತು ಘನೀಕರಣ ಮಿಶ್ರಣಗಳಲ್ಲಿ (ಫ್ರೀ ಜಿಂಗ್ ಮಿಕ್ಸ್‌ಚರ್ಸ್) ಈ ಲವಣದ ಬಳಕೆ ಉಂಟು. (ಎಚ್.ಎಸ್.ಎಸ್.)

**ಗ್ಲಾಬ್ಯುಲಿನ್ :** ರಕ್ತದ ವಸೆಯಲ್ಲೂ ಹಾಲೊಡಕಿನಲ್ಲೂ (ಮಸ್ತಿ) ಇರುವ ಒಂದು ಬಗೆಯ ಪ್ರೋಟೀನು ಸಂಯುಕ್ತ. ಹಾಲಿನಲ್ಲಿರುವ ಗ್ಲಾಬ್ಯುಲಿನ್ನಿಗೆ ಲ್ಯಾಕ್ಟೊಗ್ಲಾಬ್ಯುಲಿನ್ ಎಂಬ ಹೆಸರೂ ಇದೆ. ಹಾಲೊಡಕಿನಲ್ಲಿ ಇದರ ಮೊತ್ತ ಶೇ. 0.1ನ್ನು ಮೀರುವುದಿಲ್ಲ. ಆದರೆ ಅದೇ ತಾನೆ ಕರುಹಾಕಿದ ಹಸುವಿನ ಹಾಲಿನಲ್ಲಿ ಮಾತ್ರ ಇದರ ಮೊತ್ತ ಗಣನೀಯವಾಗಿರುತ್ತದೆ (ಇನ್ನೊಂದು ಬಗೆಯ ಪ್ರೋಟೀನಾದ ಆಲ್ಬ್ಯುಮಿನ್ನೂ ಸೇರಿ ಇದರ ಮೊತ್ತ ಶೇ. 11–12 ರಷ್ಟಿರಬಹುದು). 24 ಗಂಟೆಗಳ ಅನಂತರ ಈ ಪರಿಮಾಣ ಶೀಘ್ರವಾಗಿ ಇಳಿದುಹೋಗುತ್ತದೆ. ಅನೇಕ ಬಗೆಯ ರೋಗಗಳ ವಿರುದ್ಧ ಪ್ರತಿವಸ್ತುಗಳ (ಆ್ಯಂಟಿಬಾಡೀಸ್) ತಯಾರಿಕೆಯಲ್ಲಿ ಗ್ಲಾಬ್ಯುಲಿನ್ ಪ್ರಮುಖ ಪಾತ್ರ ವಹಿಸುತ್ತದೆ. ಇಂಥ ಪ್ರತಿವಸ್ತುಗಳು ಹೆಚ್ಚು ಮೊತ್ತದಲ್ಲಿರುವ ತಾಯಿಯ ಹಾಲನ್ನು ಕರುಗಳು ಕುಡಿದಾಗ ಅವಕ್ಕೂ ತಾತ್ಕಾಲಿಕ ಬಗೆಯ ರೋಗನಿರೋಧಕಗಳ ಸಾಮರ್ಥ್ಯ ಬರುತ್ತದೆ.

ಗ್ಲಾಬ್ಯುಲಿನ್ನಿನಲ್ಲಿ ಆಲ್ಫ, ಬೀಟ, ಗ್ಯಾಮ ಎಂಬ ಮೂರು ಮುಖ್ಯ ಬಗೆಗಳಿವೆ. ಇವನ್ನು ವಿದ್ಯುತ್‌ಕ್ಷೇತ್ರ ಚಲನದಿಂದ (ಎಲೆಕ್ಟ್ರೊಫೋರೆಸಿಸ್) ಬೇರ್ಪಡಿಸಿ ಗುರುತಿಸಲಾಗಿದೆ. ಇವುಗಳ ಒಂದೊಂದು ಬಗೆಯಲ್ಲೂ ಅನೇಕ ರೀತಿಯ ಪ್ರೋಟೀನುಗಳಿವೆ. ಉದಾಹರಣೆಗೆ ಆಲ್ಫ ಬಗೆಯಲ್ಲಿ ಹ್ಯಾಪ್ಟೊಗ್ಲಾಬಿನ್, ಸೆರುಲೋಪ್ಲಾಸ್ಮಿನ್, $a_2$ ಮ್ಯಾಕ್ರೊಗ್ಲಾಬ್ಯುಲಿನುಗಳೂ ಬೀಟ ಗ್ಲಾಬ್ಯುಲಿನುಗಳಲ್ಲಿ ಟ್ರಾನ್ಸ್‌ಫರಿನ್, ಬೀಟ ಲೈಪೋಪ್ರೋಟೀನುಗಳೂ ಗ್ಯಾಮ ಗ್ಲಾಬ್ಯುಲಿನುಗಳಲ್ಲಿ 5 ರೀತಿಯ ಇಮ್ಯೂನೋ ಗ್ಲಾಬ್ಯುಲಿನುಗಳೂ ಇವೆ. (ಪಿ.ಎಸ್.ಆರ್.ಎ.)

**ಗ್ಲಾಸಾಪ್ಟರಿಸ್ :** ಟೆರಿಡೋಸ್ಪರ್ಮ್ ಸಸ್ಯಕುಲಕ್ಕೆ ಸೇರಿದ ಅತಿ ಮುಖ್ಯವಾದ ಒಂದು ಗತವಂಶೀಯ ಸಸ್ಯಜಾತಿ. ಇದು ಪೇಲಿಯೋಜ಼ೋಯಿಕ್ ಯುಗದ ಉತ್ತರಾರ್ಧ ಮತ್ತು ಮಿಸೋಜ಼ೋಯಿಕ್ ಯುಗದ ಪೂರ್ವಾರ್ಧದಲ್ಲಿ ಗೋಂಡ್ವಾನ ಖಂಡದ ಸಸ್ಯ ವೈಶಿಷ್ಟ್ಯವಾಗಿತ್ತು. ಈ ಸಸ್ಯದೊಡನೆ ಕಂಡುಬರುವ ಗಂಗಮಾಪ್ಟರಿಸ್, ವರ್ಟಿಬ್ರೇರಿಯ ಮುಂತಾದ ಸಸ್ಯಜಾತಿಗಳನ್ನೆಲ್ಲ ಕೂಡಿಸಿ ಗ್ಲಾಸಾಪ್ಟರಿಸ್ ಸಸ್ಯ ಸಮೂಹ ಎಂದು ಕರೆಯಲಾಗಿದೆ. ಇದು ಗೋಂಡ್ವಾನ ಯುಗದ ಮೊದಲಲ್ಲಿ ಹಿಮಯುಗದ ಸನ್ನಿವೇಶಗಳಲ್ಲಿ ಕಾಣಿಸಿಕೊಂಡು ಪೂರ್ವಾರ್ಧದಲ್ಲಿ ವಿಶೇಷವಾಗಿತ್ತು. ಇದರ ಅವಶೇಷಗಳು ಭಾರತದಲ್ಲೇ ಅಲ್ಲದೆ ಗೋಂಡ್ವಾನ ಖಂಡದ ಭಾಗಗಳಾಗಿದ್ದ ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಆಸ್ಟ್ರೇಲಿಯಗಳಲ್ಲೂ ಕಂಡುಬಂದಿವೆ.



ಗ್ಲಾಸಾಪ್ಟರಿಸ್ ಸಸ್ಯದ ಎಲೆ

ಗ್ಲಾಸಾಪ್ಟರಿಸ್ ಸಸ್ಯದ ಎಲೆಗಳು ಸರಳ, ಅಂಚು ನೀಳ. ಪರ್ಣಭಾಗದಲ್ಲಿ ಮಧ್ಯನಾಳ ಉಂಟು. ಕಮಾನಿನಾಕಾರದ ಕಿರುನಾಳ ವಿನ್ಯಾಸವನ್ನು ಕಾಣಬಹುದು. ಗ್ಲಾಸಾಪ್ಟರಿಸ್ ಎಲೆಯಲ್ಲಿ ಪುನರುತ್ಪತ್ತಿ ಅಂಗಗಳ ಇರುವಿಕೆ ನಿರ್ದಿಷ್ಟವಾಗಿಲ್ಲ. ಗಂಗಮಾಪ್ಟರಿಸ್ ಎಲೆ ಗ್ಲಾಸಾಪ್ಟರಿಸ್ ಎಲೆಯಂತೆಯೇ ಇದೆ. ಆದರೆ ಅದರಲ್ಲಿ ಮಧ್ಯನಾಳ ಇಲ್ಲ. ಗ್ಲಾಸಾಪ್ಟರಿಸ್ ಸಸ್ಯದ ಅವಶೇಷಗಳು ಭಾರತದ ಗೋಂಡ್ವಾನ ಸ್ತರಗಳ ಕೆಳವಿಭಾಗಕ್ಕೆ ಸೇರಿದ ತಾಲಚೇರ್, ಬರಕಾರ್ ಮತ್ತು ರಾಣಿಗಂಜ್ ಹಂತಗಳಲ್ಲಿ ಕಂಡುಬಂದಿವೆ. (ಎಂ.ವಿ.ಎ.ಎಸ್.)

**ಗ್ಲಾಸಿನ ನೊಣ :** ಡಿಪ್ಟರ ಗಣದ ಮಸ್ಕಿಡೀ ಕುಟುಂಬಕ್ಕೆ ಸೇರಿದ ಒಂದು ನೊಣ. ಟ್ಸೆಟ್ಸೀನೊಣ ಪರ್ಯಾಯನಾಮ. ಇದರಲ್ಲಿ ಸುಮಾರು 21 ಪ್ರಭೇದಗಳು ಇವೆ. ಅರೇಬಿಯದ ನೈರುತ್ಯ ಭಾಗದಲ್ಲಿ ಕಾಣಸಿಗುವ ಒಂದು ಪ್ರಭೇದವನ್ನು ಬಿಟ್ಟರೆ ಉಳಿದೆಲ್ಲವೂ ಆಫ್ರಿಕದಲ್ಲಿ ಮಾತ್ರ ಜೀವಿಸುತ್ತವೆ. ಗ್ಯಾಂಬಿಯ, ನೈಜೀರಿಯ, ಅಬಿಸೀನಿಯ, ಕೀನ್ಯ, ಉಗಾಂಡ, ಕಾಂಗೊ, ಅಂಗೋಲ ಮುಂತಾದೆಡೆಗಳಲ್ಲಿ ದಟ್ಟ ಕಾಡುಗಳಲ್ಲಿ ನೀರಿನ ಆಸರೆಯಿರುವಂಥಲ್ಲಿ ಇವುಗಳ ವಾಸ. ಇವು ದನ, ಕುದುರೆ ಮುಂತಾದ ಪ್ರಾಣಿಗಳ ಹಾಗೂ ಮಾನವನ ರಕ್ತವನ್ನು ಹೀರಿ ಬದುಕುತ್ತವೆ. ಇವುಗಳಲ್ಲಿ ಕೆಲವು ಬಗೆಯವು ಮನುಷ್ಯನಲ್ಲೂ ಪ್ರಾಣಿಗಳಲ್ಲೂ ನಿದ್ರಾವಾತರೋಗವನ್ನು (ಸ್ಲೀಪಿಂಗ್ ಸಿಕ್‌ನೆಸ್) ಉಂಟುಮಾಡುವ ರೋಗಾಣುಗಳ ವಾಹಕಗಳು. ಇಂಥ ರೋಗವಾಹಕ ನೊಣಗಳಲ್ಲಿ ಮುಖ್ಯವಾದವು ಪಶ್ಚಿಮ ಮತ್ತು ಮಧ್ಯ ಆಫ್ರಿಕದಲ್ಲಿ ಕಾಣಸಿಗುವ ಗ್ಲಾ. ಪಾಲ್ಪಾಲಿಸ್ ಮತ್ತು ಪೂರ್ವ ಆಫ್ರಿಕದಲ್ಲಿ ಜೀವಿಸುವ ಗ್ಲಾ. ಮಾರ್ಸಿಟಾನ್ಸ್.

ಎಲ್ಲ ಬಗೆಯ ಗ್ಲಾಸಿನ ನೊಣಗಳೂ ದೃಢಕಾಯದ ಕೀಟಗಳು. ಇವುಗಳ ಗಾತ್ರ ಸಾಮಾನ್ಯ ನೊಣಕ್ಕಿಂತ ಹೆಚ್ಚು. ದೇಹದ ಬಣ್ಣ ಹಳದಿಯಿಂದ ಕಗ್ಗಂದಿನವರೆಗೆ ವ್ಯತ್ಯಾಸವಾಗುತ್ತದೆ. ಉದರ ಭಾಗದ ಮೇಲೆ ಪಟ್ಟಿಗಳಿವೆ. ಬಾಯ ವಿವಿಧ ಭಾಗಗಳು ಆತಿಥೇಯ ಪ್ರಾಣಿಯ ದೇಹವನ್ನು ಚುಚ್ಚಿ ರಕ್ತಹೀರಲು ಅನುಕೂಲವಾಗಿವೆ. ರಕ್ತ ಹೀರುವಾಗ

ಕೆಳಕ್ಕೆ ಬಾಗುವ ಇವು ಬೇರೆ ಸಮಯಗಳಲ್ಲಿ ಸಮತಳವಾಗಿ ಇರುತ್ತವೆ. ಆಂಟೆನದ ಮೇಲೆ ಒಂದು ಬಿರುಗೂದಲಿನಂಥ ಅಂಗವಿದೆ. ಇದರ ಮೇಲೆ ಒಂಟಿಸಾಲಿನಲ್ಲಿ ಉದ್ದನೆಯ ಮತ್ತು ಕವಲೊಡೆದ ಕೂದಲುಗಳಿವೆ.

ಗ್ಲಾಸಿನ ನೊಣಗಳ ಆಯಸ್ಸು 1 – 3 ತಿಂಗಳುಗಳು. ಇವುಗಳಲ್ಲಿನ ಸೋಜಿಗದ ಸಂಗತಿಯೆಂದರೆ ಇವು ಮೊಟ್ಟೆಗಳನ್ನಿಡದೆ ನೇರವಾಗಿ ಮರಿಗಳನ್ನೇ ಹಾಕುವುದು. ಸಾಮಾನ್ಯವಾಗಿ ನೀರಿನ ಆಸರೆಯಿರುವಂಥ ಸ್ಥಳಗಳಲ್ಲಿ ಹೆಣ್ಣು ನೊಣ 10 ದಿವಸಗಳಿಗೊಮ್ಮೆ ಮರಿ ಹಾಕುತ್ತದೆ. ಮರಿಗಳ ಭ್ರೂಣಾವಸ್ಥೆ ಮತ್ತು ಡಿಂಭಾವಸ್ಥೆಗಳ ಅವಧಿ ಸುಮಾರು 9 ದಿವಸಗಳು. ತಾಯಿಯ ಗರ್ಭಕೋಶದ ಭಿತ್ತಿಯ ಮೇಲಿರುವ ಒಂದು ಜೊತೆ ಕ್ಷೀರಗ್ರಂಥಿಗಳಿಂದ ಒಸರುವ ದ್ರವರೂಪದ ಆಹಾರವನ್ನು ಕುಡಿದು ಮರಿಗಳು ಬೆಳೆಯುತ್ತವೆ. ಡಿಂಭಗಳು ಅನಂತರ ಮಣ್ಣನ್ನು ಕೊರೆದುಕೊಂಡು ಒಳಸೇರಿ ಕೋಶಾವಸ್ಥೆಯನ್ನು ಕಳೆಯುತ್ತವೆ. ಅನೇಕ ವಾರಗಳ ಮೇಲೆ ಪ್ರೌಢಜೀವಿಗಳಾಗಿ ಹೊರಬರುತ್ತವೆ.

ಗ್ಲಾಸಿನ ನೊಣಗಳ ಚಟುವಟಿಕೆ ವಾತಾವರಣದ ಉಷ್ಣತೆ ಮತ್ತು ಆರ್ದ್ರತೆಗಳನ್ನು ಅವಲಂಬಿಸಿ ಹೆಚ್ಚು ಕಡಿಮೆಯಾಗುತ್ತದೆ. ಉಷ್ಣತೆ ಹೆಚ್ಚಾಗಿದ್ದಾಗ, ಅಲ್ಲದೆ ಬೆಳಗ್ಗೆ ಹಾಗೂ ಸಂಜೆ ಇವುಗಳ ಚಟುವಟಿಕೆ ಹೆಚ್ಚು. ಗ್ಲಾ. ಬ್ರೆವಿಪಾಲ್ಪಾಲಿಸ್ ಎಂಬುದಕ್ಕೆ ಮಾತ್ರ ರಾತ್ರಿ ಕಾಲದಲ್ಲಿ ಚಟುವಟಿಕೆ ಉಂಟು. ಇವು ಜೀವಿಸುವ ಪೊದೆಗಳನ್ನು ನಾಶಮಾಡುವುದರಿಂದ, ಕೀಟನಾಶಕಗಳನ್ನು ಬಳಸಿ ಗ್ಲಾಸಿನ ನೊಣಗಳನ್ನು ನಿವಾರಿಸುತ್ತಾರೆ. (ಜಿ.ಆರ್.ಆರ್.ಎಸ್.)

**ಗ್ಲಾಸಿ ಹೆನ್ರಿ :** 1941–. ಅಮೆರಿಕದ ಜಾನಪದ ತಜ್ಞ. ಈತ 1941ರ ಮಾರ್ಚ್ 24ರಂದು ಜನಿಸಿದ. ಈತ 1964ರಲ್ಲಿ ಬಿ.ಎ. ಪದವಿಯನ್ನು ತುಲನೆ ವಿಶ್ವವಿದ್ಯಾಲಯ ದಿಂದಲೂ 1965ರಲ್ಲಿ ಎಂ.ಎ. ಪದವಿಯನ್ನು ನ್ಯೂಯಾರ್ಕ್ ವಿಶ್ವವಿದ್ಯಾಲಯದಿಂದಲೂ ಪಡೆದ. 1969ರಲ್ಲಿ ಪೆನ್ಸಿಲ್‌ವೇನಿಯ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದ. ಸಂಶೋಧನೆಯನ್ನು ಮಾಡುವ ಸಮಯದಲ್ಲಿ ಪೆನ್ಸಿಲ್‌ವೇನಿಯ ಪ್ರಾಂತದ ಜಾನಪದ ತಜ್ಞನಾಗಿ ಸೇವೆ ಸಲ್ಲಿಸಿದ. ಈತನಿಗೆ 1972ರಲ್ಲಿ ಗುಗ್ಗೆನ್‌ಹೈಮ್ ಫೆಲೋಶಿಪ್ ಲಭಿಸಿತು. ಈತ ಅಮೆರಿಕನ್ ಫೋಕ್‌ಲೋರ್ ಸೊಸೈಟಿಯ ಮತ್ತು ವರ್ನಾಕ್ಯುಲರ್ ಆರ್ಕಿಟೆಕ್ಚರ್ ಫೋರಮ್‌ನ ಹಿಂದಿನ ಅಧ್ಯಕ್ಷನೂ ಆಗಿದ್ದ. ಈತ ಜಾನಪದ ತಜ್ಞನಾಗಿ, ಇಂಡಿಯಾನ ವಿಶ್ವವಿದ್ಯಾಲಯದ ಬ್ಲೂಮಿಂಗ್‌ಟನ್ ಕಾಲೇಜ್‌ನ ನಿವೃತ್ತ ಪ್ರಾಧ್ಯಾಪಕನಾಗಿ ಬೋಧನೆ ಮತ್ತು ಸಂಶೋಧನೆ ಕಾರ್ಯವನ್ನು ನಿರ್ವಹಿಸುತ್ತಿದ್ದಾನೆ. ಜನಪದ ಕಲೆ, ಜನಪದ ಜೀವನ, ಪ್ರಾದೇಶಿಕ ವಾಸ್ತುಶಿಲ್ಪ ಮತ್ತು ಭೌತಿಕ ಸಂಸ್ಕೃತಿ ಮುಂತಾದ ವಿಷಯಗಳ ವಿಶೇಷಜ್ಞನಾಗಿ, ಅಮೆರಿಕ, ಐರ್ಲೆಂಡ್, ಟರ್ಕಿ ಮತ್ತು ಬಾಂಗ್ಲಾದೇಶಗಳ ಜಾನಪದವನ್ನು ಅರ್ಥೈಸಿ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಭೌತಿಕ ಜಾನಪದ ಈತನ ವಿಶೇಷ ಆಸಕ್ತಿಯ ಕ್ಷೇತ್ರ. ಈತ ಭೌತಿಕ ಜಾನಪದ ಕುರಿತು ಪ್ರಕಟಿಸುತ್ತಿರುವ ಕೃತಿಗಳು ವಿದ್ವಾಂಸರ ಗಮನ ಸೆಳೆದಿವೆ.



ಈತ ತನ್ನ ಸಂಗಾತಿ ಹಾಗೂ ಜಾನಪದ ತಜ್ಞೆ ಪ್ರವೀಣಶುಕ್ಲಳನ್ನು ವಿವಾಹವಾದ. ಈಕೆ ಉಡುಪು ಮತ್ತು ಪ್ರಸಾಧನ ಪ್ರವೀಣೆ. ಈ ದಂಪತಿಗೆ ನಾಲ್ಕು ಮಕ್ಕಳು ಮತ್ತು ನಾಲ್ಕು ಮೊಮ್ಮಕ್ಕಳು ಇದ್ದಾರೆ. 2000ರಲ್ಲಿ ಅಮೆರಿಕ ಅಧ್ಯಕ್ಷ ಬಿಲ್‌ಕ್ಲಿಂಟನ್ ಗ್ಲಾಸಿಯನ್ನು ನ್ಯಾಷನಲ್ ಕೌನ್ಸಿಲ್ ಆನ್ ದಿ ಹ್ಯೂಮ್ಯಾನಿಟೀಸ್‌ಗೆ ನೇಮಿಸಿದರು. ಈತ ಈಗಲೂ ತನ್ನನ್ನು ಜಾನಪದ ಕುರಿತ ಸಂಶೋಧನೆ ಹಾಗೂ ಬರೆವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾನೆ.

(ಎ.ಎಚ್.)

**ಗ್ಲಾಸೆಮ್ಯಾಟಿಕ್ಸ್ :** ಭಾಷಾಶಾಸ್ತ್ರದಲ್ಲಿ ಭಾಷಾವಿಶ್ಲೇಷಣ ವಿಧಾನವನ್ನು ಆಧರಿಸಿ ಮಾಡಿರುವ ಹಲವು ಶಾಖೆಗಳಲ್ಲಿ ಒಂದು. ಈ ಶಾಖೆಗಳಲ್ಲಿ ಮುಖ್ಯವಾದವೆಂದರೆ ಅಮೆರಿಕದಲ್ಲಿ ಬ್ಲೂಮ್‌ಫೀಲ್ಡನಿಂದ ಪೋಷಿತವಾದದ್ದೊಂದು, ಚೆಕೊಸ್ಲೊವಾಕಿಯದ ಪ್ರಾಗ್ ನಗರದಲ್ಲಿ ಟ್ರುಬೆಟ್ಸ್‌ಕೋಯ್, ಯಾಕಬ್‌ಸನ್ ಮೊದಲಾದವರಿಂದ ಪ್ರಾರಂಭಿಸಲ್ಪಟ್ಟ ಶಾಖೆಯೊಂದು, ಜಿನೀವ ನಗರದಲ್ಲಿ ಫರ್ಡಿನಾಂಡ್ ಸಸ್ಸೂರನಿಂದ ಬೆಳೆಸಲ್ಪಟ್ಟ ಶಾಖೆಯೊಂದು, ಹಾಗೆಯೇ ಡೆನ್ಮಾರ್ಕಿನ ಕೋಪನ್‌ಹೇಗನ್ ಪಟ್ಟಣದಲ್ಲಿ ಪ್ರಚಾರಕ್ಕೆ ಬಂದ ಎಲ್ಮ್‌ಸ್ಲೆವ್ ಮತ್ತು ಉಲ್ಡಾಲ್‌ರವರ ಸಿದ್ಧಾಂತವೊಂದು. ಕೊನೆಯ ಪ್ರಭೇದವೇ ಗ್ಲಾಸೆಮ್ಯಾಟಿಕ್ಸ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಗ್ಲಾಸ್ಸ ಎಂದರೆ ಗ್ರೀಕಿನಲ್ಲಿ ಭಾಷೆ ಎಂದರ್ಥ. ಈ ಸಿದ್ಧಾಂತದ ಪ್ರಕಾರ ನಿಶ್ಚಯಿಸಲ್ಪಡುವ ಭಾಷೆಯ ಅವಿಭಾಜ್ಯ ರೂಪಗಳನ್ನು ಗ್ಲಾಸೀಮ್ ಎನ್ನುತ್ತಾರೆ. ಭಾಷೆಯ ಸರಿಯಾದ ತಿಳಿವಳಿಕೆಗೆ, ಅದರ ವಿವರಣೆಗೆ ಅನುಕೂಲವಾದೊಂದು ಬೀಜಗಣಿತೀಯ ವಿಧಾನವನ್ನು ರಚಿಸುವುದೇ ಈ ಸಿದ್ಧಾಂತದ ಲಕ್ಷ್ಯವೆನ್ನಬಹುದು.

ಅಮೆರಿಕದಲ್ಲಿ ಬ್ಲೂಮ್‌ಫೀಲ್ಡನ ಪ್ರಭಾವ ಬೆಳೆದಂತೆ ಯುರೋಪಿನಲ್ಲಿ ಫರ್ಡಿನಾಂಡ್ ಸಸ್ಸೂರನ ಪ್ರಭಾವ ಬೆಳೆದಿರುವುದನ್ನು ಗಮನಿಸಬಹುದು. ಬ್ಲೂಮ್‌ಫೀಲ್ಡನ ಲ್ಯಾಂಗ್‌ವೇಜ್ ಎಂಬ ಗ್ರಂಥವನ್ನು ಆತನೇ ಬರೆದ. ಸಸ್ಸೂರನ ಗ್ರಂಥವಾದರೋ ಆತನ ಮರಣಾನಂತರ ಆತನ ವಿದ್ಯಾರ್ಥಿಗಳು ತಮ್ಮ ಗುರುವಿನ ತರಗತಿಯ ಪಾಠಗಳನ್ನು ಸಂಗ್ರಹಿಸಿ ಮುದ್ರಿಸಿದ್ದಾಗಿದೆ. ಹಾಗಾಗಿ ಆ ಗ್ರಂಥದಲ್ಲಿ ಪರಸ್ಪರ ವಿರೋಧಮೆನಿಸುವ ಅನೇಕ ಉಕ್ತಿಗಳಿವೆ. ಇಲ್ಲಿನ ಮಾತುಗಳನ್ನು ವಿದ್ವಾಂಸರು ತಮ ತಮಗೆ ತೋರಿದಂತೆ ವಿವರಿಸಿದ್ದಾರೆ. ಈ ವಿವರಣೆಗಳಲ್ಲಿ ಎಲ್ಮ್‌ಸ್ಲೆವ್‌ನಿಗೂ ಪ್ರಾಗ್ ಶಾಖೆಗೆ ಸಂಬಂಧಿಸಿದವರಿಗೂ ಭೇದವಿರುವುದನ್ನು ಗಮನಿಸಬಹುದು.

ಸಸ್ಸೂರ್ ಭಾಷೆಯನ್ನು ಸಂಕೇತಗಳ ಒಂದು ವಿಶಿಷ್ಟ ಪದ್ಧತಿ ಎಂದಿದ್ದಾನೆ. ಭಾಷೆಯನ್ನು ಕುರಿತಾದ ಈ ವ್ಯಾಖ್ಯೆಯನ್ನು ಎಲ್ಲರೂ ಒಪ್ಪಿಕೊಳ್ಳುವವರಾದರೂ ಸಸ್ಸೂರನ ಸಂಕೇತ ಸ್ವರೂಪ ಕಲ್ಪನೆಯನ್ನು ಒಪ್ಪಿಕೊಂಡಿಲ್ಲ. ಭಾಷೆಯಲ್ಲಿನ ಸಂಕೇತಗಳಿಗೆ, ಉದಾ : ಭಾಷೆಯಲ್ಲಿನ ಯಾವುದೇ ಒಂದು ಪದಕ್ಕೆ, ಎರಡು ಮುಖಗಳಿವೆಯೆಂದೂ ಅದರಲ್ಲಿ ಒಂದನ್ನು ಅದರ ವಾಚ್ಯ ರೂಪವೆಂದೂ (ಸಿಗ್ನಿಫಿಯಂಟ್) ಇನ್ನೊಂದನ್ನು ಅದರ ಸೂಚಿತ ರೂಪವೆಂದೂ (ಸಿಗ್ನಿಫೈ) ಸಸ್ಸೂರ್ ಪರಿಗಣಿಸಿದ. ಈ ಬಗ್ಗೆ ಸಸ್ಸೂರನ ತರ್ಕವನ್ನು ಎಲ್ಮ್‌ಸ್ಲೆವ್ ಸ್ವೀಕರಿಸಲಿಲ್ಲವಾದರೂ ಭಾಷೆಯ ಸಂಕೇತಗಳಿಗಿರುವ ಮೇಲಿನ ಎರಡು ರೂಪಗಳನ್ನು ಒಪ್ಪಿಕೊಂಡ. ಎಲ್ಮ್‌ಸ್ಲೆವ್ ಇವನ್ನು ಕ್ರಮವಾಗಿ ಸಂಕೇತದ ಉಚ್ಚಾರಣಾರೂಪ (ಎಕ್ಸ್‌ಪ್ರೆಷನ್) ಮತ್ತು ಅಡಗಿರುವ ರೂಪ (ಕಂಟೆಂಟ್) ಎಂದು ಕರೆದ. ಈ ಸಿದ್ಧಾಂತರೀತ್ಯ ಇವೆರಡನ್ನೂ ಭಾಷೆಯ ಎರಡು ಸ್ತರಗಳೆನ್ನುತ್ತಾರೆ. ಸ್ಥೂಲವಾಗಿ ಹೇಳಬಹುದಾದರೆ, ಸಂಕೇತಗಳ ಉಚ್ಚಾರ ರೂಪ ಧ್ವನಿಶಾಸ್ತ್ರದ ವಸ್ತುವೆಂದೂ ಅವುಗಳ ಅಡಗಿರುವ ಅಥವಾ ಆಂತರಿಕ ರೂಪವನ್ನು ಅರ್ಥವಿಜ್ಞಾನ (ಸೆಮ್ಯಾಂಟಿಕ್ಸ್) ಮತ್ತು ವ್ಯಾಕರಣಕ್ಕೆ ಸೇರಿದ ವಸ್ತುವೆಂದೂ ಹೇಳಬಹುದು. ಉದಾಹರಣೆಗೆ ಮನೆಗಳು ಎಂಬ ಪದವನ್ನು ಮನೆ ಮತ್ತು ಗಳು ಎಂದು ವಿಭಾಗಿಸಬಹುದು. ಇಲ್ಲಿ ಮನೆ ಎಂಬಲ್ಲಿ ಮ್, ಅ, ನ್, ಎ, ಎಂಬುದಾಗಿ ನಾಲ್ಕು ಧ್ವನಿಮಾಗಳಿವೆ. ಹಾಗೆಯೇ ಗಳು ಎಂಬಲ್ಲಿ ಗ್, ಅ, ಳ್, ಉ. ಇವೆರಡರಲ್ಲಿ ಮೊದಲಿನ ಭಾಗಕ್ಕೊಂದು ನಿಶ್ಚಿತ ಅರ್ಥವೂ ಎರಡನೆಯ ಭಾಗಕ್ಕೆ ಬಹುವಚನ ಎಂಬ ಅರ್ಥವೂ ಇದೆಯೆನ್ನಬಹುದು. ಇದಲ್ಲದೆ, ಎಲ್ಮ್‌ಸ್ಲೆವ್ ಈ ಎರಡು ರೂಪಗಳನ್ನು ರಚನೆ (ಫಾರಮ್) ಹಾಗೂ ತಿರುಳು (ಸಬ್‌ಸ್ಟೆನ್ಸ್) ಎಂದು ಎರಡೆರಡು ಭಾಗಗಳಾಗಿ ವಿಂಗಡಿಸುತ್ತಾನೆ. ಉಚ್ಚಾರಣಾರೂಪ ಧ್ವನಿಗಳಿಂದ ಕೂಡಿದೆಯೆನ್ನಬಹುದು. ಅವನ್ನು ಭೌತಶಾಸ್ತ್ರ ಅಥವಾ ಶರೀರ ಕ್ರಿಯಾ ಶಾಸ್ತ್ರದ ಪ್ರಕಾರ ವಿವರಿಸಬಹುದು. ಹಾಗೆಯೇ ಆಂತರಿಕ ರೂಪವಾದ ಅರ್ಥವನ್ನು ಮನಶಾಸ್ತ್ರ ಇತ್ಯಾದಿಗಳ ಸಹಾಯದಿಂದ ವಿವರಿಸಬಹುದು.

ಭಾಷೆಯ ಸಂಕೇತಗಳ ಉಚ್ಚಾರಣೆಯನ್ನು ಇಲ್ಲವೆ ಬಾಹ್ಯ ಮತ್ತು ಆಂತರಿಕ ರೂಪಗಳ ನಡುವಣ ಸಂಬಂಧವನ್ನು ವಿವರಿಸುವುದೇ ಭಾಷಾ ವಿಶ್ಲೇಷಣದ ಮುಖ್ಯ ಭಾಗ. ಮನೆಯೆಂಬ ಸಂಕೇತದಲ್ಲಿ ಅದರ ಉಚ್ಚಾರಣಾರೂಪಕ್ಕೂ ಅದರಿಂದ ಸೂಚಿತವಾಗುವ ಆಂತರಿಕ ರೂಪವಾದ ಅರ್ಥಕ್ಕೂ ಒಂದು ವಿಶಿಷ್ಟ ರೀತಿಯ ಸಂಬಂಧವಿದೆ. ಈ ಸಂಬಂಧ ಎಷ್ಟೇ ಯಾದೃಚ್ಛಿಕವಾದರೂ (ಆರ್ಬಿಟ್ರರಿ) ಯಾವುದೇ ಒಂದು ಭಾಷೆಯಲ್ಲಿ ಅವುಗಳೆರಡರ ನಡುವೆ ಅವಿನಾಭಾವ ಸಂಬಂಧವಿದೆ ಎನ್ನಬಹುದು. ವಿಶ್ಲೇಷಣದ ಪ್ರತಿಸ್ತರಗಳಲ್ಲೂ ಈ ವಿಶಿಷ್ಟ ಸಂಬಂಧವನ್ನು ಅನುಸರಿಸಿ, ನಿಯಮಿತ ಸಂಖ್ಯೆಯ ಭಿನ್ನ ಭಿನ್ನ ಆಕಾರದ ಮೂಲವಸ್ತುಗಳನ್ನು (ಎಲಿಮೆಂಟ್ಸ್) ಗಮನಿಸಬಹುದು. ಭಾಷೆಯಲ್ಲಿ ಎಷ್ಟು ಭಿನ್ನ ಅರ್ಥಗಳನ್ನು ಗುರುತಿಸಬೇಕಾಗುವುದೋ ಅಷ್ಟು ಸಂಖ್ಯೆಯ ಉಚ್ಚಾರಣಾರೂಪಗಳೂ ಇವೆಯೆನ್ನಬೇಕಾಗುತ್ತದೆ. ಬೆಕ್ಕು ಎನ್ನುವ ಬದಲು ನಾಯಿ ಎನ್ನುವುದರಿಂದ ಅರ್ಥದಲ್ಲಿ ವ್ಯತ್ಯಾಸ ತೋರಿಬಂದರೆ ಆಗ ಅವೆರಡನ್ನೂ ಬೇರೆ ಬೇರೆ ಬಾಹ್ಯರೂಪವಿರುವ ಸಂಕೇತಗಳೆನ್ನಬೇಕು. ಭಾಷಾ ವಿಶ್ಲೇಷಣದ ಈ ವ್ಯಾಪಾರವನ್ನು ಆದೇಶ ಅಥವಾ ಒಂದರ ಸ್ಥಾನದಲ್ಲಿ ಇನ್ನೊಂದು ಬರುವಿಕೆ (ಕಾಮ್ಯುಟೇಷನ್) ಎನ್ನುತ್ತಾರೆ.

ಯಾವುದೇ ಒಂದು ಸಂಕೇತದ ಉಚ್ಚಾರಣಾರೂಪವನ್ನು ತೆಗೆದುಕೊಂಡು ಅದರ ರಚನೆಯಲ್ಲಿರುವ ಪ್ರತಿಯೊಂದು ಧ್ವನಿಯ ಸ್ಥಾನದಲ್ಲಿ ಆ ಭಾಷೆಯಲ್ಲಿನ ಇತರ ಧ್ವನಿಗಳನ್ನು ಉಪಯೋಗಿಸಿದಾಗ ಭಿನ್ನಾರ್ಥಕ ಸೂಚಕ ಸಂಕೇತಗಳಾಗುವುವೇ ಎಂದು ಪರೀಕ್ಷಿಸಬಹುದು. ಹಾಗೆಯೇ ಯಾವುದೇ ಸಂಕೇತಕ್ಕೆ ಸಂಬಂಧಿಸಿದ ಅರ್ಥವನ್ನು ಇದೇ ಕ್ರಮದಲ್ಲಿ ವಿಭಾಗಿಸಬಹುದು. ವಾಚಾ ಎಂಬ ಸಂಕೇತದ ಅರ್ಥವನ್ನು ತೃತೀಯಾ

ವಿಭಕ್ತಿ, ಏಕವಚನ, ಸ್ತ್ರೀಲಿಂಗವೆಂದು ಮೂರು ವಿಭಾಗಗಳಾಗಿ ಒಡೆಯಬಹುದು. ಇಲ್ಲಿ ತೃತೀಯಾ ವಿಭಕ್ತಿಗೆ ಬದಲಾಗಿ ಚತುರ್ಥೀ ರೂಪ ಬಂದರೆ ವಾಚೇ ಎಂದಾಗುತ್ತದೆ. ಏಕವಚನದ ಬದಲು ಬಹುವಚನ ಬಂದರೆ ವಾಗ್ಭಿಃ ಎಂದಾಗುತ್ತದೆ. ಹೀಗೆ ಭಾಷಾಸಂಕೇತಗಳ ಬಾಹ್ಯ ರೂಪ ಹಾಗೂ ಆಂತರಿಕ ರೂಪಗಳೆರಡರ ವಿಶ್ಲೇಷಣೆ ಸಾಧ್ಯವಾದರೂ ಈ ಎರಡೂ ವಿಶ್ಲೇಷಣೆಗಳ ನಡುವೆ ಪೂರ್ಣ ರೀತಿಯ ಸಾಮ್ಯವಿದೆಯೆನ್ನಲು ಸಾಧ್ಯವಿಲ್ಲ. ಅಂದರೆ, ತೃತೀಯಾ, ಏಕವಚನ ಮತ್ತು ಸ್ತ್ರೀಲಿಂಗವೆಂದು ಅರ್ಥದಲ್ಲಿ ಮೂರು ವಿಭಾಗ ಮಾಡಿ ತೋರಿಸುವಂತೆ ಈ ಸಂಕೇತದ ಉಚ್ಚಾರಣಾ ರೂಪದಲ್ಲಿ ಮೂರು ವಿಭಾಗ ಮಾಡಿ ಈ ಅರ್ಥ ವಿಭಾಗಕ್ಕೆ ಈ ಉಚ್ಚಾರಣಾ ರೂಪದ ವಿಭಾಗವೆಂದು ತೋರಿಸಲಾಗುವುದಿಲ್ಲ. ಉಚ್ಚಾರಣಾ ರೂಪ ಕೇವಲ ಒಂದೇ ಧ್ವನಿಮಾ ಆ –ಎಂದು. ಇದನ್ನು ಮೂರು ವಿಭಾಗಗಳಾಗಿ ಒಡೆಯಲು ಸಾಧ್ಯವಿಲ್ಲ. ಇದೊಂದು ಧ್ವನಿಮಾವುಳ್ಳ ರೂಪಕ್ಕೇ ಮೇಲಿನ ಮೂರೂ ಅರ್ಥಗಳು ಏಕಕಾಲದಲ್ಲಿ ತೋರಿಬರುತ್ತವೆ. ಹೀಗೆ ಇವೆರಡರ ಮಧ್ಯೆ ಸಾಮ್ಯವಿಲ್ಲದಿರುವುದರಿಂದ ಬಾಹ್ಯರೂಪದ ವಿಶ್ಲೇಷಣೆ ಮತ್ತು ಆಂತರಿಕ ರೂಪದ ವಿಶ್ಲೇಷಣೆ ಅಂದರೆ ಧ್ವನಿಮಾಗಳ ಮತ್ತು ಅರ್ಥಗಳ ವಿಶ್ಲೇಷಣೆ ಬೇರೆ ಬೇರೆಯಾಗಿ ನಡೆಯಬೇಕೆಂದಾಗುತ್ತದೆ. ಹೀಗೆ ಭಾಷಾ ಸಂಕೇತಗಳ ಅರ್ಥವನ್ನು ಅಧ್ಯಯನ ಮಾಡಬೇಕೆಂದೂ ಧ್ವನಿಮಾಗಳಂತೆಯೇ ಅವನ್ನೂ ವಿಶ್ಲೇಷಣೆಗೊಳಪಡಿಸಬೇಕೆಂದೂ ತೋರಿಸಿಕೊಟ್ಟವರಲ್ಲಿ ಎಲ್ಮ್‌ಸ್ಲೇವ್ ಮೊದಲಿಗ. ಅಲ್ಲದೆ ಗ್ಲಾಸೆಮ್ಯಾಟಿಕ್ಸ್ ಸಿದ್ಧಾಂತದಲ್ಲಿ ಇದೊಂದು ವಿಶೇಷ ಅಧ್ಯಯನದ ವಸ್ತು. ಬ್ಲೂಮ್‌ಫೀಲ್ಡ್ ಮೊದಲಾದ ಇತರ ಶಾಖೆಯವರು ಧ್ವನಿಮಾ ವಿಶ್ಲೇಷಣೆಯಂತೆಯೇ ಅರ್ಥವಿಶ್ಲೇಷಣೆ ಸಾಧ್ಯವಿಲ್ಲವೆಂದು ಕೈಬಿಟ್ಟಿದ್ದ ಕಾಲದಲ್ಲಿ ಇದನ್ನು ಸಮರ್ಪಕ ರೀತಿಯಲ್ಲಿ ಸಮರ್ಥಿಸಿದವರೆಂದರೆ ಗ್ಲಾಸೆಮ್ಯಾಟಿಕ್ಸ್ ಸಿದ್ಧಾಂತಿಗಳು.

ಸಂಕೇತಗಳ ಬಾಹ್ಯರೂಪ ರಚನೆಯಲ್ಲಿನ ಪ್ರತಿ ಧ್ವನಿಮಾದ ಸ್ಥಾನದಲ್ಲಿ ಅನ್ಯ ಧ್ವನಿಮಾದ ಆದೇಶ ಸಾಧ್ಯವಿದೆಯೆಂದೆವು. ಉದಾಹರಣೆಗೆ, ಮರ ಎಂಬ ಸಂಕೇತದಲ್ಲಿ ಮ್ ಸ್ಥಾನದಲ್ಲಿ ನ್ ಉಪಯೋಗವಾದರೆ ನರ ಎಂಬ ಭಿನ್ನಾರ್ಥಕ ಸಂಕೇತವಾಗುತ್ತದೆ. ಇಲ್ಲಿ ಮ್ ಮತ್ತು ನ್ ಧ್ವನಿಮಾಗಳ ನಡುವಣ ಸಂಬಂಧವನ್ನು ರೂಪತಾಲಿಕಾತ್ಮಕ ಸಂಬಂಧ (ಪ್ಯಾರಡಿಗ್ಮ್ಯಾಟಿಕ್ ರಿಲೇಷನ್) ಎನ್ನುತ್ತಾರೆ. ಆದರೆ, ಸಂಕೇತದ ವಾಚ್ಯ ರೂಪದಲ್ಲಿನ ಒಂದು ಧ್ವನಿಮಾಕ್ಕೂ ಅದರ ಅನಂತರದ ಧ್ವನಿಮಾಕ್ಕೂ ಮಧ್ಯೆ ಇರುವ ಸಂಬಂಧವನ್ನು ವಾಕ್ಯರಚನಾಕ್ರಮಾತ್ಮಕ (ಸಿಂಟಗ್ಮ್ಯಾಟಿಕ್ ರಿಲೇಷನ್) ಎನ್ನುತ್ತಾರೆ. ಉದಾಹರಣೆಗೆ, ಮೇಲಿನ ಸಂಕೇತದಲ್ಲಿ ಮ್ ಮತ್ತು ಅ ಗಳ ನಡುವಣ ಸಂಬಂಧ ಈ ರೀತಿಯದು.

ಇದು ಗ್ಲಾಸೆಮ್ಯಾಟಿಕ್ಸ್ ಸಿದ್ಧಾಂತದ ಸ್ಥೂಲ ಪರಿಚಯ. ಡೆನ್ಮಾರ್ಕಿನ ಹೊರಗೆ ಈ ಸಿದ್ಧಾಂತದ ಅನುಯಾಯಿಗಳು ಇಲ್ಲವೆಂದೇ ಹೇಳಬಹುದು. ಇದರ ಪ್ರವರ್ತಕರಾದ ಎಲ್ಮ್‌ಸ್ಲೇವ್ ಮತ್ತು ಉಲ್ಡಾವ್ ಇಬ್ಬರೂ ಕಣ್ಮರೆಯಾದ ಮೇಲಂತೂ ಇದರ ಪ್ರಭಾವ ಬಹಳ ಕಡಿಮೆಯಾಯಿತೆನ್ನಬಹುದು. (ಎಚ್.ಎಸ್.ಎ.)

**ಗ್ಲಾಸ್ಟರ್ :** ಈ ಹೆಸರಿನ ನಗರಗಳು ಮೂರಿವೆ. ಮೊದಲನೆಯದು, ಇಂಗ್ಲೆಂಡಿನಲ್ಲಿ ಗ್ಲಾಸ್ಟರ್‌ಷೈರಿನ ಕೌಂಟಿ ಪಟ್ಟಣ. ಇದು ಪಶ್ಚಿಮ ಇಂಗ್ಲೆಂಡಿನಲ್ಲಿದೆ. ಕೈಗಾರಿಕಾ ಕೇಂದ್ರ, ವಿಮಾನ, ವ್ಯವಸಾಯೋಪಕರಣ, ರೈಲ್ವೆ ಸಾಧನಸಾಮಗ್ರಿಗಳು, ಪೀಠೋಪಕರಣ, ಬೆಂಕಿಕಡ್ಡಿ,



ಗ್ಲಾಸ್ಟರಿನ ಚರ್ಚು, ಇಂಗ್ಲೆಂಡ್

ಚಲನಚಿತ್ರ ಕ್ಯಾಮೆರ ಮುಂತಾದವು ತಯಾರಾಗುತ್ತವೆ. ಮರ ಕೊಯ್ಯುವುದು ಒಂದು ಹಳೆಯ ಉದ್ಯಮ. ರೋಮನ್ ಆಕ್ರಮಣಕಾಲದಲ್ಲಿ ಗ್ಲಾಸ್ಟರ್ ಒಂದು ಪುರವಾಗಿತ್ತು. ಇದರ ಸನ್ನಿವೇಶದಿಂದಾಗಿ, ಇಲ್ಲಿ ಸ್ಥಾಪಿತವಾದ ಸೇಂಟ್ ಪೀಟರ್ ಅಬೆಯಿಂದಾಗಿ ಇದು ಬೆಳೆಯಿತು. ಇದು ಪ್ರಾಚೀನ ಆಂಗ್ಲಿಯನ್ ರಾಜ್ಯವಾದ ಮರ್ಷಿಯದ ರಾಜಧಾನಿಯಾಯಿತು. 1ನೆಯ ಜೇಮ್ಸ್ ದೊರೆ ಇದಕ್ಕೆ ನಗರದ ಸ್ಥಾನ ನೀಡಿದ (1605). 1885ರ ವರೆಗೂ ಈ ನಗರದಿಂದ ಪಾರ್ಲಿಮೆಂಟಿಗೆ ಇಬ್ಬರು ಆಯ್ಕೆಯಾಗುತ್ತಿದ್ದರು. ಈಗ ಒಬ್ಬನ ಆಯ್ಕೆಯಾಗುತ್ತದೆ. ಗ್ಲಾಸ್ಟರಿನ ಜನಸಂಖ್ಯೆ ಸು. 8,58,300 (2011).

ಅಮೆರಿಕ ಸಂಯುಕ್ತಸಂಸ್ಥಾನದ ಮೆಸಾಚುಸೆಟ್ಸ್ ರಾಜ್ಯದ ಈಶಾನ್ಯ ಭಾಗದಲ್ಲಿ ಈ ಹೆಸರಿನ ಒಂದು ನಗರವಿದೆ. ಜನಸಂಖ್ಯೆ 28,789 (2010). 1642ರಲ್ಲಿ ಇದು ಒಂದು ಸಣ್ಣ ಊರಾಗಿತ್ತು. ಸ್ಕೂನರ್ ಎಂಬ ಹಡಗನ್ನು ಮೊದಲು ಕಟ್ಟಿದ್ದು ಇಲ್ಲಿ ಎಂದು ಹೇಳಲಾಗಿದೆ. ಸಮುದ್ರದಲ್ಲಿ ಕಳೆದುಹೋದ ಮೀನುಗಾರರ ಸ್ಮಾರಕವಾಗಿ ಇಲ್ಲಿ ಬೆಸ್ತನ ಕಂಚಿನ ಪ್ರತಿಮೆಯೊಂದನ್ನು ಸ್ಥಾಪಿಸಿದೆ. 19ನೆಯ ಶತಮಾನದ ಕೊನೆಯ ವೇಳೆಗೆ ಇದು ಬೇಸಗೆಯ ವಿಹಾರಕೇಂದ್ರವಾಗಿಯೂ ಕಲಾವಿದರ ಕೇಂದ್ರವಾಗಿಯೂ ಅಭಿವೃದ್ಧಿಯಾಯಿತು. ಇಲ್ಲಿ ಸಾಹಿತಿಗಳಿಗೂ ಕಲಾವಿದರಿಗೂ ಅನುಕೂಲಕರವಾದ ವಾತಾವರಣವಿದೆ. ಇಲ್ಲಿರುವ ಹ್ಯಾಮಂಡ್ ವಸ್ತು ಸಂಗ್ರಹಾಲಯದಲ್ಲಿ ಅನೇಕ ಒಳ್ಳೆಯ ಕಲಾಕೃತಿಗಳಿವೆ. ಅನೇಕ ಲೇಖಕರ ಕೃತಿಗಳಲ್ಲಿ ಗ್ಲಾಸ್ಟರಿನ ವರ್ಣನೆಯಿದೆ.

ಅಮೆರಿಕ ಸಂಯುಕ್ತಸಂಸ್ಥಾನದ ನ್ಯೂಜರ್ಸಿ ರಾಜ್ಯದ ನೈರುತ್ಯ ಭಾಗದಲ್ಲಿರುವ ಗ್ಲಾಸ್ಟರ್ ನಗರದ ಜನಸಂಖ್ಯೆ 11,456 (2010). ಇದು ಡೆಲಾವೇರ್ ನದಿಯ ದಡದಲ್ಲಿದೆ. ಇಲ್ಲಿ 1623ರಲ್ಲಿ ವಸತಿ ಆರಂಭವಾಯಿತು. ಡಚ್ ನೆಲಸುಗಾರರಿಂದ ಇಂಗ್ಲಿಷರು ಇದನ್ನು 1664ರಲ್ಲಿ ವಶಪಡಿಸಿಕೊಂಡರು. ಇದರ ಬಳಿ 1899ರಲ್ಲಿ ಹಡಗು ನಿರ್ಮಾಣ ಉದ್ಯಮ ಆರಂಭವಾಯಿತು. 20ನೆಯ ಶತಮಾನದಲ್ಲಿ ಇದು ಕೈಗಾರಿಕಾ ಕೇಂದ್ರವಾಗಿ ಬೆಳೆಯಿತು. ಕಟ್ಟಡನಿರ್ಮಾಣ ಸಾಮಗ್ರಿ ಮತ್ತು ರಟ್ಟಿನ ಪೆಟ್ಟಿಗೆಗಳು, ಕಾರ್ಕ್ ಸರಕು, ಮಕ್ಕಳ ಉಡುಪು ಮತ್ತು ರಾಸಾಯನಿಕ ವಸ್ತುಗಳು ಇಲ್ಲಿ ತಯಾರಾಗುತ್ತವೆ. (ಎಸ್.ಎನ್.ಎಲ್.)

**ಗ್ಲಿನ್, ಎಡ್ಮಂಡ್ ಡೇನಿಯಲ್ :** 1914–86. ಯುರೋಪ್ ಖಂಡದ ನವ ಶಿಲಾಯುಗ ಸಂಸ್ಕೃತಿ ಅಧ್ಯಯನ ಕ್ಷೇತ್ರದಲ್ಲಿ ಹೆಸರಾಂತ ವೇಲ್ಸ್ ಪುರಾತತ್ತ್ವ ಶಾಸ್ತ್ರಜ್ಞ, ಆಕಾಶವಾಣಿ, ದೂರದರ್ಶನಗಳ ಮೂಲಕ ಪುರಾತತ್ತ್ವ ವಿಷಯವನ್ನು ಪ್ರಚುರಪಡಿಸಿದವನು. ದಕ್ಷಿಣ ವೇಲ್ಸ್‌ನ ಬ್ಯಾರಿಯಲ್ಲಿ 1914ರ ಏಪ್ರಿಲ್ 23ರಂದು ಜನಿಸಿದ. ಈತ ಕಾರ್ಡಿಫ್



ವಿಶ್ವವಿದ್ಯಾಲಯದಲ್ಲಿ ಭೂವಿಜ್ಞಾನವನ್ನೂ ಅನಂತರ ಕೇಂಬ್ರಿಜ್‌ನಲ್ಲಿ ಪುರಾತತ್ತ್ವ ಮತ್ತು ಮಾನವಶಾಸ್ತ್ರಗಳನ್ನೂ ಅಧ್ಯಯನ ಮಾಡಿದ. 2ನೆಯ ಮಹಾಯುದ್ಧ ಸಮಯದಲ್ಲಿ ಪುರಾತತ್ತ್ವ ನೆಲೆಗಳ ವ್ಯೋಮ ಛಾಯಾಚಿತ್ರಗಳನ್ನು ಅರ್ಥೈಸುವುದರಲ್ಲಿ ತನ್ನ ಕೌಶಲ್ಯ ತೋರಿಸಿದ. ರಾಯಲ್ ಏರ್‌ಫೋರ್ಸ್ ವಿಭಾಗದಲ್ಲಿ ಇವನ ಕೆಲಸವಾಗಿತ್ತು. ಅನಂತರ ಕೇಂಬ್ರಿಜ್‌ನಲ್ಲಿ ಪುರಾತತ್ತ್ವ ವಿಷಯದ ಡಿಸ್ನಿ ಪ್ರಾಧ್ಯಾಪಕನಾಗಿ ತನ್ನ ಅಧ್ಯಯನ ಮುಂದುವರಿಸಿದ. 1958–85ರ ವರೆಗೆ ಪ್ರತಿಷ್ಠಿತ ಆಂಟಿಕ್ವಿಟಿ ನಿಯತಕಾಲಿಕೆಗೆ ಕೆಲಸಮಾಡಿದ. ನವಶಿಲಾಯುಗ ಸಂಸ್ಕೃತಿ ಮತ್ತು ಬೃಹತ್ ಶಿಲಾಗೋರಿಗಳ ಅಧ್ಯಯನ ಇವನ ಪ್ರಧಾನ ವಿಷಯ. ಪುರಾತತ್ತ್ವ ಬೆಳವಣಿಗೆ, ಇತಿಹಾಸ ಮತ್ತು ಪುರಾತತ್ತ್ವ ಚಿಂತನೆ ಈ ವಿಷಯಗಳ ಮೇಲೆ ಗ್ರಂಥಗಳನ್ನು ಬರೆದಿದ್ದಾನೆ. ದಿ ಪ್ರೀ ಹಿಸ್ಟಾರಿಕ್ ಚೇಂಬರ್ ಟೂಂಬ್ಸ್ ಆಫ್ ಫ್ರಾನ್ಸ್ (1960), ದಿ ಮೆಗಲಿಥ್ ಬಿಲ್ಡರ್ಸ್ ಆಫ್ ವೆಸ್ಟರ್ನ್ ಯುರೋಪ್(1963), 150 ಇಯರ್ಸ್ ಆಫ್ ಆರ್ಕಿಯಾಲಜಿ – ಇವು ಇವನ ಪ್ರಮುಖ ಗ್ರಂಥಗಳು. ಕುತೂಹಲಕಾರಿ ವಿಷಯವೆಂದರೆ ಇವನು ದಿಲ್‌ವ್ಯನ್ ರೀಸ್ ಎಂಬ ಗುಪ್ತನಾಮದಲ್ಲಿ ದಿ ಕೇಂಬ್ರಿಜ್ ಮರ್ಡರರ್ಸ್, ವೆಲ್‌ಕಂ ಡೆತ್ ಮೊದಲಾದ ಕಾದಂಬರಿಗಳನ್ನು ಬರೆದಿದ್ದಾನೆ. (ಎ.ಎಸ್.;ಎನ್.ಎಲ್)

**ಗ್ಲಿಪ್ಟೊಡಾನ್ :** ಈಡೆಂಟೇಟ ಗಣದ ಆರ್ಮಡಿಲೊ ಪ್ರಾಣಿಗಳ ಸಂಬಂಧಿಯಾದ ಮತ್ತು ಅವುಗಳ ಪೂರ್ವಜ ಪ್ರಾಣಿಯೆನಿಸಿದ ಒಂದು ಬೃಹತ್‌ಗಾತ್ರದ ಗತವಂಶಿ ಸ್ತನಿ. ಗ್ಲಿಪ್ಟೊಡಾಂಟಿಯ ಗಣಕ್ಕೆ ಸೇರಿದೆ. ಇದು ದಕ್ಷಿಣ ಮತ್ತು ಉತ್ತರ ಅಮೆರಿಕಗಳ ಮರಳುಗಾಡುಗಳಲ್ಲಿ ಟರ್ಷಿಯರಿ ಹಾಗೂ ಪ್ಲೀಸ್ಟೊಸೀನ್ ಅವಧಿಗಳಲ್ಲಿ ಜೀವಿಸಿತ್ತು. ಈಗ ಇದರ ಪಳೆಯುಳಿಕೆಗಳು ಮಾತ್ರ ಕಾಣಸಿಕ್ಕಿವೆ.

ಆಮೆಗಳಂತೆ ಇದಕ್ಕೂ ಬೆನ್ನ ಮೇಲೆ ಕೊಂಬಿನಿಂದ ರಚಿತವಾದ 6 ದೊಡ್ಡ ಫಲಕಗಳು ಮತ್ತು ಅಸಂಖ್ಯಾತ ಚಿಕ್ಕಫಲಕಗಳಿಂದ ಕೂಡಿದ ಗಟ್ಟಿಕವಚವಿತ್ತು. ತಲೆ

ಬುರುಡೆ ಚಿಕ್ಕದಾಗಿತ್ತು. ದೊಡ್ಡ ಬಾಯಿ ಮತ್ತು ಅರಗೋಳವಿಯಾಕಾರದ ಹಲ್ಲುಗಳಿದ್ದುವು. ತಲೆಬುರುಡೆಯ ಮೇಲೂ ಗಟ್ಟಿಯಾದ ಒಂದು ಅಸ್ಥಿಕವಚವಿತ್ತು. ಬಾಲ ಕೂಡ ಉಂಗುರಗಳಂಥ ಅನೇಕ ರಚನೆಗಳಿಂದ ಆವೃತವಾಗಿತ್ತು. ಕತ್ತು ದೇಹದೊಡನೆ ವಿಚಿತ್ರ ರೀತಿಯಲ್ಲಿ ಬಂಧಿತವಾಗಿದ್ದು ಆಮೆಗಳ ಕತ್ತಿನಂತೆ ಕವಚದೊಳಕ್ಕೆ ಎಳೆದುಕೊಳ್ಳಲು ಸಾಧ್ಯವಾಗುವಂತಿತ್ತು. ಕಾಲುಗಳು ಮೋಟಾಗಿಯೂ ದೃಢವಾಗಿಯೂ ಇದ್ದುವಲ್ಲದೆ ಕಾಲ್ಬೆರಳುಗಳಲ್ಲಿ ನಖಗಳಿಗೆ ಬದಲಾಗಿ ಗೊರಸುಗಳಿದ್ದವು.



ಗ್ಲಿಪ್ಟೊಡಾನ್ ಪ್ರಾಣಿಯ ಸ್ವರೂಪ

ಉತ್ತರ ಅಮೆರಿಕದಲ್ಲಿ ಜೀವಿಸಿದ್ದ ಗ್ಲಿಪ್ಟೊಡಾನ್ ಮತ್ತು ಗ್ಲಿಪ್ಟೊಥೀರಿಯಮ್ ಎಂಬ ಬಗೆಗಳಲ್ಲಿ ಮುಂಗಾಲಿನಲ್ಲಿ 4 ಬೆರಳುಗಳೂ ಹಿಂಗಾಲಿನಲ್ಲಿ 5 ಬೆರಳುಗಳೂ ಇದ್ದವು. ದಕ್ಷಿಣ ಅಮೆರಿಕದಲ್ಲಿದ್ದ ಡೀಡಿಕ್ಯೂರಸ್ ಎಂಬುದರಲ್ಲಿ ಮುಂಗಾಲಿನಲ್ಲಿ 3 ಮತ್ತು ಹಿಂಗಾಲಿನಲ್ಲಿ 4 ಬೆರಳುಗಳಿದ್ದವು. ಅಲ್ಲದೆ ಇದರ ಬಾಲದ ಮೇಲೆ ಕೊಂಬಿನಿಂದ ರಚಿತವಾದ ಮುಳ್ಳುಗಳಿದ್ದವು. (ಕೆ.ಎಂ.ವಿ.)

**ಗ್ಲಿಮ್, ಜೊಹಾನ್ ವಿಲ್‌ಹೆಲ್ಮ್ ಲೂಡ್‌ವಿಗ್ :** 1719–1803. ಜರ್ಮನ್ ಕವಿ. ಕಿರಿಯ ಕವಿಗಳಿಗೆ ಈತನು ನೀಡುತ್ತಿದ್ದ ಪ್ರೋತ್ಸಾಹ ಮತ್ತು ಸಹಾಯಗಳಿಂದಾಗಿ ಈತನನ್ನು ಫಾದರ್ ಗ್ಲಿಮ್ ಎಂದು ಕರೆಯಲಾಗುತ್ತಿತ್ತು. ಉಜ್ವಲವಾದ ದೇಶಾಭಿಮಾನದಿಂದ ಪ್ರೇರಿತವಾದ ಈತನ ಕವಿತೆಗಳು, ಫ್ರೆಡರಿಕ್ ಮಹಾಶಯನ ಕಾಲದ ವೀರರಸ ಪ್ರಧಾನವಾದ ಕವಿತೆಗಳ ಸಾಲಿನಲ್ಲಿ ಬಹಳ ಮೆಚ್ಚುಗೆಯನ್ನು ಪಡೆದವು. ಭಾವನೆಗಳ ಸಹಜತೆಯಿಂದ ಮತ್ತು ಪರಿಣಾಮಕಾರಿಯಾದ ಶೈಲಿಯಿಂದ ಇವುಗಳಲ್ಲಿ ಅನೇಕವು ಶ್ರೇಷ್ಠ ಕವಿತೆಗಳೆನ್ನಿಸಿವೆ. ಈತನ ಎಲ್ಲ ಕೃತಿಗಳನ್ನು ಎಂಟು ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಲಾಗಿದೆ (1811 – 14). ಈತನ ಪ್ರೂಸಿಷೆ ಕ್ರೀಗ್‌ಸ್ಲೀಡರ್ ಫಾನ್ ಈನೆಮ್ ಗ್ರೆನಾಡಿಯರ್ – ಎಂಬುದು ಬಹು ಉತ್ತಮವಾದ ಕೃತಿಯೆಂದು ಖ್ಯಾತವಾಗಿದೆ. (ಪಿ.ಎಸ್.ಆರ್.)

**ಗ್ಲಿರಿಸಿಡಿಯ :** ಲೆಗ್ಯೂಮಿನೋಸೀ ಕುಟುಂಬದ ಪ್ಯಾಪಿಲಿಯೋನೇಸೀ ಉಪಕುಟುಂಬಕ್ಕೆ ಸೇರಿದ ಒಂದು ಉಪಯುಕ್ತ ಸಸ್ಯಜಾತಿ. ಇದನ್ನು ಅಲಂಕಾರಕ್ಕಾಗಿ,



ನೆರಳಿಗಾಗಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಹಸಿರುಗೊಬ್ಬರಕ್ಕಾಗಿ ಉಷ್ಣವಲಯ ದೇಶಗಳಲ್ಲೆಲ್ಲ ಬೆಳೆಸಲಾಗುತ್ತದೆ. ಅಮೆರಿಕದ ಉಷ್ಣಪ್ರದೇಶಗಳ ಮೂಲವಾಸಿ. ಇದರಲ್ಲಿ 10 ಪ್ರಭೇದಗಳಿವೆ. ಭಾರತದಲ್ಲಿ ಮ್ಯಾಕ್ಯುಲೇಟ ಅಥವಾ ಸೀಪಿಯಮ್ ಎಂಬ ಪ್ರಭೇದವನ್ನು ಬೆಳೆಸುತ್ತಾರೆ.

ಇದು ಸು. 10ಮೀ ಎತ್ತರಕ್ಕೆ ಬೆಳೆಯುವ ಮರ. ಮೋಟಾದ ಮುಖ್ಯ ಕಾಂಡವನ್ನು ಒಳಗೊಂಡಿದ್ದು ವಿಪುಲವಾಗಿ ಕವಲೊಡೆದಿರುತ್ತದೆ. ಎಲೆಗಳು ದೊಡ್ಡವು; ಗರಿರೂಪದ ಸಂಯುಕ್ತಮಾದರಿಯವು. ಅವುಗಳ ಜೋಡಣೆ ಪರ್ಯಾಯ ಮಾದರಿಯದು. ಒಂದೊಂದು ಎಲೆಯಲ್ಲೂ 7– 15 ಕಿರು ಎಲೆಗಳಿವೆ. ಹೂಗಳು ಬಿಳಿ ಇಲ್ಲವೆ ನಸುಗೆಂಪು ಬಣ್ಣದವು; ರೇಸೀಮ್ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಅವು ಅರಳುವಾಗ ಮರದಲ್ಲಿ ಎಲೆಗಳೇ ಇಲ್ಲದಿರುವುದು ಈ ಗಿಡದ ಒಂದು ವಿಶೇಷ ಲಕ್ಷಣ. ಕಾಯಿಗಳು ಪಾಡ್ ಮಾದರಿಯವು. ಒಂದೊಂದರಲ್ಲೂ 10–15 ಬೀಜಗಳಿವೆ.

ಗ್ಲಿರಿಸಿಡಿಯವನ್ನು ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿ ವಿಸ್ತಾರವಾಗಿ ಬೆಳೆಸಲಾಗುತ್ತದೆ. ತುಂಬ ಒಳ್ಳೆಯ ಹಸಿರೆಲೆ ಗೊಬ್ಬರವೆಂದು ಹೆಸರಾಗಿರುವ ಇದನ್ನು ತೋಟಗಳ ಬೇಲಿಗಳಲ್ಲಿ, ಕಾಲುವೆಗಳ ಇಕ್ಕೆಡೆಗಳಲ್ಲಿ, ಬತ್ತದ ಗದ್ದೆಗಳ ತೆವರಿನಲ್ಲಿ ಬೆಳೆಸಬಹುದು. ಮಣ್ಣು ಯಾವ ಬಗೆಯದಾದರೂ ಇದು ಚೆನ್ನಾಗಿ, ಶೀಘ್ರಗತಿಯಲ್ಲಿ ಬೆಳೆಯುತ್ತದೆ. ಇದನ್ನು ಬೀಜಗಳಿಂದ ಇಲ್ಲವೆ ಕಾಂಡ ತುಂಡುಗಳಿಂದ ವೃದ್ಧಿಸಬಹುದು. ಬೀಜಗಳಿಗೆ ಕೀಟಗಳ ಉಪದ್ರವ ಹೆಚ್ಚಾಗಿರುವುದರಿಂದ ಕಾಂಡತುಂಡುಗಳಿಂದ ಬೆಳೆಸುವುದೇ ಉತ್ತಮ.

ಚೆನ್ನಾಗಿ ಬಲಿತ ಕಾಂಡತುಂಡುಗಳನ್ನು ನೆಟ್ಟು ಅವುಗಳ ತುದಿಗೆ ಸಗಣಿ ಹಚ್ಚಬೇಕು. ಕೆಲವು ದಿನಗಳ ಅನಂತರ ಅವು ಚಿಗುರಲು ಪ್ರಾರಂಭಿಸುತ್ತವೆ. ಬೆಳೆಸಿದ ಅನಂತರ ಎರಡನೆಯ ವರ್ಷದಿಂದ ಸೊಪ್ಪನ್ನು ಕತ್ತರಿಸಲು ಆರಂಭಿಸಬಹುದು. ವರ್ಷಕ್ಕೆ 2–4 ಸಲ ಸೊಪ್ಪನ್ನು ಕತ್ತರಿಸಬಹುದು. ಪ್ರಾರಂಭದಲ್ಲಿ ಒಂದು ಮರದಿಂದ 10–15 ಕಿಗ್ರಾಂ ಸೊಪ್ಪನ್ನು ಪಡೆಯಬಹುದಾದರೂ 5 ವರ್ಷ ವಯಸ್ಸಾದ ಮರಗಳಿಂದ 80 – 100 ಕಿಗ್ರಾಂ ಸೊಪ್ಪನ್ನು ಪಡೆಯಬಹುದು. ಒಂದು ಮರದಿಂದ 20 ವರ್ಷಗಳವರೆಗೆ ಲಾಭದಾಯಕ ಮೊತ್ತದಲ್ಲಿ ಸೊಪ್ಪು ಕತ್ತರಿಸಬಹುದು. ಗ್ಲಿರಿಸಿಡಿಯದ ಸೊಪ್ಪು ನೈಟ್ರೊಜನ್ನಿನ ಒಳ್ಳೆಯ ಆಕರ ಅನ್ನಿಸಿಕೊಂಡಿದೆ. ಇದು ಬರಿಯ ಗೊಬ್ಬರವೊಂದೇ ಅಲ್ಲದೆ ದನಗಳಿಗೆ ಒಳ್ಳೆಯ ಮೇವೂ ಹೌದು. ಗ್ಲಿರಿಸಿಡಿಯದ ಚೌಬೀನೆಯನ್ನು ಆಸರೆಗಂಬ ಬೇಲಿಗಂಬ ಮುಂತಾದವುಗಳಾಗಿಯೂ ಉರುವಲಾಗಿಯೂ ಬಳಸುವುದಿದೆ. (ಬಿ.ಎ.ಪಿ.)

**ಗ್ಲಿಸರಿನ್ :** ತ್ರಿಹೈಡ್ರಿಕ್ ಆಲ್ಕೊಹಾಲುಗಳಲ್ಲಿ (ಮೂರು ಹೈಡ್ರಾಕ್ಸಿಲ್ ಗುಂಪುಗಳಿರುವ ಆಲ್ಕೊಹಾಲುಗಳಲ್ಲಿ) ಅತ್ಯಂತ ಮುಖ್ಯವಾದ ಕಾರ್ಬನಿಕ ಸಂಯುಕ್ತ. ಪರ್ಯಾಯನಾಮ ಗ್ಲಿಸರಾಲ್. ಇದರ ರಾಸಾಯನಿಕ ಸೂತ್ರ $CH_2OH\ CHOH.CH_2OH$; ಕ್ರಮಬದ್ಧ ನಾಮ ಪ್ರೊಪೇನ್ – 1:2:3 – ಟ್ರೈಆಲ್. ಇದನ್ನು ಕಂಡುಹಿಡಿದಾತ ಖ್ಯಾತ ಸ್ವೀಡಿಷ್ ವಿಜ್ಞಾನಿ ಷೀಲೆ (1742–1786). ಆತ ಆಲಿವ್ ಎಣ್ಣೆಯನ್ನು ಸೀಸದ ಆಕ್ಸೈಡಿನೊಂದಿಗೆ ಕಾಯಿಸಿ ಈ ಸಂಯುಕ್ತವನ್ನು ತಯಾರಿಸಿದ (1779). ಬಂಧಿತ ತೈಲಗಳು (ಫಿಕ್ಸೆಡ್ ಆಯಿಲ್ಸ್) ಮತ್ತು ಸಾಮಾನ್ಯವಾಗಿ ಪ್ರಾಣಿಮೂಲಗಳಿಂದ ಬರುವ ಕೊಬ್ಬುಗಳ ಪ್ರಧಾನ ಭಾಗ ಗ್ಲಿಸರಾಲಿನ ವಿವಿಧ ಎಸ್ಟರುಗಳ ಮಿಶ್ರಣ. ಈ ಎಸ್ಟರುಗಳಿಗೆ ಗ್ಲಿಸರೈಡುಗಳೆಂದು ಹೆಸರು. ಇವುಗಳ ಸಂಯೋಜನೆಯಲ್ಲಿ ಕಂಡುಬರುವ ಆಮ್ಲ ಗಳೆಂದರೆ ಸ್ಟಿಯರಿಕ್, ಪಾಮಿಟಿಕ್, ಒಲೆಯಿಕ್, ಲಿನೂಲೆಯಿಕ್ ಆಮ್ಲಗಳು ಮತ್ತು ಅವುಗಳ ಬಳಗದ ಇನ್ನು ಕೆಲವು ವಿರಳ ಆಮ್ಲಗಳು. ಇವನ್ನು ಸಾಮಾನ್ಯವಾಗಿ ಮೇದಾಮ್ಲಗಳೆಂದು (ಫ್ಯಾಟಿ ಆಸಿಡ್ಸ್) ಕರೆಯುವುದು ವಾಡಿಕೆ.

ಎಣ್ಣೆ ಮತ್ತು ಕೊಬ್ಬುಗಳನ್ನು ಕ್ಷಾರಗಳು (ಆಲ್ಕಲೀಸ್), ಆಮ್ಲಗಳು, ಅತಿ ಕಾಯಿಸಿದ ಉಗಿ ಅಥವಾ ಎಂಜೈಮುಗಳ ಸಹಾಯದಿಂದ ಜಲವಿಭಜನೆಗೆ (ಹೈಡ್ರಾಲಿಸಿಸ್) ಒಳಪಡಿಸಿದರೆ ಗ್ಲಿಸರಾಲು ಮೇದಾಮ್ಲಗಳೆಂದು ಬಿಡುಗಡೆ ಹೊಂದುತ್ತವೆ.



ಆಮ್ಲಗಳನ್ನು ಪ್ರತ್ಯೇಕಿಸಿದ ತರುವಾಯ ಉಳಿಯುವ ಜಲೀಯದ್ರಾವಣವನ್ನು ಕಡಿಮೆ ಮಾಡಿದ ಒತ್ತಡದಲ್ಲಿ ಇಂಗಿಸಿ, ಪಟುಗೊಳಿಸಿದ ಕಾರ್ಬನಿನಿಂದ ಬಣ್ಣ ತೆಗೆದು ಶುದ್ಧೀಕರಿಸಬಹುದು. ಆಲ್ಕೊಹಾಲಿಕ ಕಿಣ್ವನದಲ್ಲಿ (ಆಲ್ಕೊಹಾಲಿಕ್ ಫರ್ಮೆಂಟೇಷನ್) ಉಪೋತ್ಪನ್ನವಾಗಿ ಬರುವ ಗ್ಲಿಸರಾಲಿನ ಪ್ರಮಾಣವನ್ನು ಸೋಡಿಯಮ್ ಸಲ್ಫೈಟಿನ ಸಹಾಯದಿಂದ ಹೆಚ್ಚಿಸಬಹುದು. ಈ ಎರಡು ವಿಧಾನಗಳಿಂದಲ್ಲದೆ ಸಂಶ್ಲೇಷಣ

ವಿಧಾನಗಳಿಂದಲೂ ಗ್ಲಿಸರಾಲನ್ನು ತಯಾರಿಸುತ್ತಾರೆ. ಅವುಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿರುವ ವಿಧಾನ ಪೆಟ್ರೋಲಿಯಮ್ ಉತ್ಪನ್ನವಾದ ಪ್ರೊಪೈಲೀನಿನಿಂದ ಪ್ರಾರಂಭವಾಗುತ್ತದೆ. ಪ್ರೊಪೈಲೀನನ್ನು ಸುಮಾರು $500^0$ ಸೆಂ. ಉಷ್ಣತೆಯಲ್ಲಿ ಕ್ಲೋರಿನೀಕರಿಸಿದಾಗ ಅಲ್ಲೈಲ್ ಕ್ಲೋರೈಡ್ ಉತ್ಪತ್ತಿಯಾಗುವುದು. ಅದನ್ನು ಈ ಕೆಳಗೆ ಕಾಣುವ ಹಂತಗಳಲ್ಲಿ ಗ್ಲಿಸರಾಲಾಗಿ ಪರಿವರ್ತಿಸುತ್ತಾರೆ.



ಈಚೆಗೆ ಬಳಕೆಗೆ ಬಂದಿರುವ ಇನ್ನೊಂದು ಸಂಶ್ಲೇಷಣ ವಿಧಾನದಲ್ಲಿ ಆಸ್ಮಿಯಮ್ ಟೆಟ್ರಾಕ್ಸೈಡ್ ಮತ್ತು ಹೈಡ್ರೋಜನ್ ಪರಾಕ್ಸೈಡುಗಳ ಸಹಾಯದಿಂದ ಆಕ್ರಾಲ್ಡಿಹೈಡನ್ನು ಗ್ಲಿಸರಾಲ್ಡಿಹೈಡಾಗಿ ಪರಿವರ್ತಿಸಿ ಅದನ್ನು ಕ್ರಿಯಾವರ್ಧಕದ ಸಮ್ಮುಖದಲ್ಲಿ ಹೈಡ್ರಾಜನೀಕರಿಸಿ ಗ್ಲಿಸರಾಲ್ ತಯಾರಿಸುತ್ತಾರೆ.

ಗ್ಲಿಸರಾಲ್ ಬಣ್ಣ ವಾಸನೆಗಳಿಲ್ಲದ ಸಿಹಿಯಾದ ಸ್ನಿಗ್ಧ ಜಲಾಕರ್ಷಕ ದ್ರವ. ಅದು ನೀರಿಗಿಂತಲೂ ಭಾರ. ಆದರೆ ಎಲ್ಲ ಪ್ರಮಾಣಗಳಲ್ಲೂ ನೀರಿನಲ್ಲಿ ದ್ರಾವ್ಯ. ಅದರ ಕುದಿಬಿಂದು $290^0$ ಸೆಂ. ಕುದಿಯುವಾಗ ಭಾಗಶಃ ವಿಭಜಿಸುತ್ತದೆ. ಆದ್ದರಿಂದ ಸಾಮಾನ್ಯವಾಗಿ ಕಡಿಮೆ ಒತ್ತಡದಲ್ಲಿ ಅದನ್ನು ಆಸವಿಸುತ್ತಾರೆ. 12 ಮಿಮೀ ಒತ್ತಡದಲ್ಲಿ ಅದು $170^0$ ಸೆಂ.ನಲ್ಲಿ ಕುದಿಯುತ್ತದೆ. $0^0$ ಸೆಂ. ಉಷ್ಣತೆಯಲ್ಲಿ ಅದು ಕ್ರಮೇಣ ಘನೀಭವಿಸುವುದು. ಘನ ಗ್ಲಿಸರಾಲಿನ ದ್ರವನಬಿಂದು $18^0$ ಸೆ.



ಎಲ್ಲ ಆಲ್ಕೊಹಾಲುಗಳಂತೆಯೇ ಗ್ಲಿಸರಾಲು ಸಹ ಸೂಕ್ತ ಸನ್ನಿವೇಶದಲ್ಲಿ ಆಮ್ಲಗಳೊಡನೆ ವರ್ತಿಸಿ ಎಸ್ಟರುಗಳನ್ನು ನೀಡುತ್ತದೆ. ಉದಾಹರಣೆಗೆ, ಅದರ ಟ್ರೈಅಸಿಟೇಟ್, ಟ್ರೈಸ್ಟಿಯರೇಟ್ ಇತ್ಯಾದಿ. ನೈಟ್ರಿಕ್ ಆಮ್ಲದೊಡನೆ ವರ್ತಿಸಿದಾಗ ಉತ್ಪತ್ತಿಯಾಗುವ ಗ್ಲಿಸರಾಲು ಟ್ರೈನೈಟ್ರೇಟ್ ಇವುಗಳಲ್ಲೆಲ್ಲ ಅತ್ಯಂತ ಮುಖ್ಯವಾದ ಎಸ್ಟರು. ಅದು ನೈಟ್ರೋಗ್ಲಿಸರಿನ್ ಎಂಬ ವಾಣಿಜ್ಯನಾಮದಿಂದ ಪ್ರಸಿದ್ಧವಾಗಿದೆ. ಡೈನಮೈಟ್, ಸ್ಫೋಟಕ ಜಿಲೆಟಿನ್, ಕಾರ್ಡೈಟ್ ಮುಂತಾದ ಸ್ಫೋಟಕಗಳ ಸಾಮಾನ್ಯ ಘಟಕವಾದ ನೈಟ್ರೋಗ್ಲಿಸರಿನನ್ನು ತಯಾರಿಸಲು ತಣಿಸಿದ ಸಲ್ಫ್ಯೂರಿಕ್– ನೈಟ್ರಿಕ್ ಆಮ್ಲಗಳ ಮಿಶ್ರಣದ ಮೇಲೆ ಗ್ಲಿಸರಿನನ್ನು ತುಂತುರು ತುಂತುರಾಗಿ ಚಿಮುಕಿಸುತ್ತಾರೆ. ನಸು ಹಳದಿ ಬಣ್ಣದ ನೈಟ್ರೋಗ್ಲಿಸರಿನ್ ಉತ್ಪತ್ತಿಯಾಗಿ ಎಣ್ಣೆಯಂತೆ ತೇಲುತ್ತದೆ.

$110^0$ ಸೆಂ. ಉಷ್ಣತೆಗೆ ಕಾಯಿಸಿದಾಗ ಗ್ಲಿಸರಾಲಿಗೆ ಶುಷ್ಕ ಹೈಡ್ರೊಜನ್ ಕ್ಲೋರೈಡ್ ಹಾಯಿಸಿದರೆ ಮೊದಲು ಒಂದು, ಅನಂತರ ಎರಡು ಹೈಡ್ರಾಕ್ಸಿಲ್ ಗುಂಪುಗಳು ಕ್ಲೋರಿನಿಂದ ಪಲ್ಲಟಗೊಳ್ಳುತ್ತವೆ. ಮೂರು ಹೈಡ್ರಾಕ್ಸಿಲ್ ಗುಂಪುಗಳನ್ನೂ ಪಲ್ಲಟಿಸಬೇಕಾದರೆ ರಂಜಕದ ಪೆಂಟಕ್ಲೋರೈಡನ್ನು ಉಪಯೋಗಿಸಬೇಕು. ನೈಟ್ರಿಕ್ ಆಮ್ಲದಂಥ ಉತ್ಕರ್ಷಣಕಾರಿಗಳು ಗ್ಲಿಸರಿನ್ ಜೊತೆ ವರ್ತಿಸಿದಾಗ ಅನುಕ್ರಮವಾಗಿ ಗ್ಲಿಸರಿಕ್ ಆಮ್ಲ ($CH_2OH.\ CHOH.\ COOH$), ಟಾರ್ಟ್ರೋನಿಕ್ ಆಮ್ಲ ($COOH.\ CHOH.\ COOH$) ಮತ್ತು ಮೆಸಾಕ್ಸಾಲಿಕ್ ಆಮ್ಲಗಳು ($COOH.\ CO.\ COOH$) ಉತ್ಪತ್ತಿಯಾಗುವವು. ರಂಜಕ ಮತ್ತು ಅಯೋಡೀನ್‌ಗಳು ಗ್ಲಿಸರಿನ್ ಜೊತೆ ವರ್ತಿಸಿದಾಗ ಅನುಕ್ರಮವಾಗಿ ಅಲ್ಲೈಲ್ ಅಯೋಡೈಡ್ ($CH_2 : CH.\ CH_2I$), ಪ್ರೊಪೈಲೀನ್ ($CH_3 .\ CH : CH_2$) ಮತ್ತು ಐಸೊಪ್ರೊಪೈಲ್ ಅಯೊಡೈಡುಗಳು ($CH_3.\ CHI.\ CH_3$) ಉತ್ಪತ್ತಿಯಾಗುತ್ತವೆ. ಸೋಡಿಯಂ ಬೈಸಲ್ಫೇಟ್ ಅಥವಾ ರಂಜಕದ ಪೆಂಟಾಕ್ಸೈಡ್‌ನೊಂದಿಗೆ ಕಾಯಿಸಿದಾಗ ಗ್ಲಿಸರಾಲು ನೀರನ್ನು ಕಳೆದುಕೊಂಡು ಆಕ್ರೊಲೀನ್ ಅಥವಾ ಆಕ್ರಾಲ್ಡಿಹೈಡ್ ($CH_2 : CH .CHO$) ಎಂಬ ಅಪರ್ಯಾಪ್ತ ಆಲ್ಡಿಹೈಡನ್ನು ನೀಡುತ್ತದೆ. ಇದು ಅತ್ಯಂತ ತೀಕ್ಷ್ಣವಾದ ಘಾಟುವಾಸನೆ ಉಳ್ಳದ್ದಾದುದರಿಂದ ಗ್ಲಿಸರಾಲನ್ನು ಗುರುತಿಸಲು ಈ ಕ್ರಿಯೆಯನ್ನು ಉಪಯೋಗಿಸಬಹುದು.



ಫಾರ್ಮಿಕ್ ಅಥವಾ ಆಕ್ಸಾಲಿಕ್ ಆಮ್ಲದೊಡನೆ $260^0$ ಸೆಂ. ನಲ್ಲಿ ಕಾಯಿಸಿದರೆ ಗ್ಲಿಸರಾಲು ಅಲ್ಲೈಲ್ ಆಲ್ಕೊಹಾಲನ್ನು ($CH_2 : CH.\ CH_2OH$) ನೀಡುತ್ತದೆ. ಎರಡು ಕಾರ್ಬಾಕ್ಸಿಲ್ ಗುಂಪುಗಳುಳ್ಳ ದ್ವಿಪ್ರತ್ಯಾಮ್ಲೀಯ ಆಮ್ಲಗಳು (ಡೈಬೇಸಿಕ್ ಆ್ಯಸಿಡ್ಸ್) ಗ್ಲಿಸರಿನಿನೊಂದಿಗೆ ವರ್ತಿಸಿದಾಗ ಆಲ್ಕಿಡ್ ರೆಸಿನುಗಳೆಂಬ ಸಾಂದ್ರೀಕರಣ ಪಾಲಿಮರುಗಳು ಉತ್ಪತ್ತಿಯಾಗುತ್ತವೆ. ಥ್ಯಾಲಿಕ್ ಆನ್‌ಹೈಡ್ರೈಡಿನ ವರ್ತನೆಯಿಂದ ಉತ್ಪತ್ತಿಯಾಗುವ ಗ್ಲಿಪ್ಟಾಲ್ ಎಂಬುದು ಅವುಗಳಲ್ಲಿ ಅತ್ಯಂತ ಸಾಮಾನ್ಯವಾದುದು.

ಗ್ಲಿಸರಿನ್ ಆವಿಶೀಲ (ವಾಲಟೈಲ್) ಅಲ್ಲದುದರಿಂದ ಅದರಿಂದ ತೇವಗೊಳಿಸಿದ ಪದಾರ್ಥಗಳು ಬೇಗ ಒಣಗುವುದಿಲ್ಲ. ಈ ಕಾರಣದಿಂದ ಅದನ್ನು ಕಾಂತಿವರ್ಧಕಗಳ (ಕಾಸ್ಮೆಟಿಕ್ಸ್) ತಯಾರಿಕೆಯಲ್ಲೂ ಹಣ್ಣುಗಳು ಮತ್ತು ತಂಬಾಕನ್ನು ತೇವಗೊಳಿಸಿ ಮೃದುವಾಗಿಡುವುದಕ್ಕೂ ಕ್ಷಾರದ ಸಾಬೂನು ಮತ್ತು ಟೂತ್‌ಪೇಸ್ಟುಗಳ ತಯಾರಿಕೆಗೂ ಬಳಸುತ್ತಾರೆ. ವಾಣಿಜ್ಯದಲ್ಲಿ ಗ್ಲಿಸರಿನಿನ ಅತ್ಯಧಿಕ ಭಾಗ ಸ್ಫೋಟಕಗಳ ತಯಾರಿಕೆಗೆ ವ್ಯಯವಾಗುತ್ತದೆ. ಇಷ್ಟೇ ಅಲ್ಲದೆ ಘನೀಕರಣರೋಧಕ ಮಿಶ್ರಣಗಳಲ್ಲಿ (ಆ್ಯಂಟಿ– ಫ್ರೀಜ್ ಮಿಕ್ಸ್‌ಚರ್ಸ್) ಗ್ಲಿಸರಾಲನ್ನು ವ್ಯಾಪಕವಾಗಿ ಬಳಸುತ್ತಾರೆ. ಅನೇಕ ಪ್ಲಾಸ್ಟಿಕ್ಕುಗಳ ತಯಾರಿಕೆಗೂ ಗ್ಲಿಸರಾಲ್ ಅಗತ್ಯ. (ಜಿ.ಆರ್.ಎಲ್. ; ಕೆ.ಎಸ್.ಎಲ್.)

**ಗ್ಲೂಕ್, ಕ್ರಿಸ್ಟೊಫ್ ವಿಲಿಬಾಲ್ಡ್ :** 1714–87. ಜರ್ಮನಿಯ ಒಬ್ಬ ಪ್ರಸಿದ್ಧ ವಾಗ್ಗೇಯಕಾರ. ಈತ ರಚಿಸಿದ ಹಲವಾರು ಗೇಯಕೃತಿಗಳು ಅದರಲ್ಲೂ ಮುಖ್ಯವಾಗಿ ಆಪೆರಗಳು, ಯುರೋಪಿನ ಸಂಗೀತ ಇತಿಹಾಸದಲ್ಲಿ ಹೊಸ ತಿರುವನ್ನು ಗುರುತಿಸಿದವೆನ್ನಲಾಗಿದೆ. ಗ್ಲೂಕ್ ಹುಟ್ಟಿದ್ದು ಜರ್ಮನಿಯ ವೈಡೆನ್‌ವ್ಯಾಂಗ್ ಎಂಬಲ್ಲಿ.



ಇವನ ತಂದೆ ರಾಜಕುಮಾರ ಲೊಬ್ಕೋವಿಟ್ಜ಼ನ ಸೇವೆಯಲ್ಲಿ ಇದ್ದುಕೊಂಡು ಅವನ ಬೇಟೆಯಾಟಗಳಲ್ಲಿ ಸಹಕರಿಸುತ್ತಿದ್ದ. ಗ್ಲೂಕ್‌ಗೆ 12 ವರ್ಷವಾದಾಗ ಅವನನ್ನು ಕೊಮೋಟ ಎಂಬಲ್ಲಿನ ಜೆಸ್ಯೂಟ್ ಕಾಲೇಜಿಗೆ ಸೇರಿಸ ಲಾಯಿತು. ಈತ ಅಲ್ಲಿ ಪ್ರಪ್ರಥಮವಾಗಿ ಸಂಗೀತ ಪಾಠಗಳನ್ನು ಕಲಿತುಕೊಂಡ. ಅನಂತರ 1732ರಲ್ಲಿ ಪ್ರಾಗ್ ವಿಶ್ವವಿದ್ಯಾಲಯ ಸೇರಿದ. ಸುಮಾರು ನಾಲ್ಕು ವರ್ಷಗಳ ಕಾಲ ಜೀವನೋಪಾಯಕ್ಕಾಗಿ ಪಿಟೀಲು, ಸೆಲ್ಲೋ ಮುಂತಾದ ವಾದ್ಯಗಳನ್ನು ನುಡಿಸುತ್ತ ಸಂಗೀತಪಾಠ ಕಲಿಸುತ್ತ ಕಾಲ ಕಳೆದ. ಸರ್ನೊಹರ್‌ಸ್ಕಿ ಎಂಬ ಸಂಗೀತ ವಿದ್ವಾಂಸನೊಬ್ಬ ಇವನ ಗುರುವಾದ. 1736ರಲ್ಲಿ ರಾಜಕುಮಾರ ಲೊಬ್ಕೋವಿಟ್ಜ಼ನ ಪರಿವಾರದಲ್ಲಿ, ಚೇಂಬರ್ ಸಂಗೀತಗಾರನಾಗಿ ವಿಯೆನ್ನಕ್ಕೆ ಹೋಗಿದ್ದಾಗ ಇವನಿಗೆ ಇಟಲಿಯ ಆಪೆರದಲ್ಲಿ ಹೆಚ್ಚಿನ ಅಭಿರುಚಿಯುಂಟಾಯಿತು. ಮರುವರ್ಷವೇ ಈತ ಅಲ್ಲಿನ ರಾಜಕುಮಾರ ಮೆಲ್ಜ಼ಿಯನ್ನು ಸಂದರ್ಶಿಸಿ ಅವನ ಆಶ್ರಯ ದೊರಕಿಸಿಕೊಂಡ. ರಾಜಕುಮಾರನ ನೆರವಿನಿಂದ ಮಿಲಾನಿಗೆ ಹೋಗಿ ಅಲ್ಲಿ

ಮೂರು ವರ್ಷಗಳ ಕಾಲ ಪ್ರಸಿದ್ಧ ಸಂಗೀತಶಾಸ್ತ್ರಜ್ಞ ಜಿಯೊವಾನಿ ಬ್ಯಾಟಿಸ್ಟ್ ಸ್ಯಾನ್ ಮಾರ್ಟಿನಿ ಎಂಬುವನ ಬಳಿ ತನ್ನ ವ್ಯಾಸಂಗವನ್ನು ಮುಂದುವರಿಸಿದ. 1741ರಲ್ಲಿ ಆರ್ಟಾರ್ಸೆಸ್ ಎಂಬ ತನ್ನ ಪ್ರಪ್ರಥಮ ಆಪೆರವನ್ನು ರೂಪಿಸಿ ಪ್ರದರ್ಶಿಸಿದ. ಮುಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ ಸುಮಾರು 8 ಇಟಾಲಿಯನ್ ಮಾದರಿಯ ಆಪೆರಗಳನ್ನು ಪ್ರದರ್ಶಿಸಿದ. 1745ರಲ್ಲಿ ರಾಜಕುಮಾರ ಲೊಬ್ಕೋವಿಟ್ಜನ ಜೊತೆಯಲ್ಲಿ ಲಂಡನಿಗೆ ಭೇಟಿಯಿತ್ತ. ಪ್ಯಾರಿಸಿನಲ್ಲಿ ತಂಗಿದ್ದಾಗ ಫ್ರೆಂಚ್ ಗೇಯಕಾರ ಜೀನ್ ಫಿಲಿಪ್ಪೆ ರಾಮೋ (1683–1764) ಎಂಬುವನ ಆಪೆರಗಳನ್ನು ನೋಡಿ ಮೆಚ್ಚಿಕೊಂಡ. ಸುಮಾರು ಒಂದು ವರ್ಷಕಾಲ ಲಂಡನಿನಲ್ಲಿದ್ದಾಗ ತನ್ನ 2 ಸಂಕೀರ್ಣಗೀತಗಳನ್ನೂ (ಪ್ಯಾಸ್ಟಿಚ್) 6 ತ್ರಿವಾದ್ಯಕೃತಿಗಳನ್ನೂ (ಟ್ರಯೋಸೊನಾಟಾಸ್) ಶ್ರುತಪಡಿಸಿದ. ಅಲ್ಲಿ ಇವನಿಗೆ ಹ್ಯಾಂಡಲ್ ಆರ್ನ್ ಮುಂತಾದ ಸಂಗೀತಗಾರರ ಪರಿಚಯವಾಯಿತು. ಲಂಡನಿನಲ್ಲಿ ಈತ ಪಿಎತ್ರೋ ಮಿನ್‌ಗೊಟ್ಟಿ ಎಂಬುವನ ಇಟಾಲಿಯನ್ ಆಪೆರ ಕಂಪೆನಿಗೆ ಸೇರಿ, ಅದರ ಸಂಗೀತ ನಿರ್ದೇಶಕನಾಗಿ, ಕಂಪೆನಿಯೊಂದಿಗೆ ಅಲ್ಲಲ್ಲೇ ಸಂಚರಿಸಿದ. ಅಷ್ಟು ಹೊತ್ತಿಗೆ ಇವನಿಗೆ ಸಾಕಷ್ಟು ಕೀರ್ತಿ ದೊರಕಿತ್ತು.

ಶ್ರೀಮಂತ ವ್ಯಾಪಾರಿಯೊಬ್ಬನ ಮಗಳಾದ ಮಾರಿಯಾನಿ ಪರ್ಗಿನ್ ಎಂಬುವವಳನ್ನು 1750ರಲ್ಲಿ ವಿವಾಹವಾಗಿ ವಿಯೆನ್ನದಲ್ಲಿ ನೆಲಸಿದ. ನೇಪಲ್ಸ್ ಮುಂತಾದ ಕಡೆ ಈತ ರೂಪಿಸಿದ ವಾದ್ಯಮೇಳ ಗೋಷ್ಠಿಗಳಿಂದಾಗಿ ಇವನ ಹೆಸರು ಇಟಲಿಯಲ್ಲೆಲ್ಲ ವ್ಯಾಪಿಸಿತು. 1754ರಲ್ಲಿ ಕೌಂಟ್ ಡುರಾಸ್ಸೋ ಎಂಬುವನ ಆಸ್ಥಾನದಲ್ಲಿ ಸಂಗೀತ ನಾಟ್ಯಗೃಹಗಳ ನಿರ್ದೇಶಕನಾಗಿ ನೇಮಿತನಾದ. 1760ರಿಂದಾಚೆಗೆ ಸೇವಾವೃತ್ತಿಯನ್ನು ತ್ಯಜಿಸಿ ಸ್ವತಂತ್ರ ಜೀವನ ನಡೆಸುವಂತಾದ.

1761 ರವರೆಗೆ ಈತ ರಚಿಸಿದ ಕೃತಿಗಳಲ್ಲಿ ಹೆಚ್ಚು ಸ್ವಂತಿಕೆ ಕಂಡುಬರದಿದ್ದರೂ ಆ ವರ್ಷ ರಚಿಸಿದ ಡಾಮ್‌ಜುಆನ್ ಮತ್ತು ಆರ್ಫಿಯಸ್ ಅಂಡ್ ಯೂರಿಡೀಸ್ ಎಂಬ ಬ್ಯಾಲೆಗಳಲ್ಲಿ ಈತನ ಪ್ರತಿಭೆ ಎದ್ದುಕಾಣುತ್ತದೆ. ಜರ್ಮನಿಯ ಅಭಿಜಾತವಾದಿ ವಿಂಕಲ್‌ಮನ್ನನನ್ನು ಸಂದರ್ಶಿಸಿದಾಗಿನಿಂದ ಗ್ಲೂಕ್‌ಗೆ ವಿಶೇಷ ಅನುಭವಗಳು ಲಭಿಸಿದವು. ವಿಶೇಷ ನಾಟ್ಯಪ್ರಜ್ಞೆಯುಳ್ಳ ಗ್ಲೂಕ್ ಹದಿನೆಂಟನೆಯ ಶತಮಾನದ ನವ ಅಭಿಜಾತ ಪಂಥದವರಂತೆ ತಾನೂ ಪುರಾತನ ಗ್ರೀಕರ ಸಾಹಿತ್ಯ ಹಾಗೂ ಕಲಾತತ್ತ್ವಗಳಿಗೆ ಮಾರುಹೋದನಾದರೂ ಕೆಲವು ಕಾಲ ಇಟಾಲಿಯನ್ ಮಾದರಿಯ ಆಪೆರಗಳ ರಚನೆಯನ್ನೇ ಮುಂದುವರಿಸಿದ. 1769ರಲ್ಲಿ ಅಲ್‌ಸೆಸ್ಟ್ ಎಂಬ ತನ್ನ ಆಪೆರಕ್ಕೆ ಬರೆದ ಮುನ್ನುಡಿಯಲ್ಲಿ ತನ್ನ ಸಂಗೀತಸೂತ್ರಗಳನ್ನೂ ಸಿದ್ಧಾಂತಗಳನ್ನೂ ಖಚಿತವಾಗಿ ವ್ಯಕ್ತಪಡಿಸಿದ. ಆಪೆರದ ರಚನೆಯಲ್ಲಿ ವಾಗ್ಗೇಯಕಾರನಿಗೆ ಆಯಾ ಸನ್ನಿವೇಶಗಳಲ್ಲಿನ ನಾಟ್ಯಪ್ರಜ್ಞೆಯ ಅರಿವಿರಬೇಕು. ಅವನು ಕಣ್ಣಿಗೆ ಹೊಡೆಯುವಂಥ ದೃಶ್ಯಾತ್ಮಕ ಅಂಶಗಳಿಗೆ ಹೆಚ್ಚು ಗಮನವೀಯಬಾರದು. ಗೇಯಕೃತಿಗಳು ಸರಳವೂ ಉದಾತ್ತವೂ ಆದ ಕಲಾವಂತಿಕೆಯಿಂದ ಕೂಡಿರಬೇಕು– ಎಂಬುದು ಗ್ಲೂಕನ ಅಭಿಮತ. ಇವನ್ನು ಎತ್ತಿತೋರಿಸಲೆಂದೇ ಅಲ್‌ಸೆಸ್ಟ್ ಎಂಬ ಕೃತಿಯನ್ನು ಈತ ಬರೆದದ್ದು. ಆದರೆ ಇವನ ಕಲಾಪ್ರತಿಭೆಗೆ ಸದವಕಾಶ ದೊರೆತದ್ದು ಈತ ಪ್ಯಾರಿಸಿನಲ್ಲಿದ್ದಾಗ. ಪ್ಯಾರಿಸಿನ ಆಪೆರ ಸಂಸ್ಥೆ ಇವನ ಪ್ರತಿಭೆಗೆ ಪುರಸ್ಕಾರವಿತ್ತು ಕೆಲವು ಕೃತಿಗಳನ್ನು ರಚಿಸುವಂತೆ ಆಹ್ವಾನಿಸಿತು. ಇದರ ಸಲುವಾಗಿ ಗ್ಲೂಕ್ 6 ಆಪೆರಗಳನ್ನು ಬರೆದು ತಾನೇ ಅವನ್ನು ನಿರ್ದೇಶಿಸಿ ಪ್ರದರ್ಶನಕ್ಕೆ ಅಣಿಮಾಡಿದ. ತನಗೆ ಮೆಚ್ಚುಗೆಯಾದ ಕಲಾಪಾತ್ರಗಳೆಲ್ಲವನ್ನೂ ಈ ಆಪೆರಗಳಲ್ಲಿ ಪ್ರಯೋಗಿಸಲು ಗ್ಲೂಕ್‌ಗೆ ಸಾಧ್ಯವಾಯಿತು. ಫ್ರೆಂಚ್ ರಸಿಕರನ್ನು ಮೆಚ್ಚಿಸಲು ಈತ ಹೆಚ್ಚಿನ ಸ್ವಾತಂತ್ರ್ಯ ವಹಿಸಿದ. ಆ ವೇಳೆಗೆ ಇಟಲಿಯ ಆಪೆರಗಳಲ್ಲಿದ್ದ ಕಠಿಣಸೂತ್ರಗಳನ್ನು ತ್ಯಜಿಸಿ ಲುಲ್ಲಿ, ರಾಮೋ ಮುಂತಾದವರು ಹೊಸ ಸೂತ್ರಗಳನ್ನು ತೋರಿಸಿಕೊಟ್ಟಿದ್ದರು. ಗ್ಲೂಕ್ ಕೂಡ ಅವರ ದಾರಿಯನ್ನೇ ಅನುಸರಿಸಿದ. ಆದರೆ ಫ್ರೆಂಚ್ ರಸಿಕಸಮುದಾಯ ಇವನ ಸ್ವಾತಂತ್ರ್ಯಪ್ರಿಯತೆ ಹಾಗೂ ಸ್ವೋಪಜ್ಞತೆಯನ್ನು ಅಷ್ಟು ಸುಲಭವಾಗಿ ಮೆಚ್ಚಲಿಲ್ಲ. ಬದಲು ಇವನನ್ನು ವಿರೋಧಿಸಿತು. ಫ್ರೆಂಚ್ ಸಂಗೀತಜ್ಞರ ಕ್ಷೇತ್ರದಲ್ಲಿ ಉಗ್ರ ವಿವಾದಗಳೇರ್ಪಟ್ಟವು. ಇಟಲಿಯ ಆಪೆರ ಸಂಪ್ರದಾಯವನ್ನು ಮೆಚ್ಚುವ ತಂಡದವರು ನಿಕೊಲಾ ಪಿಚೀನಿ (1728–1800) ಎಂಬುವನ ರಚನೆಗಳನ್ನು ಪ್ರಶಂಸಿಸಿ ಅವನ ಪಕ್ಷ ಹಿಡಿದರು. ಗ್ಲೂಕ್ ಪಂಥದವರಿಗೂ ಪಿಚೀನಿ ಪಂಥದವರಿಗೂ ದೊಡ್ಡ ಚರ್ಚೆ, ಸೆಣಸಾಟಗಳೇ ಪ್ರಾರಂಭವಾಗಿ, ಫ್ರೆಂಚ್ ಆಪೆರ ಮತ್ತು ಇಟಲಿ ಆಪೆರಗಳ ನಡುವೆ ವಿರೋಧಾಭಿಪ್ರಾಯಗಳು ತಲೆದೋರಿದವು. ಈ ಘೋರ ವಾಗ್ವಾದದಲ್ಲಿ ಗ್ಲೂಕ್ ಜಯಗಳಿಸಿದ. ಈತ ವಿಯೆನ್ನಗೆ ಹಿಂದಿರುಗಿದ ಕೂಡಲೆ ಪ್ಯಾರಿಸಿನ ಗ್ಲೂಕ್ ಪಂಥೀಯರು ಮತ್ತೆ ಇಟಲಿಯ ಅತಿಭಾವುಕ ಆಪೆರಗಳಿಗೆ ಮಾರುಹೋದರು. ಗ್ಲೂಕನ ಪ್ರಕಾಶ ಮತ್ತೆ ಮಸುಕಾಯಿತು.

ಗ್ಲೂಕ್ ಇಡೀ ಜೀವಿತಕಾಲದಲ್ಲಿ ತನ್ನ ಸೂತ್ರಗಳನ್ನು ಉಗ್ರವಾಗಿ ಸಮರ್ಥಿಸಿಕೊಳ್ಳುವುದು ಮಾತ್ರವಲ್ಲದೆ ತನಗೆ ಮೆಚ್ಚುಗೆಯಾದ ರೀತಿಯಲ್ಲಿ ಹೊಸಮಾರ್ಗವನ್ನು ತುಳಿಯಲು ಪ್ರಯತ್ನಿಸಿದ. ತಾನು ಜನ್ಮತಃ ಜರ್ಮನಿಯವನಾದರೂ ಫ್ರೆಂಚ್ ಜನತೆಯ ಆತ್ಮಾಭಿಮಾನವನ್ನು ಕೆರಳಿಸಿ, ಅವರಿಗೆ ತಮ್ಮ ಹಿರಿಮೆ ಗರಿಮೆಗಳ ಅರಿವಾಗುವಂತೆ ಮಾಡಿದ. ಇವನ ಆತ್ಮಪ್ರತ್ಯಯ ಪ್ಯಾರಿಸಿನ ಕಲಾವಂತರಿಗೆ ಸ್ವಲ್ಪಕಾಲವಾದರೂ ಪ್ರಬಲ ಪ್ರೇರಣೆ ನೀಡಿತು.

1779ರಲ್ಲಿ ಗ್ಲೂಕ್ ಪಾರ್ಶ್ವವಾಯುಗ್ರಸ್ತನಾಗಿ 8 ವರ್ಷ ದೀರ್ಘ ವಿಶ್ರಾಂತಿಯನ್ನು ಪಡೆದು 1787ರಲ್ಲಿ ನಿಧನ ಹೊಂದಿದ. ತನ್ನ ಕಾಲದಲ್ಲಿ ಗ್ಲೂಕ್ ಎಷ್ಟೇ ಕ್ರಾಂತಿಕಾರನೆನಿಸಿಕೊಂಡಿದ್ದರೂ ನವ ಅಭಿಜಾತ ಪಂಥದವನೇ ಆದ ಈತನ ಸಂಕುಚಿತ ಮನೋಧರ್ಮ ಅನಂತರ ಬಂದ ರಸಿಕರಿಗೆ ಮೆಚ್ಚುಗೆಯಾಗಲಿಲ್ಲ. ಗೇಯರಚನೆಗಳಲ್ಲಿ ಕಠಿಣವಾದ ಅಭಿಜಾತ ಕಲಾಸೂತ್ರಗಳನ್ನು ಅನುಸರಿಸಿ ಪ್ರಖರವಾದ ನಾಟ್ಯಪ್ರಜ್ಞೆಯನ್ನು ಅಳವಡಿಸಿದ್ದು ಇವನ ಶ್ರೇಷ್ಠಗುಣವನ್ನು ಎತ್ತಿತೋರಿಸುವಂತಾಯಿತು. ಇವನ ಗೇಯರಚನೆಗಳು ರಂಗಭೂಮಿಯ ಮೇಲೆ ಅತ್ಯದ್ಭುತ ಪರಿಣಾಮ ಬೀರಬಲ್ಲವಾದರೂ ಸಂಗೀತದ ದೃಷ್ಟಿಯಿಂದ ನೀರಸವೆನಿಸುತ್ತವೆ. ಈ ಸಂಬಂಧದಲ್ಲಿ ಹೆಚ್ಚಿನ ಸುಧಾರಣೆಗಳು ಕಂಡುಬಂದು ಅವು ಇತ್ತೀಚಿಗೆ ಜನಪ್ರಿಯವಾಗಿವೆ.

ಆಪೆರ ರಚನೆ ಹಾಗೂ ಪ್ರದರ್ಶನ ತಂತ್ರದಲ್ಲಿ ಗ್ಲೂಕ್ ಅಪೂರ್ವ ಅಂಶಗಳನ್ನು ಸಾಧಿಸಿದ. ಆಪೆರಗಳಲ್ಲಿನ ಗೀತ ನಿರೂಪಣೆಯ ಶೈಲಿಯನ್ನು ಈತ ಉಜ್ವಲಗೊಳಿಸಿದ. ಆರಂಭಮೇಳ (ಓವರ್ಚರ್) ಹಾಗೂ ವಾದ್ಯಮೇಳಗಳನ್ನು (ಆರ್ಕೆಸ್ಟ್ರ) ಈತ ನವೀನ ರೀತಿಯಲ್ಲಿ ಬಳಸಿಕೊಂಡು ವೇಗವಾದ ಗತಿಯನ್ನೂ ಪರಿಣಾಮವನ್ನೂ ಸಾಧಿಸಿದ. ಹಾರ್ಪ್ಸಿಕಾರ್ಡ್ ವಾದ್ಯದ ಬಳಕೆಯನ್ನು ಬಿಟ್ಟುಕೊಟ್ಟು, ಹಾರ್ಪ್, ಟ್ರೋಂಬೋನ್ ಮತ್ತು ಕ್ಲಾರಿನೆಟ್ ವಾದ್ಯಗಳನ್ನು ಸಂದರ್ಭೋಚಿತವಾಗಿ ಬಳಸಿದ. ನಾಟಕೀಯತೆಯ ಮೇಲೆ ಹೆಚ್ಚಿನ ಪರಿಣಾಮ ಬೀರಲು ಆರ್ಕೆಸ್ಟ್ರವನ್ನು ಸೊಗಸಾಗಿ ಅಳವಡಿಸಿಕೊಂಡ. ಗ್ಲೂಕ್ ಸಂಗೀತಗಾರನಾಗಿ ಕಾಲಕ್ಕೆ ತಕ್ಕಂತೆ ನಡೆದುಕೊಂಡು, ಅರ್ಥಾರ್ಥಿಯಾಗಿ ಬದುಕಬೇಕಾಗಿ ಬಂದರೂ ಇವನ ರಸವಂತಿಕೆ, ಕಲಾಭಿಜ್ಞತೆ ಅನನ್ಯವಾದವು. (ಎಚ್.ಕೆ.ಆರ್.)

**ಗ್ಲೂಕೊಸೈಡುಗಳು :** ಪ್ರಧಾನವಾಗಿ ಸಸ್ಯಜನ್ಯವಸ್ತುಗಳು. ಇವುಗಳಲ್ಲಿ ಚಕ್ರೀಯಾಕೃತಿಯ ಸಕ್ಕರೆಗಳ ಹೆಮಿಅಸಿಟಾಲ್ ಹೈಡ್ರಾಕ್ಸಿಲ್ ಗುಂಪಿನ ಹೈಡ್ರೊಜನ್ ಅಗ್ಲೈಕಾನ್ ಎಂಬ ಹೆಸರಿನ ಆಲ್ಕೈಲ್ ಅಥವಾ ಆರೈಲ್ ಪುಂಜದಿಂದ ಪಲ್ಲಟಗೊಂಡಿರುತ್ತದೆ. ಈಗ ಗ್ಲೂಕೊಸೈಡ್ ಬದಲು ಗ್ಲೈಕೊಸೈಡ್ ಎಂದೂ ಸಕ್ಕರೆಯ ಘಟಕ ಚಕ್ರೀಯ ಗ್ಲೂಕೋಸ್ ಆದಲ್ಲಿ ಮಾತ್ರ ಗ್ಲೂಕೊಸೈಡ್ ಎಂದೂ ಕರೆಯಲಾಗುವುದು. ಅನೇಕ ನೈಸರ್ಗಿಕ ಗ್ಲೈಕೊಸೈಡುಗಳು ಗ್ಲೂಕೊಸೈಡುಗಳೇ ಆಗಿವೆ. ಗ್ಲೂಕೊಸೈಡುಗಳಲ್ಲಿ α–D ಮತ್ತು β–D– ಗ್ಲೂಕೊಸೈಡ್ ಎಂದು ಎರಡು ವಿಧ. ಗ್ಲೂಕೊಸೈಡಿಕ್ ಗುಂಪಿನ ವಿನ್ಯಾಸದ ವ್ಯತ್ಯಾಸವೇ α– ಮತ್ತು β–D- ಗ್ಲೂಕೊಸೈಡುಗಳಿಗಿರುವ ವ್ಯತ್ಯಾಸ. ಆರು ಪರಮಾಣುಗಳಿಂದ ಚಕ್ರೀಯ (ಪೈರನೋಸ್) ಗ್ಲೂಕೊಸೈಡುಗಳನ್ನು ಗ್ಲೂಕೊಪೈರನೊಸೈಡುಗಳೆಂದೂ, ಐದು ಪರಮಾಣುಗಳನ್ನು ಒಳಗೊಂಡಿರುವ ಐಸೊಮೆರಿಕ್ ಚಕ್ರೀಯ (ಫ್ಯೂರನೋಸ್) ಗ್ಲೂಕೊಸೈಡುಗಳನ್ನು ಸುಲಭವಾಗಿ ಗ್ಲೂಕೊಫ್ಯೂರನೊಸೈಡುಗಳೆಂದೂ ಕರೆಯಲಾಗುವುದು. ಫ್ಯೂರನೊಸೈಡುಗಳು ಜಲವಿಶ್ಲೇಷಣಗೊಳ್ಳುವುದರಿಂದ ಇವು ಪ್ರಕೃತಿಯಲ್ಲಿ ಅಪರೂಪ.




β-D-ಗ್ಲೂಕೊಸೈಡ್    α-D-ಗ್ಲೂಕೊಸೈಡ್

ಗ್ಲೂಕೊಸೈಡುಗಳು ಕಹಿಯಾದ, ಹರಳಿನ ಆಕೃತಿಯ ಘನವಸ್ತುಗಳು. ಗ್ಲೂಕೊಸೈಡುಗಳು ತೋರುವ ಎಲ್ಲ ರಸಾಯನ ಗುಣಗಳನ್ನೂ ಪ್ರದರ್ಶಿಸುತ್ತವೆ. ಆಮ್ಲಗಳಿಂದ ಜಲವಿಶ್ಲೇಷಣೆ ಹೊಂದಿ ಗ್ಲೂಕೋಸ್ ಮತ್ತು ಅಗ್ಲೈಕಾನ್ ಭಾಗವನ್ನು ಕೊಡುತ್ತವೆ. ಗ್ಲೂಕೊಸೈಡೇಸುಗಳೆನ್ನುವ (ಬಾದಾಮಿ ಎಮಲ್ಸಿನಲ್ಲಿವೆ) ನಿರ್ದಿಷ್ಟ ಎಂಜೈಮುಗಳಿಂದಲೂ ಜಲವಿಶ್ಲೇಷಣೆಗೊಳ್ಳುತ್ತವೆ. ಗ್ಲೂಕೊಸೈಡುಗಳನ್ನು ಗ್ಲೈಕೊಸೈಡುಗಳಿಂದ ಗುರುತಿಸಲು ಇದೊಂದು ನಿರ್ದಿಷ್ಟ ಪರೀಕ್ಷೆ.

ಆರ್ಬುಟಿನ್ $\xrightarrow{\text{H.O.H.}}$ D – ಗ್ಲೂಕೋಸ್ + ಹೈಡ್ರೊಕ್ವಿನೋನ್
(ಗ್ಲೂಕೊಸೈಡ್) (ಬಾದಾಮಿ ಎಮಲ್ಸಿನ್) (ಸಕ್ಕರೆ) (ಅಗ್ಲೈಕಾನ್)

ಅಗ್ಲೈಕಾನುಗಳ ರಸಾಯನ ವಿನ್ಯಾಸ ಬಹುತೆರ. ಆದರೆ ಅವೆಲ್ಲವುಗಳಿಗೂ ಶರ್ಕರ ಅಣುವಿನೊಂದಿಗೆ ಸೇರಲು ಬೇಕಾದ ಒಂದು ಹೈಡ್ರಾಕ್ಸಿಲ್ ಗುಂಪು ಇರುವುದು.

ಸೆಲ್ಯೂಲೂಸ್ ಸ್ಟಾರ್ಚ್ ಮತ್ತು ಗ್ಲೈಕೊಜನ್ ಮುಂತಾದ ಅನೇಕ ನೈಸರ್ಗಿಕ ಬಹುಶರ್ಕರಗಳನ್ನು ರಾಸಾಯನಿಕವಾಗಿ ಗ್ಲೂಕೊಸೈಡುಗಳು ಎನ್ನಬಹುದು. ಏಕೆಂದರೆ ಇವೆಲ್ಲವು ಗ್ಲೂಕೊಸೈಡಿಕ್ ಬಂಧದಿಂದ ಸೇರಿಸಲ್ಪಟ್ಟ ಗ್ಲೂಕೋಸ್ ಘಟಕಗಳನ್ನು ಒಳಗೊಂಡಿವೆ.

ನೈಸರ್ಗಿಕ ಗ್ಲೂಕೊಸೈಡುಗಳು ಸಸ್ಯ ಚಯಾಪಚಯದಲ್ಲಿ ಅಲ್ಲದೆ ಔಷಧಿ, ವರ್ಣದ್ರವ್ಯ, ಸಂಬಾರ ಸಾಮಗ್ರಿ ಮತ್ತು ಸುಗಂಧಗಳ ರೂಪದಲ್ಲಿ ಪ್ರಾಮುಖ್ಯ ಪಡೆದಿವೆ. ಸಸ್ಯ ತನಗೆ ಮಾರಕ (ಟಾಕ್ಸಿಕ್) ವಸ್ತುಗಳನ್ನು ಗ್ಲೂಕೊಸೈಡ್ ರೂಪದಲ್ಲಿ ತೊಗಟೆಗೋ ಹಣ್ಣಿನ ಸಿಪ್ಪೆಗೋ ಬೀಜದ ಹೊದಿಕೆಗೋ ಹೂವಿನ ಬಣ್ಣಕ್ಕೋ ರವಾನಿಸುತ್ತದೆನ್ನುವ ವಾದಕ್ಕೆ ಆಧಾರಗಳಿವೆ. ಅಂದರೆ ಗ್ಲೂಕೊಸೈಡ್ ತಯಾರಿಕೆ ಸಸ್ಯದ ಒಂದು ವಿಷನಿವಾರಕತಂತ್ರ. ಬಹುಪಾಲು ಗ್ಲೂಕೊಸೈಡುಗಳು D– ರೂಪದಲ್ಲಿವೆ. ಅವುಗಳಿಗೆ B– ವಿನ್ಯಾಸ ಉಂಟು. ಆದ್ದರಿಂದ ಅವೆಲ್ಲವೂ ಲೇವೊರೊಟೇಟರಿ.

ವಿಲ್ಲೊ ತೊಗಟೆಯಲ್ಲಿ ದೊರೆಯುವ ಸ್ಯಾಲಿಸಿನ್ ಪೂರ್ವಕಾಲದಿಂದಲೂ ಜ್ವರ ಮತ್ತು ಕೀಲುನೋವುಗಳ ವಿರುದ್ಧ ಉಪಯೋಗಿಸಲ್ಪಡುತ್ತದೆ. ಜಲವಿಶ್ಲೇಷಣೆ ಹೊಂದಿದಾಗ ಸ್ಯಾಲಿಸಿನ್ D- ಗ್ಲೂಕೋಸ್ ಮತ್ತು ಸ್ಯಾಲಿಜೆನಿನುಗಳನ್ನು ಕೊಡುತ್ತವೆ.

ಸ್ಯಾಪೊನಿನುಗಳು ಆ್ಯಲಿಫ್ಯಾಟಿಕ್ ಆಲ್ಕೊಹಾಲುಗಳಿಂದಾದ ಗ್ಲೂಕೊಸೈಡುಗಳು. ಸಸ್ಯಗಳನ್ನು ಹೇರಳ ನೀರಿನೊಡನೆ ಕುಲುಕಿದಾಗ ನೊರೆಕೊಡುವುದು ಇವುಗಳ ವಿಶಿಷ್ಟಗುಣ. ಇವು ಮೀನುಗಳಿಗೆ ವಿಷ. ಆದ್ದರಿಂದ ಮೀನು ಹಿಡಿಯುವವರು ಇವನ್ನು ಉಪಯೋಗಿಸುವುದುಂಟು. ಇವುಗಳಿಂದ ಸಾಯುವ ಮೀನು ಜೀವಗಳಿಗೆ ಹಾನಿಯುಂಟುಮಾಡುವುದಿಲ್ಲ.

ಸ್ಟೆರಾಯ್ಡ್ ಗ್ಲೂಕೊಸೈಡುಗಳು : ಇವನ್ನು ಹೃತ್ಪ್ರಭಾವಿ (ಕಾರ್ಡಿಆ್ಯಕ್) ಗ್ಲೂಕೊಸೈಡುಗಳೆಂದು ಕರೆಯುವರು. ಜಲವಿಶ್ಲೇಷಣೆಯಿಂದ ಇವು ಅನೇಕ ಬಗೆಯ ಸಕ್ಕರೆಗಳನ್ನು ಮತ್ತು ಸ್ಟೆರಾಯ್ಡುಗಳನ್ನು ಕೊಡುತ್ತವೆ. ಇವು ಪ್ರಬಲ ಹೃದ್ವಿಷಗಳು. ಆದರೆ ಅಲ್ಪಪ್ರಮಾಣದಲ್ಲಿ ಹೃದಯೋದ್ದೀಪಕಗಳು. ಆಧುನಿಕ ವೈದ್ಯದಲ್ಲಿ ಡಿಜಿಟಾಲಿಸ್ ಎಲೆಗಳ ಸಾರದ ಉಪಯೋಗ ಸರ್ವವೇದ್ಯ.

ಸೈಯನೋಜನಕ (ಸಯನೊಜೆನಿಟಿಕ್) ಗ್ಲೂಕೊಸೈಡುಗಳು ಮತ್ತೊಂದು ಗುಂಪು. ಪೀಚ್, ಚೆರಿ ಮತ್ತು ಪ್ಲಮ್ ಬೀಜದ ತಿರುಳುಗಳಲ್ಲಿ ಈ ಗುಂಪನ್ನು ಕಾಣಬಹುದು. ಇವು ಮುಖ್ಯವಾಗಿ ಮ್ಯಾಂಡಿಲೊನೈಟ್ರೈಲ್ ಗ್ಲೂಕೊಸೈಡುಗಳು. ಆಮ್ಲ ಅಥವಾ ಎಂಜೈಮುಗಳಿಂದ ಜಲವಿಶ್ಲೇಷಣೆ ಹೊಂದಿ ವಿಷವಸ್ತು ಹೈಡ್ರೊಸಯನಿಕ್ ಆಮ್ಲ, ಬೆಂಜಾಲ್ಡಿಹೈಡ್ ಮತ್ತು ಮುಖ್ಯವಾಗಿ D– ಗ್ಲೂಕೋಸನ್ನು ಕೊಡುತ್ತವೆ. ಆಮಿಗ್ಡಲಿನ್ ಈ ಗುಂಪಿಗೆ ಸೇರಿದ್ದು. ಪೂರ್ವಕಾಲದಲ್ಲಿ ಬಹುವಾಗಿ ಉಪಯೋಗಿಸುತ್ತಿದ್ದ ಅನೇಕ ಸಸ್ಯಜನ್ಯ ಬಣ್ಣಗಳು ಗ್ಲೂಕೊಸೈಡುಗಳು. ಅವುಗಳಲ್ಲಿ ಮ್ಯಾಡರ್ ಮುಖ್ಯವಾದದು. ಮ್ಯಾಡರ್ ಬೇರು ಜಲವಿಶ್ಲೇಷಣೆಯಿಂದ D- ಕ್ಸೈಲೋಸ್ ಮತ್ತು ಅಲಿಜರಿನ ವರ್ಣಕ್ರಿಯೆಯನ್ನು ಕೊಡುತ್ತದೆ. ನೀಲಿ ಮತ್ತು ಕೆಂಪು ವರ್ಣದ ಅಸ್ತೊಸೈಯನಿನುಗಳು ಗ್ಲೂಕೊಸೈಡುಗಳು. ಇವುಗಳಲ್ಲಿ ಅಗ್ಲೈಕಾನ್ ಭಾಗಕ್ಕೆ ಆನ್ತೊಸೈಯನಿಡಿನ್ ಎಂದು ಹೆಸರು. ಫಲಪುಷ್ಪಗಳಲ್ಲಿ ಕಾಣುವ ಅನೇಕ ವರ್ಣಗಳು ಕ್ಯಾರೋಟಿನಾಯ್ಡ್ ಗ್ಲೂಕೊಸೈಡುಗಳು.

ಗ್ಲೂಕೊಸೈಡುಗಳ ತಯಾರಿಕೆ : ಸಕ್ಕರೆಯನ್ನು ವೇಗವರ್ಧಕದ ಸಮಕ್ಷಮ ಆಲ್ಕೊಹಾಲ್ ಅಥವಾ ಫೀನಾಲಿನೊಡನೆ ಸಾಂದ್ರೀಕರಿಸಿ ಗ್ಲೂಕೊಸೈಡುಗಳನ್ನು ತಯಾರಿಸಬಹುದು. 1% ರಿಂದ 0.5% ಹೈಡ್ರೊಜನ್ ಕ್ಲೋರೈಡ್ ಲೀನವಾಗಿರುವ ಜಲರಹಿತ ಆಲ್ಕೊಹಾಲಿನಲ್ಲಿ ಸಕ್ಕರೆಯನ್ನು ವಿಲೀನಮಾಡಿ ತರುವಾಯ ಮಿಶ್ರಣವನ್ನು ಕೆಲವು ಘಂಟೆಗಳ ಕಾಲ ಪುನರಭಿವಾಹ (ರಿಫ್ಲೆಕ್ಸ್) ಮಾಡುವುದು ಅಥವಾ ಒಂದೆರಡು ದಿವಸಗಳ ಕಾಲ ಪ್ರಯೋಗಶಾಲೆಯಲ್ಲಿ ಉಷ್ಣತೆಯಲ್ಲಿ ಬಿಡುವುದು ತಯಾರಿಕೆಯ ಒಂದು ಸರಳ ವಿಧಾನ. ಈ ವಿಧಾನದಲ್ಲಿ $\alpha$– ಮತ್ತು $\beta$– ಗ್ಲೂಕೊಸೈಡುಗಳ ಮಿಶ್ರಣ ದೊರೆಯುತ್ತದೆ. ಆದರೆ ಪರಿಶುದ್ಧ ಐಸೊಮರುಗಳ ಸಂಶ್ಲೇಷಣೆಗೂ ವಿಶಿಷ್ಟವಾದ ವಿಧಾನಗಳಿವೆ. (ಎಲ್.ಎ.ಆರ್.)

**ಗ್ಲೂಕೋಸ್ :** D- ಗ್ಲೂಕೋಸ್, D- ಗ್ಲೂಕೋಪೈರನೋಸ್, ದ್ರಾಕ್ಷಿ ಸಕ್ಕರೆ, ಧಾನ್ಯ ಸಕ್ಕರೆ, ಡೆಕ್ಸ್ಟ್ರೋಸ್, ಸೆರೆಲೋಸ್ ಎಂಬ ವಿವಿಧ ಹೆಸರುಗಳಿಂದ ಪರಿಚಿತವಾಗಿರುವ ಒಂದು ಏಕಶರ್ಕರ. ಇದರ ರಾಸಾಯನಿಕ ಅಣುಸೂತ್ರ $C_6H_{12}O_6$. ಪಿಷ್ಟಪದಾರ್ಥಗಳಲ್ಲಿ ಇದಕ್ಕೆ ಅತ್ಯಂತ ಪ್ರಮುಖ ಸ್ಥಾನ ಉಂಟು. ಬಹುಶಃ ಹೆಚ್ಚಿನ ಎಲ್ಲ ಹಣ್ಣು (ವಿಶೇಷತಃ ದ್ರಾಕ್ಷಿ, ಬಾಳೆಹಣ್ಣು, ಚೆರಿ) ಮತ್ತು ಜೇನಿನಲ್ಲಿ ತನ್ನದೇ ರೂಪದಲ್ಲಿಯೂ ಗ್ಲೂಕೋಸ್ ಇದೆ. ಆದ್ದರಿಂದ ಸಸ್ಯರಾಜ್ಯದಲ್ಲಿ ಇದು ಬಲು ವಿಪುಲ. ಹೂ, ಎಲೆಗಳಲ್ಲಿ ಕೂಡ ಇದು ಗ್ಲೂಕೊಸೈಡುಗಳ ಘಟಕವಾಗಿ ಉಂಟು. ಸರ್ವಸಾಮಾನ್ಯವಾಗಿ ಎಲ್ಲ ಪ್ರಾಣಿದೇಹಗಳಲ್ಲಿಯೂ ಇರುತ್ತದೆ. ಆದರೆ ಅತ್ಯಲ್ಪ ಗಾತ್ರದಲ್ಲಿ ಮಾತ್ರ. ಪ್ರಾಣಿದೇಹದ ದ್ರವಗಳಲ್ಲಿ ಕೆಲವು ಸಂದರ್ಭಗಳಲ್ಲಿ ಸ್ವಾಭಾವಿಕ ಘಟಕವಾಗಿಯೂ ಕೆಲವೊಮ್ಮೆ ಯಾವುದಾದರೂ ರೋಗದ ಲಕ್ಷಣವಾಗಿಯೂ ಗ್ಲೂಕೋಸ್ ಕಂಡುಬರುತ್ತದೆ. ಆರೋಗ್ಯವಂತ ಮಾನವನ ರಕ್ತದಲ್ಲಿ 0.15 % ತೂಕದ ಗಾತ್ರದಲ್ಲಿಯೂ ಮಧುಮೇಹರೋಗಿಗಳ ರಕ್ತ ಮೂತ್ರಗಳಲ್ಲಿ 3% ವರೆಗೂ ಇರುವುದು.




$\alpha$–D–ಗ್ಲೂಕೋಸ್

ಸುಕ್ರೋಸನ್ನು (ಸಕ್ಕರೆ) ಮದ್ಯಾರ್ಕದಲ್ಲಿ ಹೈಡ್ರೊಕ್ಲೋರಿಕ್ ಆಮ್ಲದೊಂದಿಗೆ ಸೇರಿಸಿ ಕುದಿಸಿ ಆರಿಸಿದರೆ ಗ್ಲೂಕೋಸ್ ಬಿಳಿ ಪುಡಿಯಾಗಿ ಹೊರಬರುತ್ತದೆ. ಅದನ್ನು ಸೋಸಿ ಕುದಿಯುವ ಮದ್ಯಾರ್ಕದಲ್ಲಿ ಕರಗಿಸಿ ಆ ದ್ರಾವಣವನ್ನು ಆರಿಸಿದರೆ ಶುದ್ಧ ಗ್ಲೂಕೋಸ್ ದೊರೆಯುತ್ತದೆ. ದೊಡ್ಡ ಗಾತ್ರದಲ್ಲಿ ಸ್ಟಾರ್ಚನ್ನು ಸಲ್ಫ್ಯೂರಿಕ್ ಆಮ್ಲದೊಂದಿಗೆ ಬೆರೆಸಿ ಹೆಚ್ಚು ಒತ್ತಡದಿಂದ ಕುದಿಸಿದ ಬಳಿಕ ತಯಾರಾಗುವ ದ್ರಾವಣದಲ್ಲಿಯ ಅಧಿಕಾಂಶ ನೀರನ್ನು ಆವಿಯಾಗಿ ಕಳೆಯುತ್ತಾರೆ. ಇದರಿಂದ ದೊರೆಯುವ ಸ್ನಿಗ್ಧ ದ್ರಾವಣವನ್ನು ಕಾರ್ನ್ ಸಿರಪ್ ಎಂದು ಮಾರುವುದುಂಟು. ಈ ಸಿರಪನ್ನು ಇದ್ದಲು ಪುಡಿಯಲ್ಲಿ ಹಾಯಿಸಿ, ನೀರನ್ನು ಆವಿಯಾಗಿ ಕಳೆದಾಗ ದೊರೆಯುವ ಬಿಳಿ ಪುಡಿಯೇ ಗ್ಲೂಕೋಸ್. ಆರು ಭುಜಗಳ ಬಿಳಿ ಸ್ಫಟಿಕ ಇದಕ್ಕಿದೆ.

ಇದು ನೀರಿನಲ್ಲಿ ಅಧಿಕವಾಗಿಯೂ ಮದ್ಯಾರ್ಕದಲ್ಲಿ ಕಡಿಮೆ ಪ್ರಮಾಣದಲ್ಲಿಯೂ ವಿಲೀನವಾಗುವುದು. ರುಚಿಯಲ್ಲಿ ಸಕ್ಕರೆಗಿಂತ ಕಡಿಮೆ ಸಿಹಿ (ಸುಮಾರು ಅರ್ಧದಷ್ಟು). ಸ್ಫಟಿಕಜಲಸಹಿತವಾದ ಗ್ಲೂಕೋಸ್ ($C_6H_{12}O_6H_2O$) 86° ಸೆಂ. ನಲ್ಲೂ ಒಣ ಗ್ಲೂಕೋಸ್ 146° ಸೆಂ. ನಲ್ಲೂ ದ್ರವಿಸುತ್ತದೆ. ಗ್ಲೂಕೋಸಿನ ಪುಡಿಯನ್ನು 200° ಸೆಂ. ಉಷ್ಣತೆಯಲ್ಲಿ ಕಾಯಿಸಿದರೆ ಅನುಕ್ರಮವಾಗಿ ಹಳದಿ, ಕಂದು, ಚಾಕೋಲೇಟ್ ಬಣ್ಣಗಳನ್ನು ಪಡೆದು ಕ್ಯಾರಮೆಲ್ ತಯಾರಾಗುತ್ತದೆ. ಅದನ್ನು ಮಿಠಾಯಿ ತಯಾರಿಸುವುದಕ್ಕಾಗಿಯೂ ಮದ್ಯಕ್ಕೆ ಆಕರ್ಷಕ ಕಂದು ಬಣ್ಣವನ್ನು ಕೊಡುವುದಕ್ಕಾಗಿಯೂ ಉಪಯೋಗಿಸುತ್ತಾರೆ. ನಿಕೋಲ್ ಪ್ರಿಸ್ಮಿನೊಳಗಿಂದ ಹಾಯ್ದು ಬಂದ ಬೆಳಕಿನ ಕಿರಣಗಳನ್ನು (ಅಂದರೆ ಧ್ರುವೀಕೃತ ಕಿರಣಗಳನ್ನು) ಗ್ಲೂಕೋಸ್ ದ್ರಾವಣದಲ್ಲಿ ಹಾಯಿಸಿದಾಗ ಕಿರಣಗಳ ಕಂಪನಕಕ್ಷೆ ಬಲಕ್ಕೆ (ಅಂದರೆ ಪ್ರದಕ್ಷಿಣ ದಿಶೆ) ತಿರುಗಿಸಲ್ಪಡುತ್ತದೆ. ಅದೇ ತಯಾರಿಸಿದ ಗ್ಲೂಕೋಸ್ ದ್ರಾವಣದ ವಿಶಿಷ್ಟ ಕಿರಣಾವರ್ತನ ಸಾಮರ್ಥ್ಯ (ಸ್ಪೆಸಿಫಿಕ್ ರೊಟೇಷನ್) + 110°. ಇದು ಕ್ರಮೇಣ ಕಡಿಮೆಯಾಗುತ್ತ ಸುಮಾರು 24 ಗಂಟೆಗಳಲ್ಲಿ + 52.2° ಬಂದು ನಿಲ್ಲುತ್ತದೆ. ಈ ವ್ಯತ್ಯಯಾವರ್ತನೆಯ (ಮ್ಯೂಟರೊಟೇಷನ್) ಕಾರಣದ ಸಂಶೋಧನೆಯ ಪರಿಣಾಮವಾಗಿ ಗ್ಲೂಕೋಸಿನ ಎರಡು ರೂಪಗಳೂ ($\alpha$–ಮತ್ತು $\beta$–D ಗ್ಲೂಕೋಸ್) ಅವುಗಳ ರಚನೆಯ ಸೂಕ್ಷ್ಮ ವಿವರಗಳೂ ಕಂಡುಹಿಡಿಯಲ್ಪಟ್ಟವು. ಅಮೋನಿಯದಲ್ಲಿ ವಿಲೀನವಾಗಿಸಿದ ಸಿಲ್ವರ್ ನೈಟ್ರೇಟ್ ದ್ರಾವಣದಲ್ಲಿ ಗ್ಲೂಕೋಸನ್ನು ಬೆರೆಸಿ ಒಂದು ಪರೀಕ್ಷಾ ನಳಿಕೆಯಲ್ಲಿ ಕಾಯಿಸಿದರೆ ದ್ರಾವಣದೊಳಗಿಂದ ಬೆಳ್ಳಿ ಹೊರ ಬಂದು ಗಾಜಿನ ಮೇಲೆ ತೆಳುವಾಗಿ ಹರಡಿಕೊಂಡು ಗಾಜು ಕನ್ನಡಿಯಂತಾಗುತ್ತದೆ. ಅದೇ ಪ್ರಕಾರ ಫೆಹ್ಲಿಂಗನ ದ್ರಾವಣಗಳೆರಡನ್ನೂ (A ಮತ್ತು B) ಸಮಪ್ರಮಾಣದಲ್ಲಿ ಬೆರೆಸಿ ಆ ಮಿಶ್ರಣಕ್ಕೆ ಗ್ಲೂಕೋಸ್ ದ್ರಾವಣವನ್ನು ಕುದಿಸಿದರೆ ಕೆಂಪು ಪುಡಿ ಹೊರಬರುತ್ತದೆ. ಗ್ಲೂಕೋಸನ್ನು ಕಂಡುಹಿಡಿಯಲಿಕ್ಕೂ ಯಾವುದೇ ವಸ್ತುವಿನಲ್ಲಿ ಗ್ಲೂಕೋಸಿನ ತೂಕದ ಪ್ರಮಾಣವನ್ನು ಅಳೆಯಲಿಕ್ಕೂ ಈ ಪ್ರಯೋಗವನ್ನು ಉಪಯೋಗಿಸುತ್ತಾರೆ. ಇದಲ್ಲದೆ ಗ್ಲೂಕೋಸಿನ ಕಿರಣಾವರ್ತನ ಸಾಮರ್ಥ್ಯವೂ ಇದಕ್ಕಾಗಿ ಉಪಯೋಗಿಸಲ್ಪಡುತ್ತದೆ. ಮದ್ಯವೊಂದನ್ನು ಬಿಟ್ಟರೆ ಮಾನವನ ಜಠರದಲ್ಲಿ ಬದಲಾವಣೆಯನ್ನು ಹೊಂದದೆ ನೇರವಾಗಿ ರಕ್ತದಲ್ಲಿ ಆಕರ್ಷಿಸಲ್ಪಡುವ ಆಹಾರವೆಂದರೆ ಗ್ಲೂಕೋಸ್ ಒಂದೇ. ಆದ್ದರಿಂದ ಜಡ ಆಹಾರವನ್ನು ಪಚನ ಮಾಡಿಕೊಳ್ಳಲಾರದ ರೋಗಿಗಳಿಗೆ ಇದನ್ನು ಆಹಾರದಲ್ಲಾಗಲಿ ಎನಿಮಾದಿಂದಾಗಲಿ ಅಥವ ನೇರವಾಗಿ ರಕ್ತನಾಳಗಳಿಗೆ

ಚುಚ್ಚುಮದ್ದಿನಿಂದಾಗಲಿ ಕೊಡುತ್ತಾರೆ. ಮಾನವನ ದೇಹದಲ್ಲಿಯ ಸವಕಳಿಯ ಪೂರೈಕೆ ಮತ್ತು ಬೆಳವಣಿಗೆಗಳಿಗಾಗಿ ಗ್ಲೂಕೋಸ್ ಉಪಯೋಗವಾಗುತ್ತದೆ. ಗ್ಲೂಕೋಸಿನ ದ್ರಾವಣದಲ್ಲಿ ಈಸ್ಟನ್ನು ಬೆರೆಸಿ ಹುಳಿಯಗೊಟ್ಟರೆ ಮದ್ಯ ತಯಾರಾಗುತ್ತದೆ. (ವಿ.ಆರ್.ಡಿ.)

**ಗ್ಲೂಟತಯೋನ್ :** ಬದುಕಿರುವ ಬಹುಪಾಲು ಎಲ್ಲ ಕೋಶಗಳಲ್ಲೂ ಇರುವ ಗಂಧಕಯುಕ್ತ ರಾಸಾಯನಿಕ ಸಂಯುಕ್ತ. ವಿಕಿರಣತೆಯೊಂದಿಗೆ ಜೀವಿಗಳಿಗೆ ಹೆಚ್ಚಾಗಿ ಕೊಟ್ಟಲ್ಲಿ ಅದರ ಅಪಾಯ ತಟ್ಟದಂತೆ ಇದು ತಡೆಯಬಲ್ಲದು. ಊತಕಗಳ ವಿಕಿರಣತೆಯಿಂದ ಹುಟ್ಟುವ ಪರಾಕ್ಸೈಡುಗಳೊಂದಿಗೆ ಸುಲಭವಾಗಿ ಸೇರುವುದರಿಂದ ಹೀಗಾಗುವುದು. ಗ್ಲೂಟತಯೋನ್ ಹೇರಳವಾಗಿರುವ ಈಲಿಸ್ನಾಯು, ಹುದುಗುಗಳೇ ಇದರ ತಯಾರಿಕೆಗೆ ಮೂಲವಸ್ತುಗಳು. ಈ ಸಂಯುಕ್ತವನ್ನು ಹಾಪ್ಕಿನ್ಸ್ ಕಂಡುಹಿಡಿದಾಗಿನಿಂದ (1921), ಮೈಯಲ್ಲಿ ಇದರ ಪಾತ್ರದ ವಿಚಾರವಾಗಿ ಶೋಧನೆ ನಡೆದಿದೆ. ಯಾವ ಕೋಶ ಬದುಕಿ ಬಾಳಬೇಕಾದರೂ ಬೇಕಾಗುವ ಎಷ್ಟೋ ಎಂಜೈಮುಗಳ ಕೆಲಸಗಳಿಗೆ ಇದರ ನೆರವು ಬೇಕೇಬೇಕು. ಇಷ್ಟಕ್ಕೆಲ್ಲ ಇದರಲ್ಲಿರುವ ಗಂಧಕವೇ ಕಾರಣ. ಎಂಜೈಮುಗಳಲ್ಲೂ ಸಲ್ಫಹೈಡ್ರಿಲ್ (SH) ಗುಂಪುಗಳಿದ್ದರೂ ಅವಕ್ಕೆ ಆಕ್ಸಿಜನ್ ಕೂಡಿದಾಗ ಡೈಸಲ್ಫೈಡ್ ರೂಪಕ್ಕಿಳಿದು ಕೆಲಸಕ್ಕೆ ಬಾರದಾಗುತ್ತವೆ. ಈ ತಂಡಗಳನ್ನು ಮತ್ತೆ ಸಲ್ಫಹೈಡ್ರಿಲುಗಳಾಗಿ ಬದಲಿಸಿ ಚುರುಕುಗೊಳಿಸುವುದೇ ಗ್ಲೂಟತಯೋನಿನ ಹೆಚ್ಚಳಿಕೆ. ಇದು ಕೋಶಗಳಲ್ಲಿನ ಎಂಜೈಮುಗಳನ್ನು ಅಂಕೆಗೆ ಒಳಪಡಿಸುವುದು. ಗ್ಲೂಟಾಮಿಕ್ ಆಮ್ಲ, ಸಿಸ್ಟೀನ್ ಗ್ಲೈಸೀನ್ ಅಮೈನೊ ಆಮ್ಲಗಳು ಸೇರಿ ಗ್ಲೂಟತಯೋನ್ ಆಗಿರುವ ರೀತಿ ಸಹಸ್ರಾರು ಅಮೈನೋ ಆಮ್ಲಗಳು ಸೇರಿ ಆಗಿರುವ ಪ್ರೋಟೀನನ್ನು ಹೋಲುತ್ತದೆ. ಕೋಶಗಳ ಬೆಳವಣಿಗೆ, ವಿಕಾಸಗಳಲ್ಲಿ ಪ್ರೋಟೀನುಗಳು ಮುಖ್ಯ ಘಟಕಗಳಾದ್ದರಿಂದ ಇವುಗಳ ರೀತಿಯನ್ನು ಚೆನ್ನಾಗಿ ಅರಿಯಲು ಗ್ಲೂಟತಯೋನನ್ನು ಸುಲಭವಾಗಿ ಸರಳ ಮಾದರಿಯ ಮೂಲವಸ್ತುವಾಗಿ ವ್ಯಾಸಂಗಮಾಡಿದ್ದಾರೆ. (ಡಿ.ಎಸ್.ಎಸ್.)

**ಗ್ಲೂಟಾಮಿಕ್ ಆಮ್ಲ :** ಆಲ್ಫ ಅಮೈನೋ ಗ್ಲುಟಾರಿಕ್ ಆಮ್ಲ. ಪರಿಪೂರ್ಣವಾದ ಎಲ್ಲ ಪ್ರೋಟೀನುಗಳಲ್ಲಿಯೂ ಇರುವ ಅಮೈನೋ ಆಮ್ಲವಿದು. ನೈಸರ್ಗಿಕವಾಗಿ ದೊರೆಯುವ ರೂಪ L(+) ಗ್ಲೂಟಾಮಿಕ್ ಆಮ್ಲ. ಪ್ರಯೋಗ ಶಾಲೆಯಲ್ಲಿ ಸಂಶ್ಲೇಷಿಸಿದಾಗ D ಮತ್ತು L ರೂಪಗಳ ಮಿಶ್ರಣವಾದ ರೇಸಿಮಿಕ್ ರೂಪ ದೊರೆಯುತ್ತದೆ. ಈ ಮಿಶ್ರರೂಪ ಈಥರಿನಲ್ಲಿ ಸ್ವಲ್ಪ ಗಾತ್ರದಲ್ಲಿ ಮಾತ್ರ ವಿಲೀನವಾಗುತ್ತದೆ. D(-) ಗ್ಲೂಟಾಮಿಕ್ ಆಮ್ಲವನ್ನು ನೀರಿನಿಂದ ಪತ್ರ ಫಲಕಗಳಂತೆ ಪಡೆಯಬಹುದು. ಈಥರ್, ಅಸಿಟೋನ್, ಶೀತಲ ಗ್ಲೇಷಿಯಲ್ ಅಸಿಟಿಕ್ ಆಮ್ಲಗಳಲ್ಲಿ ಬಹಳ ಕಡಿಮೆ ಗಾತ್ರದಲ್ಲಿ L(+) ಗ್ಲೂಟಾಮಿಕ್ ಆಮ್ಲ ವಿಲೀನವಾಗುತ್ತದೆ. ಈಥೈಲ್ ಆಲ್ಕೊಹಾಲ್ ಮತ್ತು ಮೀಥೈಲ್ ಆಲ್ಕೊಹಾಲುಗಳಲ್ಲಿ ವಿಲೀನವೇ ಆಗುವುದಿಲ್ಲ.

ಔದ್ಯೋಗಿಕವಾಗಿ ಗ್ಲೂಟಾಮಿಕ್ ಆಮ್ಲವನ್ನು ಸಸ್ಯ ಪ್ರೋಟೀನುಗಳಿಂದ– ಉದಾಹರಣೆಗೆ ಗೋದಿಕಾಳಿನಲ್ಲಿರುವ ಗ್ಲೂಟೆನ್, ಬೀಟ್ ಸಕ್ಕರೆಯನ್ನು ತೆಗೆದ ಅನಂತರ ಉಳಿಯುವ ರದ್ದಿಪದಾರ್ಥ– ಜಲವಿಶ್ಲೇಷಣೆ ಮಾಡಿ ಪಡೆಯುತ್ತಾರೆ. ಅಕ್ರಿಲೋನೈಟ್ರಿಲಿನಿಂದ ಪ್ರಾರಂಭಿಸಿ ಗ್ಲೂಟಾಮಿಕ್ ಆಮ್ಲವನ್ನು ಆರ್ಗ್ಯಾನಿಕ್ ಸಂಶ್ಲೇಷಣೆಯಿಂದ ಪಡೆಯಬಹುದು. ಗ್ಲೂಟಾಮಿಕ್ ಆಮ್ಲ ಜೈವಿಕವಾಗಿ ಪ್ರಾಣಿಗಳ ದೇಹದಲ್ಲಿ ಉತ್ಪತ್ತಿಯಾಗುತ್ತದೆ. ಆದ್ದರಿಂದ ಇದು ಅನಾವಶ್ಯಕ ಅಮೈನೋ ಆಮ್ಲಗಳ ಗುಂಪಿಗೆ ಸೇರಿದೆ. ಗ್ಲೂಕೋಸಿನಿಂದ ಉತ್ಪತ್ತಿಯಾಗುವ ಪೈರೂವಿಕ್ ಆಮ್ಲ ಸಿಟ್ರಿಕ್ ಚಕ್ರದ ಮೂಲಕ ಉತ್ಕರ್ಷಣೆಯಾಗುವ ಆಲ್ಫಕೀಟೋ ಗ್ಲೂಟಾರಿಕ್ ಆಮ್ಲ ಒಂದು ಮಧ್ಯವರ್ತಿ ವಸ್ತುವಿನಂತೆ ಉತ್ಪತ್ತಿಯಾಗುತ್ತದೆ. ಇದು ಅಮೈನೊ ಪುಂಜವನ್ನು ದಾನಮಾಡಬಲ್ಲ ಅಮೈನೋ ಆಮ್ಲದೊಂದಿಗೆ ಟ್ರಾನ್ಸಾಮಿನೇಸ್ ಎಂಜೈಮಿನ ಇರವಿನಲ್ಲಿ ಗ್ಲೂಟಾಮಿಕ್ ಆಮ್ಲವಾಗಿ ಪರಿವರ್ತಿತವಾಗುತ್ತದೆ. ಈ ಕ್ರಿಯೆಗೆ ಉದಾಹರಣೆ :

$$HOOC \cdot (CH_2)_2 \cdot CO \cdot COOH + CH_3CHNH_2 \cdot COOH \xrightarrow{\text{ಎಂಜೈಮ್}}$$

ಆಲ್ಫ ಕೀಟೋ ಗ್ಲುಟಾರಿಕ್ ಆಮ್ಲ ಅಲಾನಿನ್

$$HOOC\ (CH_2)_2 \cdot CH \cdot NH_2 \cdot COOH + CH_3\ CO\ COOH$$

ಗ್ಲೂಟಾಮಿಕ್ ಆಮ್ಲ ಪೈರೂವಿಕ್ ಆಮ್ಲ

ಉಪ್ಪಿನ ಬದಲು ಆಹಾರಕ್ಕೆ ಒತ್ತಾಸೆಯಾಗುವಂತೆ ಗ್ಲೂಟಾಮಿಕ್ ಆಮ್ಲದ ಬಳಕೆ ಉಂಟು. ಅಲ್ಲದೆ ಔಷಧಿಯಾಗಿಯೂ ಇದನ್ನು ಉಪಯೋಗಿಸುತ್ತಾರೆ. ಜೀವರಸಾಯನ ವಿಜ್ಞಾನದ ಸಂಶೋಧನೆಗಳಲ್ಲಿ ಇದರ ಪಾತ್ರವಿದೆ. (ಎಚ್.ಎಸ್.ಎಸ್.)

**ಗ್ಲೈಕಾಲುಗಳು :** ಎರಡು ಹೈಡ್ರಾಕ್ಸಿಲ್ (-OH) ಗುಂಪುಗಳಿರುವ ಆಲ್ಕೊಹಾಲುಗಳು. ಎರಡು ಹೈಡ್ರಾಕ್ಸಿಲುಗಳೂ ಒಂದೇ ಕಾರ್ಬನ್ ಪರಮಾಣುವಿಗೆ ಬಂಧಿತವಾಗಿರುವುದು ಸಾಮಾನ್ಯವಾಗಿ ಸಾಧ್ಯವಿಲ್ಲ. ಏಕೆಂದರೆ ಅಂಥ ಸಂಯುಕ್ತ ಅಸ್ಥಿರ. ಹೈಡ್ರಾಕ್ಸಿಲುಗಳ ಪರಸ್ಪರ ಸ್ಥಾನಗಳನ್ನು ಅವಲಂಬಿಸಿ ಗ್ಲೈಕಾಲುಗಳನ್ನು $\alpha$, $\beta$, $\gamma$ ಗ್ಲೈಕಾಲುಗಳೆಂದು ಕರೆಯುವುದು ವಾಡಿಕೆ. ವೈಜ್ಞಾನಿಕ ಪರಿಶೀಲನೆಗಾಗಿ ನೂರಾರು ಬೇರೆ ಬೇರೆ ಗ್ಲೈಕಾಲುಗಳನ್ನು ಸಂಶ್ಲೇಷಿಸಲಾಗಿದೆ. ಕೀಟೋನುಗಳ ಅಪಕರ್ಷಣದಿಂದ ಲಭಿಸುವ ಪೈನಕಾಲುಗಳ (ದ್ವಿ–ತೃತೀಯಕ ಆಲ್ಕೊಹಾಲುಗಳ) ವಿಷಯದಲ್ಲಿ ಈ ಮಾತು ವಿಶೇಷವಾಗಿ ಸತ್ಯ. ಆದರೆ ವಾಣಿಜ್ಯ ದೃಷ್ಟಿಯಿಂದ ಈ ಯಾವ ಗ್ಲೈಕಾಲುಗಳಿಗೂ ಪ್ರಾಮುಖ್ಯವಿಲ್ಲ. ಕೆಲವು




ನಿಮ್ನ ಗ್ಲೈಕಾಲುಗಳಿಗೆ ಮಾತ್ರ ಪ್ರಾಮುಖ್ಯ ಉಂಟು. ಎಲ್ಲದಕ್ಕಿಂತ ಹೆಚ್ಚಾಗಿ ಎಥಿಲೀನ್ ಗ್ಲೈಕಾಲ್ ಬಹು ಮುಖ್ಯವಾದುದು. ಇದನ್ನು ಸಾಮಾನ್ಯವಾಗಿ ಗ್ಲೈಕಾಲ್ ಎಂದೇ ಕರೆಯುವುದುಂಟು. ಇದರ ಕ್ರಮಬದ್ಧ ರಾಸಾಯನಿಕ ನಾಮ 1,2 – ಈಥೇನ್ ಡೈಆಲ್.

ಎಥಿಲೀನ್ ಗ್ಲೈಕಾಲನ್ನು ತಯಾರಿಸುವುದು ಸಾಮಾನ್ಯವಾಗಿ ಎಥಿಲೀನಿನಿಂದ. ಕ್ಲೋರಿನಿನೊಂದಿಗೆ ಎಥಿಲೀನ್ ವರ್ತಿಸಿದಾಗ ಎಥಿಲೀನ್ ಡೈ ಕ್ಲೋರೈಡನ್ನೂ ಹೈಪೊಕ್ಲೋರಸ್ ಆಮ್ಲದೊಂದಿಗೆ ವರ್ತಿಸಿದಾಗ ಎಥಿಲೀನ್ ಕ್ಲೋರೊ ಹೈಡ್ರಿನನ್ನೂ ನೀಡುತ್ತದೆ. ಸೋಡಿಯಮ್ ಕಾರ್ಬೊನೇಟ್ ದ್ರಾವಣದೊಂದಿಗೆ ಕುದಿಸಿದರೆ ಇವೆರಡೂ ಎಥಿಲೀನ್ ಗ್ಲೈಕಾಲನ್ನು ಕೊಡುತ್ತವೆ.

$$CH_2 = CH_2 \rightarrow ClCH_2 - CH_2Cl \rightarrow HO \cdot CH_2 - CH_2OH ..$$

$$CH_2 = CH_2 \rightarrow ClCH_2 - CH_2OH \rightarrow HO \cdot CH_2 - CH_2OH$$

ಆದರೆ ಈಚಿನ ವಿಧಾನಗಳಲ್ಲಿ ಸಾಮಾನ್ಯವಾಗಿ ಎಥಿಲಿನ್ ಕ್ಲೋರೊಹೈಡ್ರಿನನ್ನು ಎಥಿಲೀನ್ ಆಕ್ಸೈಡಾಗಿ ಪರಿವರ್ತಿಸಿ ಅದನ್ನು ಸಾರರಿಕ್ತ ಹೈಡ್ರೊಕ್ಲೋರಿಕ್ ಆಮ್ಲದೊಂದಿಗೆ ಕಾಯಿಸಿ ಗ್ಲೈಕಾಲನ್ನು ತಯಾರಿಸುತ್ತಾರೆ.




ಎಥಿಲೀನ್ ಗ್ಲೈಕಾಲ್ ವರ್ಣರಹಿತವಾದ ತೈಲಸದೃಶ ದ್ರವ. ಅದರ ರುಚಿ ಸಿಹಿ. ಒಂದು ಬಗೆಯ ನಸುವಾಸನೆ ಉಂಟು. ಈ ದ್ರವ – $197^0$ ಸೆಂ. ನಲ್ಲಿ ಕುದಿಯುವುದು. ಇದು ನೀರಿಗಿಂತ ಭಾರ. ಆದರೆ ನೀರಿನಲ್ಲಿ ಎಲ್ಲ ಪ್ರಮಾಣಗಳಲ್ಲಿಯೂ ದ್ರಾವ್ಯ. ಇದರ ಜಲೀಯ ದ್ರಾವಣಗಳು ಬಹು ಕೆಳಗಿನ ಉಷ್ಣತೆಯಲ್ಲಿ ಘನೀಭವಿಸುವುವಾದ್ದರಿಂದ ಮೋಟಾರು ವಾಹನಗಳ ರೆಡಿಯೇಟರುಗಳಲ್ಲಿ ಘನೀಭವನ ನಿರೋಧಕವಾಗಿ ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ಇದರ ಇತರ ಪ್ರಮುಖ ಉಪಯೋಗಗಳೆಂದರೆ ಈಥರ್ ಮತ್ತು ಎಸ್ಟರುಗಳ ತಯಾರಿಕೆಯಲ್ಲಿ ಹಾಗೂ ಸಂಶ್ಲೇಷಿತ ನಾರುಗಳ ತಯಾರಿಕೆಯಲ್ಲಿ.

ರಾಸಾಯನಿಕ ಗುಣಲಕ್ಷಣಗಳಲ್ಲಿ ಎಥಿಲೀನ್ ಗ್ಲೈಕಾಲ್ ಪ್ರಾಥಮಿಕ ಆಲ್ಕೊಹಾಲುಗಳನ್ನು ವಿಶೇಷವಾಗಿ ಹೋಲುತ್ತವೆ. ಕ್ಷಾರಲೋಹಗಳು ಹೈಡ್ರಾಕ್ಸಿಲಿನ ಹೈಡ್ರೋಜನ್ ಪರಮಾಣುಗಳನ್ನು ಪಲ್ಲಟಿಸಬಲ್ಲುವು. ಹೈಡ್ರೋಹ್ಯಾಲಿಕ್ ಆಮ್ಲಗಳೊಡನೆ ವರ್ತಿಸಿದಾಗ ಒಂದು ಹೈಡ್ರಾಕ್ಸಿಲ್ ಹೋಗಿ ಅಲ್ಲಿ ಹ್ಯಾಲೊಜನ್ ಸ್ಥಾಪಿತವಾಗುತ್ತದೆ. ರಂಜಕದ ಪೆಂಟಕ್ಲೋರೈಡಾದರೋ ಎರಡು ಹೈಡ್ರಾಕ್ಸಿಲುಗಳನ್ನೂ ತೆಗೆದು ಕ್ಲೋರಿನ್ ಪರಮಾಣುಗಳನ್ನು ಪ್ರತಿ ಸ್ಥಾಪಿಸುತ್ತದೆ. ಉತ್ಕರ್ಷಿಸಿದಾಗ ಗ್ಲೈಕಾಲ್ ಗ್ಲೈಕಾಲಿಕ್ ಆಮ್ಲವಾಗಿಯೂ ಕೊನೆಗೆ ಆಕ್ಸಾಲಿಕ್ ಆಮ್ಲವಾಗಿಯೂ ಪರಿವರ್ತನೆಗೊಳ್ಳುತ್ತದೆ. ಎಥಿಲೀನ್‌ಗ್ಲೈಕಾಲನ್ನು ಬಿಟ್ಟರೆ ವಾಣಿಜ್ಯ ಪ್ರಾಮುಖ್ಯದ ಇತರ ಗ್ಲೈಕಾಲುಗಳೆಂದರೆ $CH_3 .CHOH.CH_2OH$ ಪ್ರೊಪೈಲೀನ್ ಗ್ಲೈಕಾಲ್. $(CH_3)_2$ -C (OH)-$CH_2$-CHOH- $CH_3$ ಹೆಕ್ಸೈಲೀನ್ ಗ್ಲೈಕಾಲ್. ಇವುಗಳಲ್ಲಿ ಮೊದಲನೆಯದು ಗುಣಲಕ್ಷಣಗಳಲ್ಲಿಯೂ ಉಪಯೋಗಗಳಲ್ಲಿಯೂ ಎಥಿಲೀನ್ ಗ್ಲೈಕಾಲನ್ನು ಹೋಲುವುದು. ಎರಡನೆಯದಾಗಿ ಹೆಕ್ಸೈಲೀನ್ ಗ್ಲೈಕಾಲನ್ನು ಪೋರ್ಟ್‌ಲೆಂಡ್ ಸಿಮೆಂಟಿನ ತಯಾರಿಕೆಯಲ್ಲೂ, ಕೆಲವು ಸಂದರ್ಭಗಳಲ್ಲಿ ಪೆಟ್ರೋಲಿಯಮ್ ಕೈಗಾರಿಕೆಯಲ್ಲೂ ಉಪಯೋಗಿಸುವರು. ಅಲ್ಲದೆ ವರ್ಣದ್ರವ್ಯಗಳು ಮತ್ತು ಶಾಯಿಗಳಿಗೆ ದ್ರಾವಕವಾಗಿಯೂ ಇದರ ಉಪಯೋಗ ಉಂಟು. (ಜೆ.ಆರ್.ಎಲ್.)

**ಗ್ಲೈಡರ್ :** ಎಂಜಿನ್ ಚಾಲನೆ ಇಲ್ಲದ ವಾಯುವಿಮಾನ. ಇದರೊಳಗೆ ಒಬ್ಬ ಚಾಲಕ ಕುಳಿತಿರುತ್ತಾನೆ. ವಾಯುವಿಗಿಂತ ತೂಕವಾದ ವಸ್ತುವಿನಲ್ಲಿ ಕುಳಿತು ವಾಯುಮಂಡಲದಲ್ಲಿ ಹಾರಾಟ ಪ್ರಯೋಗಮಾಡುವ ದಿಶೆಯಲ್ಲಿ ಮನುಷ್ಯ ಮೊದಲು

ಬಳಸಿದ ಸಾಧನ ಗ್ಲೈಡರ್. ಇದಕ್ಕೆ ಎಂಜಿನ್ ಜೋಡಿಸಿ ಚಾಲನ ಸಾಮರ್ಥ್ಯವನ್ನು ಒದಗಿಸಿದಾಗ ಸಾಂಪ್ರದಾಯಿಕ ವಿಮಾನ (ಏರೋಪ್ಲೇನ್) ದೊರೆಯುತ್ತದೆ. ಬೀಸುವ ಗಾಳಿಯಲ್ಲಿನ ಶಕ್ತಿಯನ್ನು ಉಪಯೋಗಿಸಿಕೊಂಡು ಗ್ಲೈಡರ್ ವಾಯುಮಂಡಲದಲ್ಲಿ



ರೈಟ್ ಸಹೋದರರ ಗ್ಲೈಡರ್ (1902)

ತೇಲುತ್ತ ನಿಧಾನವಾಗಿ ಕೆಳಗಿಳಿಯಬಲ್ಲದು. ನೆಲದ ಮೇಲಿರುವ ಕೆಲವು ಯಾಂತ್ರಿಕ ಸಾಧನೆಗಳ ಮೂಲಕ ಇದನ್ನು ಗಾಳಿಪಟದಂತೆ ಭೂಮಿಯಿಂದ ಮೇಲಕ್ಕೆ ಏರಿಸಲೂಬಹುದು. ಇಂಥ ಮೇಲಕ್ಕೇರಬಲ್ಲ ಫಲಕಗಳನ್ನು ಸೇಯ್ಲ್‌ಪ್ಲೇನ್ ಎಂದೂ ಕರೆಯುವರು. ಗ್ಲೈಡರಿನ ವಿನ್ಯಾಸವನ್ನು ಈಚೆಗೆ ಬಹಳ ಅಭಿವೃದ್ಧಿ ಪಡಿಸಲಾಗಿದೆ. ಸೈನ್ಯಕಾರ್ಯಾಚರಣೆಯಲ್ಲಿ ಸೈನಿಕರನ್ನು ಯುದ್ಧ ಪ್ರದೇಶಗಳಲ್ಲಿ ಇಳಿಸುವುದರಲ್ಲಿಯೂ ವಾಯುಯಾನ ಶಾಸ್ತ್ರ ಮತ್ತು ವಾಯುಲಕ್ಷಣ ಶಾಸ್ತ್ರಗಳಿಗೆ ಸಂಬಂಧಿಸಿದ ಸಂಶೋಧನ ಕಾರ್ಯಗಳಲ್ಲಿಯೂ ಗ್ಲೈಡರುಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುವುದುಂಟು.

ಅಮೆರಿಕದ ಆಟೋ ಲೀಯೆಂಥಾಲ್ ಎಂಬ ವಿಜ್ಞಾನಿ 1867 ರಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ ವಾಯುಯಾನವನ್ನು **(ನೋಡಿ)** ಸಾಧ್ಯಗೊಳಿಸಬಲ್ಲ ಕೆಲವು ಬಹುಮುಖ್ಯ ಭೌತ ಸಿದ್ಧಾಂತಗಳನ್ನು ನಿರೂಪಿಸಿದ. ತರುವಾಯ 1900 ರಲ್ಲಿ ರೈಟ್ ಸಹೋದರರು ಈ ಪ್ರಯೋಗಗಳನ್ನು ಇನ್ನೂ ತೀವ್ರವಾಗಿ ಮುಂದುವರಿಸಿ ವಾಯುಯಾನವನ್ನು ಅಪಾಯವಿಲ್ಲದಂತೆ ಮಾಡುವ ಕೆಲವು ನಿಯಂತ್ರಣ ವ್ಯವಸ್ಥೆಗಳನ್ನು ನಿರ್ಮಿಸಿದರು. ಇವುಗಳಲ್ಲಿ ಮುಖ್ಯವಾದವು ವಿಮಾನವನ್ನು ತಿರುಗಿಸುವುದಕ್ಕೆ ಚುಕ್ಕಾಣಿ (ರಡ್ಡರ್), ಸುತ್ತುವಂತೆ ಮಾಡುವುದಕ್ಕೆ ಏಲೆರಾನ್ಸ್, ಹತ್ತುವಾಗ ಇಳಿಯುವಾಗ ಉಪಯೋಗಿಸುವ ಎಲಿವೇಟರ್ಸ್ ಎಂಬವು. ಮುಂದೆ ಇವರೇ ನಿರ್ಮಿಸಿದ ಎಂಜಿನ್ ಚಾಲಿತ ವಿಮಾನ ರಚನೆಗೆ ಈ ಆವಿಷ್ಕರಣಗಳು ಪೀಠಿಕೆಯಾದುವು.



ಗ್ಲೈಡರ್ ಹಾರಾಟ

ಕೆಲವು ವಿಶಿಷ್ಟ ಪರಿಸ್ಥಿತಿಗಳಲ್ಲಿ ವಾಯುಮಂಡಲದೊಳಗೆ ಊರ್ಧ್ವಮುಖವಾಗಿ ಹರಿಯುವ ಗಾಳಿಯ ಪ್ರವಾಹಗಳು ಉತ್ಪನ್ನವಾಗುತ್ತವೆ. ಉದಾಹರಣೆಗೆ ವೇಗವಾಗಿ ಬೀಸುವ ಗಾಳಿಯನ್ನು ಬೆಟ್ಟಗುಡ್ಡಗಳು ವೇಗ ತಡೆದಾಗ ಅದು ತನ್ನ ದಿಕ್ಕನ್ನು ಬದಲಿಸಿ ಮೇಲ್ಮೊಗವಾಗಿ ಹರಿಯುತ್ತದೆ. ಬೇರೆ ಬೇರೆ ಉಷ್ಣ ವಿಭವಗಳಲ್ಲಿರುವ ಗಾಳಿಯ ಎರಡು ದೊಡ್ಡ ಭಾಗಗಳು ಪರಸ್ಪರ ಸಂಘಟ್ಟಿಸಿದಾಗ ಕೂಡ ಇಂಥ ಊರ್ಧ್ವಮುಖ ಪ್ರವಾಹ ಉಂಟಾಗುತ್ತದೆ. ಸೂರ್ಯನ ಬಿಸಿಲಿನಿಂದ ಕಾದ ಭೂಮಿ ಸುತ್ತಮುತ್ತಲಿನ ಗಾಳಿಯ ಉಷ್ಣತೆಯನ್ನು ಹೆಚ್ಚಿಸುವುದು. ಹೀಗೆ ಬಿಸಿಯಾದ ಗಾಳಿ ಹಗುರವಾಗಿ ಮೇಲೇರುವುದು. ಈ ಕಾರಣಗಳಿಂದ ಕೂಡ ಕೆಲವು ಪ್ರದೇಶಗಳಲ್ಲಿ ಊರ್ಧ್ವಾಭಿಮುಖವಾದ ವಾಯುವಿನ ಉಷ್ಣಪ್ರವಾಹಗಳು ಏರ್ಪಡುವುವು. ಬಿಸಿಯಾದ ಗಾಳಿ ಮೇಲಕ್ಕೆ ಹೋಗುತ್ತ ತಣ್ಣಗಾಗುವುದು. ಆಗ ಗಾಳಿಯಲ್ಲಿ ತೇವಾಂಶ ಘನಿಸಿ ಕ್ಯುಮುಲಸ್ ಮೋಡಗಳೆಂಬ ವಿಶಿಷ್ಟ ರೀತಿಯ ಮೋಡಗಳು ಉದ್ಭವವಾಗುವುವು. ಇಂಥ ಕ್ಯುಮುಲಸ್ ಮೋಡಗಳ ಕೆಳಭಾಗದಲ್ಲಿ ಗಾಳಿಯ ಸಂಚಲನೆ ಇರುತ್ತದೆ. ಗಾಳಿಯ ಈ ಊರ್ಧ್ವ ಪ್ರವಾಹಗಳನ್ನು ಬಳಸಿಕೊಂಡು ಗ್ಲೈಡರುಗಳಲ್ಲಿ ಮೇಲೇರಿ ಬಹಳ ಹೊತ್ತು ಆಕಾಶದಲ್ಲಿ ಮೋಡಗಳ ಸಮೀಪ ತೇಲುತ್ತಿರುವುದು ಸಾಧ್ಯ.




ಗ್ಲೈಡರ್ ಪ್ಲೇನ್

ಒಂದು ಪ್ರವಾಹದ ಸಹಾಯದಿಂದ ಮೇಲಕ್ಕೆ ಹತ್ತಿ ನಿಧಾನವಾಗಿ ವಾಯುಮಂಡಲದಲ್ಲೆ ಕೆಳಕ್ಕೆ ಜಾರುವುದು ಇಲ್ಲಿನ ತಂತ್ರ. ಆಗ ಗ್ಲೈಡರನ್ನು ಅತ್ತಲಿತ್ತ ತಿರುಗಿಸುತ್ತ ಚಾಲಕ ಇನ್ನೊಂದು ಪ್ರವಾಹವನ್ನು ಸಂಧಿಸುತ್ತಾನೆ. ಇದರ ಸಹಾಯದಿಂದ ಇನ್ನೂ ಮೇಲಕ್ಕೇರುತ್ತಾನೆ. ಇಂಥ ತಂತ್ರಗಳನ್ನು ಉಪಯೋಗಿಸಿ ಸಮುದ್ರಮಟ್ಟಕ್ಕಿಂತ ಮೇಲೆ 13.71 ಕಿಮೀ (45000 ಅಡಿ) ಗಳಷ್ಟು ಎತ್ತರಕ್ಕೆ ಹಾರಿದ್ದುದೂ ಉಂಟು; 72 ಘಂಟೆಗಳಿಗಿಂತಲೂ ಹೆಚ್ಚು ಕಾಲ ತೇಲುತ್ತಿದ್ದುದೂ ಉಂಟು.



ಇಳಿಜಾರಿನಲ್ಲಿ ಓಡಿಬಂದು ಗ್ಲೈಡರ್ ಹಾರಾಟ – ಆರಂಭದ ಪ್ರಯತ್ನ

ಗ್ಲೈಡರಿನಲ್ಲಿ ರೆಕ್ಕೆಗಳ ಆಕಾರ ಬಲು ಮುಖ್ಯ. ಗಾಳಿಯ ನೆಗಪು (ಲಿಫ್ಟ್) ಗರಿಷ್ಠವಾಗಿಯೂ ಕರ್ಷಣ (ಡ್ರ್ಯಾಗ್) ಕನಿಷ್ಠವಾಗಿಯೂ ಇರುವಂತೆ ವಾಯುಗತಿಶಾಸ್ತ್ರ ರೀತ್ಯ ರೆಕ್ಕೆಯ ಆಕಾರವನ್ನು ನಿರ್ಧರಿಸಲಾಗುವುದು. ಇಂದಿನ ಗ್ಲೈಡರಿನ ರೆಕ್ಕೆಗಳ ಗಾತ್ರ 15ಮೀ ಉದ್ದ 1.2ಮೀ ಅಗಲ ಇದೆ. ಹಿಂದಿನ ಕಾಲದಲ್ಲಿ ಪ್ಲೈವುಡ್, ದಪ್ಪ ಬಟ್ಟೆ ಮತ್ತು ಉಕ್ಕಿನ ಕೊಳವೆಗಳನ್ನು ಉಪಯೋಗಿಸಿ ಗ್ಲೈಡರ್‌ಗಳನ್ನು ಕಟ್ಟುತ್ತಿದ್ದರು. ಅಲ್ಯೂಮಿನಿಯಮ್

ಹಾಳೆಗಳು ಮತ್ತು ಗಾಜಿನ ಎಳೆಗಳಿಂದ ಬಲಪಡಿಸಿದ ಪ್ಲಾಸ್ಟಿಕ್ ರೀತಿಯ ವಸ್ತುಗಳಿಂದ ಎರಕ ಹೊಯ್ದ (ಮೋಲ್ಡೆಡ್ ಫೈಬರ್‌ಗ್ಲಾಸ್) ಗ್ಲೈಡರುಗಳನ್ನು ರೂಪಿಸುವ ವಿಧಾನಗಳು ಈಗ ಬಳಕೆಯಲ್ಲಿವೆ.



ಗ್ಲೈಡರ್ ಸೈಲ್ ಪ್ಲೇನ್

ಗ್ಲೈಡರುಗಳಲ್ಲಿ ಬಹಳ ಎತ್ತರ, ಬಹಳ ಹೊತ್ತು ಯಶಸ್ವಿಯಾಗಿ ಹಾರಬೇಕಾದರೆ ಕೆಲವು ಉಪಕರಣಗಳ ಸಹಾಯ ಬೇಕಾಗುತ್ತದೆ. ಇವುಗಳಲ್ಲಿ ಮುಖ್ಯವಾದವು ಎತ್ತರ ಮತ್ತು ವೇಗವನ್ನು ಸೂಚಿಸುವ ಮಾಪಕಗಳು, ಗ್ಲೈಡರಿನ ತಿರುವು ಮತ್ತು ಸುತ್ತುಗಳನ್ನು ಸೂಚಿಸುವ ಸಾಧನಗಳು, ಹತ್ತುವ ಇಳಿಯುವ ವೇಗ ಪ್ರಮಾಣ ಸೂಚಕಗಳು, ಜಿ.ಪಿ.ಎಸ್,



ಗ್ಲೈಡರ್ ಹಾರಾಟದ ಇನ್ನೊಂದು ಭಂಗಿ

ಮತ್ತು ವಾಯುಪ್ರವಾಹವನ್ನು ಗುರುತಿಸಿ ಅದರ ಲಕ್ಷಣಗಳನ್ನು ತಿಳಿಸುವ ಮಾಪಕಗಳು. ಇವೆಲ್ಲವನ್ನು ಈಗ ಕಾಕ್‌ಪಿಟ್‌ನಲ್ಲಿ ಅಳವಡಿಸಲಾಗುತ್ತದೆ. ಪ್ರಾರಂಭದಲ್ಲಿ ಗ್ಲೈಡರ್ ಮೇಲಕ್ಕೆ ಹತ್ತುವಂತೆ ಮಾಡಲು ನೆಲದ ಮೇಲೆ ಅದನ್ನು ಸ್ವಲ್ಪ ದೂರ ಬಹಳ ವೇಗವಾಗಿ ಓಡಿಸಬೇಕಾಗುತ್ತದೆ. ಇದಕ್ಕೋಸ್ಕರ ಹಿಂದೆ ಗ್ಲೈಡರಿಗೆ ನೈಲಾನ್ ಹಗ್ಗವನ್ನು ಕಟ್ಟಿ ಜೀಪುಗಳಿಂದ ವೇಗವಾಗಿ ಎಳೆಸುತ್ತಿದ್ದರು. ಈಗ ವಿಂಚ್ ಎಂಬ ದೊಡ್ಡರಾಟೆಯುಳ್ಳ ಯಂತ್ರದಿಂದಲೂ ಗ್ಲೈಡರುಗಳನ್ನು ಎಳೆಯಲಾಗುತ್ತದೆ. ಇದಲ್ಲದೆ ವಾಯುವಿಮಾನಗಳನ್ನು (ಏರೋಪ್ಲೇನ್ಸ್) ಉಪಯೋಗಿಸಿ ಗ್ಲೈಡರುಗಳನ್ನು ಆಕಾಶದಲ್ಲಿ ತೇಲಿಬಿಡುವ ಪದ್ಧತಿಯೂ ಬಹುವಾಗಿ ಬಳಕೆಯಲ್ಲಿದೆ. ಈಗ ಯಂತ್ರಚಾಲಿತ ಗ್ಲೈಡರ್‌ಗಳೂ ಲಭ್ಯವಿವೆ. ಪ್ಯಾರಾಗ್ಲೈಡರ್, ಹ್ಯಾಂಗ್ ಗ್ಲೈಡರ್ ಇವು ಗ್ಲೈಡರ್‌ನ ಇತರ ಪ್ರಕಾರಗಳು. (ಬಿ.ಪಿ.ಜಿ.)

**ಗ್ಲೈಡಿನ್ಲಿ :** ಕಚ್ಚಾನಾಗಾ ಜನರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಮಹಿಳೆ. ಈಕೆ 1915ರಲ್ಲಿ ಜನಿಸಿದಳು. ಮಣಿಪುರ, ಕಾಚಾರ್ ಹಾಗೂ ನಾಗಾ ಜಿಲ್ಲೆಗಳಲ್ಲಿ ಹಂಚಿಹೋಗಿದ್ದ ಕಚ್ಚಾನಾಗಾ ಜನರನ್ನು ಸಂಘಟಿಸಿದಳು (1931–32). 1925ರ ವೇಳೆಗೆ ಕಚ್ಚಾನಾಗಾ ಜನರಲ್ಲಿ ಹರಿದು ಹಂಚಿಹೋಗಿದ್ದ ತಮ್ಮನ್ನೆಲ್ಲ ಒಂದುಗೂಡಿಸಲು ಹೊಸ ನಾಗರಾಜನೆಂಬ ದೈವ ಪುರುಷನೊಬ್ಬ ಬರುತ್ತಾನೆಂದೂ ಅವನು ಬ್ರಿಟಿಷರನ್ನು ಓಡಿಸುತ್ತಾನೆಂದೂ ನಂಬಿಕೆ ಮನೆಮಾಡಿತ್ತು. ಜಾಡೋನಾಂಗ್ ಎಂಬುವವನು ಕಚ್ಚಾನಾಗಾಗಳ ರಕ್ಷಕನೆಂದು ಹೇಳಿಕೊಂಡು ಅವರನ್ನು ಸಂಘಟಿಸಿದ (1929). ಅಲ್ಲದೆ ಅವರಲ್ಲಿದ್ದ ಮೂಢನಂಬಿಕೆ, ಕಂದಾಚಾರಗಳನ್ನು ತೊಡೆದುಹಾಕಿ ಎಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸಿದ. ಹಾಗಾಗಿ ಕಚ್ಚಾನಾಗಾಗಳು ತಮ್ಮದೇ ಆದ ಸ್ವತಂತ್ರ ನಾಗಾರಾಜ್ಯವನ್ನು ರೂಪಿಸಿ ಕೊಂಡರು. ಇದರಿಂದ ಕಳವಳಗೊಂಡ ಬ್ರಿಟಿಷ್ ಸರ್ಕಾರ ಜಾಡೋನಾಂಗ್‌ನನ್ನು ಬಂಧಿಸಿ ನೇಣು ಹಾಕಿತ್ತು (1931). ಇಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ಜಾಡೋನಾಂಗ್‌ನ ದೂರದ ಸಂಬಂಧಿಯಾದ ಗ್ಲೈಡಿನ್ಲಿಯು ಕಚ್ಚಾನಾಗಾ ಜನರ ನೆರವಿಗೆ ಬಂದಳು. ಇವಳು ಕಚ್ಚಾನಾಗಾ ಜನ ವಾಸಮಾಡುತ್ತಿದ್ದ ಪ್ರದೇಶಗಳಲ್ಲೆಲ್ಲ ಸುತ್ತಾಡಿ, ಅವರನ್ನೆಲ್ಲ ಸಂಘಟಿಸಿ ಹೋರಾಟದ ಮನೋಭಾವನೆ ಮೂಡಿಸಿದಳು. ಈಕೆ ಅಸ್ಸಾಮಿನ ಕ್ರಾಂತಿಕಾರಿಗಳ ಸಂಪರ್ಕ ಪಡೆದು ಕ್ರಾಂತಿಕಾರಿ ಚಳವಳಿಗಳನ್ನು ಸಮನ್ವಯಗೊಳಿಸಲು ಪ್ರಯತ್ನಿಸಿದಳು. ಅಂತಿಮವಾಗಿ ಸರ್ಕಾರದ ವಿರುದ್ಧ ದಂಗೆಯೇಳುವಂತೆ ಪ್ರಚೋದಿಸಿ, ಸರ್ಕಾರಕ್ಕೆ ಕಂದಾಯ ಸಲ್ಲಿಸದಂತೆ, ಬಲವಂತ ದುಡಿಮೆ ಮಾಡದಂತೆ ಕರೆನೀಡಿದಳು. ಬ್ರಿಟಿಷ್ ಸರ್ಕಾರ ಇವಳನ್ನು ಬಂಧಿಸಲು ಪ್ರಯತ್ನಿಸಿದಾಗ ತಪ್ಪಿಸಿಕೊಂಡಳು. ಆಗ ಇವಳ ಹೆಸರಿನ ಎಲ್ಲಾ ತರುಣಿಯರನ್ನು ಬಂಧಿಸಿ ಪ್ರಶ್ನಿಸಲಾರಂಭಿಸಿದರು. 1932ರ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಗ್ಲೈಡಿನ್ಲಿಯ ಅನುಯಾಯಿಗಳಿಗೂ ಬ್ರಿಟಿಷ್ ಸರ್ಕಾರಿ ಪಡೆಗಳಿಗೂ ನಡುವೆ ಕದನ ನಡೆಯಿತು. ಈಕೆಯ ಬೆಂಬಲಿಗರ ಹಳ್ಳಿಗಳಿಗೆ ಬೆಂಕಿ ಹಚ್ಚಲಾಯಿತು. ಈಕೆ ತನ್ನ ಬೆಂಬಲಿಗರ ರಕ್ಷಣೆಗಾಗಿ ಪುಲೋಮಿ ಎಂಬ ಗ್ರಾಮದಲ್ಲಿ ಬಿದಿರು ಕೋಟೆಯೊಂದನ್ನು ನಿರ್ಮಿಸಿದಳು. ಇದು 4,000 ಮಂದಿಗೆ ಆಶ್ರಯ ಕೊಡುವಂತಿತ್ತು. ಈ ನೆಲೆಯಿಂದ ಸರ್ಕಾರದ ವಿರುದ್ಧ ಕ್ರಾಂತಿಕಾರಕ ಚಟುವಟಿಕೆಗಳನ್ನು ರೂಪಿಸತೊಡಗಿದಳು. ಆದರೆ ಅನಿರೀಕ್ಷಿತವಾಗಿ ನಾಗಾ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ತನ್ನ ಸೈನಿಕ ಪಡೆಯೊಂದಿಗೆ ಧಾಳಿ ಮಾಡಿ ಗ್ಲೈಡಿನ್ಲಿಯನ್ನೂ ಇವಳ ಅನುಯಾಯಿಗಳನ್ನೂ ಬಂಧಿಸಿದ. ಈಕೆಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಆದರೆ 1947ರಲ್ಲಿ ಭಾರತ ಸ್ವತಂತ್ರವಾದ ಮೇಲೆ ಬಿಡುಗಡೆಯಾದಳು. ಜವಾಹರಲಾಲ್ ನೆಹರೂ ಈಕೆಯನ್ನು ನಾಗಾರಾಣಿ ಎಂದು ಕರೆದ ಕಾರಣ ಈಕೆ ರಾಣಿಗ್ಲೈಡಿನ್ಲಿ ಎಂದೇ ಪ್ರಸಿದ್ಧಳಾಗಿದ್ದಳು. (ಕೆ.ಎಸ್‌ಡಿ.)

**ಗ್ಲೋರಿಯೋಸ :** ಲಿಲಿಯೇಸೀ ಕುಟುಂಬಕ್ಕೆ ಸೇರಿದ ಒಂದು ಲಶುನ ಸಸ್ಯಜಾತಿ. ಇದರಲ್ಲಿ ಹಲವಾರು ಪ್ರಭೇದಗಳಿವೆ. ಭಾರತದಲ್ಲಿ ಸುಪರ್ಬ ಎಂಬ ಒಂದು ಪ್ರಭೇದ ಬೆಳೆಯುತ್ತದೆ. ಇದಕ್ಕೆ ಇಂಗ್ಲಿಷಿನಲ್ಲಿ ಗ್ಲೋರಿ ಲಿಲಿ, ಸರ್ಪೆಂಟ್ಸ್ ಟಂಗ್, ಮಲಬಾರ್ ಗ್ಲೋರಿ, ಟೈಗರ್ಸ್ ಕ್ಲಾ ಮುಂತಾದ ಹೆಸರುಗಳೂ ಕನ್ನಡದಲ್ಲಿ ಕರಡಿಕಣ್ಣಿನಗೆಡ್ಡೆ, ಕೋಳಿಕುಟುಮನ



ಗೆಡ್ಡೆ, ಅಗ್ನಿಶಿಖೆ, ಶಿವಶಕ್ತಿ ಬಳ್ಳಿ ಮುಂತಾದ ಹೆಸರುಗಳೂ ಇವೆ. ಕಾಡುಸಸ್ಯವಾಗಿ ಬೆಳೆಯುವ ಇದನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲಿ ಬೆಳೆಸುವುದುಂಟು. ಅಲ್ಲದೆ ಇದಕ್ಕೆ ಔಷಧೀಯ ಪ್ರಾಮುಖ್ಯವೂ ಇದೆ. ಗ್ಲೋರಿಯೋಸ ಇತರ ಆಸರೆಗಳ ಮೇಲೆ ಹಬ್ಬಿಕೊಂಡು ಬೆಳೆಯುವ ದುರ್ಬಲಕಾಂಡದ ಒಂದು ಬಳ್ಳಿ, ಇದರಲ್ಲಿ ಭೂಗತವಾಗಿರುವ ಪ್ರಕಂದವಿದೆ. ಎಲೆಗಳು ಸರಳ; ಪರ್ಯಾಯ, ಅಭಿಮುಖ ಇಲ್ಲವೆ ವರ್ತುಲ ಮಾದರಿಗಳಲ್ಲಿ ಜೋಡಣೆಗೊಂಡಿವೆ. ಎಲೆಗಳಿಗೆ ತೊಟ್ಟು ಇಲ್ಲ. ಎಲೆಯ ತುದಿಗಳು ತುಂಬ ಉದ್ದವಾಗಿ ಸುರುಳಿ ಸುತ್ತಿಕೊಂಡಿರುವವು. ಇವು ಒಂದು ರೀತಿಯ ಕುಡಿತಂತುಗಳಾಗಿ (ಟೆಂಡ್ರಿಲ್ಸ್)

ಮಾರ್ಪಟ್ಟಿವೆ. ಇವುಗಳ ಸಹಾಯದಿಂದ ಗಿಡ ಆಸರೆಗಳ ಮೇಲೆ ಹಬ್ಬುತ್ತದೆ. ಹೂಗಳು ಎಲೆಗಳ ಕಂಕುಳಲ್ಲಿ ಒಂಟೊಂಟಿಯಾಗಿ ಅರಳುತ್ತವೆ. ಇವು ದೊಡ್ಡ ಗಾತ್ರದವು. ಮೊದಲು ಹಸುರು ಬಣ್ಣಕ್ಕಿದ್ದು, ಬರಬರುತ್ತ ಹಳದಿ, ಕಡುಗೆಂಪು ಬಣ್ಣವನ್ನು ತಳೆಯುವುದರಿಂದ ಬಹಳ ಆಕರ್ಷಕವಾಗಿರುತ್ತವೆ. ಪೆರಿಯಾಂತ್ ಹಾಲೆಗಳು ಹಿಮ್ಮುಖವಾಗಿ ಬಾಗಿರುವುದು ಹೂಗಳ ವಿಶಿಷ್ಟ ಲಕ್ಷಣ. ಕೇಸರಗಳ ಅಂಡಾಶಯ ಉಚ್ಚಸ್ಥಾನದ್ದು; 3 ಕಾರ್ಪೆಲುಗಳಿಂದ ಕೂಡಿದೆ. ಕಾಯಿ ಸಂಪುಟ ಮಾದರಿಯದು.

ಗ್ಲೋರಿಯೋಸವನ್ನು ಬೀಜಗಳಿಂದ ಮತ್ತು ಗೆಡ್ಡೆ ಅಥವಾ ಪ್ರಕಂದದ ತುಂಡುಗಳಿಂದ ವೃದ್ಧಿಮಾಡಬಹುದು. ಪ್ರಕಂದದ ತುಂಡುಗಳಿಂದ ವೃದ್ಧಿಮಾಡುವುದು ಬಹಳ ಸುಲಭ. ಇವನ್ನು ಮಾರ್ಚ್–ಏಪ್ರಿಲ್ ತಿಂಗಳಲ್ಲಿ ನೆಡಬೇಕು. ಕಾಲಕ್ಕನುಸಾರವಾಗಿ ನೀರನ್ನು ಹಾಕಬೇಕು. ಜುಲೈ–ಸೆಪ್ಟೆಂಬರ್ ವೇಳೆಗೆ ಹೂ ಅರಳಲು ಪ್ರಾರಂಭಿಸುತ್ತವೆ. ಗ್ಲೋರಿಯೋಸದ ಪ್ರಕಂದಕ್ಕೆ ಶಕ್ತಿವರ್ಧಕ, ಜಂತುನಾಶಕ ಗುಣಗಳಿವೆ. ಗಾನರೀಯ, ಕೆಲವು ಬಗೆಯ ಚರ್ಮವ್ಯಾಧಿಗಳು, ಹೊಟ್ಟೆ ನುಲಿತ ಮುಂತಾದವುಗಳ ಚಿಕಿತ್ಸೆಗೂ ಇದನ್ನು ಬಳಸಲಾಗುತ್ತದೆ. ಎಲೆಯ ರಸವನ್ನು ಹೇನು ನಿರ್ಮೂಲನಕ್ಕೆ ಉಪಯೋಗಿಸುವುದುಂಟು. (ಎಂ.ಎಚ್.ಎಂ.)

**ಗ್ಲ್ಯಾಡಿಯೋಲಸ್ :** ಇರಿಡೇಸೀ ಕುಟುಂಬಕ್ಕೆ ಸೇರಿದ ಒಂದು ಬಹುವಾರ್ಷಿಕ ಲಶುನ ಸಸ್ಯ ಜಾತಿ. ಬಲು ಸುಂದರವಾದ ಹೂಗಳನ್ನು ಬಿಡುವುದರಿಂದ ಇದನ್ನು ಅಲಂಕಾರಕ್ಕಾಗಿ ಬೆಳೆಸುತ್ತಾರೆ. ದಕ್ಷಿಣ ಅಮೆರಿಕ ಇದರ ತವರು. ಇದರಲ್ಲಿ ಸುಮಾರು 160 ಪ್ರಭೇದಗಳಿವೆ. ಇವುಗಳಲ್ಲಿ ಬಹುಪಾಲು ಬಗೆಗಳು ದಕ್ಷಿಣ ಆಫ್ರಿಕದ ಮೂಲವಾಸಿಗಳು. ಉಳಿದವುಗಳ ತವರು ಮೆಡಿಟರೇನಿಯನ್ ಪ್ರದೇಶ ಇಲ್ಲವೆ ಏಷ್ಯದ ಪಶ್ಚಿಮ ಭಾಗ.

ಎಲ್ಲ ಪ್ರಭೇದಗಳೂ ಮೂಲಿಕೆ ಬಗೆಯವು. ಕಾಂಡ ಕಂದುಗಡ್ಡೆ (ಕಾರ್ಮ್) ರೀತಿಯದು. ಪ್ರತಿವರ್ಷ ಹಳೆಯ ಕಾಂಡ ಸತ್ತುಹೋಗಿ ಅದರ ಮೇಲ್ತುದಿಯಲ್ಲಿ ಹೊಸಕಾಂಡ ಹುಟ್ಟಿಕೊಳ್ಳುತ್ತದೆ. ಜೊತೆಗೆ ಕಾಂಡದ ಬುಡದಿಂದ ಕೆಲವು ಮರಿ ಗೆಡ್ಡೆಗಳೂ ಹುಟ್ಟುತ್ತವೆ. ಎಲೆಗಳು ಕತ್ತಿಯಾಕಾರದವು. ಹೂಗಳು ಸರಳವಾದ ಇಲ್ಲವೇ ಕವಲೊಡೆದ ಕದಿರುಗೊಂಚಲುಗಳಲ್ಲಿ ಜೋಡಣೆಗೊಂಡಿವೆ. ಹೂಗಳು ದೊಡ್ಡ ಗಾತ್ರದವು. ಇವುಗಳ ಆಕಾರ ಆಲಿಕೆಯಂತೆ. ಹೂಗಳು ಕೆಂಪು, ಕೆನ್ನೀಲಿ, ಹಳದಿ, ಬಿಳಿ ಮುಂತಾಗಿ ವರ್ಣವೈವಿಧ್ಯವನ್ನು ತೋರುವುದರಿಂದ ಬಲು ಸುಂದರವಾಗಿ ಕಾಣುತ್ತವೆ. ಪ್ರತಿಹೂವಿನಲ್ಲಿ 6 ಪೆರಿಯಾಂತ್ ಹಾಲೆಗಳು, 3 ಕೇಸರಗಳು, ಮೂರು ಕಾರ್ಪೆಲುಗಳನ್ನೊಳಗೊಂಡ ನೀಚಸ್ಥಾನದ ಅಂಡಾಶಯ ಇವೆ. ಕಾಯಿ ಸಂಪುಟ ಮಾದರಿಯದು. ಬೀಜಗಳು ಚಪ್ಪಟೆಯಾಗಿರಬಹುದು ಇಲ್ಲವೆ ಗುಂಡಗಿರಬಹುದು. ಉದ್ಯಾನಗಳಲ್ಲಿ ಬೆಳೆಸಲಾಗುವ ಪ್ರಭೇದಗಳಲ್ಲಿ ಏಲೇಟಸ್, ಗ್ರ್ಯಾಂಡಿಸ್, ಟ್ರಿಸ್ಟಿಸ್, ಬೈಫ್ಲೋರಸ್, ಕಾರ್ಡಿನ್ಯಾಲಿಸ್, ಪ್ರಿಮ್ಯುಲೈನಸ್, ಬ್ಲಾಂಡಸ್, ಫ್ಲಾರಿಬಂಡಸ್, ಕಾಲ್‌ವಿಲ್ಲೈ, ಗಾಂಡವೆನ್ಸಿಸ್, ಲೆಮಾಯನ್ನೈ, ನಾನ್‌ಸ್ಯೆಯೇನಸ್‌ಗಳು ಬಹಳ ಮುಖ್ಯವಾದವು. ಇವುಗಳಲ್ಲಿ ಕೊನೆಯ ನಾಲ್ಕು ಬಗೆಗಳು ಮಿಶ್ರತಳಿಗಳು.



ಗ್ಲ್ಯಾಡಿಯೋಲಸನ್ನು ಮರಿಗೆಡ್ಡೆಗಳಿಂದ ಇಲ್ಲವೆ ಬೀಜಗಳಿಂದ ವೃದ್ಧಿಸಬಹುದು. ನೀರು ಸರಾಗವಾಗಿ ಬಸಿದು ಹೋಗುವಂಥ ಯಾವ ಬಗೆಯ ಮಣ್ಣಿನಲ್ಲಾದರೂ ಇದರ ಬೆಳೆವಣಿಗೆ ಹುಲುಸು. ಮೈದಾನ ಸೀಮೆಗಳಲ್ಲಿ ಸೆಪ್ಟೆಂಬರ್–ಅಕ್ಟೋಬರ್ ತಿಂಗಳುಗಳಲ್ಲೂ ಬೆಟ್ಟ ಪ್ರದೇಶಗಳಲ್ಲಿ ಮಾರ್ಚ್–ಏಪ್ರಿಲ್ ತಿಂಗಳುಗಳಲ್ಲೂ ಗೆಡ್ಡೆಗಳನ್ನು ನೆಡಲಾಗುತ್ತದೆ. ನೆಲದಲ್ಲಿ ನೆಡುವ ಮುನ್ನ ಗೆಡ್ಡೆಗಳ ಮೇಲಿನ ಕಂದುಬಣ್ಣದ ಹುರುಪೆ ಎಲೆಯನ್ನು ತೆಗೆದುಹಾಕಿ, ಅಗಲವಾದ ತಟ್ಟೆಗಳನ್ನಿಟ್ಟು ಬೆಚ್ಚಗಿನ, ಕತ್ತಲೆಕೋಣೆಗಳಲ್ಲಿ ಕೊಂಚದಿನ ಇಡಬೇಕು. ಇದರಿಂದ ಗೆಡ್ಡೆಗಳು ಮೊಳಕೆಯೊಡೆಯುತ್ತವೆ. ಅನಂತರ ಅಪೇಕ್ಷಿತ ಸ್ಥಳಕ್ಕೆ ವರ್ಗಾಯಿಸಬೇಕು. ಸಾಕಷ್ಟು ಪರಿಮಾಣದಲ್ಲಿ ಕುದುರೆ ಗೊಬ್ಬರ, ಕಾಂಪೋಸ್ಟ್ ಗೊಬ್ಬರ, ಹೊಂಗೆ ಇಲ್ಲವೆ ಹುಚ್ಚೆಳ್ಳಿನ ಹಿಂಡಿಯನ್ನು ಹಾಕುತ್ತಿದ್ದು ಚೆನ್ನಾಗಿ ನೀರು ಹಾಯಿಸುತ್ತಿದ್ದರೆ ಗಿಡಗಳು ಹುಲುಸಾಗಿ ಬೆಳೆದು ಎರಡು ತಿಂಗಳ ಅನಂತರ ಹೂ ಬಿಡಲು ಆರಂಭಿಸುತ್ತವೆ. ಹೂ ಅರಳುವ ಅವಧಿಯೂ ಸುಮಾರು ಎರಡು ತಿಂಗಳುಗಳು. ಹೂ ಬಿಡುವ ಕಾಲ ಮುಗಿಯುತ್ತ ಬಂದಾಗ, ಗಿಡಗಳು ಬಾಗಿ ಕಂದುಬಣ್ಣಕ್ಕೆ ತಿರುಗುತ್ತವೆ. ಆಗ ಗಿಡಗಳಿಗೆ ನೀರು ಕಟ್ಟುವುದನ್ನು ನಿಲ್ಲಿಸಬೇಕು. ಎರಡು ವಾರಗಳ ಅನಂತರ ಮರಿಗೆಡ್ಡೆಗಳನ್ನು ಅಗೆದು ತಂಪಾದ ಮತ್ತು ಶುಷ್ಕವಾದ ಮರಳಿನ ಗೆಡ್ಡೆಗಳಲ್ಲಿ ಶೇಖರಿಸಿಡಬೇಕು. ಗೆಡ್ಡೆಗಳು ಹೆಚ್ಚು ಚಳಿಯನ್ನು ತಡೆಯುವುದಿಲ್ಲವಾದ್ದರಿಂದ ಅವು ಹೆಚ್ಚು ಚಳಿಗೆ ಸಿಗದಂತೆ ನೋಡಿಕೊಳ್ಳಬೇಕು. (ಎಂ.ಎಚ್.ಎಂ.;ಎಸ್.ಎಸ್.ಐ.)

**ಗ್ಲ್ಯಾಡ್‌ಸ್ಟನ್, ವಿಲಿಯಂ ಇವಾರ್ಟ್ :** 1809–98. ಹತ್ತೊಂಬತ್ತನೆಯ ಶತಮಾನದ ಅತ್ಯಂತ ಪ್ರಸಿದ್ಧ ಬ್ರಿಟಿಷ್ ರಾಜತಂತ್ರಜ್ಞ, ವಾಗ್ಮಿ, ಗ್ರಂಥಕರ್ತ. ಈತ ಸುಮಾರು ನಲವತ್ತು ವರ್ಷಗಳ ಕಾಲ ತನ್ನ ದೇಶದ ರಾಜಕೀಯ ಕ್ಷೇತ್ರದಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿ ಪ್ರಮುಖನಾಗಿದ್ದ. ದೇಶದ ಹಣಕಾಸಿನ ವ್ಯವಹಾರಗಳಲ್ಲಿ ಈತ ಅತಿ ಚತುರನಾಗಿದ್ದ. ನಾಲ್ಕು ಸಾರಿ ಇಂಗ್ಲೆಂಡಿನ ಪ್ರಧಾನಿಯಾಗಿದ್ದ. ಲಿವರ್ಪೂಲಿನಲ್ಲಿ 1809ರ ಡಿಸೆಂಬರ್ 29 ರಂದು ಜನಿಸಿದ ಈತ ಸ್ಕಾಟಿಷ್ ವಂಶಸ್ಥ. ತಂದೆ ಜಾನ್ ಗ್ಲ್ಯಾಡ್‌ಸ್ಟನ್ ಲಿವರ್ಪೂಲಿನ ಶ್ರೀಮಂತ ವರ್ತಕ. ಈಟನ್ ಮತ್ತು ಆಕ್ಸ್‌ಫರ್ಡಿನ ಕ್ರೈಸ್ಟ್ ಚರ್ಚಿನಲ್ಲಿ ವಿಲಿಯಂ ಗ್ಲ್ಯಾಡ್‌ಸ್ಟನ್ ವಿದ್ಯಾಭ್ಯಾಸ ಪಡೆದ. ಈತ ಆಕ್ಸ್‌ಫರ್ಡ್ ಯೂನಿಯನ್ನಿನ ಅಧ್ಯಕ್ಷನಾಗಿ ಚುನಾಯಿತನಾಗಿದ್ದ.

ಗ್ಲ್ಯಾಡ್‌ಸ್ಟನನ ಸಾರ್ವಜನಿಕ ಜೀವನ ಚಿಕ್ಕವಯಸ್ಸಿನಲ್ಲೇ ಆರಂಭವಾಯಿತು. 1832 ರಲ್ಲಿ, 23ನೆಯ ವಯಸ್ಸಿನಲ್ಲಿ, ನೆವಾರ್ಕ್ ಕ್ಷೇತ್ರದಿಂದ ಕಾಮನ್ಸ್ ಸಭೆಗೆ ಆರಿಸಿ ಬಂದ. 1834 ರಲ್ಲಿ ಸರ್ ರಾಬರ್ಟ್ ಪೀಲನ ಮಂತ್ರಿಮಂಡಲದಲ್ಲಿ ಖಜಾನೆ ವ್ಯವಹಾರಗಳ ಕಿರಿಯ ಸದಸ್ಯನಾಗಿ ನೇಮಿಸಲ್ಪಟ್ಟನಲ್ಲದೆ 1835 ರಲ್ಲಿ ವಸಾಹತುಗಳ ಅಧೀನ ಕಾರ್ಯದರ್ಶಿಯಾದ. 1838ರಲ್ಲಿ ದಿ ಸ್ಟೇಟ್ ಇನ್ ರಿಲೇಷನ್ಸ್ ವಿತ್ ದಿ ಚರ್ಚ್ ಎಂಬ ಒಂದು ವಿವಾದಾಸ್ಪದ ಗ್ರಂಥವನ್ನು ಪ್ರಕಟಿಸಿದ. 1841ರಲ್ಲಿ ಈತ ಬೋರ್ಡ್ ಆಫ್ ಟ್ರೇಡಿನ ಉಪಾಧ್ಯಕ್ಷನೂ 1843ರಲ್ಲಿ ಅದರ ಅಧ್ಯಕ್ಷನೂ ಆದ. 1845ರ ಜನವರಿಯಲ್ಲಿ ಚರ್ಚ್ ನೀತಿಯ ಬಗ್ಗೆ ಭಿನ್ನಾಭಿಪ್ರಾಯ ಉಂಟಾಗಿ ರಾಜೀನಾಮೆ ಸಲ್ಲಿಸಿದ. ಆದರೆ ಅದೇ ವರ್ಷ ಡಿಸೆಂಬರಿನಲ್ಲಿ ಪುನಃ ಸರ್ಕಾರವನ್ನು ಸೇರಿದಾಗ ಇವನನ್ನು ವಸಾಹತು ವ್ಯವಹಾರಗಳ ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಪೀಲ್ ಸರ್ಕಾರದ ಪತನವಾದಾಗ ಇವನ ಅಧಿಕಾರವೂ ಹೋಯಿತು. 1847 ರಲ್ಲಿ ಈತ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಕಾಮನ್ಸ್ ಸಭೆಗೆ ಪುನ: ಆರಿಸಿ ಬಂದ. ಈತ 1849 ರಲ್ಲಿ ಇಟಲಿಗೆ ಭೇಟಿ ನೀಡಿ ನೇಪಲ್ಸಿನ ಸೆರೆಮನೆಗಳಲ್ಲಿದ್ದ ಪರಿಸ್ಥಿತಿಯನ್ನು ಕುರಿತು 1851ರಲ್ಲಿ ಲೇಖನಗಳನ್ನು ಪ್ರಕಟಿಸಿದ. ಈ ಲೇಖನಗಳು ಇಟಲಿಯಲ್ಲಿ ಅಲ್ಲೋಲ ಕಲ್ಲೋಲವನ್ನೆಬ್ಬಿಸಿದುವಲ್ಲದೆ ಅಲ್ಲಿಯ ಆಡಳಿತದಲ್ಲಿ ಬದಲಾವಣೆಗಳಾಗಲು ಸಹಾಯಕವಾದುವು.



1850ರಲ್ಲಿ ಸರ್ ರಾಬರ್ಟ್ ಪೀಲ್ ಗತಿಸಿದಾಗಿನಿಂದ ಇವನ ಪ್ರಾಮುಖ್ಯ ಹೆಚ್ಚುತ್ತ ಹೋಯಿತು. ಕಾಮನ್ಸ್ ಸಭೆಯಲ್ಲಿ ಈತ ಅತ್ಯುತ್ತಮ ವಾಗ್ಮಿ ಎಂದು ಹೆಸರಾದ. ಆರ್ಥಿಕ ವ್ಯವಹಾರಗಳ ಮಂತ್ರಿಯಾಗಿ ಈತ 1853ರಲ್ಲಿ ಮಂಡಿಸಿದ ಆಯವ್ಯಯ ದೇಶದ ಆರ್ಥಿಕ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಆರಂಭಿಸಿತು. 1868ರಲ್ಲಿ ಇವನು ಮೊದಲ ಬಾರಿಗೆ ಪ್ರಧಾನಿಯಾದ. 1878ರಲ್ಲಿ ರಾಜೀನಾಮೆ ಇತ್ತ. ಅನಂತರ ಕೆಲವು ವರ್ಷಗಳ ಕಾಲ ಅಧ್ಯಯನ ಮತ್ತು ಸಾಹಿತ್ಯ ಸೇವೆಯಲ್ಲಿ ನಿರತನಾದ. 1879–80ರಲ್ಲಿ ಈತ ಮಾಡಿದ ಭಾಷಣಗಳ ಪರಿಣಾಮವಾಗಿ ಡಿಸ್ರೇಲಿ ಮಂತ್ರಿಮಂಡಲದ ಪತನವಾಗಿ ಇವನು ಪ್ರಧಾನಿಯಾದ. ಆಗ ದೇಶ ಆಫ್ಘಾನಿಸ್ತಾನ, ದಕ್ಷಿಣ ಆಫ್ರಿಕ, ಐರ್ಲೆಂಡ್, ಈಜಿಪ್ಟ್, ಸೂಡಾನ್ ಮುಂತಾದ ಕಡೆಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿತ್ತು. ಈ ಕಠಿಣ ಕಾಲದಲ್ಲಿ ತನ್ನ ನೀತಿಗಳಿಗೆ ಸಾಕಷ್ಟು ಬಹುಮತವಿಲ್ಲದ ಕಾರಣ ರಾಜೀನಾಮೆ ಇತ್ತು ಪುನಃ 1886ರಲ್ಲಿ ಮೂರನೆಯ ಬಾರಿ ಪ್ರಧಾನಮಂತ್ರಿಯಾದ. ಈ ಅವಧಿಯಲ್ಲಿ ಐರ್ಲೆಂಡಿನ ಬಗ್ಗೆ ಇವನು ಮಂಡಿಸಿದ ಹೋಮ್ ರೂಲ್ ಮಸೂದೆಗೆ ತನ್ನ ಪಕ್ಷದಲ್ಲೇ ಸಾಕಷ್ಟು

ಬೆಂಬಲ ದೊರೆಯದೆ ಹೋದ್ದರಿಂದ ಅದು ಬಿದ್ದುಹೋಯಿತು. ಇವನು ಪುನಃ ಪ್ರಧಾನಿ ಪದವಿಯನ್ನು ತ್ಯಜಿಸಬೇಕಾಯಿತು. 1892ರಲ್ಲಿ ನಾಲ್ಕನೆಯ ಮತ್ತು ಕೊನೆಯ ಬಾರಿ ಪ್ರಧಾನಿಯಾದ. ಹೋಮ್ ರೂಲ್ ಮಸೂದೆಯನ್ನು ಕಾಮನ್ಸ್ ಸಭೆ ಒಪ್ಪಿಕೊಂಡಿತಾದರೂ ಲಾರ್ಡ್ಸ್ ಸಭೆ ಅದನ್ನು ತಿರಸ್ಕರಿಸಿತು. ವೃದ್ಧಾಪ್ಯದ ಕಾರಣ 1894ರಲ್ಲಿ ಪ್ರಧಾನಮಂತ್ರಿ ಪದವಿಗೆ ಈತ ರಾಜೀನಾಮೆ ಇತ್ತ. ಅನಂತರವೂ ಈತ ದೇಶದ ಸಮಸ್ಯೆಗಳಲ್ಲಿ ಆಸಕ್ತಿ ತೋರಿಸುತ್ತಿದ್ದುದರ ಜೊತೆಗೆ ಹೋಮರ್, ಡಾಂಟೆ ಮತ್ತು ಇತರ ಬರೆಹಗಾರರ ವಿಷಯವಾಗಿ ಬರೆದ. ಈತ ಆದರ್ಶವಾದ ಮತ್ತು ವ್ಯವಹಾರ ಚತುರತೆಯ ಸಂಗಮವಾಗಿದ್ದ. ಹಲವು ಚಳವಳಿಗಳ ಪುರಸ್ಕರ್ತನಾಗಿ ಪ್ರಗತಿಪರ ವೈಚಾರಿಕನೆಂಬ ಹೆಸರು ಪಡೆದಿದ್ದ. ಲಾರ್ಡ್ ಸ್ಯಾಲಿಸ್‌ಬರಿ ಇವನನ್ನು ಒಬ್ಬ ಶ್ರೇಷ್ಠ ಕ್ರೈಸ್ತಧರ್ಮಿ ಎಂದು ವರ್ಣಿಸಿದ್ದಾನೆ. ಸಂಪ್ರದಾಯವಾದಿ ಟೋರಿಯಾಗಿ ರಾಜಕೀಯ ಜೀವನವನ್ನಾರಂಭಿಸಿದ ಗ್ಲ್ಯಾಡ್‌ಸ್ಟನ್ ಕ್ರಮಕ್ರಮವಾಗಿ ಉದಾರವಾದಿಯಾಗಿ ಕೀರ್ತಿಗಳಿಸಿದ. 1898ರ ಮೇ 19ರಂದು ಈತ ನಿಧನನಾದ. (ಎ.ಎಂ.ಆರ್.)

**ಗ್ಲ್ಯಾಸ್ಗೊ, ಎಲೆನ್ ಆಂಡರ್ಸನ್ ಘೋಲ್ಸನ್ :** 1874– 1945. ಅಮೆರಿಕದ ಕಾದಂಬರಿಗಾರ್ತಿ. ವರ್ಜೀನಿಯದ ರಿಚ್‌ಮಂಡ್ ಎಂಬ ಸ್ಥಳದಲ್ಲಿ ಜನಿಸಿದಳು. ಹರೆಯದಲ್ಲಿ ಸದಾ ರೋಗಪೀಡಿತಳಾಗಿದ್ದುದರಿಂದ ಸಾಂಪ್ರದಾಯಿಕ ಶಾಲಾ ಶಿಕ್ಷಣ ಪಡೆಯಲಾಗಲಿಲ್ಲ. ಆದರೂ ಸ್ವಪ್ರಯತ್ನದಿಂದ ವಿಶೇಷಾಭ್ಯಾಸ ಮಾಡಿ ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಮೊದಲ ಕಾದಂಬರಿಯನ್ನು (ದಿ ಡಿಸೆಂಡೆಂಟ್) ರಚಿಸಿದಳು. ಇದು 1897ರಲ್ಲಿ ಪ್ರಕಟವಾಯಿತು. ಇವಳ ಮತ್ತೊಂದು ಕೃತಿ ದಿ ವಾಯ್ಸ್ ಆಫ್ ದಿ ಪೀಪಲ್ (1900) ಓದುಗರ ಲಕ್ಷ್ಯವನ್ನು ಸೆಳೆಯಿತು. ಈಕೆ ತನ್ನ ಜೀವನಾವಧಿಯಲ್ಲಿ 19 ಕಾದಂಬರಿಗಳಲ್ಲದೆ ಸಣ್ಣ ಕಥೆಗಳು, ಕವನಗಳು ಹಾಗೂ ಸಾಹಿತ್ಯಕ ಪ್ರಬಂಧಗಳನ್ನು ಬರೆದಿದ್ದಾಳೆ.

ಇವಳ ಕೃತಿಗಳು ಎಂದಿಗೂ ಪತ್ತೇದಾರಿ ಕಾದಂಬರಿಗಳಷ್ಟು ಜನಪ್ರಿಯ ವಾಗಲಿಲ್ಲವಾದರೂ ಈಕೆಯ ಪ್ರತಿಭೆಯನ್ನು ವಿಮರ್ಶಕರು ಬಹುವಾಗಿ ಮೆಚ್ಚಿದ್ದರು. ದಕ್ಷಿಣ ಅಮೆರಿಕದ ಬಗ್ಗೆ ಪ್ರಾಮಾಣಿಕವಾಗಿ ಬರೆದ ಮೊದಲ ಕಾದಂಬರಿಕಾರ್ತಿಯೆಂದು ಈಕೆಯನ್ನು ಪರಿಗಣಿಸಲಾಗಿದೆ. ಸಂತೋಷಕ್ಕಾಗಿ ಸೌಖ್ಯಕ್ಕಾಗಿ ಸ್ತ್ರೀಯರು ಕೆಲವೊಮ್ಮೆ ಮಾಡಬೇಕಾದ ಸಾಹಸದ ಹೋರಾಟವನ್ನು ಚಿತ್ರಿಸುವ ಘಟನೆಗಳು ಈಕೆಯ ಕಾದಂಬರಿಯಲ್ಲಿ ಕಾಣಬರುತ್ತವೆ. ಬ್ಯಾರನ್ ಗ್ರೌಂಡ್ (1925) ಎಂಬುದು ಇವಳ ಅತ್ಯುತ್ತಮ ಕಾದಂಬರಿ. ಒಬ್ಬ ಹೆಂಗಸಿನ ನಿರಾಶೆ ಮತ್ತು ಆಧ್ಯಾತ್ಮಿಕ ಗೆಲುವುಗಳ ಗಂಭೀರ ಚಿತ್ರಣವಿರುವ ಈ ಕೃತಿ ತುಂಬ ಮಾರ್ಮಿಕವಾಗಿದೆ. ವರ್ಜೀನಿಯ (1913) ಮತ್ತು ಲೈಫ್ ಅಂಡ್ ಗ್ಯಾಬ್ರಿಲ (1916) ಎಂಬ ಕಾದಂಬರಿಗಳು ಸಮಸ್ಯಾತ್ಮಕವಾದವು. ದಿ ರೊಮ್ಯಾಂಟಿಕ್ ಕಾಮೆಡಿಯನ್ಸ್ (1926), ದೆ ಸ್ಟೂಪ್ಡ್ ಟು ಫಾಲಿ (1929), ದಿ ಷೆಲ್ಟರ್ಡ್ ಲೈಫ್ (1932) –ಎಂಬುವು ಶಿಷ್ಟಾಚಾರಕ್ಕೆ ಮೀಸಲಾದಂಥವು. ಮಿರುಗುವ ಶೈಲಿ, ಮಾರ್ಮಿಕ ವಿಡಂಬನೆ, ಜನರ ಆಂತರಿಕ ಜೀವನ ಚಿತ್ರಣ–ಇವನ್ನು ಈ ಕಾದಂಬರಿಯಲ್ಲಿ ಕಾಣಬಹುದು. ವೆಯಿನ್ ಆಫ್ ಐರನ್ (1935) ಎಂಬುದು ಓದುಗರ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವವನ್ನುಂಟುಮಾಡುವಂಥ ಮತ್ತೊಂದು ಉತ್ತಮ ಕಾದಂಬರಿ.

1941ರಲ್ಲಿ ಈಕೆ ರಚಿಸಿದ ಇನ್ ದಿಸ್ ಅವರ್ ಲೈಫ್ ಎಂಬ ಕಾದಂಬರಿಗೆ ಪುಲಿಟ್ಜರ್ ಬಹುಮಾನ ಬಂತು (1942). ಇದು ದಕ್ಷಿಣ ಅಮೆರಿಕದ ಸಂಪ್ರದಾಯಗಳನ್ನು ಕುರಿತು ಹೇಳುವಂಥದು. 1943ರಲ್ಲಿ ಈಕೆ ತನ್ನ ಕಾದಂಬರಿಗಳನ್ನು ಕುರಿತ ಒಂದು ವಿಮರ್ಶಾತ್ಮಕ ಮೌಲ್ಯ ನಿರ್ಧಾರಣೆಯನ್ನು ಎ ಸರ್ಟನ್ ಮೆಷರ್ ಎಂಬ ಹೆಸರಿನಲ್ಲಿ ಬರೆದಳು. ಈಕೆಯ ಆತ್ಮಚರಿತ್ರೆ ದಿ ವುಮನ್ ವಿದಿನ್ ಈಕೆಯ ಮರಣಾನಂತರ (1954) ಪ್ರಕಟವಾಯಿತು. (ಯು.ಎಸ್.ಎಚ್.)

**ಗ್ಲ್ಯಾಸ್ಗೋ :** ಸ್ಕಾಟ್ಲೆಂಡಿನ ಅತಿ ದೊಡ್ಡ ನಗರ, ರಾಯಲ್ ಮತ್ತು ಪಾರ್ಲಿಮೆಂಟರಿ ಬರೋ, ಬಂದರು, ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರ. ಕ್ಲೈಡ್ ನದಿಯ ಮುಖದಿಂದ 32 ಕಿಮೀ ಮೇಲಕ್ಕೆ, ಅದರ ಎರಡೂ ದಂಡೆಗಳ ಮೇಲೆ ಇದೆ. ಇಲ್ಲಿಂದ ಎಡಿನ್‌ಬರಾ ನಗರಕ್ಕೆ 70ಕಿಮೀ, ಲಂಡನಿಗೆ 633 ಕಿಮೀ. ಇದರ ವಿಸ್ತೀರ್ಣ 175, 5 ಚ.ಕಿಮೀ. ಜನಸಂಖ್ಯೆ 5,92,820 (2010). ನಗರದ ಮುಖ್ಯ ವಾಣಿಜ್ಯ ಮತ್ತು ಆಡಳಿತ ಕಟ್ಟಡಗಳು ಕ್ಲೈಡ್ ನದಿಯ ಉತ್ತರ ದಡದ ಮೇಲಿವೆ. ಗ್ಲ್ಯಾಸ್ಗೋದ ಸುತ್ತಲೂ ಹಲವು ಉಪನಗರಗಳಿವೆ.

ಗ್ಲ್ಯಾಸ್ಗೋದಲ್ಲಿ 19ನೆಯ ಶತಮಾನದಲ್ಲಿ ಕೈಗಾರಿಕೆಗಳು ಬೆಳೆದಂತೆ ಹಳೆಯ ಕಟ್ಟಡಗಳನ್ನು ಕೆಡವಿಹಾಕಲಾಯಿತು. 18ನೆಯ ಶತಮಾನಕ್ಕಿಂತ ಹಿಂದಿನ ಕಟ್ಟಡಗಳು ಹಲವಿಲ್ಲ. ದಿ ಕ್ರಾಸ್ ಅಥವಾ ಟಾಲ್ ಬೂತ್ ಗೋಪುರ (1627), ಕತೀಡ್ರಲ್, ಟ್ರಾನ್ಸ್ ಗೋಪುರ (1637), ಟ್ರೇಡ್ಸ್‌ಹಾಲ್ (1791), ಸ್ಟರ್ಲಿಂಗ್ ಗ್ರಂಥಾಲಯ, ಹಚಿಸನ್ ಆಸ್ಪತ್ರೆ, ಗೋರ್ಬಾಲ್ಸ್ ಪ್ಯಾರಿಷ್ ಚರ್ಚ್ (1803), ಅಂಚೆ ಕಛೇರಿ (1877), ಗ್ಲ್ಯಾಸ್ಗೋ ಕಲಾಶಾಲೆ ಇವು ಕೆಲವು ಹಳೆಯ ಕಟ್ಟಡಗಳು.

ಗ್ಲ್ಯಾಸ್ಗೋ ವಿಶ್ವವಿದ್ಯಾಲಯ 1451ರಲ್ಲಿ ಎರಡನೆಯ ಜೇಮ್ಸ್ ದೊರೆಯ ಕಾಲದಲ್ಲಿ ಸ್ಥಾಪಿತವಾಯಿತು. ಗ್ಲ್ಯಾಸ್ಗೋ ಬಿಷಪ್ ವಿಲಿಯಂ ಟರ್ನ್‌ಬುಲ್ ಇದರ ಪ್ರಥಮ ಕುಲಾಧಿಪತಿಯಾಗಿದ್ದ. 1632–1660ರಲ್ಲಿ ವಿಶ್ವವಿದ್ಯಾಲಯಕ್ಕೆ ಹೊಸ ಕಟ್ಟಡ ನಿರ್ಮಾಣವಾಯಿತು. ರಾಯಲ್ ವಿಜ್ಞಾನ ಮತ್ತು ತಾಂತ್ರಿಕ ಕಾಲೇಜು, ಸ್ಕಾಟಿಷ್ ವಾಣಿಜ್ಯ ಕಾಲೇಜು (1845), ಗ್ಲ್ಯಾಸ್ಗೋ ಕಲಾಶಾಲೆ, ರಾಯಲ್ ಸ್ಕಾಟಿಷ್ ಸಂಗೀತಶಾಲೆ (1874), ಸ್ಕಾಟ್ಲೆಂಡ್ ಕೃಷಿ ಕಾಲೇಜು (1899), ಟ್ರಿನಿಟಿ ಕಾಲೇಜು (1875), ಗ್ಲ್ಯಾಸ್ಗೋ ಮತ್ತು ಪಶ್ಚಿಮ ಸ್ಕಾಟ್ಲೆಂಡ್ ಗೃಹವಿಜ್ಞಾನ ಕಾಲೇಜು (1875), ಸೇಂಟ್ ಅಲೋಯ್ಸಿಯಸ್ ಬಾಲಕರ ಕಾಲೇಜು (1859), ನಾಟ್ರೆಡಾಂ ಬಾಲಕಿಯರ ಪ್ರೌಢಶಾಲೆ (1897), ಗ್ಲ್ಯಾಸ್ಗೋ ಪ್ರೌಢಶಾಲೆ (1450) ಇವು ಇಲ್ಲಿಯ ಮುಖ್ಯ ಶಾಲಾ ಕಾಲೇಜುಗಳು.


ಗ್ಲ್ಯಾಸ್ಗೋ ನಗರದ ಒಂದು ಭಾಗ

ಗ್ಲ್ಯಾಸ್ಗೋ ವಿಶ್ವವಿದ್ಯಾಲಯದ ಗ್ರಂಥಭಂಡಾರದ ಜೊತೆಗೆ ಗ್ಲ್ಯಾಸ್ಗೋ ಪೌರಸಭಾ ಸಾರ್ವಜನಿಕ ಗ್ರಂಥಾಲಯ ಪ್ರಸಿದ್ಧವಾದ್ದು. ಪ್ರತಿಶಾಲೆ ಅಥವಾ ಕಾಲೇಜಿನಲ್ಲೂ ಉಪಯುಕ್ತ ಗ್ರಂಥಭಂಡಾರಗಳಿವೆ. ನಗರದಲ್ಲಿ ವಸ್ತುಸಂಗ್ರಹಾಲಯ, ಪ್ರಾಣಿಸಂಗ್ರಹಾಲಯ, ಚಿತ್ರಸಂಗ್ರಹಾಲಯ ಮತ್ತು ಸುಂದರ ಉದ್ಯಾನಗಳು ಇವೆ. ಭೂಗರ್ಭ ರೈಲು, ಅಂತಾರಾಷ್ಟ್ರೀಯ ವಿಮಾನನಿಲ್ದಾಣ, ಸುವ್ಯವಸ್ಥಿತ ಹೆದ್ದಾರಿಗಳು– ಇವು ನಗರದ ಸಾರಿಗೆ ಸೌಲಭ್ಯಗಳು.

ಗ್ಲ್ಯಾಸ್ಗೋ ಪಶ್ಚಿಮ ಸ್ಕಾಟ್ಲೆಂಡಿನ ಮುಖ್ಯ ಮಾರುಕಟ್ಟೆ. ಇಲ್ಲಿಯ ವರ್ತಕರು ಇಂಗ್ಲೆಂಡ್, ಐರ್ಲೆಂಡ್, ಫ್ರಾನ್ಸ್ ಮತ್ತು ನಾರ್ವೆ ದೇಶಗಳೊಡನೆ 17 ನೆಯ ಶತಮಾನದಿಂದ ಸಂಬಂಧ ಪಡೆದಿದ್ದರು. ಹೊಗೆಸೊಪ್ಪಿನ ವ್ಯಾಪಾರದಿಂದ ಗ್ಲ್ಯಾಸ್ಗೋ ಸಮೃದ್ಧಿ ಪಡೆಯಿತು. ಅಮೆರಿಕ ಕ್ರಾಂತಿಯಿಂದಾಗಿ ಈ ವ್ಯಾಪಾರಕ್ಕೆ ಧಕ್ಕೆ ಒದಗಿತು. ಕೈಗಾರಿಕಾ ಕ್ರಾಂತಿ ಆರಂಭವಾದ ಮೇಲೆ 19 ನೆಯ ಶತಮಾನದಲ್ಲಿ ಗ್ಲ್ಯಾಸ್ಗೋ ಹೊಸ ಕೈಗಾರಿಕೆಗಳ ಬೀಡಾಯಿತು. ಹಡಗು ನಿರ್ಮಾಣ, ರಾಸಾಯನಿಕ ವಸ್ತು ತಯಾರಿಕೆ, ಇದ್ದಿಲು–ಕಬ್ಬಿಣ ಗಣಿಗಾರಿಕೆ, ಬಟ್ಟೆ, ಕಾಗದ, ಹೊಗೆಸೊಪ್ಪು, ಆಹಾರ ತಯಾರಿಕೆ ಮುಂತಾದವು ಬೆಳೆದವು.

ಗ್ಲ್ಯಾಸ್ಗೋ ನಗರದಲ್ಲೇ ಕ್ಲೈಡ್ ನದಿಗೆ ಹನ್ನೊಂದು ಸೇತುವೆಗಳಿವೆ. ಸರಕು ಸಾಗಿಸಲು ನದಿ ಉಪಯುಕ್ತವಾಗಿದೆ. ಹಡಗುಗಳು ನದಿಯಲ್ಲಿ ಸದಾ ಸಂಚರಿಸುತ್ತಿರುತ್ತವೆ.

ಗ್ಲ್ಯಾಸ್ಗೋ ನಗರದ ಸುತ್ತಲೂ ಶಿಲಾ ಮತ್ತು ಲೋಹಯುಗಗಳ ಅವಶೇಷಗಳು ದೊರಕಿವೆ. 6 ಮತ್ತು 7ನೆಯ ಶತಮಾನಗಳಿಂದಲೇ ಈ ನಗರದ ಉಲ್ಲೇಖವಿದೆ. ಸೇಂಟ್ ಕೆಂಟಿಜೆರ್ನ್ ಸು. 550ರಲ್ಲಿ ಇಲ್ಲಿಗೆ ಬಂದು ಈ ಜಿಲ್ಲೆಯ ಜನರನ್ನು ಮತಾಂತರಗೊಳಿಸಲು ಯತ್ನಿಸಿದ. ಗ್ಲ್ಯಾಸ್ಗೋದ ಪ್ರಥಮ ಕತೀಡ್ರಲನ್ನು ಕಟ್ಟಿಸಿದ ಸ್ಕಾಟ್ಲೆಂಡಿನ 1 ನೆಯ ಡೇವಿಡ್ ದೊರೆ ತನ್ನ ಗುರು ಜಾನ್ ಆಕಿಯಾಸನನ್ನು ಗ್ಲ್ಯಾಸ್ಗೋ ಚರ್ಚಿನ ಬಿಷಪ್ ಆಗಿ ನೇಮಿಸಿದ. ಸ್ಕಾಟ್ಲೆಂಡಿನ 2 ನೆಯ ಜೇಮ್ಸ್ 1450 ರಲ್ಲಿ ಈ ನಗರವನ್ನು ಬರೋ ಆಗಿ ಮಾನ್ಯಮಾಡಿದ. ಸ್ಕಾಟ್ಲೆಂಡಿನ 6ನೆಯ ಜೇಮ್ಸ್ ದೊರೆ (ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡಿನ 1ನೆಯ ಜೇಮ್ಸ್) ಮತ್ತು 1ನೆಯ ಚಾರ್ಲ್ಸ್ ದೊರೆ ಈ ನಗರವನ್ನು ರಾಯಲ್ ಬರೋ ಆಗಿ ಮಾಡಿದರು.

ಆಲಿವರ್ ಕ್ರಾಮ್ವೆಲ್ ಡನ್‌ಬಾರ್ ಬಳಿ ಸ್ಕಾಟರನ್ನು ಸೋಲಿಸಿದ ಅನಂತರ 1650ರಲ್ಲಿ ಗ್ಲ್ಯಾಸ್ಗೋ ನಗರಕ್ಕೆ ಭೇಟಿಕೊಟ್ಟ. 1689ರಲ್ಲಿ ಇವನು ಗ್ಲ್ಯಾಸ್ಗೋ ಬಿಷಪನ ಅಧಿಕಾರವನ್ನು ಕೊನೆಗೊಳಿಸಿ ಅದಕ್ಕೆ ಸ್ವತಂತ್ರ ನಗರ ಸಮಿತಿಯನ್ನು ಸ್ಥಾಪಿಸಿದ. ಸ್ಕಾಟ್ಲೆಂಡ್ ಚರ್ಚಿನ ಮೊದಲ ಮಹಾಸಭೆ ಗ್ಲ್ಯಾಸ್ಗೋದಲ್ಲಿ ಸೇರಿ (1638) ಪ್ರೆಸ್ಬಿಟೇರಿಯನಿಸಮ್ ಅನ್ನು ಸ್ಕಾಟಿಷ್ ಚರ್ಚ್ ಸರ್ಕಾರವ್ಯವಸ್ಥೆಯಾಗಿ ಘೋಷಿಸಿತು. ಗ್ಲ್ಯಾಸ್ಗೋದ ಪ್ರಥಮ ಪತ್ರಿಕೆ ಗ್ಲ್ಯಾಸ್ಗೋ ಕೂರ್‍ಯಾಂಟ್ 1715ರಲ್ಲಿ ಆರಂಭವಾಯಿತು. *

**ಗ್ವಾಂ :** ಅಮೆರಿಕ ಸಂಯುಕ್ತಸಂಸ್ಥಾನಗಳ ಅಧೀನದಲ್ಲಿರುವ ಒಂದು ದ್ವೀಪ. ಪಶ್ಚಿಮ ಪೆಸಿಫಿಕ್‌ಸಾಗರದಲ್ಲಿರುವ ಮಾರಿಯಾನ ದ್ವೀಪಗಳಲ್ಲಿ ಅತ್ಯಂತ ದೊಡ್ಡದು ಮತ್ತು ಜನಭರಿತವಾದದ್ದು. ವಿಶ್ವ ಜಲಾಂಬುಧಿಯಲ್ಲಿ ಅತ್ಯಂತ ಆಳ ತಾಣವಾಗಿರುವ ಮಾರಿಯಾನ ಟ್ರೆಂಚ್‌ಗೆ ಅತಿ ಸಮೀಪದಲ್ಲಿರುವ ದ್ವೀಪ. ಸ್ಯಾನ್‌ಫ್ರಾನ್ಸಿಸ್ಕೋದಿಂದ ಪಶ್ಚಿಮಕ್ಕೆ 960 ಕಿಮೀ ದೂರದಲ್ಲಿ, ಹೊನೊಲುಲುವಿಗೆ 5344 ಕಿಮೀ ಪಶ್ಚಿಮದಲ್ಲಿ, ಮನಿಲಕ್ಕೆ 2400 ಕಿಮೀ. ಪೂರ್ವದಲ್ಲಿ, ಉ.ಅ. $13.2^0$–$13.7^0$ ಮತ್ತು ಪೂ. ರೇ. 144. $6^0$–$145^0$ ಮೇಲೆ ಇದೆ. ವಿಸ್ತೀರ್ಣ 541.3 ಚ.ಕಿಮೀ. ಜನಸಂಖ್ಯೆ 1,59,436 (2010). ಈ ದ್ವೀಪದ ಉದ್ದ 48 ಕಿಮೀ, ಅಗಲ 6–19 ಕಿಮೀ. ರಾಜಧಾನಿ ಹಗಾತ್ನ.

ಗ್ವಾಂ ದ್ವೀಪದ ಉತ್ತರ ಭಾಗ ಸುಣ್ಣಕಲ್ಲಿನಿಂದ ಕೂಡಿದ ಪ್ರಸ್ಥಭೂಮಿ. ಈ ದ್ವೀಪದ ದಕ್ಷಿಣ ಭಾಗ ಎತ್ತರವಾಗಿದ್ದು ಅಗ್ನಿಪರ್ವತ ಪ್ರದೇಶಗಳಿಂದ ಕೂಡಿದೆ. ಪಶ್ಚಿಮ, ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿ ಹೆಚ್ಚು ಎತ್ತರವಾದ ಬೆಟ್ಟಗಳಿವೆ. ಅವುಗಳಲ್ಲಿ ಮುಖ್ಯವಾದವು ಲಾಮ್‌ಲಾಮ್ (406 ಮೀ), ಜಮುಲಾಂಗ್ ಮಾಂಗ್ಲೋ (1,086 ಮೀ), ಬೊಲಾನೋಸ್ (1,220 ಮೀ) ಮತ್ತು ಸಸಲಾಗ್ವಾನ್ (1,109 ಮೀ).

ಇಲ್ಲಿಯದು ಉಷ್ಣವಲಯದ ಹಿತಕರ ವಾಯುಗುಣ. ಮೇ–ಜೂನ್ ಮಳೆಗಾಲ. ಗ್ವಾಂ ದ್ವೀಪದಲ್ಲಿ ಚಂಡಮಾರುತಗಳ ಹಾವಳಿ ಬಹಳ.

ಇಲ್ಲಿಯ ಜನ ಚಾಮಾರೊ ಬುಡಕಟ್ಟಿನವರು. ಇವರು ಪ್ರ.ಶ.ಪೂ.ಸು.2000 ದಲ್ಲಿ ಈ ದ್ವೀಪಕ್ಕೆ ಬಂದು ನೆಲೆಸಿರಬೇಕೆಂದು ತಿಳಿಯಲಾಗಿದೆ. ಇವರು ಇಂಡೊನೇಷ್ಯದ ಮೂಲ ಬುಡಕಟ್ಟಿಗೆ ಸೇರಿದವರು. ಇವರ ಭಾಷೆ ಚಾಮರೋ. ಇದು ಮೈಕ್ರೋನೇಷ್ಯನ್ ಉಪ–ಭಾಷೆಯಲ್ಲ. ಸ್ವಂತ ವ್ಯಾಕರಣ ಮತ್ತು ಶಬ್ದಕೋಶ ಇರುವ ಭಾಷೆಯಿದು. ರೋಮನ್ ಕೆಥೊಲಿಕರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಎರಡನೆಯ ಮಹಾಯುದ್ಧದ ಕೊನೆಯಲ್ಲಿ ಈ ದ್ವೀಪದ ಅನೇಕ ಭಾಗಗಳು ನಾಶವಾಗಿದ್ದವು. ಈಗ ಅವುಗಳ ಪುನರ್‌ನಿರ್ಮಾಣವಾಗಿದೆ.

ಪೋರ್ಚುಗೀಸ್ ನಾವಿಕನಾದ ಫರ್ಡಿನೆಂಡ್ ಮೆಗೆಲಾನ್ ಈ ದ್ವೀಪವನ್ನು 1521ರಲ್ಲಿ ಸ್ಪೇನಿನ ರಾಜನಿಗಾಗಿ ಕೈಗೊಂಡ ಸಾಗರಯಾನದ ಸಂದರ್ಭದಲ್ಲಿ ಕಂಡುಹಿಡಿದ. 1668ರಲ್ಲಿ ಇಲ್ಲಿ ಮೊದಲ ಸ್ಪ್ಯಾನಿಷ್ ವಸಾಹತು ತಲೆಯೆತ್ತಿತು. ಇಲ್ಲಿಯ ಜನಾಂಗ ಕ್ಷೀಣಿಸುವುದಕ್ಕೆ ಸಿಡುಬು, ಇನ್‌ಫ್ಲುಯೆಂಜ಼ ರೋಗಗಳು ಮತ್ತು ಪದೇ ಪದೇ ಸಂಭವಿಸುತ್ತಿದ್ದ ಯುದ್ಧಗಳು ಮುಖ್ಯ ಕಾರಣಗಳು. ಈ ದ್ವೀಪ 1898 ರವರೆಗೆ ಸ್ಪೇನಿನ ಅಧೀನದಲ್ಲಿದ್ದು ಆಮೇಲೆ ಅಮೆರಿಕದ ವಶವಾಯಿತು. 1941–44ರ ನಡುವೆ ಜಪಾನರು ಇದನ್ನು ವಶಪಡಿಸಿಕೊಂಡಿದ್ದರು. ಆಮೇಲೆ ಇದು ಮತ್ತೆ ಅಮೆರಿಕದ ವಶವಾಯಿತು. 1668–1815ರವರೆಗೆ ಇದು ಮೆಕ್ಸಿಕೊ–ಮನಿಲ ಜಲವಾಣಿಜ್ಯ ಮಾರ್ಗದಲ್ಲಿ ಮುಖ್ಯ ತಂಗುದಾಣವೂ ಬಂದರೂ ಆಗಿತ್ತು.

ಗ್ವಾಂ ದ್ವೀಪಕ್ಕೆ ಅಮೆರಿಕದ ಅಧ್ಯಕ್ಷನಿಂದ ನೇಮಿಸಲ್ಪಟ್ಟ ರಾಜ್ಯಪಾಲನಿದ್ದಾನೆ. ಪ್ರಜೆಗಳಿಂದ ಚುನಾಯಿತವಾದ ವಿಧಾನಸಭೆಯಿದೆ. ಗ್ವಾಂ ದ್ವೀಪದಿಂದ ಹೊನೊಲುಲು, ಮನಿಲ, ಓಕಿನಾವಾಗಳಿಗೆ ವಾಯುಮಾರ್ಗಗಳಿವೆ. ದ್ವೀಪದ ಮುಖ್ಯ ಸ್ಥಳಗಳಿಗೆ ರಸ್ತೆಯೂ ಜಲಮಾರ್ಗಗಳೂ ಇವೆ. ಗ್ವಾಂ ದ್ವೀಪ ಅಮೆರಿಕದ ಮುಖ್ಯ ಸೇನಾ ಹಾಗೂ ನೌಕಾ ನೆಲೆ.

ಧಾನ್ಯ, ಬಾಳೆಹಣ್ಣು, ಕಿತ್ತಳೆ, ಕಲ್ಲಂಗಡಿ, ಕುಂಬಳ, ಮೊಟ್ಟೆ, ಪೈನಾಪಲ್, ಕೊಬ್ಬರಿ, ಬತ್ತ, ಕಾಫಿ ಇಲ್ಲಿಯ ಮುಖ್ಯ ಉತ್ಪನ್ನಗಳು. ದಟ್ಟವಾದ ಕಾಡಿನಲ್ಲಿ ಹಡಗು ನಿರ್ಮಾಣಕ್ಕೆ ಮರ ದೊರಕುತ್ತದೆ. ಹಂದಿ, ದನ, ಮೇಕೆಗಳನ್ನು ಸಾಕುತ್ತಾರೆ. ಅಮೆರಿಕದಿಂದ ಹಲವು ಸರಕುಗಳು ಆಮದಾಗುತ್ತವೆ. ಈಗ ಇದೊಂದು ಜನಪ್ರಿಯ ಪ್ರವಾಸೀ ತಾಣವಾಗಿದೆ. ಈ ದ್ವೀಪದ ಆರ್ಥಿಕ ವ್ಯವಸ್ಥೆ ಮುಖ್ಯವಾಗಿ ಪ್ರವಾಸೋದ್ಯಮವನ್ನು ಅವಲಂಬಿಸಿದೆ.

ಇಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯ. 1952ರಲ್ಲಿ ಆಗಾನ್ಯಾದಲ್ಲಿ (ಈಗ ಹಗಾತ್ನ) ಗ್ವಾಂ ಕಾಲೇಜು ಸ್ಥಾಪಿತವಾಯಿತು. ಈಗ ಇಲ್ಲಿ ಗ್ವಾಂ ವಿಶ್ವವಿದ್ಯಾಲಯ, ಗ್ವಾಂ ಕಮ್ಯೂನಿಟಿ ಕಾಲೇಜು ಹಾಗೂ ಪೆಸಿಫಿಕ್ ಐಲ್ಯಾಂಡ್ ವಿಶ್ವವಿದ್ಯಾಲಯಗಳಿವೆ. ಗ್ವಾಂಪೀಡಿಯ ಎಂಬ ಹೆಸರಿನ ಗಣಕೀಕೃತ ವಿಶ್ವಕೋಶ ಲಭ್ಯವಿದೆ. (ಎಂಎಚ್.)

**ಗ್ವಾಟಿಮಾಲ :** ಮಧ್ಯ ಅಮೆರಿಕದ ಅತ್ಯಂತ ಉತ್ತರದ ಗಣರಾಜ್ಯ. ಉ.ಅ.$13^0 42^1$–$17^0 49^1$ ಮತ್ತು ಪ.ರೇ $88^0 10^1$ – $92^0 30^1$ ನಡುವೆ ಇದೆ. ಮೆಕ್ಸಿಕೊ, ಬ್ರಿಟಿಷ್ ಹಾಂಡುರಸ್, ಹಾಂಡುರಸ್, ಕೆರಿಬಿಯನ್ ಸಮುದ್ರ, ಎಲ್‌ಸಾಲ್ವಡಾರ್, ಪೆಸಿಫಿಕ್ ಸಾಗರ–ಇವು ಇದರ ಮೇರೆಗಳು. ಪೂರ್ವದಲ್ಲಿ ಇದಕ್ಕೆ 88 ಕಿಮೀ ಕೆರಿಬಿಯನ್ ಸಮುದ್ರತೀರವೂ ದಕ್ಷಿಣದಲ್ಲಿ 241 ಕಿಮೀ ಪೆಸಿಫಿಕ್ ಸಾಗರತೀರವೂ ಇವೆ. ವಿಸ್ತೀರ್ಣ 1,08,890 ಚ.ಕಿಮೀ. ಜನಸಂಖ್ಯೆ ಸು. 1,38,24,463 (2011). ರಾಜಧಾನಿ ಗ್ವಾಟಿಮಾಲ ನಗರ.

ಭೌತಲಕ್ಷಣ : ಗ್ವಾಟಿಮಾಲವನ್ನು ಭೌಗೋಳಿಕವಾಗಿ ಐದು ಪ್ರದೇಶಗಳಾಗಿ ವಿಂಗಡಿಸಬಹುದು. 1. ಪೆಸಿಫಿಕ್ ಕರಾವಳಿಯ ತಗ್ಗು ನೆಲ, 2. ಸಿಯೆರ ಮಾದ್ರೆ ಪರ್ವತ ಶ್ರೇಣಿ, 3. ಈ ಶ್ರೇಣಿಗೆ ಉತ್ತರದಲ್ಲಿರುವ ಪ್ರಸ್ಥಭೂಮಿ, 4. ಅಟ್ಲಾಂಟಿಕ್ ಸಾಗರತೀರದ ಇಳಿಮೇಡಿನ ಪರ್ವತ ಪ್ರದೇಶ ಮತ್ತು ಪೆಟೇನ್ ಬಯಲು.

1. ಮೆಕ್ಸಿಕೊದ ಚ್ಯಾಪಾಸ್ ಕರಾವಳಿ ಗ್ವಾಟಿಮಾಲದಲ್ಲಿ ಸು. 241 ಕಿಮೀ ಸಾಗಿ ಎಲ್‌ಸಾಲ್ವಡಾರಿನಲ್ಲಿ ಮುಂದುವರಿಯುತ್ತದೆ. ಮೆಕ್ಸಿಕೊ– ಗ್ವಾಟಿಮಾಲ ಗಡಿಯ ಬಳಿ ಇದರ ಅಗಲ 40ಕಿಮೀ. ಕರಾವಳಿಯ ಅಂಚಿನಲ್ಲಿ ಉದ್ದಕ್ಕೂ ಮರಳ ಪಟ್ಟೆಗಳಿವೆ. ತೀರ ಹೆಚ್ಚು ಅಂಕುಡೊಂಕಾಗಿಲ್ಲ. ಅಲ್ಲಲ್ಲಿ ಲಗೂನುಗಳಿವೆ. ಇದರಿಂದಾಚೆಗೆ ನೆಲ ಕ್ರಮೇಣ ಏರುತ್ತ ಸಾಗುತ್ತದೆ.

2. ಪೆಸಿಫಿಕ್ ಸಾಗರದ ಅಂಚಿನಲ್ಲಿ ಸಾಗುವ ಸಿಯೆರ ಮಾದ್ರೆ ಪರ್ವತಶ್ರೇಣಿ ಅಕ್ಕಪಕ್ಕದ ಮೆಕ್ಸಿಕೊ ಮತ್ತು ಸಾಲ್ವಡಾರ್ ರಾಜ್ಯಗಳತ್ತ ಚಾಚಿಕೊಂಡಿದೆ. ಹದಿಮೂರು ಪ್ರಮುಖ ನದಿಗಳು ಇಲ್ಲಿ ಉಗಮಿಸುತ್ತವೆ. ಈ ಶ್ರೇಣಿಯ ದಕ್ಷಿಣ ತಪ್ಪಲಲ್ಲಿ ಅಗ್ನಿಪರ್ವತಗಳುಂಟು. ಇವುಗಳಲ್ಲಿ ಮುಖ್ಯವಾದದ್ದು ತಾಹೂಮೂಲ್ಕೊ (13,845', 4220ಮೀ). ಇದು ಮಧ್ಯ ಅಮೆರಿಕದ ಅತ್ಯಂತ ಎತ್ತರದ ಶಿಖರ. ಇತರ ಕೆಲವು ಪರ್ವತಗಳು ಅಕಾಟಿನಂಗೊ (13044', 3976ಮೀ), ಫ್ಯೇಗೋ (12,346', 3763ಮೀ), ಸಾಂತ ಮರಿಯ ಕ್ವೆಜಾಲ್ಟಿನಂಗೊ (12,375', 3772 ಮೀ) ಮತ್ತು ಆಗುವ ಘುನಿಲ್ (12,336', 3760ಮೀ), ಅಟಿಲಾನ್ ಮತ್ತು ಪಕಾಯ (3535ಮೀ, 2552ಮೀ). ಒಟ್ಟು 30 ಅಗ್ನಿಪರ್ವತಗಳ ಪೈಕಿ ಎರಡು (ಪಕಾಯ ಮತ್ತು ಫ್ಯೇಗೋ) ಈಗಲೂ ಜೀವಂತವಾಗಿವೆ. ಈ ರಾಜ್ಯದಲ್ಲಿ ಭೂಕಂಪಗಳು ಹೆಚ್ಚು.



3. ಸಿಯೆರ ಮಾದ್ರೆ ಪರ್ವತ ಶ್ರೇಣಿಯ ಉತ್ತರದಲ್ಲಿಯ ಎತ್ತರವಾದ ಪ್ರಸ್ಥಭೂಮಿ ಬೆಟ್ಟಗಳಿಂದ ಆವೃತವಾಗಿದೆ. ಪೆಸಿಫಿಕ್ ಸಾಗರಕ್ಕೆ ಬೀಳುವ ಕೆಲವು ನದಿಗಳು ಇಲ್ಲಿ ಉಗಮಿಸುತ್ತವೆ.

4. ಅಟ್ಲಾಂಟಿಕ್ ಸಾಗರ ತೀರದ ಪರ್ವತಗಳು ಪೂರ್ವಪಶ್ಚಿಮವಾಗಿ ಹಬ್ಬಿ ಮಧ್ಯ ದಕ್ಷಿಣಕ್ಕೆ ಚಾಚಿಕೊಂಡಿವೆ. ಸಿಯೆರ ಚಾಮ ಪರ್ವತ ಪೂರ್ವಾಭಿಮುಖವಾಗಿ ಬ್ರಿಟಿಷ್ ಹಾಂಡುರಸ್ ರಾಜ್ಯದ ಕಡೆ ಸಾಗಿ ಕಾಕ್ಸ್‌ಕೂಂಬ್ ಪರ್ವತವನ್ನು ಮುಟ್ಟುತ್ತದೆ. ಸಿಯೆರದ ಸಾಂತಕ್ರುಜ್ ಪರ್ವತಶ್ರೇಣಿ ಪೂರ್ವದತ್ತ ಪೋಲೊಚೀಕ್ ಮತ್ತು ಸಾರ್ಸ್ಟೂನ್ ನದಿಗಳ ನಡುವೆ ಸಾಗಿ ಕೊಕೋಲಿ ಭೂಶಿರವನ್ನು ಸೇರುತ್ತದೆ. ಮತ್ತೊಂದು ಪರ್ವತಶ್ರೇಣಿ ಸಿಯೆರದ ಲಾಸ್ ಮೀನಾಸ್, ಪೋಲೊಚೀಕ್ ಮತ್ತು ಮೊಟಾಗ್ವಾ ನದಿಗಳ ನಡುವಣ ಪ್ರದೇಶದಲ್ಲಿ ಹಬ್ಬಿದೆ.

5. ಪೆಟೇನ್ ಬಯಲು ಗ್ವಾಟಿಮಾಲ ರಾಜ್ಯದ 1/3 ನೆಯ ಭಾಗವನ್ನು ಆವರಿಸಿದೆ. ಇಲ್ಲಿ ಹುಲ್ಲುಗಾವಲು ಮತ್ತು ಅರಣ್ಯಗಳು ಹೆಚ್ಚು. ಭೂಮಿ ಫಲವತ್ತಾಗಿದೆ. ನೀರು ಸಮೃದ್ಧವಾಗಿದೆ. ಪ್ರಾಚೀನ ಮಾಯ ನಾಗರಿಕತೆ ಇಲ್ಲಿ ಹಬ್ಬಿತ್ತು.

ಗ್ವಾಟಿಮಾಲದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳು ಸಣ್ಣವು; ಪೂರ್ವಭಾಗದಲ್ಲಿ ದೊಡ್ಡವು. ಮೊಟಾಗ್ವಾ ನದಿ 400 ಕಿಮೀ ಹರಿದು ಕೆರಿಬಿಯನ್ ಸಮುದ್ರವನ್ನು ಸೇರುತ್ತದೆ. ಅದರ ಮೇಲೆ 145 ಕಿಮೀಗಳಷ್ಟು ದೂರ ಹಡಗುಗಳು ಸಂಚರಿಸುತ್ತವೆ. ಪೋಲೊಚೀಕ್ ನದಿಯ ಉದ್ದ 290 ಕಿಮೀ. ಇತರ ನದಿಗಳ ಪೈಕಿ ಊಸೂಮಾ ಸೀಂಟಾ, ಚಿಕ್ಸಾಯ್, ಮೊಟಾಗ್ವಾ ಮತ್ತು ಸಾರ್ಸ್ಟೂನ್ ಮುಖ್ಯವಾದವು. ಪೆಟೇನ್, ಗಾಲ್ಫೊ, ಡುಲ್ಸೆ, ಆಟಿನಾಳ್– ಇವು ಇಲ್ಲಿಯ ಸರೋವರಗಳು.

ವಾಯುಗುಣ : ಪರ್ವತಮಯವಾದ ಈ ರಾಜ್ಯದ ವಾಯುಗುಣ ಸಂಕೀರ್ಣವಾದದ್ದು. ಪೆಸಿಫಿಕ್ ತೀರದಲ್ಲೂ ಪರ್ವತ ಪ್ರದೇಶದಲ್ಲೂ ಮಾನ್ಸೂನ್ ವಾಯುಗುಣ; ಬೇಸಗೆಯಲ್ಲಿ (ಮೇ–ಅಕ್ಟೋಬರ್) ಹೆಚ್ಚು ಮಳೆ; ಚಳಿಗಾಲ ಶುಷ್ಕ. ಕೆರಿಬಿಯನ್ ತೀರದಲ್ಲಿ ವರ್ಷವೆಲ್ಲ ಮಳೆ. ಉಷ್ಣತೆ ಎತ್ತರಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಆದರೆ ಅತಿಯಾದ ಚಳಿ ಇಲ್ಲ. ಕರಾವಳಿಯಲ್ಲಿ ವಾರ್ಷಿಕ ಸರಾಸರಿ ಉಷ್ಣತೆ $77^0$ ಫ್ಯಾ. ಚಳಿಗಾಲ–ಬೇಸಗೆ ಕಾಲಗಳ ನಡುವೆ ಹೆಚ್ಚು ವ್ಯತ್ಯಾಸವಿಲ್ಲ. ಪಶ್ಚಿಮ ಗ್ವಾಟಿಮಾಲದ ಎತ್ತರ ಪ್ರದೇಶಗಳಲ್ಲಿ ಉಷ್ಣತೆ $55.4^0$ ಫ್ಯಾ. – $66.4^0$ ಫ್ಯಾ.

ಸಸ್ಯಪ್ರಾಣಿ ಜೀವನ : ಎತ್ತರಕ್ಕೆ ಅನುಗುಣವಾಗಿ ಸಸ್ಯಗಳು ವ್ಯತ್ಯಾಸವಾಗುತ್ತವೆ. ಕೆರಿಬಿಯನ್ ಕರಾವಳಿಯಲ್ಲಿ ಉಷ್ಣವಲಯದ ನಿತ್ಯಹಸಿರು ಕಾಡೂ ಪಶ್ಚಿಮದಲ್ಲಿ ಉಷ್ಣವಲಯದ ಪರ್ಣಪಾತಿ ಕಾಡೂ ಇವೆ. ಅಲ್ಲಲ್ಲಿ ಸವನ್ನವಿದೆ. ಎತ್ತರ ಏರಿದಂತೆಲ್ಲ ಸಸ್ಯವರ್ಗ ಬದಲಾಗುತ್ತದೆ. ಅತ್ಯಂತ ಎತ್ತರದಲ್ಲಿ ಹಿಮದ ಮುಸುಕಿದೆ. ದನ, ಕುರಿ, ಹಂದಿಗಳು ಸಾಕುಪ್ರಾಣಿಗಳು. ಜಿಂಕೆ, ಕೋತಿ, ಪೆಕರಿ ಸಾಮಾನ್ಯವಾಗಿವೆ. ಜಾಗ್ವಾರ್, ಟಾಪಿರ್, ಪ್ಯೂಮ ಅಪರೂಪ. ಪೋಲೊಚೀಕ್ ನದಿಯಲ್ಲಿ ಮೊಸಳೆಗಳಿವೆ. ಪಕ್ಷಿಸಂಕುಲ ವೈವಿಧ್ಯಮಯವಾದದ್ದು. ಕಾಡು ಟರ್ಕಿ ಕೋಳಿ, ಬಾತು, ಪಾರಿವಾಳ, ಜೀವಂಜೀವ ವಿಪುಲವಾಗಿವೆ. ಆಕರ್ಷಕವಾದ ಪುಕ್ಕವುಳ್ಳ ಹಕ್ಕಿ ಕ್ವೆಟ್ಜಾಲ್ ಬಹುತೇಕ ಅಳಿದುಹೋಗಿದೆ. ಅದನ್ನು ರಾಷ್ಟ್ರದ ಲಾಂಛನವಾಗಿ ಆರಿಸಲಾಗಿದೆ.

ಇತಿಹಾಸ : ಗ್ವಾಟಿಮಾಲ ರಾಜ್ಯದ ಮೇಲೆ ಪ್ರಭಾವ ಬೀರಿದ ಇತಿಹಾಸದ ಹಂತಗಳು ಮೂರು : 1. ಸ್ಥಳೀಯ ಮಾಯ ಜನಾಂಗದ ಇತಿಹಾಸ. 2. ಸ್ಪೇನ್ ವಸಾಹತು ಇತಿಹಾಸ ಮತ್ತು 3. ಆಧುನಿಕ ಗಣರಾಜ್ಯದ ಇತಿಹಾಸ. ಈ ಮೂರು ಐತಿಹಾಸಿಕ ಹಂತಗಳ ಕುರುಹುಗಳನ್ನೂ ಗ್ವಾಟಿಮಾಲ ರಾಜ್ಯದ ನಾಗರಿಕ ಜೀವನದಲ್ಲಿ ಕಾಣಬಹುದು.



ಸೇಂಟ್ ಜೋಸೆಯಲ್ಲಿರುವ ಚರ್ಚು

ಕೊಲಂಬಸ್ ಅಮೆರಿಕ ಖಂಡವನ್ನು ಕಂಡುಹಿಡಿಯುವುದಕ್ಕೆ ಅನೇಕ ಶತಮಾನಗಳ ಹಿಂದೆಯೇ ಗ್ವಾಟಿಮಾಲ ರಾಜ್ಯವಿರುವ ಪ್ರದೇಶದಲ್ಲಿ ಮಾಯ ಇಂಡಿಯನ್ ಆದಿವಾಸಿಗಳು ಜೀವಿಸುತ್ತಿದ್ದರು. ಇವರ ಸಂಸ್ಕೃತಿ, ಕಲೆ, ಶಿಲ್ಪ, ಸಂಗೀತ, ಬರೆಹ, ಶೂನ್ಯದ ಬಳಕೆಯೂ ಸೇರಿದಂತೆ ಅವರ ಗಣಿತ, 365 ದಿನಗಳ ಪಂಚಾಂಗ–ಇವೆಲ್ಲ ಇವರ ಉನ್ನತ ನಾಗರಿಕತೆಯನ್ನು ವ್ಯಕ್ತಪಡಿಸುತ್ತವೆ. 12 ನೆಯ ಶತಮಾನದ ಹೊತ್ತಿಗೆ ಇದರ ವೈಭವ ಅವನತಿ ಹೊಂದಿತು. ಈ ಜನ ಅನೇಕ ಬಣಗಳಾಗಿ ಒಡೆದರು. 1524 ರಲ್ಲಿ ಸ್ಪೇನಿನಿಂದ ಇಲ್ಲಿಗೆ ಬಂದ ಪೇದ್ರೊ ದೆ ಆಲ್ವಾರಾದೊ ಎಂಬುವನ ದಾಳಿಗಳನ್ನು ಪ್ರಥಮತಃ ಎದುರಿಸಿದವರು ಈ ಜನ. 1550 ರ ಹೊತ್ತಿಗೆ ಸ್ಪೇನ್ ದೇಶ ಮಾಯ ಜನರ ಮೇಲೆ ಪೂರ್ಣ ಪ್ರಭುತ್ವ ಸ್ಥಾಪಿಸಿತು.

ಆಲ್ವಾರಾದೊ ಗ್ವಾಟಿಮಾಲ ನಗರವನ್ನು 1524 ರಲ್ಲಿ ಸ್ಥಾಪಿಸಿದ. 1524 ರಿಂದ 1821ರ ವರೆಗೆ ಗ್ವಾಟಿಮಾಲ ಸ್ಪೇನ್ ವಸಾಹತು ಸರ್ಕಾರದ ಕೇಂದ್ರವಾಯಿತು. ಅದರ ಅಧಿಕಾರವ್ಯಾಪ್ತಿಗೆ ಯಾಕುಟಾನ್‌ನಿಂದ ಪನಾಮಾ ವರೆಗಿನ ಪ್ರದೇಶವೆಲ್ಲ ಸೇರಿತ್ತು.

1821 ರಲ್ಲಿ ಮಧ್ಯಪ್ರದೇಶ ಸ್ಪೇನಿನಿಂದ ಸ್ವತಂತ್ರವಾಯಿತು. 1822 –23 ರಲ್ಲಿ ಮಧ್ಯ ಅಮೆರಿಕದ ಈಗಿನ ಗಣರಾಜ್ಯಗಳಾದ ಗ್ವಾಟಿಮಾಲ, ಹಾಂಡುರಸ್, ನಿಕರಾಗ್ವ, ಎಲ್‌ಸಾಲ್ವಡಾರ್, ಕೋಸ್ಟರೀಕ – ಇವು ಮೆಕ್ಸಿಕೊ ದೇಶದ ಅಡಿಗೆ ಬಂದುವು. ಮೆಕ್ಸಿಕೊ ಚಕ್ರವರ್ತಿ ಈ ಟೂರ್ಬಿಡೆ ಅಧಿಕಾರ ಕಳೆದುಕೊಂಡಾಗ ಇವು ಪ್ರತ್ಯೇಕವಾದುವು. ಮಧ್ಯ ಅಮೆರಿಕ ಸಂಯುಕ್ತಸಂಸ್ಥಾನಗಳ ಗಣರಾಜ್ಯ ಸ್ಥಾಪಿತವಾಯಿತು.



ಮಾಯಾ ಇಂಡಿಯನ್ನರ ಜೀವನವನ್ನು ಚಿತ್ರಿಸುವ ಭಿತ್ತಿಚಿತ್ರಗಳು

ಇದಕ್ಕೆ ಗ್ವಾಟಿಮಾಲ ನಗರವೇ ಆಡಳಿತ ಕೇಂದ್ರ. ಪ್ರಥಮ ಅಧ್ಯಕ್ಷ 1829 ರಲ್ಲಿ ಬಂದ. ಕ್ಷಿಪ್ರಾಕ್ರಮಣದಿಂದ ಇವನಿಂದ ಅಧಿಕಾರ ಕಸಿದುಕೊಂಡು (1838) ಇನ್ನೊಬ್ಬ ಅಧ್ಯಕ್ಷನಾದ. ಆದರೆ ಶೀಘ್ರದಲ್ಲೆ ಅಲ್ಲಿ ಒಡಕುಗಳುಂಟಾಗಿ ಅಂತರ್ಯುದ್ಧ ಆರಂಭವಾಯಿತು. ಮರುವರ್ಷ ಗ್ವಾಟಿಮಾಲ ಪ್ರತ್ಯೇಕ ರಾಜಕೀಯ ಘಟಕವಾಯಿತು. ರಾಫೇಲ್ ಕಾರೆರಾ ಅಧ್ಯಕ್ಷನಾದ. ಅವನ ಅನಂತರ ಬಂದ (1872) ಮೇರಿಯ ರೀನ ಬ್ಯಾರಿಯೋ 1898 ರಲ್ಲಿ ಕೊಲೆಯಾದ. ಆಮೇಲೆ ಬಂದ ಕಾಬ್ರೆರಾನನ್ನು ವಿಧಾನಸಭೆ ಹುಚ್ಚನೆಂದು 1920 ರಲ್ಲಿ ಘೋಷಿಸಿ ಅಧಿಕಾರದಿಂದಿಳಿಸಿತು. ಅನಂತರ ಅನುಕ್ರಮವಾಗಿ ಹಲವರು ಅಧ್ಯಕ್ಷರಾಗಿದ್ದರು. 1970 ರಲ್ಲಿ ನಡೆದ ಚುನಾವಣೆಯಲ್ಲಿ ಕಾರ್ಲೊ ಅರಾನ ಒಸೋರಿಯೋ ಸಂಮಿಶ್ರ ಪಕ್ಷದ ಬೆಂಬಲದಿಂದ ಅಧ್ಯಕ್ಷನಾದ. ಇದೇ ದಶಕದಲ್ಲಿ ರೂಪುಗೊಂಡ ಎರಡು ಸ್ಥಳೀಯ ಗೆರಿಲ್ಲ ಸಂಘಗಳು ರಾಜ್ಯದ ಎಲ್ಲೆಡೆ ಸೈನಿಕ ದಳದ ಮೇಲೂ ಸೈನ್ಯಕ್ಕೆ ಬೆಂಬಲ ನೀಡುತ್ತಿದ್ದ ನಾಗರಿಕರ ಮೇಲೂ ಆಕ್ರಮಣವೆಸಗತೊಡಗಿದವು. ಇದೇ ಕಾರಣದಿಂದಾಗಿ 1979ರಲ್ಲಿ ಅಮೆರಿಕದ ಅಧ್ಯಕ್ಷ ಜಿಮ್ಮಿಕಾರ್ಟರ್ ಗ್ವಾಟಿಮಾಲ ಸೈನ್ಯಕ್ಕೆ ನೀಡಲಾಗುತ್ತಿದ್ದ ನೆರವನ್ನು ನಿಷೇಧಿಸಿದ. 1980ರಲ್ಲಿ ಸಂಭವಿಸಿದ ಒಂದು ಘಟನೆಯಲ್ಲಿ ಗ್ವಾಟಿಮಾಲ ಸರ್ಕಾರ ಗೆರಿಲ್ಲ ಕಾರ್ಯಕರ್ತರನ್ನು ಅಮಾನುಷವಾಗಿ ಕೊಂದಿತೆಂಬ ಕಾರಣಕ್ಕಾಗಿ ಸ್ಪೇನ್ ಗ್ವಾಟಿಮಾಲದೊಂದಿಗಿನ ಸಂಬಂಧವನ್ನು ಮುರಿಯಿತು. 1996ರಲ್ಲಿ ಸಂಯುಕ್ತಸಂಸ್ಥಾನದ (ಯುನೈಟೆಡ್ ನೇಷನ್ಸ್ ಆರ್ಗನೈಸೇಷನ್) ಮಧ್ಯ ಪ್ರವೇಶದಿಂದಾಗಿ ಗ್ವಾಟಿಮಾಲದ ಅಂತರ್ಯುದ್ಧ ಕೊನೆಗೊಂಡಿತು. ಗೆರಿಲ್ಲ ಹೋರಾಟಗಾರರು ಶರಣಾಗತರಾದರು. ಈ ಶಾಂತಿ ಸಂಧಾನದ ತರುವಾಯ ರಾಜ್ಯ ಆರ್ಥಿಕ ಪ್ರಗತಿ ಕಂಡಿದೆ.

ಸಂವಿಧಾನ, ಸರ್ಕಾರ : ಗ್ವಾಟಿಮಾಲ ಒಂದು ಗಣರಾಜ್ಯ. ಈಗಿನ ಸಂವಿಧಾನದಲ್ಲಿ (1966) ಹಿಂದಿನ ಸಂವಿಧಾನದ (1936) ಮೂಲ ನಿಯಮಗಳೇ ಇವೆ. ಅಧ್ಯಕ್ಷನ ಅಧಿಕಾರಾವಧಿ 6 ವರ್ಷ. ನ್ಯಾಷನಲ್ ಕಾಂಗ್ರೆಸ್ ಸದಸ್ಯರು ನಾಲ್ಕು ವರ್ಷಗಳಿಗೊಮ್ಮೆ ಆಯ್ಕೆಯಾಗುತ್ತಾರೆ. ನ್ಯಾಷನಲ್ ಕಾಂಗ್ರೆಸ್ ಏಕಸದನ ವಿಧಾನಮಂಡಲ.

ಆಡಳಿತಾಂಗ : ಗ್ವಾಟಿಮಾಲ 22 ವಿಭಾಗಗಳಾಗಿ ವಿಂಗಡವಾಗಿದೆ. ಪ್ರತಿಯೊಂದು ವಿಭಾಗಕ್ಕೂ ಒಬ್ಬೊಬ್ಬ ಗವರ್ನರ್ ರಾಷ್ಟ್ರಾಧ್ಯಕ್ಷನಿಂದ ನೇಮಕವಾಗುತ್ತಾನೆ. ಪ್ರತಿ ಜಿಲ್ಲೆಯೂ ಮುನಿಸಿಪಾಲಿಟಿಗಳಾಗಿ ವಿಭಜಿಸಲ್ಪಟ್ಟಿದೆ. ಒಟ್ಟು 324 ಮುನಿಸಿಪಾಲಿಟಿಗಳಿವೆ.

ಜನಜೀವನ : ಪ್ರಜೆಗಳು ಮುಖ್ಯವಾಗಿ ಇಂಡಿಯನ್ ಜನಾಂಗದವರು; ಮತ್ತು ಅಪ್ಪಟ ಸ್ಪೇನಿಗರು (ಶೇ.60). ಶೇ. 2 ನೀಗ್ರೋ ಮತ್ತು ಶೇ. 8 ಸಂಮಿಶ್ರ ಜನ. ಆಡಳಿತ ಭಾಷೆ ಸ್ಪ್ಯಾನಿಷ್. ಮಾಯ ಇಂಡಿಯನರಲ್ಲಿ 6 ಮುಖ್ಯ ಭಾಷೆಗಳೂ 21 ಪ್ರದೇಶ ಭಾಷೆಗಳೂ ಇವೆ. ಬಹುತೇಕ ಜನ ರೋಮನ್ ಕೆಥೊಲಿಕರು (ಶೇ. 50). ಶೇ. 40ರಷ್ಟು ಜನ ಪ್ರಾಟೆಸ್ಟಂಟರು.

ಪ್ರಾಥಮಿಕ ಶಿಕ್ಷಣ ಉಚಿತ ಮತ್ತು ಕಡ್ಡಾಯ. ಸ್ಯಾಂಗ್ ಕಾರ್ಲೊಸ್ ವಿಶ್ವವಿದ್ಯಾಲಯ 1676ರಲ್ಲಿ ಸ್ಥಾಪಿತವಾಯಿತು.

ವ್ಯವಸಾಯ, ಕೈಗಾರಿಕೆ : ಇಲ್ಲಿನ ಮುಖ್ಯ ಬೆಳೆಗಳು ಕಾಫಿ, ಬಾಳೆ, ಹತ್ತಿ, ಕೋಕೋ, ಸೆಣಬು. ಕಾಫಿಯನ್ನು ಮೇಲುನಾಡಿನ ಭಾಗಗಳಲ್ಲಿ ಬೆಳೆಯಲಾಗುತ್ತದೆ; ಬಾಳೆ ಬೆಳೆಯುವುದು ಪೆಸಿಫಿಕ್ ಸಾಗರ ತೀರಗಳಲ್ಲಿ. ಹೈನುಗಾರಿಕೆ ಅಭಿವೃದ್ಧಿಯಾಗುತ್ತಿದೆ. ಪಶ್ಚಿಮದ ಕುರಿ

ಸಾಕುವ ಕೇಂದ್ರಗಳಿಂದ ಗ್ವಾಟಿಮಾಲದ ಪ್ರಸಿದ್ಧ ನೇಕಾರರಿಗೆ ಉಣ್ಣೆ ಸರಬರಾಯಿ ಆಗುತ್ತದೆ. ಪೆಸಿಫಿಕ್ ಮತ್ತು ಕೆರಿಬಿಯನ್ ತೀರಗಳಲ್ಲಿ ಹಲವು ಜಾತಿಯ ಮೀನುಗಳಿವೆ. ಕರಾವಳಿಯಲ್ಲಿರುವ ಮೀನುಗಾರಿಕೆ ಸಂಸ್ಥೆಗಳು ಹೊರದೇಶಗಳಿಗೆ ಮೀನು ರಫ್ತು ಮಾಡುತ್ತವೆ.

ಗ್ವಾಟಿಮಾಲದಲ್ಲಿ ಸಿಮೆಂಟ್, ಮೇಣದ ಬತ್ತಿ, ರಾಸಾಯನಿಕ ವಸ್ತುಗಳು, ಸಿಗರೇಟ್, ಆಹಾರ ವಸ್ತುಗಳು, ಟೈರು, ಬಟ್ಟೆ ಕೈಗಾರಿಕೆಗಳಿವೆ. ಬಹುತೇಕ ಕೈಗಾರಿಕೆಗಳು ಸಣ್ಣ ಗಾತ್ರದವು. ಸೀಸ, ತವರ, ಕ್ರೋಮ್ ಮತ್ತು ಬೆಳ್ಳಿ ಇಲ್ಲಿಂದ ರಫ್ತಾಗುತ್ತದೆ. ಚಿನ್ನ ವಸಾಹತು ಕಾಲದಲ್ಲಿ ಹೇರಳವಾಗಿತ್ತು. ಈಗ ರಫ್ತಾಗುವಷ್ಟು ಪರಿಮಾಣದಲ್ಲಿ ಉತ್ಪನ್ನವಾಗುತ್ತಿಲ್ಲ.

ಸಾರಿಗೆ, ಸಂಪರ್ಕ : ಈಗ (2012) ಸು. 14000 ಕಿಮೀಗಳಷ್ಟು ಹೆದ್ದಾರಿಗಳಿವೆ. ರೂಸ್ವೆಲ್ಟ್ ಹೆದ್ದಾರಿ ಮತ್ತು ಪೆಸಿಫಿಕ್ ತೀರದ ಹೆದ್ದಾರಿ – ಈ ಎರಡು ಅಂತಾರಾಷ್ಟ್ರೀಯ ಹೆದ್ದಾರಿಗಳು ರಾಜ್ಯವನ್ನು ಹಾದುಹೋಗುತ್ತವೆ. ಗ್ವಾಟಿಮಾಲ ನಗರದಿಂದ ಪ್ವೆರ್ಟೊ ಬಾರ್ರಿಯೊಸ್ ಮತ್ತು ಮಾಟಿಯಾಸ್ ದ ಗಾಲ್ವೆಜ್ ರೇವುಗಳಿಗೂ ಸಂಪರ್ಕ ಕಲ್ಪಿಸುವ 290 ಕಿಮೀ ಅಟ್ಲಾಂಟಿಕ್ ಹೆದ್ದಾರಿ 1959 ರಲ್ಲಿ ಸಂಚಾರಕ್ಕೆ ತೆರೆಯಿತು. ಈ ದೇಶದಲ್ಲಿ 1290 ಕಿಮೀಗಳಷ್ಟು ರೈಲು ಮಾರ್ಗಗಳಿವೆ.

ಕೆಲವು ನದಿಗಳು ಮತ್ತು ಸರೋವರಗಳು ಜಲಸಂಚಾರಕ್ಕೆ ಹಾಗೂ ಸರಕುಗಳ ಸಾಗಣೆಗೆ ಅನುಕೂಲವಾಗಿವೆ. ಗ್ವಾಟಿಮಾಲದ ಮುಖ್ಯ ಬಂದರು ಕೆರಿಬಿಯನ್ ತೀರದಲ್ಲಿರುವ ಪ್ವೆರ್ಟೊ ಬಾರ್ರಿಯೊಸ್. ಸ್ಯಾಂಗ್ ಹೋಸೇ ಇನ್ನೊಂದು ಬಂದರು. ಇದು ಪೆಸಿಫಿಕ್ ತೀರದಲ್ಲಿದೆ. ಪ್ರಮುಖ ವಿಮಾನ ನಿಲ್ದಾಣ ಗ್ವಾಟಿಮಾಲ ನಗರದ ಬಳಿ ಇದೆ. ಇದಲ್ಲದೆ 46 ಸಣ್ಣ ವಿಮಾನ ನಿಲ್ದಾಣಗಳು ಗ್ವಾಟಿಮಾಲದ ಮುಖ್ಯ ನಗರಗಳಲ್ಲಿವೆ.

ಗ್ವಾಟಿಮಾಲದ ಮುಖ್ಯ ನಗರಗಳಿವು: ಗ್ವಾಟಿಮಾಲ ನಗರ (9,94,938), ಎಸ್ಕ್ವಿಂಟ್ಲಾ (1,03,165) ಕೆಸಾಲ್ಟೆನಾಂಗೊ (1,32,240), ವಿಟಾಲ್ಹ್ಯೂಲು (34,300), ಕೊವಾನ್ (47,202), ಪ್ವೆರ್ಟೊ ಬಾರ್ರಿಯೊಸ್ (48,581) ಮತ್ತು ಸಾಕಾಪ (30,036).

ಗ್ವಾಟಿಮಾಲದ ಮುಖ್ಯ ಕ್ರೀಡೆಗಳು ಫುಟ್‌ಬಾಲ್, ಬೇಸ್‌ಬಾಲ್, ಈಜು, ಬ್ಯಾಸ್ಕೆಟ್‌ಬಾಲ್. ಇಲ್ಲಿಯ ನಾಣ್ಯ ಕೆಟ್ಸಾಲ್ (100 ಸೆಂಟಾವೋಗಳು). (ವಿ.ಜಿ.ಕೆ.)

**ಗ್ವಾಟಿಮಾಲ ನಗರ :** ಮಧ್ಯ ಅಮೆರಿಕದ ಅತ್ಯಂತ ದೊಡ್ಡ ನಗರ. ಗ್ವಾಟಿಮಾಲದ ರಾಜಧಾನಿ; ಆರ್ಥಿಕ ಸಾಂಸ್ಕೃತಿಕ ಕೇಂದ್ರ; ಗ್ವಾಟಿಮಾಲ ವಿಭಾಗದ ಆಡಳಿತ ಕೇಂದ್ರ ಕೂಡ. ಜನಸಂಖ್ಯೆ 41,00,000 (2011). ಗ್ವಾಟಿಮಾಲದ ಮಧ್ಯದಲ್ಲಿ ಪರ್ವತಗಳ ನಡುವಿನ ಕಣಿವೆಯಲ್ಲಿ ಸು. 5000' (1600 ಮೀ) ಎತ್ತರದಲ್ಲಿರುವ ಈ ನಗರ ಪ್ವೆರ್ಟೊ ಬಾರ್ರಿಯೊಸ್‌ಗೆ ನೈರುತ್ಯದಲ್ಲಿ 240 ಕಿಮೀ ದೂರದಲ್ಲಿದೆ. ಇದರ ಔನ್ನತ್ಯದಿಂದಾಗಿ ಇಲ್ಲಿಯ ವಾಯುಗುಣ ತಂಪಾಗಿದೆ. ಗ್ವಾಟಿಮಾಲದ ರಾಜಧಾನಿಯಾಗಿದ್ದ ಆಂಟೀಗ್ವಾ ನಗರ 1773 ರಲ್ಲಿ ಭೂಕಂಪದಿಂದ ನೆಲಸಮವಾದಾಗ ಅದರ ಬದಲು ಗ್ವಾಟಿಮಾಲ ನಗರ ಸ್ಥಾಪಿತವಾಯಿತು (1776). ಮಧ್ಯ ಅಮೆರಿಕ ಸ್ಪೇನಿನಿಂದ ಸ್ವತಂತ್ರಗೊಂಡ ಮೇಲೆ ಮೆಕ್ಸಿಕನ್ ಚಕ್ರಾಧಿಪತ್ಯದ ಅಡಿಯಲ್ಲಿ ಸ್ಥಾಪಿತವಾದ ಮಧ್ಯ ಅಮೆರಿಕ ಪ್ರಾಂತಕ್ಕೂ (1822–23) ಅನಂತರ ಸ್ಥಾಪಿತವಾದ ಮಧ್ಯ ಅಮೆರಿಕ ಒಕ್ಕೂಟಕ್ಕೂ (1823–33) ಆಮೇಲೆ ಗ್ವಾಟಿಮಾಲ ರಾಜ್ಯಕ್ಕೂ ಕೊನೆಗೆ ಗ್ವಾಟಿಮಾಲ ಗಣರಾಜ್ಯಕ್ಕೂ ರಾಜಧಾನಿಯಾಯಿತು.

1917–18 ರ ಭೀಕರ ಭೂಕಂಪದ ಅನಂತರ ನಗರವನ್ನು ಬಹಳಮಟ್ಟಿಗೆ ಪುನರ್ನಿರ್ಮಿಸಲಾಯಿತು. ಉಕ್ಕು ಮತ್ತು ಕಾಂಕ್ರೀಟಿನ ಹಲವು ಭಾರಿ ಕಟ್ಟಡಗಳು ನಿರ್ಮಾಣವಾದುವು. ನಗರದ ಅನೇಕ ಕಡೆಗಳಲ್ಲಿ ಅಲ್ಪವೆಚ್ಚದ ಮನೆಗಳನ್ನು ಕಟ್ಟಲಾಗಿದೆ. ನಗರದ ರಸ್ತೆಗಳು ದೀಪಾಲಂಕೃತವೂ ಶುಭ್ರವೂ ಆಗಿವೆ.

ಸರ್ಕಾರಿ ಕಚೇರಿಗಳ ಜೊತೆಗೆ ಗ್ವಾಟಿಮಾಲ ನಗರ ಕೈಗಾರಿಕಾ ವಾಣಿಜ್ಯ ಕಚೇರಿಗಳು ಮತ್ತು ಬ್ಯಾಂಕುಗಳಿಂದ ಕೂಡಿದೆ. ಇಡೀ ರಾಷ್ಟ್ರದ ಕೈಗಾರಿಕೆಗಳಲ್ಲಿ ಅರ್ಧದಷ್ಟು ಗ್ವಾಟಿಮಾಲದಲ್ಲೇ ಇವೆ. ಇದೊಂದು ಸಾರಿಗೆ ಕೇಂದ್ರ, ವಾಣಿಜ್ಯಕೇಂದ್ರ. ನಗರದ ದಕ್ಷಿಣದಲ್ಲಿ ಲ ಆರೋರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಇದೊಂದು ಶಿಕ್ಷಣ ಕೇಂದ್ರ ಕೂಡ. ಪ್ರಾಚೀನ ಸ್ಯಾಂಗ್ ಕಾರ್ಲೊಸ್ ವಿಶ್ವವಿದ್ಯಾಲಯ ಸೇರಿದಂತೆ ಒಟ್ಟು 10 ವಿಶ್ವವಿದ್ಯಾಲಯಗಳು ಇವೆ. ಕಲಾ ಶಾಲೆಗಳೂ ವಾಣಿಜ್ಯ ತಾಂತ್ರಿಕ ಹಾಗೂ ಸೈನಿಕ ಶಿಕ್ಷಣ ಶಾಲೆಗಳೂ ಇವೆ. ಅನೇಕ ವಸ್ತುಸಂಗ್ರಹಾಲಯಗಳುಂಟು.

ಗ್ವಾಟಿಮಾಲ ನಗರದಲ್ಲಿಯ ರಾಷ್ಟ್ರೀಯ ಅರಮನೆ, ಅಂಚೆ ಕಚೇರಿ, ಪೋಲಿಸ್ ಕೇಂದ್ರ ಕಚೇರಿ, ರಾಷ್ಟ್ರೀಯ ಪತ್ರಾಗಾರ ಮತ್ತು ರಾಷ್ಟ್ರೀಯ ಗ್ರಂಥಾಲಯ ಕಟ್ಟಡಗಳೂ ಸಾನ್ ಫ್ರಾನ್ಸಿಸ್ಕೊ, ಸಾಂಟೊ ಡೊಮಿಂಗೊ, ಲ ಮರ್ಸೆಡ್ ಚರ್ಚುಗಳೂ ಪ್ರೇಕ್ಷಣೀಯ. ಮಿನರ್ವ ಉದ್ಯಾನದಲ್ಲಿ ಗ್ವಾಟಿಮಾಲ ರಾಜ್ಯದ ಉಬ್ಬುತಗ್ಗು ಭೂಪಟವಿದೆ. ಪುರಾತತ್ತ್ವ ಮತ್ತು ಇತಿಹಾಸ ವಸ್ತುಸಂಗ್ರಹಾಲಯಗಳು, ಮೇಲು ಕಾಲುವೆ, ಕೇಂದ್ರೀಯ ಮಾರುಕಟ್ಟೆ, 1950ರ ಅಮೆರಿಕನ್ ಒಲಂಪಿಕ್ ಕ್ರೀಡೆಗಳಿಗಾಗಿ ಕಟ್ಟಲಾದ ಒಲಂಪಿಕ್ ನಗರ–ಇವೂ ಪ್ರಸಿದ್ಧವಾಗಿವೆ. *

**ಗ್ವಾಡರ್ :** ಪಾಕಿಸ್ತಾನದ ಒಂದು ಬಂದರು. ಅರಬ್ಬೀ ಸಮುದ್ರದ ಮಕ್ರಾನ್ ತೀರದಲ್ಲಿ (ಬಲೂಚಿಸ್ತಾನ), ಕರಾಚಿಯಿಂದ ಪಶ್ಚಿಮಕ್ಕೆ 300 ಕಿಮೀ ದೂರದಲ್ಲಿ ಇದೆ. ಜನಸಂಖ್ಯೆ 53,080 (2006). ಗ್ವಾಡರ್ ಕೊಲ್ಲಿಯ ಪೂರ್ವಭಾಗದಲ್ಲಿ ರಾಸ್‌ನುಹ್ ಪರ್ಯಾಯದ್ವೀಪದ ಕಿರಿದಾದ ಪ್ರದೇಶದ ಬಂಡೆಯ ಪ್ರಪಾತದ ಕೆಳಗಿದೆ. ಇದು ಭಾರತ–ಪಾಕಿಸ್ತಾನಗಳಿಂದ ಪರ್ಷಿಯನ್ ಖಾರಿಗೂ ಯುರೋಪಿಗೂ ಹೋಗುವ ತಂತಿ ಮಾರ್ಗದ ಮಧ್ಯದಲ್ಲಿದೆ.

ಗ್ವಾಡರನ್ನೂ ಮಕ್ರಾನ್ ತೀರದ ಇತರ ಪಟ್ಟಣಗಳನ್ನೂ 1797 ರಲ್ಲಿ ಮಸ್ಕತ್ ಸುಲ್ತಾನ ಇಬು ಅಹಮ್ಮದ್ ಗ್ವಾಡರ್ ವಶಪಡಿಸಿಕೊಂಡಿದ್ದ. ಮುಂದೆ ಇವನ ರಾಜ್ಯ ಗ್ವಾಡರ್ ಪ್ರದೇಶಕ್ಕೆ ಮಾತ್ರ ಸೀಮಿತಗೊಂಡಿತು. 1958 ರಲ್ಲಿ ಇದು ಪಾಕಿಸ್ತಾನಕ್ಕೆ ಸೇರಿತು. ಗ್ವಾಡರಿನಿಂದ ಮೀನು, ಖರ್ಜೂರ, ಉಣ್ಣೆ ರಫ್ತಾಗುತ್ತದೆ. (ವಿ.ಎಸ್.ಬಿ.ಎ.)

